ಶ್ರಾದ್ಧಕರ್ಮ



ಶ್ರೀ ಗಯಾ ಗದಾಧರ

ಶ್ರೀರಾಘವೇಂದ್ರ ದರ್ಶನ ಕೇಂದ್ರ,

ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಕೆಂಗೇರಿ ಉಪನಗರ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್

ಕೆಂಗೇರಿ ಉಪನಗರ, ಬೆಂಗಳೂರು- 560 060, ದೂರವಾಣಿ : 2848 4205

ಆಡಳಿತ ಮಂಡಳಿ

ಶ್ರೀ ಎಸ್.ಎಲ್ ನಾಗರಾಜ್	-	ಅಧ್ಯಕ್ಷರು
ಡಾ। ಬಿ.ಪಿ. ಗುರುರಾಜಾರಾವ್	-	ಉಪಾಧ್ಯಕ್ಷರು
ಶ್ರೀ ಜಿ. ವೆಂಕಟೇಶ್	-	ಉಪಾಧ್ಯಕ್ಷರು
ಶ್ರೀ ಕೆ.ಹೆಚ್. ಮಾಧವರಾಯ	-	ಕಾರ್ಯದರ್ಶಿ
ಶ್ರೀ ಡಿ.ವಿ. ಕೃಷ್ಣಮೂರ್ತಿ	-	ಸಹ-ಕಾರ್ಯದರ್ಶಿ
ಶ್ರೀ ಹೆಚ್.ಎನ್. ರಾಮಚಂದ್ರ ರಾವ್	-	ಕೋಶಾಧಿಕಾರಿ
ಶ್ರೀ ಎಸ್.ವಿ. ಬದರೀನಾಥ್	-	ಟ್ರಸ್ಟಿ
ಶ್ರೀ ಆರ್. ವಾದಿರಾಜ	-	ಟ್ರಸ್ಟಿ
ಶ್ರೀ ಎ. ವಿಜಯೀಂದ್ರ	-	ಟ್ರಸ್ಟಿ
ಶ್ರೀ ಡಿ.ಎಸ್. ರಾಘವೇಂದ್ರರಾವ್	-	ಟ್ರಸ್ಟಿ

ಶ್ರೀ ರಾಘವೇಂದ್ರ ದರ್ಶನ ಕೇಂದ್ರ

ವಿಜಯನಗರ, ಬೆಂಗಳೂರು- 560 040, ದೂರವಾಣಿ : 2340 2528

ಆಡಳಿತ ಮಂಡಳಿ

ಶ್ರೀ ಜಿ. ವೆಂಕಟೇಶ್	-	ಪ್ರವರ್ತಕರು
ಶ್ರೀ ಎಸ್.ಎಲ್ ನಾಗರಾಜ್	-	ಅಧ್ಯಕ್ಷರು
ಶ್ರೀ ಕೆ.ಹೆಚ್. ಮಾಧವರಾಯ	-	ಉಪಾಧ್ಯಕ್ಷರು
ಶ್ರೀ ಜಿ. ನಾಗೇಂದ್ರ	-	ಉಪಾಧ್ಯಕ್ಷರು
ಶ್ರೀ ಡಿ.ವಿ. ಕೃಷ್ಣಮೂರ್ತಿ	-	ಕಾರ್ಯದರ್ಶಿ
ಶ್ರೀ ಪಿ.ಎಸ್. ಗುರುರಾಜಾರಾವ್	-	ಸಹ-ಕಾರ್ಯದರ್ಶಿ
ಶ್ರೀ ಹೆಚ್. ಶ್ರೀಧರಮೂರ್ತಿ	-	ಸಹ-ಕಾರ್ಯದರ್ಶಿ
ಶ್ರೀ ಡಿ.ಎಸ್. ರಾಘವೇಂದ್ರರಾವ್	-	ಕೋಶಾಧಿಕಾರಿ

ಶ್ರೀ ರಾಘವೇಂದ್ರ ವೃದ್ಧ ಸಹಾಯ ಸಂಘ

ವಿಜಯನಗರ, ಬೆಂಗಳೂರು- 560 040, ದೂರವಾಣಿ : 2340 2528

ಆಡಳಿತ ಮಂಡಳಿ

ಶ್ರೀ ಜಿ. ವೆಂಕಟೇಶ್	-	ಅಧ್ಯಕ್ಷರು
ಶ್ರೀ ಎಂ.ಎನ್ ನಾಗರಾಜಾರಾವ್	-	ಉಪಾಧ್ಯಕ್ಷರು
ಶ್ರೀ ಡಿ.ವಿ. ಕೃಷ್ಣಮೂರ್ತಿ	-	ಕಾರ್ಯದರ್ಶಿ
ಶ್ರೀ ಟಿ.ಎನ್. ಪ್ರಹ್ಲಾದ್	-	ಸಹ-ಕಾರ್ಯದರ್ಶಿ
ಶ್ರೀ ಡಿ.ಎಸ್. ರಾಘವೇಂದ್ರರಾವ್	-	ಕೋಶಾಧಿಕಾರಿ

ಶ್ರಾದ್ಧಕರ್ಮ

ಪರಿಚಯಾತ್ಮಕ ಅಧ್ಯಯನ

ಸಂಪಾದಕರು:

ಭಾಗ-1

ವಿದ್ವಾನ್ ಶ್ರೀನಿವಾಸ ಸು. ಮಠದ ಬಿಜಾಪುರ

ಭಾಗ-2

ವಿವಿಧ ವಿದ್ವಾಂಸರು

ಪ್ರಕಾಶಕರು:

ಶ್ರೀ ರಾಘವೇಂದ್ರ ದರ್ಶನ ಕೇಂದ್ರ

ವಿಜಯನಗರ, ಬೆಂಗಳೂರು - 560 040

ದೂರವಾಣಿ : 2340 2528

2006

SHRADDHA KARMA - A book of Hindu rituals after death and their observance.

Edited by : **Vidwan Srinivasa S. Mathad** (Bijapura)

Published by : **Sri Raghavendra Darshana Kendra**
Under the auspices of
Sri Raghavendra Swamy Mutt,
Kengeri Upanagara, Bangalore-560 060 (India)

Total Pages : 232

First Edition : 2006

Copies : 2,000

Price :

Typesetting : Poornaprajna Samshodhana Mandiram,
Bangalore - 560 028

Printed at : **Parishree Printers**
100/3, Nagappa Street, Palace Guttahalli,
Bangalore-560 003. Tel : 2336 8286

ಪ್ರಕಾಶಕರ ನುಡಿ

ಶ್ರೀರಾಘವೇಂದ್ರ ಸ್ವಾಮಿಗಳವರ ಕೃಪೆಯ ಮೂಲಕ, ಶ್ರೀಹರಿ ವಾಯುಗಳ ಅನುಗ್ರಹ ಸಂಪಾದನೆಯೇ ನಮ್ಮ ಗುರಿ. ಕೆಂಗೇರಿ ಉಪನಗರದ ಶ್ರೀರಾಘವೇಂದ್ರ ಸ್ವಾಮಿಗಳ ಮಠದವರೇ ನಮ್ಮ ಆಶ್ರಯದಾತರು. 1994ರಲ್ಲಿ ಗ್ರಂಥಪ್ರಕಾಶನವನ್ನು ಪ್ರಾರಂಭಿಸಿದ ನಾವು, ಈಗ 'ಶ್ರಾದ್ಧಕರ್ಮ' ಎಂಬ ಈ ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ. ಇದು ನಮ್ಮ ಹನ್ನೊಂದನೆಯ ಪ್ರಕಟಣೆ.

ಮೃತರಾಗಿರುವ, ನಮ್ಮ ಹಿರಿಯರನ್ನು ಉದ್ದೇಶಿಸಿ, ಪಿತೃದೇವತೆಗಳನ್ನು ಕುರಿತು ಅವರ ಅಂತರ್ಯಾಮಿಯಾಗಿರುವ ಭಗವಂತನ ಪ್ರೀತಿಗಾಗಿ ಮಾಡಬೇಕಾದ 'ಶ್ರಾದ್ಧಕರ್ಮ' ಪ್ರತಿಯೊಬ್ಬ ಭಗವದ್‌ಭಕ್ತನ ಆದ್ಯ ಕರ್ತವ್ಯ. ಆದರೆ, ಇಂದಿನ ದಿನಗಳಲ್ಲಿ 'ನಾನು ಶ್ರಾದ್ಧ ಮಾಡುವುದಿಲ್ಲ, ಏಕೆಂದರೆ ನನಗೆ ಅದರ ಆಚರಣೆಯ ವಿಧಾನಗಳಲ್ಲಿ ನಂಬಿಕೆ ಬರುತ್ತಿಲ್ಲ' ಎಂದು ಹೇಳಿ ಕೊಳ್ಳುವುದೇ ಹೆಮ್ಮೆಯ ವಿಷಯವಾಗಿದೆ! 'ಇಲ್ಲಿ' ಮಾಡುವ ಕರ್ಮ 'ಅಲ್ಲಿ' ಹೇಗೆ ಫಲ ಕೊಡಲು ಸಾಧ್ಯ ? ಎನ್ನುವ ತರ್ಕವೇ ನಮ್ಮಲ್ಲಿನ ಕೆಲವು ಆಧುನಿಕರ ಅನಾದರ- ಉದಾಸೀನಗಳಿಗೆ ಕಾರಣವೆಂದು ಕಾಣುತ್ತದೆ. ಶ್ರಾದ್ಧಕರ್ಮವನ್ನು ಶ್ರದ್ಧೆಯಿಂದ ಆಚರಿಸುತ್ತಿರುವ ಬಹುಮಂದಿಗೂ ಕೂಡ ಶ್ರದ್ಧೆ ಹಾಗೂ ಸಂಪ್ರದಾಯವೇ ಆಧಾರವಾಗಿದೆಯೇ ಹೊರತು, ಅರ್ಥಾನುಸಂಧಾನವಲ್ಲ. ಇದಕ್ಕೆ ಕಾರಣ, ಪ್ರಾಯಃ ಸಂಸ್ಕೃತಭಾಷೆಯ ಬಗ್ಗೆ ಅಜ್ಞಾನ, ಗುರುಮುಖೇನ ಶಾಸ್ತ್ರಪಾಠವಾಗಿಲ್ಲದಿರುವುದು ಹಾಗೂ ಸರಿಯಾದ ಹಿರಿಯರ ಮಾರ್ಗದರ್ಶನವಿಲ್ಲದಿರುವುದರಿಂದ ಆಧುನಿಕರಿಗೆ ಉತ್ತರಿಸುವುದು ಕಷ್ಟವಾಗಿದೆಯೆನ್ನಬಹುದು !

ಆದ್ದರಿಂದ ಶ್ರಾದ್ಧಕರ್ಮವನ್ನು ಆಚರಿಸುತ್ತಿರುವ ಸಾಮಾನ್ಯ ಜಿಜ್ಞಾಸುಗಳಿಗೆ ಶ್ರಾದ್ಧಕರ್ಮದ ಶಾಸ್ತ್ರೀಯ ಹಿನ್ನೆಲೆಯಲ್ಲಿ ಅದರ ಅರ್ಥ, ಆವಶ್ಯಕತೆ ಮತ್ತು ಆ ಕರ್ಮಾಚರಣೆಯಿಂದ ಆಗುವ ಅಪಾರ ಲಾಭಗಳು

ಮನದಟ್ಟಾದರೆ ಮುಂದೆ ಮಾಡುವ ಶ್ರಾದ್ಧಕರ್ಮಗಳನ್ನು ಶ್ರದ್ಧೆಯ ಜೊತೆಗೆ ಅರ್ಥಾನುಸಂಧಾನಪೂರ್ವಕವಾಗಿ ಮಾಡುತ್ತಾ, ಆಸಕ್ತಿಯಿರುವ ಜಿಜ್ಞಾಸುಗಳಿಗೆ ಮಾರ್ಗದರ್ಶನ ಮಾಡಲೂ ಉಪಯೋಗವಾಗುತ್ತದೆ ಎಂಬ ದೃಷ್ಟಿಯಿಂದ ಈ ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ. ಇದು ಭಗವದ್‌ಭಕ್ತರ ಪ್ರೀತಿಗೆ ಪಾತ್ರವಾದಲ್ಲಿ ನಮ್ಮ ಶ್ರಮ ಸಾರ್ಥಕ.

ವಿಷಯಪ್ರತಿಪಾದನೆಯಲ್ಲಿ, ನಿರೂಪಣಾವಿಧಾನದಲ್ಲಿ ಏನಾದರೂ ಲೋಪ-ದೋಷಗಳಿದ್ದಲ್ಲಿ ಸಹೃದಯರಾದ ಪಂಡಿತರು, ಆಧಾರಸಹಿತ ವಾಗಿ ಬರವಣಿಗೆಯ ಮೂಲಕ ನಮಗೆ ತಿಳಿಸಿದಲ್ಲಿ, ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿ ಮುಂದಿನ ಮುದ್ರಣದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲು ನಾವು ಸದಾ ಸಿದ್ಧರಿದ್ದೇವೆ.

ಈ ಗ್ರಂಥಪ್ರಕಟಣೆಯ ಕಾರ್ಯದಲ್ಲಿ ಹಲವಾರು ಪಂಡಿತರು, ದಾನಿಗಳು ಹಾಗೂ ಸಜ್ಜನ ಬಂಧುಗಳು ಸಹಾಯ-ಸಹಕಾರಗಳನ್ನು ನೀಡಿದ್ದಾರೆ. ಅವರುಗಳು ನಮ್ಮ ಸಂಸ್ಥೆಯ ವಿಷಯದಲ್ಲಿ ಇಟ್ಟಿರುವ ನಂಬಿಕೆ, ವ್ಯಕ್ತಪಡಿಸಿರುವ ಆದರ, ವಿಶ್ವಾಸಗಳೇ ನಮ್ಮ ಪ್ರಗತಿಯ ಹಿಂದಿರುವ ಶಕ್ತಿ ! ಅದೇ ನಮಗೆ ಶ್ರೀರಕ್ಷೆ! ಅದಕ್ಕೆ ಪ್ರತಿಯಾಗಿ ನಾವು ಏನನ್ನೂ ನೀಡಲಾರೆವು. ತುಂಬು ಹೃದಯದಿಂದ ಅವರುಗಳಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುವುದಷ್ಟೇ ನಮ್ಮಿಂದಾಗುವ ಕೆಲಸ.

ನಮ್ಮ ಕೃತಜ್ಞತೆಗಳನ್ನು ಇವರಿಗೆ ಅರ್ಪಿಸುತ್ತೇವೆ-

1. ಗ್ರಂಥದ ಲೇಖಕರಾದ ಪಂಡಿತ ಶ್ರೀ ಶ್ರೀನಿವಾಸ ಸು. ಮಠದ, ಬಿಜಾಪುರ ಇವರಿಗೆ.
2. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ವಿಶೇಷ ಲೇಖನಗಳನ್ನು ನೀಡಿದ ಡಾ। ಹೆಚ್. ಸತ್ಯನಾರಾಯಣಾಚಾರ್ಯ, ವಿದ್ವಾನ್ ಸಿ.ಹೆಚ್. ಬದರೀನಾಥಾಚಾರ್ಯ, ಡಾ। ಎನ್. ವೆಂಕಟೇಶಾಚಾರ್ಯ, ವಿದ್ವಾನ್ ಶ್ರೀರಾಮವಿಟ್ಠಲಾಚಾರ್ಯ ಹಾಗೂ ಡಾ। ಎ.ವಿ. ನಾಗಸಂಪಿಗೆ ಅವರುಗಳಿಗೆ.

3. ಗ್ರಂಥವು ಸರ್ವಾಂಗಸುಂದರವಾಗಿ ಸಾಕಾರಗೊಳ್ಳಲು ಸರ್ವವಿಧದಲ್ಲೂ ಸಹಕರಿಸಿ, ಮಾರ್ಗದರ್ಶನ ನೀಡಿದ ಪೂರ್ಣಪ್ರಜ್ಞ ಸಂಶೋಧನ ಮಂದಿರದ ನಿರ್ದೇಶಕರಾದ ಡಾ। ಎ.ವಿ. ನಾಗಸಂಪಿಗೆ ಇವರಿಗೆ.

4. ಗ್ರಂಥದ ಹಸ್ತಪ್ರತಿಯನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಹಿರಿಯ ವಿದ್ವಾಂಸರಾದ ವಟ್ಟಂಗಾಡು ಹಯಗ್ರೀವ ಆಚಾರ್ಯರು ಮತ್ತು ಡಾ। ಹೆಚ್. ಸತ್ಯನಾರಾಯಣಾಚಾರ್ಯರಿಗೆ.

5. ಗ್ರಂಥಪ್ರಕಾಶನಕ್ಕೆ ಸ್ವಸಂತೋಷದಿಂದ ಆರ್ಥಿಕ ಸಹಾಯ ನೀಡಿದ ದಾನಿಗಳಿಗೆ

6. ಮುಖಪುಟದ 'ಗಯಾ ಗದಾಧರಸ್ವಾಮಿ'ಯ ಚಿತ್ರವನ್ನು ಒದಗಿಸಿದ 'ಮಾಧ್ವ ಸಮಾಚಾರ' ಮಾಸಪತ್ರಿಕೆಯ ಶ್ರೀ ಟಿ.ಜಿ. ರಾಧಾಕೃಷ್ಣ ಇವರಿಗೆ.

7. ಕೆಂಗೇರಿ ಉಪನಗರದ ಶ್ರೀರಾಘವೇಂದ್ರ ಸೇವಾ ಟ್ರಸ್ಟಿನ ಆಡಳಿತ ಮಂಡಳಿಯ ಸದಸ್ಯರಿಗೆ.

8. ಶ್ರಮಸಾಧ್ಯವಾದ ಡಿ.ಟಿ.ಪಿ. ಕಾರ್ಯವನ್ನು ನಿರ್ವಹಿಸಿದ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಸಿಬ್ಬಂದಿವರ್ಗಕ್ಕೆ.

9. ಪ್ರಾಥಮಿಕ ಕರಡುಪ್ರತಿ ತಿದ್ದಿದ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಸಿಬ್ಬಂದಿವರ್ಗಕ್ಕೆ.

10. ಮುದ್ರಣಕಾರ್ಯ ನಿರ್ವಹಿಸಿದ 'ಪರಿಶ್ರೀ ಪ್ರಿಂಟರ್ಸ್'ನ ಶ್ರೀ ಆರ್. ಶ್ರೀನಾಥ್ ಮತ್ತು ಅವರ ಅಚ್ಚುಕೂಟದ ಸಂಗಡಿಗರಿಗೆ.

11. ಮುಖಪುಟ ವಿನ್ಯಾಸವನ್ನು ರಚಿಸಿದ ಶ್ರೀ ಕೆ.ಎಂ. ಶೇಷಗಿರಿ ಇವರಿಗೆ.

12. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ-ಸಹಕಾರಗಳನ್ನು ನೀಡಿದ ಎಲ್ಲ ಕಾರ್ಯಕರ್ತರಿಗೆ.

ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಶ್ರೀಹರಿಯು ನಮ್ಮ ಅನಂತ ಅಪರಾಧಗಳನ್ನು ಕ್ಷಮಿಸಿ, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಅವನ ಪ್ರೀತಿಸಂಪಾದನೆಯೊಂದನ್ನೇ ಗುರಿಯಾಗಿಟ್ಟುಕೊಂಡು, ಅವನ ಪಾದಸೇವೆ ಮಾಡುವ ಸೌಭಾಗ್ಯವನ್ನು ನಮಗೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ದಿನಾಂಕ : 22-01-2006
ಬೆಂಗಳೂರು

ಇತಿ ಸಜ್ಜನ ಸೇವಕ
ಜಿ. ವೆಂಕಟೇಶ್
ಪ್ರವರ್ತಕರು
ಶ್ರೀ ರಾಘವೇಂದ್ರ ದರ್ಶನ ಕೇಂದ್ರ

- ಪರಿಚಯಾತ್ಮಕ ಅಧ್ಯಯನ

ಲೇಖಕನ ನುಡಿ

ಶ್ರೀರಾಘವೇಂದ್ರ ದರ್ಶನ ಕೇಂದ್ರ, ಬೆಂಗಳೂರು ಇದರ ಕಾರ್ಯದರ್ಶಿಗಳಾದ ಶ್ರೀಯುತ ಡಿ.ವಿ. ಕೃಷ್ಣಮೂರ್ತಿಯವರು 'ಶ್ರಾದ್ಧಕರ್ಮ'ವನ್ನು ಕುರಿತು ಪುಸ್ತಕವೊಂದನ್ನು ಬರೆದು ಕೊಡಬೇಕೆಂದು ಕೇಳಿಕೊಂಡರು. ಇದು ನನ್ನಿಂದ ಸಾಧ್ಯವೇ ? ಎನ್ನಿಸುತ್ತಿತ್ತು. ಆದರೂ ಆ ಭಗವಂತನ ಪ್ರೇರಣೆಯಂತೆ ಒಪ್ಪಿಕೊಂಡೆ. ನಂತರ ಆ ಭಗವಂತನೇ ನನ್ನಲ್ಲಿ ನಿಂತು ಈ ಕೆಲಸವನ್ನು ಮಾಡಿಸಿದ. ಅದರ ಫಲವೇ ಈ ಪುಸ್ತಕ. ಶ್ರಾದ್ಧದ ಕುರಿತಂತೆ ಎಲ್ಲವನ್ನು ಇಲ್ಲಿ ಹೇಳದಿದ್ದರೂ, ಅದರ ಪರಿಚಯವಾಗುವಂತೆ ಕೆಲವು ಲೇಖನಗಳನ್ನು ಕೊಡಲು ಪ್ರಯತ್ನಿಸಿದ್ದೇನೆ. ಭಗವದ್ಭಕ್ತರು ಓದಿ ಶ್ರದ್ಧೆಯಿಂದ ಪಿತೃಕಾರ್ಯಗಳನ್ನು ಆಚರಿಸಿದಲ್ಲಿ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ಈ ಕೃತಿಯನ್ನು ನಮ್ಮ ಕುಲಸ್ವಾಮಿಯಾದ ಶ್ರೀ ಶ್ರೀನಿವಾಸ ದೇವರ ಅಡಿದಾವರೆಗಳಲ್ಲಿ ಭಕ್ತಿ ಪೂರ್ವಕ ಸಮರ್ಪಿಸಿದ್ದೇನೆ.

ಕೃತಿ ರಚನೆಯಲ್ಲಿ ಮಾರ್ಗದರ್ಶನ ಮಾಡಿದ ನನ್ನ ವಿದ್ಯಾಗುರುಗಳಾದ ಶ್ರೀ ಪಂ॥ ತ್ರಿವಿಕ್ರಮಾಚಾರ್ಯ ಉಮರ್ಜಿ ವಿಜಾಪುರ ಹಾಗೂ ಅನೇಕ ಸಲಹೆ ಸೂಚನೆಗಳನ್ನು ನೀಡಿದ ಶ್ರೀ ಪಂ॥ ಕೆ.ಜಿ.ಕಲಕೋಟಿ ಧಾರವಾಡ ಇವರಿಗೆ, ಹಸ್ತಪ್ರತಿಯನ್ನು ಪರಿಶೀಲಿಸಿದ ಶ್ರೀಪಂ॥ ಮೊಖಾಶಿ ಮಧ್ವಾಚಾರ್ಯರು ವಿಜಾಪುರ ಇವರಿಗೆ ನನ್ನ ಕೃತಜ್ಞತಾಪೂರ್ವಕ ಶಿ॥ಸಾ॥ ನಮಸ್ಕಾರಗಳು.

ಈ ಕೃತಿಯ ಭಾಗ- ಎರಡರಲ್ಲಿ ಇರುವ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದು ಕೊಟ್ಟ ಶ್ರೀ ಡಾ॥ ಆನಂದತೀರ್ಥಾಚಾರ್ಯ ನಾಗಸಂಪಿಗೆ, ಶ್ರೀ ಡಾ॥ ಹೆಚ್. ಸತ್ಯನಾರಾಯಣಾಚಾರ್ಯ, ಶ್ರೀ ಡಾ॥ ಎನ್. ವೆಂಕಟೇಶಾಚಾರ್ಯ, ಶ್ರೀ ಪಂ॥ ಶ್ರೀರಾಮವಿಟ್ಠಲಾಚಾರ್ಯ, ಶ್ರೀ ಪಂ॥ ಸಿ.ಹೆಚ್. ಬದರೀನಾಥಾಚಾರ್ಯ ಇವರೆಲ್ಲರಿಗೂ ನನ್ನ ಕೃತಜ್ಞತಾ ಪೂರ್ವಕ ನಮಸ್ಕಾರಗಳು.

ಪ್ರಸ್ತುತ ಕೃತಿಯು ಹೊರ ಬರಲು ಕಾರಣೀಭೂತರಾದ ಶ್ರೀ ರಾಘವೇಂದ್ರ ದರ್ಶನ ಕೇಂದ್ರದ ಪ್ರವರ್ತಕರಾದ ಶ್ರೀ ಜಿ. ವೆಂಕಟೇಶ್,

ಅಧ್ಯಕ್ಷರಾದ ಶ್ರೀ ಎಸ್.ಎಲ್. ನಾಗರಾಜ್ ಮತ್ತು ಆದರ ಆಡಳಿತ ಮಂಡಳಿಯವರನ್ನು ಕೃತಜ್ಞತೆಯಿಂದ ಇಲ್ಲಿ ಸ್ಮರಿಸುತ್ತೇನೆ.

ಈ ಕೃತಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಣ ಮಾಡಿಕೊಟ್ಟ ಪರಿಶ್ರೀ ಮುದ್ರಣಾಲಯ ಬೆಂಗಳೂರು ಇವರಿಗೆ ಧನ್ಯವಾದಗಳು.

ಇಂಥ ಕೃತಿಯಿಂದ ಶ್ರೀ ಹರಿ ವಾಯು ಗುರುಗಳು ಸುಪ್ರೀತರಾಗಲಿ ಎಂಬುದಾಗಿ ಪ್ರಾರ್ಥಿಸುತ್ತೇನೆ.

ಇತಿ ಸಜ್ಜನ ಸೇವಕ
ಶ್ರೀನಿವಾಸ ಸು. ಮಠದ
ವಿಜಾಪುರ

ಅನುಕ್ರಮಣಿಕಾ

ಭಾಗ - 1

ಭಾಗ - 2 - ಶ್ರಾದ್ಧಕರ್ಮವನ್ನು ಕುರಿತ ಇತರ ಲೇಖನಗಳು (ವಿವಿಧ ವಿದ್ವಾಂಸರಿಂದ)

|| ಶ್ರೀಃ ||

ಭಾಗ - 1

ಶ್ರಾದ್ಧ ಪರಿಚಯ

ಕರ್ಮಭೂಮಿ ಎನಿಸಿದ ಈ ಭರತ ಖಂಡದ ಸನಾತನ ಧರ್ಮಗಳಲ್ಲಿ- ''ಶ್ರಾದ್ಧ'' ಕರ್ಮವು ಮುಖ್ಯವಾಗಿದೆ. ಇದು ಅತ್ಯಂತ ಶ್ರೇಯಸ್ಕರವಾದ ಕರ್ಮವಾಗಿದೆ. ಇದಕ್ಕೆ ''ಪಿತೃಯಜ್ಞ'' ವೆಂದು ಕರೆಯುವದುಂಟು.

ಶ್ರಾದ್ಧ ಎಂದರೇನು ?

ನಮ್ಮ ಜನ್ಮಕ್ಕೆ ಕಾರಣರಾಗಿ, ನಮ್ಮನ್ನು ಹೆತ್ತು ಹೊತ್ತು ಸಾಕಿ, ಸಲಹಿ ನಮ್ಮ ಉದ್ಧಾರಕ್ಕೆ ಶ್ರಮಿಸಿ, ನಮ್ಮನ್ನಗಲಿ ಹೋದ ತಂದೆ ತಾಯಿ ಹಿರಿಯರು ಮುಂತಾದವರನ್ನು ಸ್ಮರಿಸಿ, ಅವರನ್ನು ಕುರಿತು ಶ್ರದ್ಧೆಯಿಂದ ಅನ್ನಜಲಾದಿಗಳನ್ನು ಕೊಡುವ ಪಿತೃಕಾರ್ಯಕ್ಕೆ ''ಶ್ರಾದ್ಧ'' ವೆಂದು ಹೆಸರು.

''ಪಿತೄನುದ್ದಿಶ್ಯ ವಿಪ್ರೇಭ್ಯೋ ದತ್ತಂ ಶ್ರಾದ್ಧಮುದಾಹೃತಮ್''
(ಬ್ರಹ್ಮಾಂಡ ಪುರಾಣ)

ಪಿತೃಗಳನ್ನುದ್ದೇಶಿಸಿ ಬ್ರಾಹ್ಮಣರಿಗೆ ಕೊಟ್ಟದ್ದು ''ಶ್ರಾದ್ಧ'' ವೆಂದು ಕರೆಯಲ್ಪಡುತ್ತದೆ.

ಪಿತ್ರುದ್ದೇಶೇನ ಶ್ರದ್ಧಯಾ ತ್ಯಕ್ತಸ್ಯ ದ್ರವ್ಯಸ್ಯ
ಬ್ರಾಹ್ಮಣೈರ್ಯತ್ಸ್ವೀಕರಣಂ ತತ್ ಶ್ರಾದ್ಧಮ್ || (ಶ್ರಾದ್ಧ ಕಲ್ಪಲತಾ)

ಪಿತೃಗಳನ್ನುದ್ದೇಶಿಸಿ ಶ್ರದ್ಧೆಯಿಂದ ಕೊಡಲ್ಪಟ್ಟ ದ್ರವ್ಯವನ್ನು ಬ್ರಾಹ್ಮಣರು ಸ್ವೀಕರಿಸುವುದಕ್ಕೆ ಶ್ರಾದ್ಧವೆಂದು ಹೆಸರು.

ಒಟ್ಟಿನಲ್ಲಿ ಶ್ರದ್ಧೆಯಿಂದ ತನಗೆ ಪ್ರಿಯವಾದ ಭೋಜ್ಯವನ್ನು ತನ್ನ ಪಿತೃಗಳನ್ನುದ್ದೇಶಿಸಿ ಕೊಡುವ ''ಪಿಂಡ ಪ್ರದಾನ'' ಕ್ರಿಯೆಗೆ ಶ್ರಾದ್ಧವೆಂದು ಹೇಳುತ್ತಾರೆ.

ಇಲ್ಲಿ ಕೆಲವರು ಪ್ರಶ್ನೆ ಕೇಳುವದುಂಟು- ನಮ್ಮನ್ನಗಲಿ ಹೋದ ಪಿತೃಗಳಿಗೆ ನಾವು ಕೊಡುವ ಜಲಾಂಜಲಿ, ಪಿಂಡಪ್ರದಾನದಿಂದ ತೃಪ್ತಿಯಾಗುವುದು ಹೇಗೆ? ಅವರಿಗೆ ನಾವು ಕೊಟ್ಟದ್ದು ತಲುಪುವದು ಹೇಗೆ?

ಇದಕ್ಕೆ ನಮ್ಮ ಉತ್ತರ ಹೀಗಿದೆ- ನಾವು ಕೊಟ್ಟ ಅನ್ನವನ್ನು ಅಂದರೆ ಅದರ ಸಾರ ಭಾಗವನ್ನು ವಸು, ರುದ್ರ, ಆದಿತ್ಯ ತದಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ರೂಪಿ ಭಗವಂತನು ಸ್ವೀಕರಿಸಿ ಅದನ್ನು ನಮ್ಮ ಪಿತೃಗಳು ಯಾವ ಯೋನಿಯಲ್ಲಿ, ಎಲ್ಲಿ ಇರುವರೋ, ಅಲ್ಲಿ ಅವರಿಗೆ ಆಹಾರ ರೂಪವಾಗಿ ಸೂಕ್ತರೀತಿಯಲ್ಲಿ ಕೊಟ್ಟು ಸಂತೋಷಪಡಿಸುತ್ತಾನೆ.

ಶ್ರಾದ್ಧಕರ್ತೃವಿನ ತಂದೆಯು/ಪಿತೃಗಳು ದೇವತ್ವವನ್ನು ಹೊಂದಿದ್ದರೆ ಆ ಅನ್ನವು ಅಮೃತವಾಗಿ, ಪಶುವಾಗಿದ್ದರೆ ಹುಲ್ಲಾಗಿ, ಸರ್ಪವಾಗಿದ್ದರೆ ವಾಯುರೂಪವಾಗಿ, ಹದ್ದು ಮೊದಲಾದವಾಗಿದ್ದರೆ ಮಾಂಸವಾಗಿ, ಮನುಷ್ಯರಾಗಿದ್ದರೆ ಯೋಗ್ಯ ಅನ್ನವಾಗಿ ಅವರಿಗೆ ತಲುಪುತ್ತದೆ.

ಈ ವ್ಯವಸ್ಥೆಯ ಕುರಿತು ಉದಾಹರಣೆ ಹೀಗಿದೆ- ನಾವು ವಿದೇಶದಲ್ಲಿದ್ದವರಿಗೆ ಹಣ ಕಳಿಸಿದರೆ ನಮ್ಮ ನೋಟುಗಳು ಅಲ್ಲಿಗೆ ಹೋಗುವುದಿಲ್ಲ. ಇವುಗಳನ್ನೇ ಅವರಿಗೆ ಕೊಡುವುದಿಲ್ಲ. ಆದರೆ ಈ ಹಣದ ಬೆಲೆಯಷ್ಟು ಆ ದೇಶದ ಡಾಲರ್ ಇತ್ಯಾದಿ ಹಣದ ರೂಪದಲ್ಲಿ ಅವರಿಗೆ ಮುಟ್ಟಿಸುತ್ತಾರೆ. ಹಾಗೆಯೇ ಮೇಲೆ ತಿಳಿಸಿದಂತೆ ನಮ್ಮ ಪಿತೃಗಳು ಯಾವ ಯೋನಿಯಲ್ಲಿದ್ದರೂ ಅದನ್ನು ಅವರಿಗೆ ಯೋಗ್ಯವಾದ ರೀತಿಯಲ್ಲಿ ತಲುಪಿಸುವುದುಂಟು.

ಪಿತೃಗಳ (ತಂದೆ, ತಾಯಿ, ಹಿರಿಯರು) ತೃಪ್ತಿಗಾಗಿ ಶ್ರಾದ್ಧಕರ್ಮವನ್ನು ಮಾಡಲೇಬೇಕು ಎಂಬುದಾಗಿ ಕೂರ್ಮಮಹಾಪುರಾಣದಲ್ಲಿ ತಿಳಿಸಿದ್ದಾರೆ.

ಶ್ರಾದ್ಧಾತ್ಪರತರಾನ್ನಾಸ್ತಿ ಶ್ರೇಯಸ್ಕರಮುದಾಹೃತಮ್।
ತಸ್ಮಾತ್ ಸರ್ವಪ್ರಯತ್ನೇನ ಶ್ರಾದ್ಧಂ ಕುರ್ಯಾದ್ವಿಚಕ್ಷಣಃ ॥

ಮಾನವರಿಗೆ ತಮ್ಮ ಪಿತೃಗಳ ಶಾಸ್ತ್ರೋಕ್ತವಾದ ಶ್ರಾದ್ಧಕರ್ಮಕ್ಕಿಂತ ಶ್ರೇಯಸ್ಕರವಾದ ಕಾರ್ಯವು ಯಾವುದೂ ಇಲ್ಲ. ಆದ್ದರಿಂದ ವಿವೇಕಿಗಳು, ಜ್ಞಾನಿಗಳು ಸರ್ವ ಪ್ರಯತ್ನದಿಂದ ಶ್ರಾದ್ಧವನ್ನು ಮಾಡಬೇಕು.

ಯೇ ಯಜಂತಿ ಪಿತೄನ್‌ದೇವಾನ್ ಬ್ರಾಹ್ಮಣಾಃ ಸರ್ವಕಾಮದಾನ್।
ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜಂತಿ ತೇ ॥ (ಯಮಸ್ಮೃತಿ)

ಯಾವ ಬ್ರಾಹ್ಮಣರು ಎಲ್ಲ ಇಷ್ಟಾರ್ಥವನ್ನು ಕೊಡುವವರಾದ ಪಿತೃಗಳನ್ನು,

ದೇವತೆಗಳನ್ನು ಪೂಜಿಸುವರೋ ಅವರು ಎಲ್ಲಾ ಚೇತನಾಚೇತನಾತ್ಮಕವಾದ ಪ್ರಪಂಚಕ್ಕೆ ನಿಯಾಮಕನಾದ ವಿಷ್ಣುವನ್ನೇ ಪೂಜಿಸುತ್ತಾರೆ.

ಶ್ರಾದ್ಧ ಕರ್ಮವನ್ನು ಮಾಡದಿದ್ದರೆ ಏನಾಗುತ್ತದೆ? ಎಂದು ಕೇಳುವವರಿದ್ದಾರೆ. ಇದಕ್ಕೆ ಹಾರೀತ ಸ್ಮೃತಿಕಾರರು ಹೀಗೆ ಉತ್ತರಿಸಿದ್ದಾರೆ.

ನ ಸಂತಿ ಪಿತರಶ್ಚೇತಿ ಕೃತ್ವಾ ಮನಸಿ ಯೋ ನರಃ ।
ಶ್ರಾದ್ಧಂ ನ ಕುರುತೇ ತತ್ರ ತಸ್ಯ ರಕ್ತಂ ಪಿಬಂತಿ ತೇ॥

ಯಾವ ಮನುಷ್ಯರು ಪಿತೃಗಳು ಅಥವಾ ತಂದೆ ತಾಯಿಗಳ ದೇಹವನ್ನು ಸುಟ್ಟು ಭಸ್ಮ ಮಾಡಿದ ಮೇಲೆ ಅವರಿಗೆ ಹುಟ್ಟೇ ಇಲ್ಲ ಎಂಬ ಭಾವನೆಯಿಂದ ಪಿತೃಗಳ ಶ್ರಾದ್ಧಾದಿಗಳನ್ನು ಮಾಡುವುದಿಲ್ಲವೋ, ಇಂಥವರ ಪಿತೃಗಳು ಸಿಟ್ಟಾಗಿ ಈ ನಾಸ್ತಿಕರ ರಕ್ತವನ್ನು ಕುಡಿಯುತ್ತಾರೆ.

ಇನ್ನು ಶ್ರಾದ್ಧವನ್ನು ಮಾಡುವವರು ನ್ಯಾಯದಿಂದ ಗಳಿಸಿದ ಹಣದಿಂದಲೇ ಮಾಡಬೇಕೆಂದು ಮಾರ್ಕಂಡೇಯ ಪುರಾಣದಲ್ಲಿ ತಿಳಿಸಿದ್ದಾರೆ. ಮತ್ತು,

ಅನ್ಯಾಯೋಪಾರ್ಜಿತೈರ್ವಿತ್ತೈಃ ಯತ್ ಶ್ರಾದ್ಧಂ ಕ್ರಿಯತೇ ನರೈಃ।
ತೃಪ್ಯಂತಿ ತೇನ ಚಾಂಡಾಲಾಃ ಪುಲ್ಕಸಾದ್ಯಾಶ್ಚ ಯೋನಯಃ ॥

ಮಾನವರು ಅನ್ಯಾಯ (ಅಧರ್ಮ) ದಿಂದ ಹಣವನ್ನು ಗಳಿಸಿ, ಅದರಿಂದ ಶ್ರಾದ್ಧ ಮಾಡಿದರೆ, ಆ ಶ್ರಾದ್ಧದಿಂದ ಚಾಂಡಾಲ, ಪುಲ್ಕಸ (ಬ್ರಾಹ್ಮಣನಿಗೆ- ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ ಮಿಶ್ರಜಾತಿಯವ) ಮುಂತಾದ ಪಾಪಿಗಳಿಗೆ ತೃಪ್ತಿಯಾಗುವುದೇ ಹೊರತು ಪಿತೃಗಳಿಗೆ ತೃಪ್ತಿಯಾಗುವುದೇ ಇಲ್ಲ.

ಶ್ರಾದ್ಧಗಳು ಒಟ್ಟು 96 ಎಂಬುದಾಗಿ ಹೇಳುವುದುಂಟು.

1.	ಅಮಾವಾಸ್ಯ ಶ್ರಾದ್ಧಗಳು	12
2.	ಸಂಕ್ರಮಣ ಶ್ರಾದ್ಧಗಳು	12
3.	ಯುಗಾದಿ ಶ್ರಾದ್ಧಗಳು (ಮಾಘ ಅಮಾವಾಸ್ಯೆ, ಭಾದ್ರಪದ ಕೃಷ್ಣ ತ್ರಯೋದಶಿ, ವೈಶಾಖ ಶುಕ್ಲ ತೃತೀಯಾ, ಕಾರ್ತಿಕ ಶುಕ್ಲ ನವಮಿ)	4
4.	ವೈಧೃತಿಗಳು	13

5.	ವ್ಯತೀಪಾತಗಳು	13
6.	ಮಹಾಲಯಗಳು	16
7.	ಅಷ್ಟಕ ಶ್ರಾದ್ಧ (ಹಿಂದಿನ ದಿನದ ಶ್ರಾದ್ಧ -4 ಮರುದಿನದ ಶ್ರಾದ್ಧ 4 ಸೇರಿ)	12
8.	ಮನ್ವಾದಿ ಶ್ರಾದ್ಧಗಳು	14
	ಶ್ರಾದ್ಧಗಳು ಒಟ್ಟು	**96**

ಇದರಲ್ಲಿ ಪ್ರತಿಸಾಂವತ್ಸರಿಕ ಹಾಗೂ ಮಹಾಲಯಶ್ರಾದ್ಧಗಳು ಪಿಂಡಪ್ರದಾನ ಸಹಿತವಾಗಿ ಮಾಡತಕ್ಕವುಗಳು. ಉಳಿದವುಗಳು ಆಮ, ಹಿರಣ್ಯ, ಸಂಕಲ್ಪ, ತಿಲತರ್ಪಣಾದಿಗಳಿಂದ- ಯಥಾಶಕ್ತಿ ಮಾಡಬಹುದು. (ಈ ವಿಷಯದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಗಳಿವೆ).

ಸರ್ವೇಷಾಮ್‌ಶ್ರಾದ್ಧಾನಾಂ ಶ್ರೇಷ್ಠಂ ಸಾಂವತ್ಸರಂ ಮತಮ್ ॥

ಉಕ್ತಿಯಂತೆ ಮೃತಾಹ (ಸತ್ತ ದಿನದ) ಅಂದರೆ ಪ್ರತಿ ಸಾಂವತ್ಸರಿಕ ಶ್ರಾದ್ಧವು ಶ್ರೇಷ್ಠವಾಗಿದೆ ಮತ್ತು ಮುಖ್ಯವಾಗಿದೆ. ಕಾರಣ ಪ್ರತಿಯೊಬ್ಬರೂ ಇದನ್ನು ತಪ್ಪದೇ ಮಾಡಬೇಕು.

ಶ್ರಾದ್ಧವು ಹನ್ನೆರಡು ಪ್ರಕಾರವಾಗಿದೆಯೆಂದು ವಿಶ್ವಾಮಿತ್ರರು ಹೇಳುತ್ತಾರೆ.

(1) ನಿತ್ಯ ಶ್ರಾದ್ಧ (2) ನೈಮಿತ್ತಿಕ ಶ್ರಾದ್ಧ (3) ಕಾಮ್ಯಶ್ರಾದ್ಧ (4) ವೃದ್ಧಿ ಶ್ರಾದ್ಧ (5) ಸಪಿಂಡೀಕರಣ ಶ್ರಾದ್ಧ (6) ಪಾರ್ವಣ ಶ್ರಾದ್ಧ (7) ಗೋಷ್ಠ್ಯಶ್ರಾದ್ಧ (8) ಶುದ್ಧಿ ಶ್ರಾದ್ಧ (9) ಕರ್ಮಾಂಗ ಶ್ರಾದ್ಧ (10) ದೈವಿಕ ಶ್ರಾದ್ಧ (11) ಯಾತ್ರಾಶ್ರಾದ್ಧ (ತೀರ್ಥಯಾತ್ರೆಯಲ್ಲಿ ಮಾಡುವ ಶ್ರಾದ್ಧ) (12) ಪುಷ್ಟಿಶ್ರಾದ್ಧ.

1. ಪ್ರತಿದಿನ ಹಗಲಿನಲ್ಲಿ ಮಾಡುವ ಶ್ರಾದ್ಧವನ್ನು ನಿತ್ಯ ಶ್ರಾದ್ಧವೆನ್ನುತ್ತಾರೆ. ಈ ಶ್ರಾದ್ಧವನ್ನು ವೈಶ್ವದೇವ ರಹಿತ ವಾಗಿ (ವಿಶ್ವೇದೇವತೆಗಳು ಇಲ್ಲದೇ) ಮಾಡಬೇಕು. ಈ ವಿಧ ನಿತ್ಯಶ್ರಾದ್ಧ ಮಾಡಲು ಶಕ್ತಿ ಇಲ್ಲದವರು ನೀರಿನಿಂದಲೇ ನಿತ್ಯಶ್ರಾದ್ಧ ಮಾಡಬಹುದು.

2. ಏಕೋದ್ದಿಷ್ಟ ಶ್ರಾದ್ಧವೇ ನೈಮಿತ್ತಿಕ ಶ್ರಾದ್ಧವೆಂದು ಹೇಳಲ್ಪಡುತ್ತದೆ . ಒಂದೇ ಪಿತೃವಿನ ಉದ್ದೇಶದಿಂದ ಮಾಡುವ ಶ್ರಾದ್ಧಕ್ಕೆ ''ಏಕೋದ್ದಿಷ್ಟ''ವೆಂದು ಹೆಸರು, ಮೃತನ ಮೃತ ದಿವಸದಿಂದ ಆರಂಭಿಸಿ ಹತ್ತನೆಯ ದಿನದವರೆಗೆ ಮಾಡುವ ಏಕೋದ್ದಿಷ್ಟಕ್ಕೆ ''ನವಸಂಜ್ಞಿಕ'' ವೆನ್ನುತ್ತಾರೆ, ಏಕಾದಶ ದಿನದಿಂದ ಊನಾಬ್ದಿಕದ ವರೆಗೆ ಮಾಡುವ ಏಕೋದ್ದಿಷ್ಟಕ್ಕೆ ''ನವಮಿಶ್ರ'' ವೆನ್ನುತ್ತಾರೆ. ಈ ಶ್ರಾದ್ಧದಲ್ಲಿ ವಿಶ್ವೇದೇವತೆಗಳಿಲ್ಲ. ಇದರಲ್ಲಿ ವಿಷಮ ಸಂಖ್ಯೆಯ (1, 3, 5 , ಇತ್ಯಾದಿ ಸಂಖ್ಯೆಯ) ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. (ನಿರ್ಣಯಸಿಂಧು)

3. ಇಷ್ಟಾರ್ಥಸಿದ್ಧಿಗೋಸ್ಕರ ಮಾಡಲ್ಪಡುವ ಶ್ರಾದ್ಧಕ್ಕೆ ''ಕಾಮ್ಯಶ್ರಾದ್ಧ''ವೆಂದು ಕರೆಯುತ್ತಾರೆ.

4. ವಿವಾಹ ಮುಂತಾದ ಕಾರ್ಯಗಳಲ್ಲಿ ಮಾಡತಕ್ಕ ಶ್ರಾದ್ಧವನ್ನು ''ವೃದ್ಧಿಶ್ರಾದ್ಧ'' ಅಥವಾ ನಾಂದೀ ಶ್ರಾದ್ಧವೆನ್ನುತ್ತಾರೆ.

5. ಪಿತೃ ಪಾತ್ರಗಳಲ್ಲಿ ಪ್ರೇತ ಅರ್ಘ್ಯಪಾತ್ರದ ಜಲವನ್ನು ಒಟ್ಟುಸೇರಿಸುವುದು, ಪ್ರೇತ ಪಿಂಡವನ್ನು ಪಿತೃ ಪಿಂಡಗಳಿಗೆ ಸೇರಿಸುವುದು ಇದಕ್ಕೆ ''ಸಪಿಂಡೀಕರಣ'' ಶ್ರಾದ್ಧ ವೆಂದು ಕರೆಯುತ್ತಾರೆ.

6. ಪ್ರತಿಯೊಂದು ಪರ್ವಸಮಯದಲ್ಲಿ ಮಾಡುವ ಶ್ರಾದ್ಧಕ್ಕೆ ''ಪಾರ್ವಣ ಶ್ರಾದ್ಧ''ವೆಂದು ಹೆಸರು.

7. ಜ್ಞಾನಿಗಳ ಗೋಷ್ಠಿಯಲ್ಲಿ ಮಾಡುವ ಶ್ರಾದ್ಧವನ್ನು ಗೋಷ್ಠೀ (ಗೋಷ್ಠ್ಯ) ಶ್ರಾದ್ಧವೆನ್ನುತ್ತಾರೆ. (ತನ್ನ ಸುಖಕ್ಕಾಗಿ ಆಗಲಿ, ಪಿತೃ ತೃಪ್ತಿಗೋಸ್ಕರವೇ ಆಗಲಿ ಮಾಡುವ ಶ್ರಾದ್ಧ)

8. ಶುದ್ಧಿಗಾಗಿ ಅಂದರೆ ಪವಿತ್ರತೆಗಾಗಿ ಬ್ರಾಹ್ಮಣ ಭೋಜನ ಮಾಡಿಸಿ ಪಾರ್ವಣ ಶ್ರಾದ್ಧದಂತೆ ಮಾಡುವ ಶ್ರಾದ್ಧವನ್ನು ''ಶುದ್ಧಿ ಶ್ರಾದ್ಧ''ವೆನ್ನುವರು.

9. ಗರ್ಭಾದಾನ ಸಂಸ್ಕಾರಕಾಲದಲ್ಲಿ, ಸೋಮಯಾಗದ ಆರಂಭದಲ್ಲಿ, ಸೀಮಂತ ಸಂಸ್ಕಾರ ಕಾಲದಲ್ಲಿ ಶಾಸ್ತ್ರೋಕ್ತವಾಗಿ ಆಯಾ ಕರ್ಮಾಂಗವಾಗಿ ಮಾಡುವ ಶ್ರಾದ್ಧಕ್ಕೆ'' ಕರ್ಮಾಂಗ ಶ್ರಾದ್ಧ''ವೆಂದು ಕರೆಯುತ್ತಾರೆ.

10. ದೇವತೆಗಳನ್ನು ಉದ್ದೇಶಿಸಿ ಮಾಡುವ ಶ್ರಾದ್ಧವನ್ನು ''ದೈವಿಕ ಶ್ರಾದ್ಧ''ವೆನ್ನುತ್ತಾರೆ

(ದ್ವಾದಶೀ ಮುಂತಾದ ಪವಿತ್ರ ದಿನಗಳಲ್ಲಿ ಮಾಡುವ ಶ್ರಾದ್ಧ)

11. ಯಾತ್ರೆಗೆ ಹೋದವರು ತೀರ್ಥಗಳಲ್ಲಿ ಮಾಡುವ ಶ್ರಾದ್ಧವು ಯಾತ್ರಾ ಶ್ರಾದ್ಧ (ತೀರ್ಥ ಶ್ರಾದ್ಧ) ವೆನಿಸುತ್ತದೆ.

12. ತುಪ್ಪದಿಂದಲೇ ಮಾಡಿದ ಪದಾರ್ಥಗಳನ್ನು ಬ್ರಾಹ್ಮಣರಿಗೆ ತೃಪ್ತಿಯಾಗುವಂತೆ ಹಾಕಿ (ಬಡಿಸಿ) ಮಾಡತಕ್ಕ ಶ್ರಾದ್ಧಕ್ಕೆ ''ಪುಷ್ಟಿಶ್ರಾದ್ಧ'' ವೆಂದು ಕರೆಯುತ್ತಾರೆ.

★ ★ ★

ಶ್ರಾದ್ಧ ಮಹಿಮೆ.

ಕುರುಕ್ಷೇತ್ರದಲ್ಲಿ ವಿಶ್ವಾಮಿತ್ರರ ಏಳು ಜನ ಮಕ್ಕಳು ವಾಸವಾಗಿದ್ದರು. ಅವರ ಹೆಸರು ವಾಗ್ದುಷ್ಟ, ಕ್ರೋಧನ, ಹಿಂಸ್ರ, ಪಿಶುನ, ಕವಿ, ಖಸೃಮ, ಪಿತೃವರ್ತಿ. ತಂದೆ ತಪಸ್ಸಿಗೆ ಹೋಗಲು ಗಾರ್ಗ್ಯರ ಹತ್ತಿರ ಅಧ್ಯಯನವನ್ನು ಮುಂದುವರೆಸಿದರು. ಪ್ರತಿದಿನ ಪ್ರಾತಃಕಾಲದ ಪಾಠ ಮುಗಿಸಿಕೊಂಡು ಆಶ್ರಮದ ಕರು, ಆಕಳನ್ನುಮೇಯಿಸಿಕೊಂಡು ಬರುತ್ತಿದ್ದರು. ಹೀಗೆ ಒಂದು ದಿನ ವನದಲ್ಲಿ ಬಹುದೂರ ಹೋದರು. ಅಂದಿನ ಉರಿ ಬಿಸಿಲಿನಿಂದಾಗಿ ಹಸಿವೆಯಿಂದ ಪರಿತಪಿಸಹತ್ತಿದರು . ಎಷ್ಟು ಹುಡುಕಿದರೂ ಅವರಿಗೆ ತಿನ್ನಲು ಏನೂ ಸಿಗಲಿಲ್ಲ. ಕೊನೆಗೆ ಆಕಳನ್ನೇ ಕೊಂದು ಅದರ ಮಾಂಸದಿಂದ ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳಬೇಕೆಂದು ನಿಶ್ಚಯಿಸಿದರು, ಆಗ ಪಿತೃವರ್ತಿಯು ಅವರನ್ನು ಕುರಿತು 'ನೀವು ಒಂದು ವೇಳೆ ಗೋಹತ್ಯೆ ಮಾಡುವುದಾದರೆ ಅದರ ಮಾಂಸವನ್ನು ಪಿತೃಗಳಿಗೆ ಸಮರ್ಪಿಸಿ ತಿಂದರೆ ಒಳಿತಾಗುತ್ತದೆ' ಎಂದನು. ಎಲ್ಲರೂ ಹಾಗೇ ಮಾಡಿ ಕರುವನ್ನು ಮಾತ್ರ ತೆಗೆದುಕೊಂಡು ಬಂದು ಗುರುಗಳಿಗೆ 'ಆಕಳು ಹುಲಿಯ ಬಾಯಿಗೆ ತುತ್ತಾಯಿತು. ಕರುವನ್ನು ತೆಗೆದುಕೊಳ್ಳಿ' ಎಂದರು. ಗುರುಗಳು ಒಪ್ಪಿ ಸುಮ್ಮನಾದರು. ಕರ್ಮಫಲವು ಮುಗಿದಾಗ ಅವರೆಲ್ಲರೂ ತಮ್ಮ ಜೀವನವನ್ನು ಮುಗಿಸಿದರು. ಆದರೆ ಗೋಹಿಂಸೆ, ಗುರುಗಳನ್ನು ವಂಚಿಸಿದ ಪಾಪದಿಂದಾಗಿ ಅವರು ಬೇಡರ ಜಾತಿಯಲ್ಲಿ ಹುಟ್ಟಿದರು, ಸ್ವವಿಹಿತವೃತ್ತಿಯಿಂದ ಜೀವಿಸುತ್ತಿದ್ದರು. ಆಗ ಅವರಿಗೆ ನಿರ್ವೈರ, ನಿರ್ವೃತಿ, ಶಾಂತ, ನಿರ್ಮನ್ಯು, ಕೃತಿ, ವೈದ್ಯಸೋಮ, ಸ್ವರ್ತಿ ಎಂಬ ಹೆಸರುಗಳಿದ್ದವು . ಅದರೆ ಪೂರ್ವಜನ್ಮದ ಪುಣ್ಯ ಹಾಗೂ ಸಾಯುವ ಮುನ್ನ ಮಾಡಿದ ಪಿತೃಪೂಜೆಯ ಪ್ರಭಾವದಿಂದ ಹಿಂಸಾಕಾರ್ಯ ಬಿಟ್ಟು ತಂದೆ ತಾಯಿಗಳ ಸೇವೆ ಮಾಡಿ ಭಗವಂತನ ಧ್ಯಾನದಲ್ಲಿ ನಿರತರಾಗಿ ಪ್ರಾಣತ್ಯಾಗ ಮಾಡಿದರು.

ಅವರ ಸತ್ಕರ್ಮಾಚರಣೆಯ ಪ್ರಭಾವದಿಂದ ಅವರೆಲ್ಲರೂ ಕಾಲಂಜರ ಪರ್ವತದಲ್ಲಿ ಚಿಗರೆಗಳಾಗಿ ಪುನಃ ಜನ್ಮ ತಾಳಿದರು. ಉನ್ಮುಖ, ನಿತ್ಯ-ವಿತ್ರಸ್ತ, ಸ್ತಬ್ಧಕರ್ಣ, ವಿಲೋಚನ, ಪಂಡಿತ, ಘಸ್ಮರ, ನಾದಿ ಎಂಬುದು ಅವುಗಳ ಹೆಸರಾಗಿತ್ತು, ಪೂರ್ವಜನ್ಮದ ಸ್ಮರಣೆಯಿಂದ ಎಲ್ಲರೂ ಚಂಚಲ ಚಿತ್ತರಾಗದೇ ಇದ್ದು ಯೋಗೋಪಾಸನೆ ಮಾಡುತ್ತಾ ಕೊನೆಗೆ ಪ್ರಾಣತ್ಯಾಗ ಮಾಡಿದರು.

ಇವು ನಂತರ ಪುಣ್ಯಕರ್ಮದ ಮಹಿಮೆಯಿಂದ ಶರದ್ವೀಪದಲ್ಲಿ ಚಕ್ರವಾಕ ಪಕ್ಷಿಗಳಾಗಿ ಜನಿಸಿದವು, ಆಗ ಅವುಗಳಿಗೆ ನಿಸ್ಪೃಹ, ನಿರ್ಮಮ, ಕ್ಷಾಂತ, ನಿರ್ದ್ವಂದ್ವ, ನಿಷ್ಪರಿಗ್ರಹ, ನಿರ್ವೃತ್ತಿ, ನಿಭೃತ ಎಂಬ ಹೆಸರು ಇದ್ದಿತು ಅವು ತಪಸ್ವಿಗಳಂತೆ ನಿರಾಹಾರ ದೀಕ್ಷೆಯಲ್ಲಿದ್ದು ಅ ಶರದ್ವೀಪದಲ್ಲೆ ದೇಹತ್ಯಾಗ ಮಾಡಿ ಒಂದೇ ತಾಯಿಯ ಮಕ್ಕಳಾಗಿ ಹಂಸ ಜಾತಿಯ ಪಕ್ಷಿಗಳಾಗಿ ಪುನಃ ಜನ್ಮ ಹೊಂದಿದವು. ಪೂರ್ವಜನ್ಮದ ಸ್ಮರಣೆ ಅವುಗಳಿಗೆ ಇದ್ದುದರಿಂದ ಆ ಹಂಸ ಪಕ್ಷಿಗಳು ಮಾನಸ ಸರೋವರದ ಬಳಿಯಲ್ಲಿ ವಾಸ ಮಾಡಿಕೊಂಡು ಬ್ರಹ್ಮಚರ್ಯದಿಂದ ಕಾಲಕಳೆಯುತ್ತಿದ್ದವು. ಈ ಪಕ್ಷಿಗಳ ಹೆಸರು ಸುಮನ, ಶುಚಿವಾಕ್, ಶುದ್ಧ, ಪಂಚಮ, ಛಿದ್ರದರ್ಶನ, ಸುನೇತ್ರ, ಸ್ವತಂತ್ರ ಎಂದಾಗಿತ್ತು. ಆ ಸರೋವರಕ್ಕೆ ಒಂದು ದಿನ ಕಾಂಪಿಲ್ಯ ರಾಜನು ವಿಹಾರಕ್ಕೆಂದು ಪತ್ನೀಸಮೇತನಾಗಿ ಬಂದನು. ಅವನ ವೈಭವ ಇತ್ಯಾದಿಗಳನ್ನು ನೋಡಿ ಕೆಲವು ಹಂಸಗಳ ಮನಸ್ಸು ವಿಚಲಿತವಾಯಿತು. ಅವುಗಳಲ್ಲಿ ಒಂದು ಹಂಸವು ರಾಜನಾಗಬಯಸಿತು. ಮತ್ತೆರಡು ಅವನ ಮಂತ್ರಿಯಾಗಬಯಸಿದವು, ಉಳಿದ ನಾಲ್ಕು ಹಂಸಗಳು ಪರಮಪದಕ್ಕೆ ಹೋಗಬೇಕೆಂದು ನಿರ್ಧರಿಸಿದವು.

ಈ ಮೂರು ಹಂಸಗಳು ಪಶ್ಚಾತ್ತಾಪಹೊಂದಿ ಉಳಿದ ನಾಲ್ಕು ಹಂಸಗಳಿಗೆ ತಾವು ತಪ್ಪು ಮಾಡಿರುವುದಾಗಿ ಬೇಡಿಕೊಂಡವು. ಆಗ ಉಳಿದ ನಾಲ್ಕು ಹಂಸಗಳು ''ನೀವು ರಾಜ, ಮಂತ್ರಿಗಳಾದಾಗ್ಗೆ '' ಸಪ್ತವ್ಯಾಧಾ ದಶಾರ್ಣೇಷು'' ಈ ಮಂತ್ರ ಕೇಳಿದ ಕೂಡಲೇ ನಿಮಗೆ ವೈರಾಗ್ಯ ಹುಟ್ಟಿ ಮನೆ ಮಾರು ಬಿಟ್ಟು ನಮ್ಮನ್ನು ಕೂಡಿಕೊಂಡು ಉದ್ಧಾರ ಹೊಂದುವಿರಿ'' ಎಂದವು.

ಮುಂದೆ ಕಾಲಾಂತರದಲ್ಲಿ ಒಂದು ಹಂಸವು ಕಾಂಪಿಲ್ಯ ದೇಶದ ಬ್ರಹ್ಮದತ್ತ ರಾಜನಾಗಿ ಹುಟ್ಟಿತು. ಉಳಿದೆರಡು, ಪಾಂಚಾಲ, ಕಂಡರಿಕ ಹೆಸರಿನಿಂದ ಅವನ ಮಂತ್ರಿಗಳಾದರು, ಉಳಿದ ನಾಲ್ವರು ಧೃತಿಮಂತ, ಸುಮನ, ವಿದ್ವಾನ್, ತತ್ವದರ್ಶಿ ಎಂಬ ಹೆಸರಿನಿಂದ ಸೋದ ರರಾಗಿ ಒಂದು ಕುಲೀನ ಕುಟುಂಬದಲ್ಲಿ ಜನಿಸಿದರು. ಎಲ್ಲರೂ ವೇದಾಧ್ಯಯನ

ಧರ್ಮದರ್ಶಿಗಳೆಂದು ಹೆಸರು ಪಡೆದರು. ಸಂಸಾರದ ಅಸಾರತೆಯನ್ನು ಕಂಡು ಈ ನಾಲ್ವರೂ ಒಂದು ದಿನ ಮನೆ ಬಿಟ್ಟು ತಪಸ್ಸಿಗೆ ಹೊರಟು ನಿಂತರು, ಆಗ ದರಿದ್ರರಾದ, ಮುಪ್ಪಿನ ತಂದೆ ತಾಯಿಗಳು ''ನೀವು ನಮಗೆ ಉಪಜೀವನದ ವ್ಯವಸ್ಥೆ ಮಾಡದೇ ತಪಸ್ಸಿಗೆ ಹೋಗಕೂಡದು'' ಎಂದರು. ಆಗ ನಾಲ್ವರು ಮಕ್ಕಳು ತಂದೆಗೆ ಎರಡು ಪದ್ಯ (ಶ್ಲೋಕ) ಗಳನ್ನು ಹೇಳಿಕೊಟ್ಟು ಈ ಶ್ಲೋಕಗಳನ್ನು ರಾಜ ಮತ್ತು ಅವನ ಇಬ್ಬರು ಮಂತ್ರಿಗಳಿದ್ದಾಗ ಹೇಳಿದರೆ- ನಿಮ್ಮ ಬಡತನ ದೂರವಾಗುವಂತೆ ವಿಪುಲ ಐಶ್ವರ್ಯ ಕೊಡುವರೆಂದು- ತಿಳಿಸಿದರು. ತಾವು ತಪಸ್ಸಿಗೆ ಹೊರಟು ಹೋದರು.

ಇತ್ತ ಬ್ರಹ್ಮದತ್ತರಾಜನು ಅರಣ್ಯದಲ್ಲಿ ಏಳುದಿನ ತಪಸ್ಸು ಮಾಡಿ ದೇವದರ್ಶನ ಮಾಡಿಕೊಂಡು ಕಾಂಪಿಲ್ಯ ನಗರಕ್ಕೆ ಮರಳಿ ಬರುತ್ತಿದ್ದನು. ಮೆರವಣಿಗೆ ಹೊರಟಿತ್ತು. ಕಂಡರೀಕನು ತಾನೇ ರಥವನ್ನು ಹೊಡೆಯುತ್ತಿದ್ದನು. ಪಾಂಚಾಲನು ರಾಜನಿಗೆ ಚಾಮರವನ್ನು ಬೀಸುತ್ತಿದ್ದನು. ಈ ಪ್ರಸಂಗದಲ್ಲಿ ಮುದುಕನಾದ ಆ ಬಡ ಬ್ರಾಹ್ಮಣನು ಎಡವುತ್ತ ರಾಜನ ಹತ್ತಿರ ಬಂದು ಉಚ್ಚಕಂಠದಿಂದ ಈ ಶ್ಲೋಕಗಳನ್ನು ಹೇಳಿದನು.

ಸಪ್ತವ್ಯಾಧಾ ದಶಾರ್ಣೇಷು ಮೃಗಾ ಕಾಲಂಜರೇ ಗಿರೌ।
ಚಕ್ರವಾಕಾ ಶರದ್ವೀಪೇ ಹಂಸಾಃ ಸರಸಿ ಮಾನಸೇ ॥
ತೇಽಭಿಜಾತಾ ಕುರುಕ್ಷೇತ್ರೇ ಬ್ರಾಹ್ಮಣಾ ವೇದಪಾರಗಾಃ।
ಪ್ರಸ್ಥಿತಾ ದೀರ್ಘಮಧ್ವಾನಂ ಯೂಯಂ ಕಿಮವಸೀದಥ ॥

ನೀವು ದುಷ್ಕರ್ಮದಿಂದ ಪತಿತರಾಗಿ ಮೊದಲು ದಶಾರ್ಣದೇಶದಲ್ಲಿ ಬೇಡರಾದಿರಿ. ಬಳಿಕ ಕಾಲಂಜರದಲ್ಲಿ ಚಿಗರೆಗಳಾದಿರಿ. ನಂತರ ಶರದ್ವೀಪದಲ್ಲಿ ಚಕ್ರವಾಕಗಳಾದಿರಿ. ಆ ಮೇಲೆ ಮಾನಸ ಸರೋವರದಲ್ಲಿ ಹಂಸ ಪಕ್ಷಿಗಳಾದಿರಿ. ಕೊನೆಯದಾದ ಈ ಜನ್ಮದಲ್ಲಿ ನಿಮ್ಮ ಜೊತೆಗಾರರು ವೇದ ಪಾರಂಗತರಾಗಿ ವಿರಕ್ತರಾಗಿ ವೈಕುಂಠಕ್ಕೆ ಹೊರಟಿರುವರು ಅವರ ತಮ್ಮಂದಿರಾದ ನೀವು ಮಾತ್ರ ಇಲ್ಲೇಕೆ ಉಳಿದು ಹಿಂದೆ ಬೀಳುವಿರಿ?

ಈ ಶ್ಲೋಕಗಳನ್ನು ಕೇಳಿದ ಕೂಡಲೇ ರಾಜ ಹಾಗೂ ಆ ಇಬ್ಬರು ಮಂತ್ರಿಗಳು ಮೂರ್ಛಿತರಾಗಿ ಬಿದ್ದರು. ಜನರೆಲ್ಲರೂ ಶೈತ್ಯ ಉಪಚಾರಗಳನ್ನು ಮಾಡಿ ಎಬ್ಬಿಸಿದರು. ಅವರಿಗೆ ಹಿಂದಿನ ಎಲ್ಲವೂ ನೆನಪಾಗಿ ಪಶ್ಚಾತ್ತಾಪ ಪಟ್ಟು ಮುಕ್ತಿ ಮಾರ್ಗ ಹಿಡಿಯಬೇಕೆಂದು ಅನ್ನಿಸಿತು. ಆ ಬ್ರಾಹ್ಮಣನು ಈ ಪದ್ಯ ನಾನೇಕೆ ಹೇಳಿದೆ? ಎಂದು ಚಡಪಡಿಸ ಹತ್ತಿದನು.

ಆ ಮೇಲೆ ರಾಜನು ಆ ಬಡ ಬ್ರಾಹ್ಮಣನನ್ನು ಕರೆಸಿ ತನ್ನ ಅಣ್ಣಂದಿರಿಗೆ ಜನ್ಮವಿತ್ತು, ತನಗೂ ಸ್ವರೂಪ ಜ್ಞಾನವನ್ನುತಂದು ಕೊಟ್ಟದ್ದಕ್ಕಾಗಿ ನಮಿಸಿ ಅಪಾರ ಸಂಪತ್ತನ್ನು ಕೊಟ್ಟು ಸಂತೋಷಪಡಿಸಿ ಅವನನ್ನು ಮನೆಗೆ ಕಳಿಸಿಕೊಟ್ಟನು.

ಇತ್ತ ಮಹಾರಾಜನಾದ ಬ್ರಹ್ಮದತ್ತನು ತನ್ನ ಇಬ್ಬರು ಮಂತ್ರಿಗಳ ಸಹಿತನಾಗಿ ವಿರಕ್ತನಾಗಿ ಅರಣ್ಯಕ್ಕೆ ಹೊರಟನು. ಆಗ ಅವನ ಹೆಂಡತಿ ಸನ್ನತಿಯು ಬಂದು ಕ್ಷಮೆ ಬೇಡಿದಳು. ಮತ್ತು ರಾಜನನ್ನು ಕುರಿತು ಹೇಳಿದಳು- '' ಮಹಾರಾಜ! ಅಂದು ಇರುವೆಗಳ ಪ್ರಣಯ ಕಲಹ ಕಂಡು ನೀವು ನಕ್ಕಾಗ ಬುದ್ಧಿಪೂರ್ವಕವಾಗಿಯೇ ನಿಮಗೆ ಕಾರಣವನ್ನು ಕೇಳಿದೆ. ರತಿಲೀಲಾರತರಾದ ನಿಮ್ಮನ್ನು ನೋಡಿ ಕೆಡುಕೆನಿಸಿ ನಿಮಗೆ ವೈರಾಗ್ಯಹುಟ್ಟಬೇಕೆಂದೇ ವಿರಸವನ್ನುಂಟು ಮಾಡಿದೆ. ಆದರಿಂದ ನೀವು ಒಂದು ಸಪ್ತಾಹ ಅವಧಿಯಲ್ಲಿ ಭಗವಂತನನ್ನು ಒಲಿಸಿಕೊಂಡು ಬಂದಿರಿ. ಇನ್ನು ನಿಮ್ಮ ಆತ್ಮೋದ್ಧಾರ ದೂರವಿಲ್ಲ, ನೀವು ವಿಶ್ವಾಮಿತ್ರನ ಮಕ್ಕಳಾಗಿದ್ದಾಗ ಕೊಂದು ತಿಂದ ಆಕಳು ನಾನೇ. ಈಗ ನಿಮ್ಮ ಹೆಂಡತಿಯಾಗಿ ನಿಮಗೆ ಆತ್ಮದ ಅರಿವು ಬೇಗ ಆಗಬೇಕೆಂದು ಕಠೋರವಾಗಿ ನಡೆದುಕೊಂಡೆ. ನನ್ನನ್ನು ಕ್ಷಮಿಸಿ'' ಎಂದು ಬೇಡಿಕೊಂಡಳು.

ರಾಜನು ಸಂತುಷ್ಟನಾಗಿ ಅವಳ ಯುಕ್ತಿಯನ್ನು ಹೊಗಳಿ ತನ್ನ ಉದ್ಧಾರದ ಹಾದಿಯನ್ನು ಕಂಡುಕೊಂಡನು. ಅವನ ಮಂತ್ರಿಗಳೂ ಉದ್ಧೃತರಾದರು.

ಈ ರಹಸ್ಯಮಯವಾದ ಐತಿಹಾಸಿಕ ಕಥೆಯನ್ನು ಅರಿತು ಭಕ್ತಿ ಉಳ್ಳವರಾಗಿ ಈ ಕಥೆಯನ್ನು ಮನಸ್ಸಿನಲ್ಲಿ ಚಿಂತಿಸಿದರೆ ತತ್ವಜ್ಞಾನವು ಉದಯವಾಗುತ್ತದೆ ನಿಶ್ಚಿತ.

ಈ ರೀತಿಯಾಗಿ ಗೋಹಿಂಸೆಯೆಂಬ ಪಾಪಕಾರ್ಯವೂ ಕೂಡ ಪಿತೃ ಕಾರ್ಯದಿಂದ ಉತ್ತಮ ಫಲವನ್ನು ತಂದುಕೊಟ್ಟಿತು. ಶ್ರಾದ್ಧದ (ಪಿತೃಪೂಜೆಯ) ಮಹತ್ವವನ್ನು ತಿಳಿದು ಮಾಡಿದ ಶ್ರಾದ್ಧವು ಅನಂತ ಫಲದಾಯಕವಾಗುತ್ತದೆ.

ಈ ಆಖ್ಯಾನದಲ್ಲಿ ಬರುವ ''ಸಪ್ತವ್ಯಾಧಾ ದಶಾರ್ಣೇಷು'' ಈ ಮಂತ್ರವನ್ನು (ಶ್ಲೋಕವನ್ನು) ಶ್ರಾದ್ಧಕಾಲದಲ್ಲಿ ಪಠಿಸುವುದರಿಂದ ಪಿತೃಗಳು ಸುಪ್ರೀತರಾಗಿ ಅನುಗ್ರಹ ಮಾಡುತ್ತಾರೆ.

★ ★ ★

ಮರಣಕಾಲದಲ್ಲಿ ಮಾಡಬೇಕಾದ ಕರ್ತವ್ಯಗಳು

ಒಬ್ಬ ವ್ಯಕ್ತಿಗೆ ಮರಣಕಾಲವು ಸಮೀಪಿಸಿದಾಗ ಅವನ ಬಾಂಧವರು ದುಃಖಿಸಬಾರದು, ಭಗವಂತನ ಪವಿತ್ರ ನಾಮವನ್ನು ಅವನ ಹತ್ತಿರ ಕುಳಿತು ಮತ್ತೆ ಮತ್ತೆ ಸ್ಮರಿಸಬೇಕು.[1]

ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಈ ಹತ್ತು ನಾಮಗಳನ್ನು ಬುದ್ಧಿವಂತರು ಯಾವಾಗಲೂ ಸ್ಮರಿಸುತ್ತಿರಬೇಕು.[2]

ಪಾಪಗಳ ಸಮೂಹವನ್ನೇ ನಾಶಮಾಡುವಂತಹ ಮಹಾವಿಷ್ಣುವಿನ ನಾಮಗಳನ್ನು ಸ್ಮರಿಸಬೇಕು ಮತ್ತು ಭಗವದ್ಗೀತೆ, ವಿಷ್ಣು ಸಹಸ್ರನಾಮಗಳನ್ನು ಪಠಿಸಬೇಕು ಅಥವಾ ಕೇಳಬೇಕು.[3]

ಏಕಾದಶೀ ವ್ರತ, ಗೀತಾ, ಗಂಗಾಜಲ, ತುಲಸೀದಳ, ವಿಷ್ಣುವಿನ ತೀರ್ಥ ಮತ್ತು ವಿಷ್ಣುವಿನ ಪವಿತ್ರನಾಮಗಳು ಮರಣಕಾಲದಲ್ಲಿ ಮುಕ್ತಿಯನ್ನು ಕೊಡುತ್ತವೆ.[4]

ಮರಣಕಾಲದಲ್ಲಿ ಎಳ್ಳು, ಲೋಹ, ಚಿನ್ನ, ಹತ್ತಿಯಸಾಮಾನು, ಉಪ್ಪು, ಸಪ್ತ ಧಾನ್ಯಗಳು, ಭೂಮಿ, ಗೋವು ಇವುಗಳನ್ನು ದಾನ ಮಾಡಬೇಕು. ಇವು ಒಂದೊಂದೂ ಪವಿತ್ರವಾಗಿವೆ.[5] (ಭತ್ತ, ಜವೆಗೋದಿ, ಗೋದಿ, ಹೆಸರುಕಾಳು, ಉದ್ದು, ಅರಿಶಿನ, ಕಡಲೆ ಇವು ಸಪ್ತಧಾನ್ಯಗಳು)

---

1. ರೋಗಿಣೋಽಂತಿಕಮಾಸಾದ್ಯ ಶೋಚನೀಯಂ ನ ಬಾಂಧವೈಃ ।
ಸ್ಮರಣೀಯಂ ಪವಿತ್ರಂ ಮೇ ನಾಮಧೇಯಂ ಮುಹುರ್ಮುಹುಃ ॥ ಗರುಡಪುರಾಣ

2. ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ತಥೈವ ಚ ॥
ಏತಾನಿ ದಶನಾಮಾನಿ ಸ್ಮರ್ತವ್ಯಾನಿ ಸದಾ ಬುಧೈಃ ॥ ಗರುಡಪುರಾಣ

3. ಅತಃ ಸ್ಮರೇನ್ಮಹಾವಿಷ್ಣೋರ್ನಾಮ ಪಾಪೌಘನಾಶನಮ್ ।
ಗೀತಾ ಸಹಸ್ರನಾಮಾನಿ ಪಠೇದ್ವಾ ಶೃಣುಯಾದಪಿ ॥ ಗರುಡಪುರಾಣ

4. ಏಕಾದಶೀ ವ್ರತಂ ಗೀತಾ ಗಂಗಾಂಬು ತುಲಸೀದಲಮ್ ।
ವಿಷ್ಣೋಃ ಪಾದಾಂಬು ನಾಮಾನಿ ಮರಣೇ ಮುಕ್ತಿದಾನಿ ಚ ॥ ಗರುಡಪುರಾಣ

5. ತಿಲಾ, ಲೋಹಂ, ಹಿರಣ್ಯಂ ಚ ಕಾರ್ಪಾಸೋ ಲವಣಂ ತಥಾ ।
ಸಪ್ತಧಾನ್ಯಂ ಕ್ಷಿತಿರ್ಗಾವ ಏಕೈಕಂ ಪಾವನಂ ಸ್ಮೃತಮ್ ॥ ಗರುಡಪುರಾಣ

ಬಿಳಿ, ಕಪ್ಪು ಮತ್ತು ಕಂದು ಬಣ್ಣದ್ದು ಈ ಮೂರು ವಿಧವಾದ ಎಳ್ಳುಗಳನ್ನು ದಾನ ಮಾಡುವುದರಿಂದ ವಾಚಾ, ಮನಸಾ ಮತ್ತು ಕಾಯದಿಂದ ಮಾಡಿದ ಪಾಪ ನಾಶವಾಗುತ್ತವೆ.[6]

ತನ್ನಲ್ಲಿರುವ ಸಂಪತ್ತಿಗನುಗುಣವಾಗಿ ಅಲ್ಲಿ ಕೊಟ್ಟ ದಾನವು ಅನಂತವಾದ ಫಲವನ್ನು ಕೊಡುತ್ತದೆ. ಆದ್ದರಿಂದ ತನ್ನ ಶ್ರೇಯಸ್ಸನ್ನು ಇಚ್ಛಿಸುವ ಬುದ್ಧಿವಂತನು ಬ್ರಾಹ್ಮಣರಿಗೆ ದಾನವನ್ನು ಕೊಡಬೇಕು.[7]

ಈ ಭೂಮಿಯಲ್ಲಿ ಮನುಷ್ಯನು ಯಾವ ಯಾವ ದಾನಗಳನ್ನು ಕೊಟ್ಟಿರುತ್ತಾನೋ, ಅವೆಲ್ಲವೂ ಯಮಲೋಕದ ಮಾರ್ಗದಲ್ಲಿ ಇವನಿಗೆ ಮುಂದೆ ದೊರಕುತ್ತವೆ.[8]

ತಂದೆಯಿಂದ ದಾನ ಕೊಡಿಸಿದರೆ ನೂರು ಪಾಲು, ತಾಯಿಯಿಂದ ದಾನ ಕೊಡಿಸಿದರೆ ಸಾವಿರಪಾಲು, ಸೋದರಿಯಿಂದ ಹತ್ತುಸಾವಿರ ಪಾಲು, ಸೋದರನಿಂದ ದಾನ ಕೊಡಿಸಿದರೆ ಅದು ಅಕ್ಷಯವೂ ಆಗುತ್ತದೆ.[9]

ಮರಣಹೊಂದುವ ವ್ಯಕ್ತಿಯ ಹತ್ತಿರ ತುಳಸೀ ಗಿಡವನ್ನು, ಸಾಲಿಗ್ರಾಮ ಶಿಲೆಯನ್ನು ಇಡಬೇಕು. ಸಂಸಾರದ ತಾಪವನ್ನು ನಾಶಮಾಡುವ ತುಳಸೀ ಗಿಡದ ನೆರಳು ಎಲ್ಲಿರುವುದೋ ಅಲ್ಲಿ ಮರಣಹೊಂದಿದರೆ ದಾನಿಗಳಿಗೆ ದುರ್ಲಭವಾದ ಮುಕ್ತಿಯನ್ನು ಹೊಂದುತ್ತಾನೆ.

ಹಸುವಿನ ಶಗಣೆಯಿಂದ ನೆಲವನ್ನು ಸಾರಿಸಿ ದರ್ಭೆಗಳನ್ನು ಹರಡಿ ಮರಣೋನ್ಮುಖನಾದವನನ್ನು ಆ ಭೂಮಿಯ ಮೇಲೆ ಮಲಗಿಸಬೇಕು. ಅಂತರಿಕ್ಷದಲ್ಲಿ (ಎಂದರೆ ಮಂಚದ ಮೇಲೆ) ಇರಬಾರದು.[10]

---

6. ತಿಲಾಃ ಶ್ವೇತಾಸ್ತಥಾ ಕೃಷ್ಣಾ ದಾನೇನ ಕಪಿಲಾಸ್ತಿಲಾಃ ।
ಸಂಹರಂತಿ ತ್ರಿಧಾ ಪಾಪಂ ವಾಙ್ಮನಃ ಕಾಯಸಂಚಿತಮ್ ॥ ಗರುಡಪುರಾಣ

7. ಆತ್ಮ ವಿತ್ತಾನುಸಾರೇಣ ತತ್ರ ದಾನಮನಂತಕಮ್ ।
ದೇಯಂ ವಿಪ್ರಾಯ ವಿದುಷೇ ಸ್ವಾತ್ಮನಃ ಶ್ರೇಯ ಇಚ್ಛತಾ ॥ ಗರುಡ ಪುರಾಣ

8. ಯಾನಿ ಯಾನಿ ಚ ದಾನಾನಿ ದತ್ತಾನಿ ಭುವಿ ಮಾನವೈಃ ।
ಯಮಲೋಕ ಪಥೇ ತಾನಿ ಹ್ಯುಪತಿಷ್ಠಂತಿ ಚಾಗ್ರತಃ ॥ ಗರುಡ ಪುರಾಣ

9. ಪಿತುಃ ಶತಗುಣಂ ಪುಣ್ಯಂ ಸಹಸ್ರಂ ಮಾತುರೇವ ಚ ।
ಭಗಿನೀ ದಶಸಾಹಸ್ರಂ ಸೋದರೇ ದತ್ತಮಕ್ಷಯಮ್ ॥ ಗರುಡ ಪುರಾಣ

10. ಗೋಮಯೇನೋಪಲಿಪ್ತೇ ತು ದರ್ಭಾಸ್ತರಣ ಸಂಸ್ಕೃತೇ ।
ಭೂತಲೇ ಹ್ಯಾತುರಂ ಕುರ್ಯಾದಂತರಿಕ್ಷಂ ವಿವರ್ಜಯೇತ್ ॥ ಗರುಡ ಪುರಾಣ

ಶಗಣಿಯಿಂದ ಲೇಪಿಸಲ್ಪಟ್ಟ ಭೂಮಿಯ ಮೇಲೆ ಅವನನ್ನು ಮಲಗಿಸಿ ಅವನ ತುಟಿಗಳ ಮೇಲೆ ಬಂಗಾರವನ್ನೂ, ರತ್ನವನ್ನೂ ಇಟ್ಟು ಸಾಲಿಗ್ರಾಮಸ್ವರೂಪವಾದ ವಿಷ್ಣುವಿನ ಪಾದೋದಕವನ್ನು ಬಿಡಬೇಕು.[11]

ಅನಂತರ ಮಹಾಪಾಪಗಳನ್ನು ನಾಶಮಾಡತಕ್ಕಂತಹ ಗಂಗಾಜಲವನ್ನು ಕೊಡಬೇಕು. ಅದು ಎಲ್ಲಾ ತೀರ್ಥಗಳಲ್ಲಿ ಮಾಡಿದ ಸ್ನಾನ, ದಾನಗಳ ಪುಣ್ಯ ಫಲಗಳನ್ನು ಕೊಡುತ್ತದೆ.[12]

ಯಾರು ತಮ್ಮ ಅಂತ್ಯ ಕಾಲದಲ್ಲಿ ಶ್ರೀಮದ್ ಭಾಗವತದ ಒಂದು ಶ್ಲೋಕವನ್ನಾಗಲೀ, ಅರ್ಧ ಶ್ಲೋಕವನ್ನಾಗಲೀ ಅಥವಾ ನಾಲ್ಕನೆಯ ಒಂದು ಭಾಗ ಶ್ಲೋಕವನ್ನಾಗಲೀ ಪಠಿಸುವರೋ ಅವರು ಬ್ರಹ್ಮಲೋಕದಿಂದ ಎಂದಿಗೂ ಮತ್ತೆ ಹಿಂತಿರುಗಿ ಬರುವುದಿಲ್ಲ.[13]

ಪ್ರಾಣ ಹೋಗುವ ಸಮಯದಲ್ಲಿ ಉಪವಾಸವನ್ನು ಮಾಡಬೇಕು. ಮನಸಾ ವಿರಕ್ತನಾದವನಿಗೆ (ದ್ವಿಜನಿಗೆ) ಆತುರ ಸನ್ಯಾಸ ಕೊಡಬೇಕು.[14]

ಪ್ರಾಣವು ಕಂಠಕ್ಕೆ ಬಂದಾಗಲೂ, ''ನಾನು ಸನ್ಯಾಸ ತೆಗೆದುಕೊಂಡಿದ್ದೇನೆ'' ಎಂದು ಯಾವನು ಹೇಳುವನೋ ಅವನು ಮರಣಹೊಂದಿ ವಿಷ್ಣುಪುರಕ್ಕೆ ಹೋಗುತ್ತಾನೆ. ಭೂಮಿಯಲ್ಲಿ ಮತ್ತೆ ಹುಟ್ಟುವುದಿಲ್ಲ.[15]

ಬಾಯಿ, ಕಣ್ಣುಗಳು, ಮೂಗಿನ ಹೊರಳೆಗಳು, ಕಿವಿಗಳು, ಇವು ಸಪ್ತದ್ವಾರಗಳು. ಈ

---

11. ಲಿಪ್ತ ಭೂಮ್ಯಾಮತಃ ಕೃತ್ವಾ ಸ್ವರ್ಣಂ ರತ್ನಂ ಮುಖೇ ಕ್ಷಿಪೇತ್ ।
ವಿಷ್ಣೋಃ ಪಾದೋದಕಂ ದದ್ಯಾಚ್ಛಾಲಗ್ರಾಮ ಸ್ವರೂಪಿಣಃ ॥ ಗರುಡಪುರಾಣ

12. ತತೋ ಗಂಗಾಜಲಂ ದದ್ಯಾನ್ಮಹಾಪಾತಕ ನಾಶನಮ್ ।
ಸರ್ವತೀರ್ಥ ಕೃತಸ್ನಾನ ದಾನ ಪುಣ್ಯಫಲಪ್ರದಮ್ ॥ ಗರುಡಪುರಾಣ

13. ಶ್ಲೋಕಂ ಶ್ಲೋಕಾರ್ಧಪಾದಂ ವಾ ಯೋಽಂತೇ ಭಾಗವತಂ ಪಠೇತ್ ।
ನ ತಸ್ಯ ಪುನರಾವೃತ್ತಿರ್ಬ್ರಹ್ಮಲೋಕಾತ್ಕದಾಚನ ॥ ಗರುಡಪುರಾಣ

14. ಪ್ರಾಣಪ್ರಯಾಣಸಮಯೇ ಕುರ್ಯಾದನಶನಂ ಖಗ ।
ದದ್ಯಾದಾತುರ ಸಂನ್ಯಾಸಂ ವಿರಕ್ತಸ್ಯ ದ್ವಿಜನ್ಮನಃ ॥ ಗರುಡಪುರಾಣ

15. ಸಂನ್ಯಸ್ತಮಿತಿ ಯೋ ಬ್ರೂಯಾತ್ ಪ್ರಾಣೈಃ ಕಂಠಗತೈರಪಿ ।
ಮೃತೋ ವಿಷ್ಣುಪುರಂ ಯಾತಿ ನ ಪುನರ್ಜಾಯತೇ ಭುವಿ ॥ ಗರುಡಪುರಾಣ

ದ್ವಾರಗಳಿಂದ ಸುಕೃತಿಗಳ ಪ್ರಾಣವು ಹೋಗುತ್ತದೆ. ಯೋಗಿಯ ಪ್ರಾಣವು ಬ್ರಹ್ಮರಂಧ್ರದ ಮೂಲಕ ಹೋಗುತ್ತದೆ.[16]

ಅಪಾನದ ಜೊತೆ ಮಿಲಿತವಾಗಿರುವ ಪ್ರಾಣವು ಯಾವಾಗ ಬೇರೆಯಾಗುವದೋ, ಆಗ ಪ್ರಾಣವಾಯುವು ಈ ಜಡ ಶರೀರದಿಂದ ಸೂಕ್ಷ್ಮರೂಪದಲ್ಲಿ ನಿರ್ಗಮಿಸುತ್ತದೆ.[17]

ಮುಖ್ಯಪ್ರಾಣನು ನಿರ್ಗಮಿಸಿದ ಮೇಲೆ ಶರೀರವು ಕಾಲವಶವಾಗಿ ನಿರಾಧಾರವಾದ ವೃಕ್ಷದಂತೆ ಬಿದ್ದು ಹೋಗುತ್ತದೆ.[18]

(''ಪರಮ ಮುಖ್ಯಪ್ರಾಣ ತೊಲಗಲಾದೇಹವನು ಅರಿತು ಪೆಣನೆಂದು ಪೇಳ್ವರು ಬುಧಜನ'' ಎಂಬ ಶ್ರೀಪಾದರಾಜರ ಉಕ್ತಿಯನ್ನು ಇಲ್ಲಿ ಸ್ಮರಿಸಬಹುದು).

★★★

ದಾನ ಇತ್ಯಾದಿ ಸಂಕಲ್ಪಗಳು

1. ಪುಣ್ಯಸೂಕ್ತಶ್ರವಣ –

ಆಚಮ್ಯ, ಪ್ರಾಣಾಯಾಮ.......ಪೂರ್ವೋಕ್ತ ಏವಂಗುಣ......ವಿಶಿಷ್ಟಾಯಾಂ ಶ್ರೀಭಾ.ಮು.ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ-

''ಅಮೃತತ್ವಪ್ರಾಪ್ತ್ಯರ್ಥಂ ಪುಣ್ಯಸೂಕ್ತಸ್ತೋತ್ರಾದೀನಾಂ ಶ್ರವಣಂ ಕರಿಷ್ಯೇ॥''

(ನಾನಾನಂವಾ ಸೂಕ್ತ, ವಿಷ್ಣುಸೂಕ್ತ, ಪುರುಷಸೂಕ್ತ, ಉಪನಿಷತ್ತು, ಶ್ರೀವಿಷ್ಣುಸಹಸ್ರನಾಮ ಸ್ತೋತ್ರ ಇತ್ಯಾದಿ)

---

16. ಮುಖಂ ಚ ಚಕ್ಷುಷೀ ನಾಸೇ ಕರ್ಣೌದ್ವಾರಾಣಿ ಸಪ್ತ ಚ ।
ಏಭ್ಯಃ ಸುಕೃತಿನೋ ಯಾಂತಿ ಯೋಗಿನಸ್ತಾಲುರಂಧ್ರತಃ ॥ *ಗರುಡಪುರಾಣ*

17. ಅಪಾನಾನ್ಮಿಲಿತಪ್ರಾಣೌ ಯದಾ ಹಿ ಭವತಃ ಪೃಥಕ್।
ಸೂಕ್ಷ್ಮೀಭೂತ್ವಾ ತದಾ ವಾಯುರ್ವಿನಿಷ್ಕ್ರಾಮತಿ ಪುತ್ತಲಾತ್॥ *ಗರುಡಪುರಾಣ 9-37*

18. ಶರೀರಂ ಪತತೇ ಪಶ್ಚಾನ್ನಿರ್ಗತೇ ಮರುತೀಶ್ವರೇ ।
ಕಾಲಾಹತಂ ಪತತ್ಯೇವಂ ನಿರಾಧಾರೋ ಯಥಾ ದ್ರುಮಃ ॥ *ಗರುಡಪುರಾಣ*

ಶ್ರವಣಮಾಡಿಸುವುದಿದ್ದರೆ- ಅವರು ಹೀಗೆ ಸಂಕಲ್ಪ ಮಾಡಬೇಕು-

ಸಂಕಲ್ಪ ಹೇಳಿ ಶ್ರೀ ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ ಅಸ್ಯ ಅಮುಕ-ಕರ್ಮಣೋಽಮೃತತ್ವಪ್ರಾಪ್ತಯೇಽಮುಕಂ ಶ್ರಾವಯಿಷ್ಯೇ ॥ - ಹೀಗೆ ಸಂಕಲ್ಪಿಸಬೇಕು.

2. ಪ್ರಾಯಶ್ಚಿತ್ತ ದಾನಾದಿಗಳು

ತಿಲಪಾತ್ರದಾನವಿಧಿ

ಆಚಮ್ಯ, ಪ್ರಾಣಾಯಾಮ.......ಪೂರ್ವೋಕ್ತ ಏವಂಗುಣ......ವಿಶಿಷ್ಟಾಯಾಂ ಶ್ರೀಭಾ.ಮು.ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ- ಮಮಜನ್ಮಪ್ರಭೃತಿ ಮರಣಾಂತಂ ಕೃತ ನಾನಾ ವಿಧ ಪಾಪ ಪ್ರಣಾಶಾರ್ಥಂ ತಿಲಪಾತ್ರದಾನಂ ಕರಿಷ್ಯೇ॥

(ಕಂಚಿನ ಅಥವಾ ತಾಮ್ರ ಪಾತ್ರೆಯಲ್ಲಿ ಎಳ್ಳನ್ನು ಹಾಕಿ ಸುವರ್ಣವನಿಟ್ಟು ಯಥಾಶಕ್ತಿ ದಕ್ಷಿಣೆ ಸಹಿತ)

ಮಮಜನ್ಮಪ್ರಭೃತಿ ಮರಣಾಂತಂ ಕೃತ ನಾನಾವಿಧ ಪಾಪ ಪ್ರಣಾಶಾರ್ಥಂ ಇದಂ ತಿಲಪಾತ್ರಂ ಸಸುವರ್ಣಂ, ಸದಕ್ಷಿಣಂ, ಅಮುಕ ಶರ್ಮಣೇ ಬ್ರಾಹ್ಮಣಾಯ ತುಭ್ಯಮಹಂ ಸಂಪ್ರದದೇ॥

ಯಾನಿ ಕಾನಿ ಚ ಪಾಪಾನಿ ಬ್ರಹ್ಮ ಹತ್ಯಾಸಮಾನಿ ಚ ।
ತಿಲಪಾತ್ರಪ್ರದಾನೇನ ಮಮ ಪಾಪಂ ವ್ಯಪೋಹತು ॥ ನ ಮಮ॥

ಎಂದು ಬ್ರಾಹ್ಮಣ ಹಸ್ತದಲ್ಲಿ ಜಲವನ್ನು ಬಿಡಬೇಕು.

ಋಣಧೇನು ದಾನ ವಿಧಿ *

ಸಂಕಲ್ಪ ಮೇಲಿನಂತೆ ಮಾಡಿ, ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ- ಋಣಧೇನುದಾನಂ ಕರಿಷ್ಯೇ॥

ಐಹಿಕಾಮುಷ್ಮಿಕಂ ಯಚ್ಚ ಸಪ್ತಜನ್ಮಾರ್ಜಿತಂ ಋಣಂ।
ತತ್ಸರ್ವಂ ಶುದ್ಧಿಮಾಯಾತು ಗಾಮೇಕಾಂ ದದತೋ ಮಮ॥

---

* ಯಾವುದು ನಿಮಗೆ ಸೂಕ್ತವೋ ಅದನ್ನು ನೀವು ದಾನ ಕೊಡಬಹುದು. ಸದಕ್ಷಿಣಾಕವಾಗಿ ಕೊಡಬೇಕು. (ಯಥಾಶಕ್ತಿ ದಕ್ಷಿಣೆ ಕೊಡಬೇಕಾದುದು ಅವಶ್ಯ.)

ಮೋಕ್ಷಧೇನುದಾನ ವಿಧಿ*

ಮೇಲಿನಂತೆ ಸಂಕಲ್ಪಮಾಡಿ, ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ-ಮೋಕ್ಷಧೇನುದಾನಂ ಕರಿಷ್ಯೇ॥

ಮೋಕ್ಷಂ ದೇಹಿ ಹೃಷೀಕೇಶ ಮೋಕ್ಷಂ ದೇಹಿ ಜನಾರ್ದನ।
ಮೋಕ್ಷಧೇನು ಪ್ರದಾನೇನ ಮುಕುಂದಃ ಪ್ರಿಯತಾಂ ಮಮ॥

ಪಾಪಧೇನುದಾನ ವಿಧಿ*

ಮೇಲಿನಂತೆ ಸಂಕಲ್ಪಮಾಡಿ, ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ಪಾಪಧೇನು ದಾನಂ ಕರಿಷ್ಯೇ॥

ಆಜನ್ಮೋಽಪಾರ್ಜಿತಂ ಪಾಪಂ ಮನೋವಾಕ್ಕಾಯ ಕರ್ಮಭಿಃ।
ತತ್ಸರ್ವಂ ನಾಶಮಾಯಾತು ಗೋಪ್ರದಾನೇನ ಕೇಶವ ॥

ವೈತರಣೀ ಉತ್ತಾರಣಾರ್ಥಂ ಗೋದಾನವಿಧಿ*

ಮೇಲಿನಂತೆ ಸಂಕಲ್ಪಮಾಡಿ, ಶ್ರೀವಿಷ್ಣುಪ್ರೇರಣಯಾ ಶ್ರೀ ವಿಷ್ಣುಪ್ರೀತ್ಯರ್ಥಂ ಮಮ ಯಮದ್ವಾರಸ್ಥಿತ- ವೈತರಣ್ಯಾಖ್ಯನದ್ಯುತ್ತಾರಣಾರ್ಥಂ ಗೋದಾನಂ ಕರಿಷ್ಯೇ॥

ಧೇನುಕೇ ತ್ವಂ ಪ್ರತೀಕ್ಷಸ್ವ ಯಮದ್ವಾರೇ ಮಹಾಪಥೇ।
ಉತ್ತಿತೀರ್ಷುರಹಂ ದೇವಿ ವೈತರಣ್ಯೈ ನಮೋಽಸ್ತುತೇ ॥

ಎಂಬುದಾಗಿ ಧೇನುವನ್ನು ಪ್ರಾರ್ಥಿಸಿ,

ವಿಷ್ಣುರೂಪದ್ವಿಜ ಶ್ರೇಷ್ಠ ಭೂದೇವ ದ್ವಿಜ ಪಾವನ। .
ತರ್ತುಂ ವೈತರಣೀಮೇತಾಂ ಕೃಷ್ಣಾಂಗಾಂ ಪ್ರದದಾಮ್ಯಹಂ ॥

ಎಂಬುದಾಗಿ ಬ್ರಾಹ್ಮಣನನ್ನು ಪ್ರಾರ್ಥಿಸಿ, ವೈತರಣೀಸಂತಾರಣಾರ್ಥಂ, ಇಮಾಂ ಗಾಂ ಕೃಷ್ಣವಸ್ತ್ರರಕ್ತಮಾಲ್ಯಾದ್ಯಲಂಕೃತಾಂ ಯಥಾಶಕ್ತಿ ದಕ್ಷಿಣಾಯುತಾಂ ತುಭ್ಯಮಹಂ ಸಂಪ್ರದದೇ॥ ನ ಮಮ ॥ ಎಂದು ಹೇಳಿ ಬ್ರಾಹ್ಮಣಹಸ್ತದಲ್ಲಿ ಜಲ ಬಿಡಬೇಕು.

★★★

* ಯಾವುದು ನಿಮಗೆ ಸೂಕ್ತವೋ ಅದನ್ನು ನೀವು ದಾನ ಕೊಡಬಹುದು. ಸದಕ್ಷಿಣಾಕವಾಗಿ ಕೊಡಬೇಕು. (ಯಥಾಶಕ್ತಿ ದಕ್ಷಿಣೆ ಕೊಡಬೇಕಾದುದು ಅವಶ್ಯ.)

ಮರಣಾನಂತರ ಮಾಡಬೇಕಾದ ಕ್ರಿಯೆಗಳು
(ಔರ್ಧ್ವ ದೇಹಿಕ ಕ್ರಿಯೆಗಳು)

ಪುತ್ರನಾದವನು ಪಿತೃವಿನ ಅಂತ್ಯೇಷ್ಟಿಕರ್ಮಗಳನ್ನು ಆಚರಿಸುವುದರಿಂದ ಅಗ್ನಿಷ್ಟೋಮ ಯಜ್ಞಮಾಡಿದಷ್ಟು ಫಲವನ್ನು ಪಡೆಯುತ್ತಾನೆ. ತಂದೆಯು ಮರಣ ಹೊಂದಿದಮೇಲೆ ಪುತ್ರನು(ಶೋಕವನ್ನು ತ್ಯಜಿಸಿ) ಎಲ್ಲ ಪಾಪಗಳನ್ನು ದೂರ ಮಾಡುವುದಕ್ಕೋಸ್ಕರ ಸಮಸ್ತ ಬಾಂಧವರ ಸಹಿತನಾಗಿ ಮುಂಡನ (ಕ್ಷೌರ) ವನ್ನು ಮಾಡಿಸಿಕೊಳ್ಳಬೇಕು.[19] (ಉಗುರು ಮತ್ತು ಕಂಕುಳನ್ನು ಬಿಟ್ಟು ಮುಂಡನ ಮಾಡಿಸಿಕೊಳ್ಳಬೇಕು.)

ಶುದ್ಧ (ಹೊಸ) ನೀರನ್ನು ತೆಗೆದುಕೊಂಡು ಬಂದು ಶವಕ್ಕೆ ಸ್ನಾನ ಮಾಡಿಸಬೇಕು. ಮತ್ತೆ ಗೋಪೀಚಂದನ, ತುಲಸೀ ಹೂಮಾಲೆ ಅಥವಾ ಗಂಗೆಯ ಮೃತ್ತಿಕೆಯಿಂದ ಅಲಂಕರಿಸಬೇಕು. ಕಿವಿಯಲ್ಲಿ ತುಳಸಿ ಇಡಬೇಕು. ನವೀನ ವಸ್ತ್ರಗಳಿಂದ ಹೊದಿಸಬೇಕು. ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು ಪ್ರದಕ್ಷಿಣೆ ಹಾಕಿ ನಮಸ್ಕರಿಸಬೇಕು. (ಕೆಲವರಲ್ಲಿ ಶವಕ್ಕೆ ಅಂಗಾರ ಹಚ್ಚುವ ಪದ್ಧತಿ ಇದೆ.)

ಇಲ್ಲಿ ಒಂದು ಪ್ರಶ್ನೆ- ಹೆಣಕ್ಕೆ ಅಲಂಕಾರ ಏಕೆ? ಅದು ವ್ಯರ್ಥವೆಂದು ತಿಳಿಯ ಬಾರದು-'ಕ್ರವ್ಯಾದ' ಎಂಬ ಅಗ್ನಿಗೆ ಸಮರ್ಪಿಸಬೇಕಾದ ಇಧ್ಮವೇ (ಕಟ್ಟಿಗೆ) ಹೆಣವು. ಹೋಮಕಾರ್ಯದಲ್ಲಿ ''ಇಧ್ಮಮಲಂಕೃತ್ಯ'' ಎಂದರೆ ಇಧ್ಮವನ್ನು ಅಲಂಕರಿಸಬೇಕು, ಕಾರಣ ಸಮಿತ್ತು, ಕಟ್ಟಿಗೆಗಳಿಗೆ ಕುಂಕುಮ, ಹೂವು ಇತ್ಯಾದಿ ಹಚ್ಚಿ ಅಲಂಕರಿಸುತ್ತಾರೆ. ಹಾಗೆಯೇ ಶವಕ್ಕೂ ಮಾಡುವುದೆಂದು ತಿಳಿಯತಕ್ಕದ್ದು.

---

19. ತದಾ ಶೋಕಂ ಪರಿತ್ಯಜ್ಯ ಕಾರಯೇನ್ಮುಂಡನಂ ಸುತಃ ।
ಸಮಸ್ತ ಬಾಂಧವೈರ್ಯುಕ್ತಾಃ ಸರ್ವಪಾಪಾಪನುತ್ತಯೇ॥ *ಗರುಡಪುರಾಣ, 10.4*

ಮತ್ತು ರಾತ್ರಿಯಾಗಿದ್ದರೆ ಕ್ಷೌರ ಮಾಡಿಕೊಳ್ಳದೆ ದಹನ ಕ್ರಿಯೆ ಮಾಡಿ ಪಿಂಡದಾನ ಮಾಡಿ ಮರುದಿನ ಕ್ಷೌರ ಮಾಡಿಸಿಕೊಳ್ಳಬೇಕು.

ರಾತ್ರೌತು ದಗ್ಧ್ವಾ ಪಿಂಡಾಂತಂ ಕೃತ್ವಾ ವಪನವರ್ಜಿತಂ ।
ವಪನಂ ವರ್ಜಿತಂ ರಾತ್ರೌ ಶ್ವಸ್ತನೀ ವಪನಕ್ರಿಯಾ॥

ಪತ್ನೀ, ಪುತ್ರ, ಕನಿಷ್ಠ ಸಹೋದರ ಇತ್ಯಾದಿಗಳ ಅಂತ್ಯಕರ್ಮಕ್ಕೆ ಕ್ಷೌರದ ಅವಶ್ಯಕತೆ ಇಲ್ಲ. (ಮೃತನ ಪತ್ನಿಗೆ ಅದೇದಿನ ಅಥವಾ ದಶಮ ದಿನದಲ್ಲಿ ಕ್ಷೌರವು ಅಗತ್ಯವಾದದ್ದು.

(ಧರ್ಮಸಿಂಧು)

ನಂತರ ನಾಮ, ಗೋತ್ರಾದಿಗಳನ್ನು ಉಚ್ಚಾರ ಮಾಡಿ ಅಪಸವ್ಯದಿಂದ ತಿಲಾಂಜಲಿಯನ್ನು ಕೊಡಬೇಕು. ಶವದ ಬಾಯಿಯಲ್ಲಿ ಕೆಲವು ಅಕ್ಕಿ ಕಾಳುಗಳನ್ನು ಹಾಕಬೇಕು. ಮೃತ್ಯು ಸ್ಥಾನದಲ್ಲಿ 'ಶವ' ಎಂದು ಕರೆಯುತ್ತಾರೆ. ಆ ಹೆಸರಿನಿಂದ ಪಿಂಡ ಕೊಡಬೇಕು. ಇದರಿಂದ ಭೂಮಿ ಮತ್ತು ಅದರ ಅಧಿಷ್ಠಾತೃ ದೇವತೆಗಳು ಪ್ರಸನ್ನರಾಗುತ್ತಾರೆ.

ಯಾವ ಪುತ್ರನು ತನ್ನ ತಂದೆಯನ್ನು ಹೆಗಲಮೇಲೆ ಹೊತ್ತುಕೊಂಡು, ಸ್ಮಶಾನಕ್ಕೆ ಹೋಗುತ್ತಾನೋ, ಆ ಪುತ್ರನು ಹೆಜ್ಜೆ ಹೆಜ್ಜೆಗೂ ಅಶ್ವಮೇಧ ಯಾಗದ ಫಲವನ್ನು ಪಡೆಯುತ್ತಾನೆ.[20]

ತನ್ನ ತಂದೆಯ ಬೆನ್ನಮೇಲೆ, ತೊಡೆಯಮೇಲೆ, ಯಾವಾಗಲೂ ಲಾಲಿಸಲ್ಪಟ್ಟ ಪುತ್ರನು ಮೃತನಾದ ತನ್ನ ತಂದೆಯನ್ನು ಹೆಗಲಮೇಲೆ ಧರಿಸಿ ತೆಗೆದುಕೊಂಡು ಹೋದಾಗಲೇ (ಹಿರಿಯ ಮಗನು ಅಗ್ನಿಯನ್ನು ತೆಗೆದುಕೊಂಡು ಶವಸಹಿತ ನಾರಾಯಣನಾಮಸ್ಮರಣೆ ಮಾಡುತ್ತ ಹೋಗುವುದು ಪದ್ಧತಿ). ಅವನು ಆ ಪಿತೃ ಋಣದಿಂದ ಮುಕ್ತನಾಗುವನು.

ಅರ್ಧ ಮಾರ್ಗದಲ್ಲಿ ಭೂಮಿಯನ್ನು ಶುದ್ಧ ಮಾಡಿ ನೀರನ್ನು ಚಿಮುಕಿಸಿ ಶುದ್ಧ ಮಾಡಿ ಶವವನ್ನು ಅಲ್ಲಿಟ್ಟು ''ಭೂತ'' ಎಂಬ ಹೆಸರಿನಿಂದ ಅದಕ್ಕೆ ಪಿಂಡವನ್ನು ಕೊಡಬೇಕು. ಇದರಿಂದ ಪಿಶಾಚಿಗಳು ರಾಕ್ಷಸರು ಯಾರೂ ಆ ದೇಹವನ್ನು ಅಯೋಗ್ಯವನ್ನಾಗಿ ಮಾಡುವುದಿಲ್ಲ.

ಸ್ಮಶಾನವನ್ನು ಮುಟ್ಟಿದಮೇಲೆ ಅಲ್ಲಿ ಶವವನ್ನು ಉತ್ತರಾಭಿಮುಖವಾಗಿ ಸ್ಥಾಪಿಸಬೇಕು. ಅಲ್ಲಿದಹನ ಕ್ರಿಯೆಗಾಗಿ ಸ್ಥಳವನ್ನು ಪರಿಶುದ್ಧ ಮಾಡಬೇಕು. ಗೋಮಯದಿಂದ ಲೇಪಿಸಿ ರೇಖೆಯನ್ನೆಳೆದು ಸ್ವಲ್ಪ ಮಣ್ಣನ್ನು ಹೊರತೆಗೆದು ವೇದಿಕೆಯನ್ನು ಮಾಡಿ ನೀರನ್ನು ಚಿಮುಕಿಸಿ ಅಲ್ಲಿ ಅಗ್ನಿಯನ್ನು ವಿಧಿಪೂರ್ವಕವಾಗಿ ಸ್ಥಾಪಿಸಬೇಕು.[21]

ದಹನಕ್ಕೆ ಅಗ್ನಿ ನಿಯಮಗಳನ್ನು ಹೀಗೆ ತಿಳಿಸಿದ್ದಾರೆ-

1. ಗೃಹಸ್ಥರಿಗೆ ಮತ್ತು ಸೌಭಾಗ್ಯವತಿ ಸ್ತ್ರೀಯರಿಗೆ (ಗಂಡನು ಇರುವಾಗ) ಹೆಂಡತಿ

---

20. ಧೃತ್ವಾ ಸ್ಕಂಧೇ ಸ್ವಪಿತರಂ ಯಃ ಸ್ಮಶಾನಾಯ ಗಚ್ಛತಿ ।
ಸೋಽಶ್ವಮೇಧ ಫಲಂ ಪುತ್ರೋ ಲಭತೇ ಚ ಪದೇ ಪದೇ ॥ *ಗರುಡ ಪುರಾಣ 10-12*

21. ಸಂಮಾರ್ಜ್ಯ ಭೂಮಿಂ ಸಂಲಿಪ್ಯೋಲ್ಲಿಖ್ಯೋದ್ಧೃತ್ಯ ಚ ವೇದಿಕಾಮ್।
ಅಭ್ಯುಕ್ಷ್ಯೋಪ ಸಮಾಧಾಯ ವಹ್ನಿಂ ತತ್ರವಿಧಾನತಃ ॥ ಗರುಡಪುರಾಣ 10-17

ಮೃತಳಾದರೆ ಅಥವಾ ಹೆಂಡತಿ ಇರುವಾಗ ಗಂಡನು ಮೃತನಾದರೆ ಔಪಾಸನ ಗೃಹ್ಯಾಗ್ನಿಯಲ್ಲಿ ಪುನಃ ಸಂಧಾನಮಾಡಿ ಆಹುತಿಯನ್ನು ಕೊಟ್ಟು ದಹನ ಮಾಡಬೇಕು.

2. ವಿಧುರ ವಿಧವೆಯರಿಗೆ ಉತ್ತಪನಾಗ್ನಿ

3. ಬ್ರಹ್ಮಚಾರಿ, ವಾನಪ್ರಸ್ಥರಿಗೆ ಕಪಾಲಾಗ್ನಿ

4. ಮೂರನೇ ವರ್ಷ ಪ್ರಾಯ ಆರಂಭದಿಂದ ಉಪನಯನ ವಾಗುವ ಮೊದಲು, ಮತ್ತು ಹೆಣ್ಣುಮಕ್ಕಳು ಮೂರನೇ ವರ್ಷದಿಂದ ಮದುವೆಯಾಗುವ ಮೊದಲು ಮೃತರಾದರೆ- ತುಷಾಗ್ನಿಯಿಂದ ದಹಿಸಬೇಕು- ಕರ್ಮಸಿದ್ಧಾಂತವೆಂಬ ಗ್ರಂಥದಲ್ಲಿ ಅಗ್ನಿಗಳನ್ನು ಹೀಗೆ ವಿವರಿಸಿ ತಿಳಿಸಿಕೊಟ್ಟಿದ್ದಾರೆ.

1. ಔಪಾಸನಾಗ್ನಿ- ವಿವಾಹಕಾಲದಲ್ಲಿ ಸಂಗ್ರಹಿಸಿದ ಗೃಹ್ಯಾಗ್ನಿಗೆ ಔಪಾಸನಾಗ್ನಿ ಎಂದು ಹೆಸರು.

2. ಉತ್ತಪನಾಗ್ನಿ- ಒಂದು ಮುಷ್ಟಿ ದರ್ಭೆಗಳ ತುದಿಗೆ ಬೆಂಕಿ ಕೊಟ್ಟು ಆ ಸುಡುತ್ತಿರುವ ದರ್ಭೆಗಳಿಗೆ ಎರಡನೆ ಸಲ ಮತ್ತೂ ಒಂದು ಮುಷ್ಟಿ ದರ್ಭೆಗಳನ್ನು ಜೋಡಿಸಿದಾಗ ಪ್ರಜ್ವಲಿಸುತ್ತಿರುವ ಅಗ್ನಿಗೆ ಪುನಃ ಮೂರನೆಯ ಸಲ ದರ್ಭೆಗಳನ್ನು ಜೋಡಿಸಿದಾಗ ಪ್ರಜ್ವಲಿಸುವ ಬೆಂಕಿಗೆ ಉತ್ತಪ ನಾಗ್ನಿ ಎಂದು ಹೆಸರು.

3. ಕಪಾಲಾಗ್ನಿ ಉತ್ತಮವಾಗಿ ಪ್ರಜ್ವಲಿಸುವ ಬೆಂಕಿಯ ಕೆಂಡದ ಮೇಲೆ ಹೊಸ ಮಡಿಕೆಯ ಅರ್ಧ ತುಂಡನ್ನಿಟ್ಟು ಅದರಲ್ಲಿ ಬೇಗನೇ ಬೆಂಕಿ ತಾಗಲಿಕ್ಕನುಕೂಲವಾದ ಚೆಕ್ಕೆ ಚೂರು ಮತ್ತು ಕುಳ್ಳು(ಒಣಸೆಗಣಿಯ ಚೂರುಗಳು) ಗಳನ್ನು ಹಾಕಿದಾಗ ಅಡಿಯ ಕೆಂಡದ ಬಿಸಿತನದಿಂದ ಮಡಿಕೆಯಲ್ಲಿದ್ದ ಚೆಕ್ಕೆಗಳಲ್ಲಿ ಹುಟ್ಟುವ ಅಗ್ನಿಗೆ ಕಪಾಲಾಗ್ನಿ ಎಂದು ಹೆಸರು.

4. ತುಷಾಗ್ನಿ- ಪ್ರಜ್ವಲಿಸುವ ಬೆಂಕಿಯ ಕೆಂಡದ ಮೇಲೆ ಭತ್ತದ ಹುಡಿಯನ್ನು (ಹೊಟ್ಟನ್ನು) ಹಾಕಿದಾಗ ಆ ಹುಡಿಯಲ್ಲಿ ಸುಡುತ್ತಿರುವ ಬೆಂಕಿಗೆ ತುಷಾಗ್ನಿಯೆಂದು ಹೆಸರು.

ಅಗ್ನಿಯನ್ನು ತೆಗೆದುಕೊಂಡು ಸ್ಮಶಾನಕ್ಕೆ ತಂದಾಗ ಆ ಅಗ್ನಿಗೆ ''ಕ್ರವ್ಯಾದ'' ಎಂದು ಹೆಸರು. ಈ ಅಗ್ನಿದೇವನನ್ನು ಪುಷ್ಪಾಕ್ಷತೆಗಳಿಂದ ಅರ್ಚಿಸಿ ''ಲೋಮಭ್ಯಃ ಸ್ವಾಹಾ'' ಇತ್ಯಾದಿ ಅನುವಾಕಗಳಿಂದ ವಿಧಿಪೂರ್ವಕ ಹೋಮ ಮಾಡಬೇಕು.[22]

ಈ ರೀತಿ ಅಗ್ನಿಯನ್ನು ಪ್ರಾರ್ಥಿಸಿ ಅಲ್ಲಿಯೇ ಚಂದನ, ತುಳಸೀಕಾಷ್ಠ, ಮುತ್ತುಗದ, ಅಶ್ವತ್ಥದ ಕಟ್ಟಿಗೆಗಳಿಂದ ಚಿತೆಯನ್ನು ಸಿದ್ಧಪಡಿಸಬೇಕು. ಶವವನ್ನು ಚಿತೆಯ ಮೇಲೆ ಏರಿಸಿ ಶವದ ಹಸ್ತಗಳಲ್ಲಿ 'ಪ್ರೇತ' ಎಂಬ ಹೆಸರಿನಿಂದ ಎರಡು ಪಿಂಡಗಳನ್ನು ಇಡಬೇಕು. ಚಿತೆಯ ಮೇಲೆ ಇರಿಸಿದಾಗಿನಿಂದ ಪ್ರೇತತ್ವ ಹುಟ್ಟುತ್ತದೆ.

ದಾರಿದ್ರ್ಯದ ಸ್ಥಿತಿಯಲ್ಲಿಯೂ ನಗ್ನ ದೇಹವನ್ನು ದಹಿಸಬಾರದು. ಸ್ವಲ್ಪ ವಸ್ತ್ರವನ್ನಿಟ್ಟು (ಗುಹ್ಯಾಂಗದಮೇಲೆ) ದಹಿಸಬೇಕು. ಗಂಡಸರಿಗೆ ತಲೆಯ ಬದಿಯಲ್ಲಿ ಸ್ತ್ರೀಯರಿಗೆ ಕಾಲಬುಡದಲ್ಲಿ ಅಗ್ನಿಯನ್ನು ಕೊಡಬೇಕು.[23]

ಮನುಷ್ಯನು ಪಂಚಕದಲ್ಲಿ ಮರಣಹೊಂದಿದ್ದರೆ (ಧನಿಷ್ಠಾ, ಶತತಾರಾ, ಪೂರ್ವಾಭಾದ್ರಪದ, ಉತ್ತರಾಭಾದ್ರಪದ, ರೇವತಿ) ದೇಹವು ದಹನಸಂಸ್ಕಾರಕ್ಕೆ ಯೋಗ್ಯವಲ್ಲ. ಮಾಡಬಾರದು. ಒಂದು ವೇಳೆ ಮಾಡಿದರೆ ಇನ್ನೊಂದು ಮರಣ ಉಂಟಾಗುತ್ತದೆ.[24]

ಈ ದೋಷ ಪರಿಹಾರಕ್ಕಾಗಿ ಶವದ ಹತ್ತಿರ ದರ್ಭೆಗಳಿಂದ ಮಾಡಿದ ಮತ್ತು ಆ ನಕ್ಷತ್ರ ಮಂತ್ರಗಳಿಂದ ಅಭಿಮಂತ್ರಿತವಾದ ಬೊಂಬೆಗಳನ್ನು ಇಡಬೇಕು.

ತ್ರಿಪಾದ ನಕ್ಷತ್ರಗಳಲ್ಲಿ ಮರಣವಾದರೆ (ಪುನರ್ವಸು, ಉತ್ತರಾಷಾಢ, ಕೃತ್ತಿಕಾ ಇತ್ಯಾದಿ) ಕೂಡ ಇದೇರೀತಿ 3 ಪ್ರತಿಮೆಗಳನ್ನು ಮಾಡಿ (ಗೊಂಬೆ ಮಾಡಿ) ಅದರಿಂದ ಕೂಡಿಯೇ ದಹನ ಕಾರ್ಯವನ್ನು ಮಾಡಬೇಕು (ಗೋದಿ ಹಿಟ್ಟಿನ ಗೊಂಬೆ ಮಾಡುವ ಪದ್ಧತಿ ಉಂಟು.)

---

22. ಲೋಮಭ್ಯಃ ಸ್ವಾಹಾ, ತ್ವಚೇ ಸ್ವಾಹಾ, ಇತ್ಯಾದಿ ಮಂತ್ರಗಳನ್ನು ಹೇಳಬೇಕು. ರೋಮಗಳು ಅಗ್ನಿಗೆ ಅರ್ಪಿತವಾಗಲಿ, ಚರ್ಮ, ರಕ್ತ, ಮೇದಸ್ಸು, ಮಾಂಸ, ಸ್ನಾಯುಗಳು, ಅಸ್ಥಿಗಳು, ಮಜ್ಜೆ, ರೇತಸ್ಸು, ಪಾಯು, ಇವೆಲ್ಲವೂ ಅಗ್ನಿಗೆ ಅರ್ಪಿತವಾಗಲಿ ಎಂದು ಪ್ರಾರ್ಥಿಸಬೇಕು.

23. ದರಿದ್ರೋಽಪಿ ನ ದಗ್ಧವ್ಯೋ ನಗ್ನಃ ಕಸ್ಯಾಂಚಿದಾಪದಿ ।
ಪುಂಸಾಂ ಶಿರೋದೇಶೇ ಸ್ತ್ರೀಣಾಂ ಪಾದತಲೇ ಅಗ್ನಿಂ ದದ್ಯಾತ್ ॥ ಕರ್ಮಸಿದ್ಧಾಂತೇ

24. ಪಂಚಕೇಷು ಮೃತೋ ಯಸ್ತು ನ ಗತಿಂ ಲಭತೇ ನರಃ ।
ದಾಹಸ್ತತ್ರ ನ ಕರ್ತವ್ಯಃ ಕೃತೇಽನ್ಯ ಮರಣಂ ಭವೇತ್ ॥ *ಗರುಡ ಪುರಾಣ 10-25*

ಕಾಯಿಸಿದ ಚಿನ್ನವನ್ನು ಉಪಯೋಗಿಸಿ ನಕ್ಷತ್ರ ನಾಮಗಳಿಂದ ಆಹುತಿಕೊಡಬೇಕು. ''ಪ್ರೇತಾಜಯತಾ'' ಮಂತ್ರದಿಂದ ಪುನಃ ಹೋಮ ಮಾಡಬೇಕು.[25] ನಂತರ ಬೊಂಬೆಗಳ ಸಹಿತವಾಗಿ ದಹನ ಸಂಸ್ಕಾರ ಮಾಡಬೇಕು. ಪುತ್ರನು ಸಪಿಂಡೀಕರಣ ದಿನಗಳಲ್ಲಿ ಅದರ ಶಾಂತಿ ವಿಧಿಯನ್ನು ಮಾಡಬೇಕು.

ಎಳ್ಳುತುಂಬಿದ ಪಾತ್ರೆ, ಸುವರ್ಣ, ಬೆಳ್ಳಿ, ರತ್ನ, ಮತ್ತು ತುಪ್ಪ ತುಂಬಿದ ತಾಮ್ರದ ಪಾತ್ರೆ- ಇವುಗಳನ್ನು ದೋಷದ ಶಾಂತಿಗಾಗಿ ಯಥಾಕ್ರಮವಾಗಿ ದಾನ ಮಾಡಬೇಕು. (ಇದು ಪಂಚಕ ನಕ್ಷತ್ರದಲ್ಲಿ ದಹನ ಮಾಡುವಾಗ ಮಾತ್ರ ಎಂದು ತಿಳಿಯಬೇಕು). ಈ ರೀತಿ ಶಾಂತಿ ಕರ್ಮಗಳನ್ನು ಮಾಡಿ ಯಾರು ದಹನ ಸಂಸ್ಕಾರ ಮಾಡುವರೋ, ಅವರಿಗೆ ಯಾವ ವಿಘ್ನಗಳೂ ಉಂಟಾಗುವುದಿಲ್ಲ. ಆ ಪ್ರೇತವು ಪರಮಗತಿಯನ್ನು ಹೊಂದುತ್ತದೆ. ಪಂಚಕ ವಿಲ್ಲದಿದ್ದರೆ ಮೃತನನ್ನು ಮಾತ್ರ ದಹಿಸಬೇಕು. ಮತ್ತು ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು.

ದೇಹವು ಅರ್ಧ ಅಥವಾ ಪೂರ್ಣದಗ್ಧವಾದ ಮೇಲೆ ಗೃಹಸ್ಥನಾಗಿದ್ದರೆ ಕಟ್ಟಿಗೆಯಿಂದ, ಯತಿಯಾಗಿದ್ದರೆ ಶ್ರೀಫಲದಿಂದ ಅವನ ತಲೆಯನ್ನು ಒಡೆಯಬೇಕು.[26]

ಪಿತೃಲೋಕದ ಪ್ರಾಪ್ತಿಗೋಸ್ಕರ ಬ್ರಹ್ಮರಂಧ್ರವನ್ನು ಭೇದಿಸಿ ಅನಂತರ ಆ ಪುತ್ರನು ಈ ಮಂತ್ರದಿಂದ ತುಪ್ಪದ ಆಹುತಿಕೊಡಬೇಕು.[27]

ಈ ಆಹುತಿ ಕೊಟ್ಟನಂತರ ಪುತ್ರನು ಚೆನ್ನಾಗಿ ಅಳಬೇಕು. ಅದರಿಂದ ದೇಹವನ್ನು ಬಿಟ್ಟ ಜೀವನಿಗೆ ಸುಖ ಉಂಟಾಗುತ್ತದೆ. ದಹನ ಸಂಸ್ಕಾರವಾದ ಮೇಲೆ ಮೊದಲು ಸ್ತ್ರೀಯು ನಂತರ ಪುತ್ರನು ಸ್ನಾನ ಮಾಡಿ ನಾಮ, ಗೋತ್ರಗಳನ್ನು ಉಚ್ಚರಿಸಿ ತಿಲೋದಕ ಕೊಡಬೇಕು. ಅನಂತರ ಬೇವಿನ ಎಲೆಯನ್ನು ತಿಂದು ಮರಣ ಹೊಂದಿದವನ ಗುಣಗಾನ ಮಾಡಬೇಕು.

---

25. ಪ್ರೇತಾ ಜಯತಾ ನರ ಇಂದ್ರೋವಃ ಶರ್ಮಯಚ್ಛತು ।
ಉಗ್ರಾ ವಃ ಸಂತು ಬಾಹವೋಽನಾಧೃಷ್ಯಾಯಥಾಸಥ ॥ *ಋಗ್ವೇದ 10-108-13*

26. ಅರ್ಧೇ ದಗ್ಧೇಽಥವಾ ಪೂರ್ಣೇ ಸ್ಫೋಟಯೇತ್ತಸ್ಯ ಮಸ್ತಕಮ್ ।
ಗೃಹಸ್ಥಾನಾಂ ತು ಕಾಷ್ಠೇನ ಯತೀನಾಂ ಶ್ರೀಫಲೇನ ಚ ॥ *ಗರುಡ ಪುರಾಣ 10-56*

27. ಅಸ್ಮಾತ್ತ್ವಮಧಿಜಾತೋಽಸಿ ತ್ವದಯಂ ಜಾಯತಾಂ ಪುನಃ ।
ಅಸೌ ಸ್ವರ್ಗಾಯ ಲೋಕಾಯ ಸ್ವಾಹಾ ಜ್ವಲತು ಪಾವಕಃ ॥ *ಗರುಡ ಪುರಾಣ 10-58*

ಆಮೇಲೆ ಮೊದಲು ಸ್ತ್ರೀಜನರೂ, ಅವರ ಹಿಂದೆ ಪುರುಷರೂ ಮನೆಗೆ ಹೋಗಬೇಕು. ಮನೆಯ ಅನ್ನವನ್ನು ಊಟಮಾಡಬಾರದು.[28]

ಮೃತಸ್ಥಾನವನ್ನು ಸಾರಿಸಿ ದಕ್ಷಿಣಾಭಿಮುಖವಾಗಿ ಹತ್ತು ದಿನಗಳವರೆಗೆ ಹಗಲು ರಾತ್ರಿಗಳಲ್ಲಿ ದೀಪ ಉರಿಸಬೇಕು. 1, 3, 7, 9 ನೆ ದಿನಗಳಲ್ಲಿ ದೀಪ ಇಡಬೇಕು.

ಎಲ್ಲ ತಾಪದ ಶಾಂತ್ಯರ್ಥವಾಗಿ ಮನುಷ್ಯಲೋಕದಿಂದ ಪ್ರೇತಲೋಕಕ್ಕೆ ಹೋಗುವ ದಾರಿಯಲ್ಲಿ ಶ್ರಮವಾಗದಂತೆ ಹತ್ತು ದಿನ ಪ್ರಾಣಬಿಟ್ಟ ಸ್ಥಾನದ ಮೇಲ್ಭಾಗದಲ್ಲಿ ನೀರನ್ನು ಹಾಲನ್ನು ಮಣ್ಣಿನ ಕುಡಿಕೆಯಲ್ಲಿಟ್ಟು, ನೂಲಿಗೆ ಕುಶಕೂರ್ಚವನ್ನು ಕಟ್ಟಿ ನೇತಾಡಿಸಬೇಕು.[29]

ಈ ಮಂತ್ರವನ್ನು ಹೇಳಬೇಕು- ನೀನು ಸ್ಮಶಾನದಲ್ಲಿ ಅಗ್ನಿಯಿಂದ ದಹಿಸಲ್ಪಟ್ಟಿರುವೆ. ಇದು ನೀರು, ಇದು ಹಾಲು, ಇಲ್ಲಿ ಸ್ನಾನ ಮಾಡು, ಇದನ್ನು ಕುಡಿ.[30]

ಕ್ರಿಯಾಕರ್ಮವನ್ನು ಆರಂಭ ಮಾಡಲು ದಿನದ ನಿಯಮವನ್ನು ಯಾವ ಸ್ಮೃತಿಯಲ್ಲಿಯೂ ಹೇಳಿರುವುದಿಲ್ಲ. ಆದರೆ ಅಧಿಕಾರಿಗಳು (ಮಗ ಇತ್ಯಾದಿ) ಮಂತ್ರಾಗ್ನಿಯನ್ನು ಕೊಟ್ಟು ತತ್‌ಕ್ಷಣದಲ್ಲಿಯೇ (ಅಂದೇ) ಕ್ರಿಯಾರಂಭ ಮಾಡಬೇಕಾದುದು ಕರ್ತವ್ಯವಾಗಿದೆ.

ಅನಾನುಕೂಲವಿದ್ದರೆ ಮಾತ್ರ 3, 5, 7 ನೇ ದಿನಗಳಲ್ಲಿ ಕ್ರಿಯೆಯನ್ನು ಪ್ರಾರಂಭಿಸಬೇಕು. 9ನೇ ದಿನ ಪ್ರಾರಂಭಿಸುವುದು ತುಂಬಾ ಗೌಣ ಪಕ್ಷ. ಕನಿಷ್ಠ 7ನೇದಿನವಾದರೂ ಆರಂಭಿಸಿದರೆ ಈ ದಿನಗಳಲ್ಲಿಯಾದರೂ ಸ್ನಾನ, ತಿಲಾಂಜಲಿ, ಪಿಂಡ ಪ್ರದಾನಾದಿಗಳನ್ನು ಮಾಡಿದಂತೆ ಆಗುತ್ತದೆ.

ಕೇವಲ 9ನೆಯ ದಿನ ಪ್ರಾರಂಭ ಮಾಡುವುದರಿಂದ ಕುಟುಂಬವಿಲ್ಲದೆ ಅನಾಥ ಸ್ಥಿತಿಯಲ್ಲಿ ಮೃತರಾದವರ ಬಗ್ಗೆ ಮಾಡಿದಂತೆ ಆಗುತ್ತದೆ. ಇದು ಯೋಗ್ಯವಲ್ಲ.

---

28. ಪ್ರಾಶಯೇನ್ನಿಂಬಪತ್ರಾಣಿ ಮೃತಕಸ್ಯಗುಣಾನ್ ವದೇತ್ ।
ಸ್ತ್ರೀಜನೋಽಗ್ರೇ ಗೃಹಂ ಗಚ್ಛೇತ್ ಪೃಷ್ಠತೋ ನರಸಂಚಯಃ ॥ *ಗರುಡ ಪುರಾಣ 10-61*

29. ತಸ್ಮಾನ್ನಿಧೇಯಮಾಕಾಶೇ ದಶರಾತ್ರಂ ಪಯೋಜಲಮ್ ।
ಸರ್ವತಾಪೋಪ ಶಾಂತ್ಯರ್ಥಂ ಅಧ್ವಶ್ರಮ ವಿನಾಶನಮ್ ॥ *(ಹೇಮಾದ್ರೌ)*

30. ಶ್ಮಶಾನಾನಲದಗ್ಧೋಽಸಿ ಪರಿತ್ಯಕ್ತೋಽಸಿ ಬಾಂಧವೈಃ ।
ಇದಂ ನೀರಮಿದಂ ಕ್ಷೀರಮತ್ರ ಸ್ನಾಹಿ ಮಿತಂ ಪಿಬ ॥ *ಗರುಡ ಪುರಾಣ 10-66*

ಅಸ್ಥಿ ಸಂಚಯನ ಕಾರ್ಯವನ್ನು 3, 4 ನೆಯ ದಿನಗಳಲ್ಲಿ ಮಾಡಬೇಕು. (4 ನೆಯ ದಿನ ಅಸ್ಥಿಸಂಚಯನ ಮಾಡಲು ಯಾವ ದೋಷವೂ ಇಲ್ಲವೆಂದು ಸ್ಮೃತಿ ವಾಕ್ಯವಿದೆ)

ಕರ್ತೃವು ಸ್ಮಶಾನ ಭೂಮಿಗೆ ಹೋಗಿ ಅಲ್ಲಿ ಸ್ನಾನ ಮಾಡಿ ಶುದ್ಧನಾಗಿ ಗೋಪಿಚಂದನ ಧಾರಣೆ ಮಾಡಿ ಚಿತೆಯ ಸ್ಥಳವನ್ನು ಹಾಲಿನಿಂದ ಮಂತ್ರಪೂರ್ವಕವಾಗಿ ಚಿಮುಕಿಸಿ ನೀರಿನಿಂದ ನೆನೆಸಿ ನಂತರ ಅಸ್ಥಿಸಮೂಹವನ್ನು ಹೊರಗೆ ತೆಗೆಯಬೇಕು.

ಮುತ್ತುಗದ ಎಲೆಯಲ್ಲಿ ಅಸ್ಥಿಗಳನ್ನು ಇಟ್ಟು ಹಾಲು ಮತ್ತು ನೀರಿನಿಂದ ತೊಳೆಯಬೇಕು. ಅವುಗಳನ್ನು ಮಡಕೆಯೊಳಗಿಟ್ಟು ವಿಧಿಪೂರ್ವಕ ಶ್ರಾದ್ಧ ಮಾಡಬೇಕು.

ಅಸ್ಥಿ, ಚಿತಾಭಸ್ಮವನ್ನು ಜಲಾಶಯಕ್ಕೆ ತೆಗೆದುಕೊಂಡು ಹೋಗಬೇಕು. ಅಲ್ಲಿ ಹಾಲು ಮತ್ತು ನೀರಿನಿಂದ ಅಸ್ಥಿಗಳನ್ನು ತೊಳೆದು ಚಂದನದಿಂದ, ಕುಂಕುಮದಿಂದ ಲೇಪಿಸಬೇಕು. ನಂತರ ಅಸ್ಥಿಗಳಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಗಂಗೆಯ ಮಧ್ಯದಲ್ಲಿ ಹಾಕಬೇಕು, ಭಸ್ಮವನ್ನು ಅಲ್ಲಿಯೇ ವಿಸರ್ಜಿಸಬೇಕು. ಎಷ್ಟು ವರ್ಷಗಳ ಕಾಲ ಮನುಷ್ಯನ ಅಸ್ಥಿಗಳು ಗಂಗೆಯ ನೀರಿನಲ್ಲಿ ಇರುತ್ತವೆಯೋ- ಅಷ್ಟು ಸಾವಿರ ವರ್ಷಗಳವರೆಗೆ ಅವನು ಸ್ವರ್ಗಲೋಕದಲ್ಲಿ ಗೌರವಿಸಲ್ಪಟ್ಟು ಇರುತ್ತಾನೆ.

ಸತ್ಪುತ್ರನಾದವನು ಅಸ್ಥಿಯನ್ನು ತಾನೇ ಗಂಗೆಯಲ್ಲಿ ಹಾಕಬೇಕು. ಅಸ್ಥಿಸಂಚಯನ ಮಾಡಿದ ಮೇಲೆ ದಶಗಾತ್ರ ವಿಧಿಯನ್ನು ಆಚರಿಸಬೇಕು.[31]

ದಶಗಾತ್ರವಿಧಿಯನ್ನು ಮಾಡುವುದರಿಂದ ಸತ್ಪುತ್ರನು ಪಿತೃ ಋಣದಿಂದ ಬಿಡುಗಡೆ ಹೊಂದುತ್ತಾನೆ. ಪುತ್ರನು ಶೋಕವನ್ನು ಬಿಟ್ಟು ಧೈರ್ಯದಿಂದ ಸತ್ವಗುಣಿಯಾಗಿ ತಂದೆಗೆ ಪಿಂಡಾದಿಗಳನ್ನು ಹಾಕಬೇಕು. ಕಣ್ಣೀರು ಸುರಿಸಬಾರದು. ಬಾಂಧವರು ಸುರಿದ ಕಣ್ಣೀರನ್ನು ಮತ್ತು ಶ್ಲೇಷ್ಮವನ್ನು ಪ್ರೇತವು ಭುಂಜಿಸಬೇಕಾಗುತ್ತದೆ . ಆದ್ದರಿಂದ ಅಳಬಾರದು. ಹುಟ್ಟಿದವನಿಗೆ ಮರಣವು ನಿಶ್ಚಿತವೆಂದು ತಿಳಿದು ಬುದ್ಧಿವಂತನು ದುಃಖಿಸಬಾರದು.

ಮೃತನಿಗೆ ಅನೇಕ ಜನ ಪುತ್ರರಿದ್ದರೆ, ದಶಗಾತ್ರವಿಧಿ, ಸಪಿಂಡನವಿಧಿ, 16 ಶ್ರಾದ್ಧಗಳು ಮತ್ತು ಇನ್ನೂ ಇತರ ವಿಧಿಗಳನ್ನು ಒಬ್ಬನೇ ಪುತ್ರನು ಆಚರಿಸಬೇಕು.

---

31. ಅತಃ ಸ್ವಯಮೇವ ಸತ್ಪುತ್ರೋ ಗಂಗಾಯಾಮಸ್ಥಿ ಪಾತಯೇತ್।
ಅಸ್ಥಿ ಸಂಚಯನಾದೂರ್ಧ್ವ ದಶಗಾತ್ರಂ ಸಮಾಚರೇತ್ ॥ *ಗರುಡ ಪುರಾಣ 10-87*

ಧನವನ್ನು ಪಾಲು ಮಾಡಿದ್ದರೂ, ವರ್ಷಾಂತಿಕದ ವರೆಗೆ ಎಲ್ಲ ಕರ್ಮಗಳನ್ನು ಎಲ್ಲರೂ ಹಿರಿಯಮಗ ಸೇರಿ ಮಾಡಬೇಕು. ಆಸ್ತಿಯನ್ನು ಪಾಲುಮಾಡಿದ್ದರೆ ಪ್ರತಿ ವಾರ್ಷಿಕ ಶ್ರಾದ್ಧ ಮೊದಲಾದವುಗಳನ್ನು ಬೇರೆ ಬೇರೆಯಾಗಿ ಮಾಡಬೇಕು.[32]

ಆದ್ದರಿಂದ ಜ್ಯೇಷ್ಠಪುತ್ರನು ಭಕ್ತಿಯಿಂದ ಒಂದು ಹೊತ್ತು ಊಟ ಮಾಡುತ್ತ ಭೂಮಿಯ ಮೇಲೆ ಮಲಗುತ್ತಾ, ಬ್ರಹ್ಮಚಾರಿಯಾಗಿ (ವ್ರತಸ್ಥನಾಗಿ) ಶುಚಿಯಾಗಿ ದಶಗಾತ್ರ ವಿಧಿಯನ್ನು ಆಚರಿಸಬೇಕು.[33]

ಏಳು ಬಾರಿ ಭೂಮಿ ಪ್ರದಕ್ಷಿಣೆ ಮಾಡಿದರೆ ಎಷ್ಟು ಫಲ ದೊರೆಯುತ್ತದೆಯೋ ಅಷ್ಟು ಫಲವನ್ನು ತಂದೆ ತಾಯಿಗಳ (ಹತ್ತು ದಿನದ) ಕರ್ಮಗಳನ್ನು ಮಾಡಿದ ಪುತ್ರನು ಪಡೆಯುತ್ತಾನೆ.[34]

ಈ ಹತ್ತು ದಿನಗಳಲ್ಲಿ ಕರ್ತೃ ಹಾಗೂ ಬಾಂಧವರು ಪ್ರೇತಕಲ್ಪದಿಂದ ಕೂಡಿದ ಗರುಡ ಪುರಾಣವನ್ನು ಕೇಳಬೇಕು. ಪುಣ್ಯಕರವಾದ ಇದನ್ನು ಕೇಳುವವರು, ಕೇಳಿಸುವವರು (ಹೇಳುವವರು) ಇಬ್ಬರೂ ತಮ್ಮ ಪಾಪಗಳಿಂದ ಬಿಡುಗಡೆ ಹೊಂದುತ್ತಾರೆ. ದುರ್ಗತಿಹೊಂದುವುದಿಲ್ಲ.[35]

ಮಾತಾ ಪಿತೃಗಳು ಮರಣ ಹೊಂದಿದಾಗ ಗರುಡ ಪುರಾಣವನ್ನು ಕೇಳಿದರೆ ಪಿತೃಗಳು ಮುಕ್ತಿಯನ್ನು ಪಡೆಯುತ್ತಾರೆ ಮತ್ತು ಪುತ್ರನು ಸಂತತಿ ಪಡೆಯುತ್ತಾನೆ.[36]

ಗರುಡ ಪುರಾಣವನ್ನು ಕೇಳದೇ ಇರುವವನು, ಗಯಾಶ್ರಾದ್ಧವನ್ನು, ವೃಷೋತ್ಸರ್ಗವನ್ನು ಮತ್ತು ಮಾಸಿಕ, ವಾರ್ಷಿಕ ಶ್ರಾದ್ಧಗಳನ್ನು ಮಾಡದೇ ಇರುವವನು, ಪುತ್ರನೆಂದು ಹೇಗೆ ಕರೆಯಲ್ಪಡುತ್ತಾನೆ ? ಮೂರು ಋಣಗಳಿಂದ ಹೇಗೆ ಮುಕ್ತನಾಗುತ್ತಾನೆ ?

---

32. ಏಕೇನೈವ ತು ಕಾರ್ಯಾಣಿ ಸಂವಿಭಕ್ತಧನೇಷ್ವಪಿ ।
ವಿಭಕ್ತೈಸ್ತು ಪೃಥಕ್ಕಾರ್ಯಂ ಶ್ರಾದ್ಧಂ ಸಾಂವತ್ಸರಾದಿಕಮ್ ॥ *ಗರುಡ ಪುರಾಣ 11-21*

33. ತಸ್ಮಾತ್ ಜ್ಯೇಷ್ಠಃ ಸುತೋ ಭಕ್ತ್ಯಾ ದಶಗಾತ್ರಂ ಸಮಾಚರೇತ್ ।
ಏಕಭೋಜೀ ಭೂಮಿಶಾಯೀ ಭೂತ್ವಾ ಬ್ರಹ್ಮಪರಃ ಶುಚಿಃ ॥ *ಗ. ಪು. 11-22*

34. ಸಪ್ತವಾರಂ ಪರಿಕ್ರಮ್ಯ ಧರಣೀಂ ಯತ್ಫಲಂ ಲಭೇತ್ ।
ಕ್ರಿಯಾಂ ಕೃತ್ವಾ ಪಿತುರ್ಮಾತುಸ್ತತ್ಫಲಂ ಲಭತೇ ಸುತಃ ॥ *ಗ. ಪು. 11-23*

35. ಪ್ರೇತಕಲ್ಪಮಿದಂ ಪುಣ್ಯಂ ಶೃಣೋತಿ ಶ್ರಾವಯೇಚ್ಚ ಯಃ ।
ಉಭೌ ತೌ ಪಾಪನಿರ್ಮುಕ್ತೌ ದುರ್ಗತಿಂ ನೈವ ಗಚ್ಛತಃ ॥ *ಗ. ಪು., ಶ್ರವಣಫಲಮ್*

36. ಮಾತಾಪಿತ್ರೋಶ್ಚ ಮರಣೇ ಸೌಪರ್ಣಂ ಶೃಣುತೇ ತು ಯಃ ।
ಪಿತರೌ ಮುಕ್ತಿಮಾಪನ್ನೌ ಸುತಃ ಸಂತತಿಮಾನ್ ಭವೇತ್ ॥ *ಗ. ಪು., ಶ್ರವಣಫಲಮ್*

ಮಾತಾಪಿತೃಗಳನ್ನು ದಾಟಿಸಲು ಹೇಗೆ ಸಮರ್ಥನಾಗುತ್ತಾನೆ. ? ಆದ್ದರಿಂದ ಎಲ್ಲಾ ಪ್ರಯತ್ನಗಳಿಂದಲೂ ಗರುಡ ಪುರಾಣವನ್ನು ಕೇಳಲೇಬೇಕು. ಅದು ಅರ್ಥ, ಕಾಮ, ಮೋಕ್ಷಗಳನ್ನು ಕೊಡುವಂತಹದ್ದಾಗಿದೆ. ದುಃಖವನ್ನು ನಾಶಮಾಡುವುದೂ ಆಗಿದೆ.[37]

ಗರುಡ ಪುರಾಣವನ್ನು ಕೇಳಿ ವಾಚಕನಿಗೆ ಶಯನಾದಿ ಎಲ್ಲ ದಾನಗಳನ್ನು ಕೊಡಬೇಕು. ಇಲ್ಲದಿದ್ದರೆ ಕೇಳಿಯೂ ಫಲವಿಲ್ಲ.

ಹತ್ತು ದಿನಗಳಲ್ಲಿ ಇದನ್ನು ಕೇಳಲೇಬೇಕು, ಅದು ಆಗದಿದ್ದರೆ ಎಷ್ಟು ದಿನ ಸಾಧ್ಯವೋ ಅಷ್ಟು ದಿನಗಳಲ್ಲಿ ಕೇಳುವುದು ಅತ್ಯವಶ್ಯ. ಒಂದೇ ದಿನ ಕೇಳುವುದಾದರೆ ಪ್ರಾತಃಕಾಲದಿಂದ ಸಾಯಂಕಾಲದವರೆಗೆ ಪೂರ್ತಿಕೇಳಬೇಕು. (ಇದು ಕಷ್ಟಕರ. ಇಬ್ಬರಿಗೂ ತೊಂದರೆ ದಾಯಕ) ಕಾರಣ ಕೇಳಬೇಕೆಂದು ಮುಖ್ಯವಾದ್ದರಿಂದ ಎಷ್ಟು ದಿನ ಸಾಧ್ಯವೋ ಅಷ್ಟು ಕೇಳುವುದು ಅವಶ್ಯ.

ದಶಗಾತ್ರ ವಿಧಿಯಿಂದ ಕರ್ತೃವು ಪ್ರೇತ ಕರ್ಮಗಳನ್ನು ಮಾಡಬೇಕು. ಪ್ರಥಮ ದಿನದ ನಿತ್ಯಕ್ರಿಯಾ ತಿಲಾಂಜಲ್ಯಾದಿ ಪಿಂಡಪ್ರದಾನದಿಂದ ತಲೆಯೂ, ಎರಡನೆಯ ದಿನ ಪಿಂಡ ಪ್ರದಾನದಿಂದ ಕಿವಿ, ಕಣ್ಣು, ಮೂಗು, ಮೂರನೆಯ ದಿನದಿಂದ ಕಂಠ, ಭುಜ ಎದೆಯೂ, ನಾಲ್ಕನೆಯ ದಿನದಿಂದ ನಾಭಿ, ಲಿಂಗ, ಗುದವೂ, ಐದನೆಯ ದಿನದಿಂದ ತೊಡೆ, ಮೊಣ ಕಾಲು, ಪಾದಗಳೂ ಆರನೆಯ ದಿನದಿಂದ ಮರ್ಮಸ್ಥಾನಗಳೂ, ಏಳನೆಯ ದಿನದಿಂದ ನಾಡಿಗಳು, ಎಂಟನೆಯ ದಿನದಿಂದ ಹಲ್ಲುಕೂದಲುಗಳೂ, ಒಂಭತ್ತನೆಯ ದಿನದಿಂದ ವೀರ್ಯಸಹಿತ ಎಲ್ಲಾ ಅವಯವಗಳೂ, ಸಪೂರ್ಣವಾಗಿ ಹತ್ತನೆಯ ದಿನದ ಪಿಂಡಪ್ರದಾನಾದಿಗಳಿಂದ ಹಸಿವು, ನೀರಡಿಕೆಗಳು ಮೃತ ಜೀವನಿಗೆ ಹುಟ್ಟುತ್ತವೆ.[38]

---

37. ತಸ್ಮಾತ್ ಸರ್ವ ಪ್ರಯತ್ನೇನ ಶ್ರೋತವ್ಯಂ ಗಾರುಡಂ ಕಿಲ ।
ಧರ್ಮಾರ್ಥಕಾಮ ಮೋಕ್ಷಾಣಾಂ ದಾಯಕಂ ದುಃಖನಾಶನಮ್ ॥ ಗ.ಪು., ಶ್ರವಣಫಲಮ್

38. ಶಿರಸ್ತ್ವಾದ್ಯೇನ ಪಿಂಡೇನ ಪ್ರೇತಸ್ಯ ಕ್ರಿಯತೇ ಸದಾ ।
ದ್ವಿತೀಯೇನ ತು ಕರ್ಣಾಕ್ಷಿ ನಾಸಿಕಾಶ್ಚ ಸಮಾಸತಃ ॥
ಗಲಾಂಸಭುಜವಕ್ಷಾಂಸಿ ತೃತೀಯೇನ ಯಥಾಕ್ರಮಮ್ ।
ಚತುರ್ಥಕೇನ ತು ಪಿಂಡೇನ ನಾಭಿಲಿಂಗಗುದಾನಿ ಚ ॥
ಜಾನುಜಂಘೇ ತಥಾ ಪಾದೌ ಪಂಚಮೇನ ತು ಸರ್ವದಾ ।
ಸರ್ವ ಮರ್ಮಾಣಿ ಷಷ್ಠೇನ ಸಪ್ತಮೇನ ತು ನಾಡಯಃ ॥
ದಂತ ಲೋಮಾನ್ಯಷ್ಟಮೇನ ವೀರ್ಯಂತು ನವಮೇನ ಚ ।
ದಶಮೇನತು ಪೂರ್ಣತ್ವಂ ತೃಪ್ತತಾಕ್ಷುದ್ವಿಪರ್ಯಯಃ । ಬ್ರಾಹ್ಮ ಪುರಾಣ

ಬಾಂಧವರೆಲ್ಲರೂ ಹತ್ತನೆ ದಿನದಂದು ಕ್ಷೌರಮಾಡಿಸಿಕೊಳ್ಳಬೇಕು ಮತ್ತು ಹತ್ತನೇ ದಿನ ಧರ್ಮವೇದಿಕಾ ಪ್ರೇತ ಪಿಂಡವನ್ನು ಹಳದಿ ಅನ್ನಸಮೇತ ಬಾಳೆಯ ಎಲೆಯಲ್ಲಿಟ್ಟು ಮಂತ್ರಪೂರ್ವಕ ನೀರನ್ನು ಬಿಟ್ಟು ವಾಯಸ(ಕಾಕಬಲಿ) ಬಲಿ ಕೊಡಬೇಕು. ಕಾಗೆಗಳು ಬಂದು ತಿನ್ನುವವರೆಗೆ ಕಾದು ನಿಲ್ಲಬೇಕು. ಬಹಳ ಹೊತ್ತು ಕಾಗೆಗಳು ಬಂದು ಮುಟ್ಟದಿದ್ದರೆ ದರ್ಭೆಯಿಂದ ಕಾಗೆಯ ಆಕೃತಿ ಮಾಡಿ ಮುಟ್ಟಿಸಿ ಅ ಸಂಬಂಧ ತಿಲ ಹವನಾದಿ ಪ್ರಾಯಶ್ಚಿತ್ತ ಮಾಡಬೇಕು, ಬಂಧುಗಳೆಲ್ಲರೂ ಮೂರು ಅಂಜಲಿ ನೀರನ್ನು ಧರ್ಮೋದಕವೆಂದು ಕೊಡಬೇಕು.

ಈ ಹತ್ತು ದಿನಗಳಲ್ಲಿ ಬ್ರಹ್ಮಚಾರಿಗಳಿಗೆ ಮೃಷ್ಟಾನ್ನಭೋಜನ ಮಾಡಿಸಬೇಕು ಮತ್ತು ಕೈ ಜೋಡಿಸಿಕೊಂಡು ಶ್ರೀಹರಿಯನ್ನು ಧ್ಯಾನಿಸಿ ಪ್ರೇತದ ಮುಕ್ತಿಗೋಸ್ಕರ ಪ್ರಾರ್ಥನೆ ಸಲ್ಲಿಸಬೇಕು.[39]

ಹನ್ನೊಂದನೆಯ ದಿನ ಬೆಳಿಗ್ಗೆ ಸ್ನಾನ ಪಂಚಗವ್ಯ ಪ್ರಾಶನ ಯಜ್ಞೋಪವೀತಧಾರಣ ವನ್ನು ಮಾಡಿ ಸಂಧ್ಯಾದಿಕರ್ಮಗಳನ್ನು ಪೂರ್ತಿಗೊಳಿಸಿ ವೃಷೋತ್ಸರ್ಗ, ಏಕೋದ್ದಿಷ್ಟ ಶ್ರಾದ್ಧಗಳನ್ನು ಮಾಡಬೇಕು.[40]

ತಂದೆ ತಾಯಿಯವರ ಸಲುವಾಗಿ ಹನ್ನೊಂದನೆಯ ದಿನ ವೃಷೋತ್ಸರ್ಗವನ್ನು, ತೀರ್ಥದಲ್ಲಿ ತಿಲಾಂಜಲಿಯನ್ನು ಕೊಡದೇ ಇದ್ದ ಮಗನು ನಿಷ್ಪ್ರಯೋಜಕನೆನಿಸುತ್ತಾನೆ.

ವೃಷೋತ್ಸರ್ಗವನ್ನು ಮಾಡುವುದರಿಂದ ಮೃತರಿಗೆ ಉತ್ತಮಗತಿ ಹಿಂದಿನ ಹತ್ತು ಪಿತೃಗಳಿಗೆ ಮತ್ತು ಮುಂದೆ ಹುಟ್ಟುವ ಹತ್ತು ತಲೆಯವರಿಗೆ ಸದ್ಗತಿಯು ಆಗುತ್ತದೆ.

ಪತಿ, ಪುತ್ರವತಿಯರಾದ ಸೌ॥ ಸ್ತ್ರೀಯರ ಬಗ್ಗೆ ವೃಷೋತ್ಸರ್ಗ ಮಾಡಬಾರದು. ಅದರ ಪ್ರತಿಯಾಗಿ ಗೋದಾನ ಕೊಡಬೇಕು, ಆನಂತರ ನಿಯಮದಂತೆ ಏಕೋದ್ದಿಷ್ಟ, ವಸು, ರುದ್ರಗಣ, ಮಧ್ಯಷೋಡಶ ಮಾಸಿಕಾದಿಗಳನ್ನು ಆಚರಿಸಬೇಕು. ತ್ರಿಪಾದ, ಪಂಚಕದೋಷಗಳಿದ್ದರೆ ಈ ಸಂಬಂಧವಾಗಿ ಶಾಂತಿಯನ್ನು ಸಹ ಮಾಡಿಸಿಕೊಳ್ಳಬೇಕು.

---

39. ಮಿಷ್ಟಾನ್ನಭೋಜಯೇದೇಕಂ ದಿನೇಷು ದಶಸು ದ್ವಿಜಮ್ ।
ಪ್ರಾರ್ಥಯೇತ್ ಪ್ರೇತಮುಕ್ತಿಂ ಚ ಹರಿಂ ಧ್ಯಾತ್ವಾ ಕೃತಾಂಜಲಿಃ ॥ *ಗರುಡ ಪುರಾಣ 11-39*

40. ಪ್ರೇತಸ್ಯ ಏಕಾದಶಾಹೇ ತು ಸ್ನಾತ್ವಾ ಪುಣ್ಯಾಹವಾಚನಮ್ ।
ಗವ್ಯಂ ಪ್ರಾಶ್ಯ ವೃಷೋತ್ಸರ್ಗ ಏಕೋದ್ದಿಷ್ಟಾದಿಕಂ ತಥಾ ॥ ಬೃಹಸ್ಪತಿ ವಚನ

ಬಾಲ್ಯದಲ್ಲಿ, ಕೌಮಾರಾವಸ್ಥೆಯಲ್ಲಿ, ಪೌಗಂಡಾವಸ್ಥೆಯಲ್ಲಿ, (5ರಿಂದ 16 ವಯಸ್ಸು) ಯೌವನದಲ್ಲಿ , ಮುಪ್ಪಿನಲ್ಲಿ ಮಾಡಿರುವ ಪಾಪಗಳು ವೃಷೋತ್ಸರ್ಗ ಮಾಡುವುದರಿಂದ ನಿಸ್ಸಂಶಯವಾಗಿ ನಾಶವಾಗುತ್ತವೆ.[41]

ಮೃತ ಸ್ಥಾನದಲ್ಲಿ, ದ್ವಾರದಲ್ಲಿ, ಅರ್ಧಮಾರ್ಗದಲ್ಲಿ, ಮತ್ತು ಚಿತೆಯ ಮೇಲೆ ಶವದ ಹಸ್ತಗಳಲ್ಲಿ ಎರಡು, ಅಸ್ಥಿಸಂಚಯನ ಮಾಡುವಾಗ ಆರನೆಯದು ಮತ್ತು ಹತ್ತು ದಿನಗಳಲ್ಲಿ ಹತ್ತು ಪಿಂಡಗಳು ಈ ಹದಿನಾರು, ಶ್ರಾದ್ಧಗಳು ಷೋಡಶ ಪ್ರಥಮ ಅಥವಾ ಮಲಿನ ಷೋಡಶ ಎಂದು ಹೇಳಲ್ಪಟ್ಟಿವೆ.[42]

ಇನ್ನೊಂದು ರೀತಿಯ ಷೋಡಶ ಶ್ರಾದ್ಧಗಳು ಹೀಗೆ ಇವೆ. ಮೊದಲನೆಯ ಪಿಂಡವನ್ನು ವಿಷ್ಣುವಿಗೆ, ಎರಡನೆಯದನ್ನು ಶಿವನಿಗೆ, ಮೂರನೆಯ ಪಿಂಡವನ್ನು ಪರಿವಾರ ಸಮೇತನಾದ ಯಮಧರ್ಮರಾಜನಿಗೆ, ನಾಲ್ಕನೆಯ ಪಿಂಡವನ್ನು ಸೋಮರಾಜನಿಗೆ, ಐದನೆಯದನ್ನು ಹವ್ಯವಾಹನನಾದ ಅಗ್ನಿಗೆ, ಆರನೆಯದನ್ನು ಕವ್ಯವಾಹನನಾದ ಅಗ್ನಿಗೆ, ಏಳನೆಯದನ್ನು ಕಾಲನಿಗೆ, ಎಂಟನೆಯದನ್ನು ರುದ್ರನಿಗೆ, ಒಂಭತ್ತನೆಯದನ್ನು ಪುರುಷನಿಗೆ, ಹತ್ತನೆಯದನ್ನು ಪ್ರೇತಕ್ಕೆ, ಹನ್ನೊಂದನೆಯದನ್ನು ವಿಷ್ಣುವಿಗೆ, ಹನ್ನೆರಡನೆಯದನ್ನು ಬ್ರಹ್ಮನಿಗೆ, ಹದಿಮೂರನೆಯದನ್ನು ವಿಷ್ಣುವಿಗೆ, ಹದಿನಾಲ್ಕನೆಯದನ್ನು ಶಿವನಿಗೆ, ಹದಿನೈದನೆಯದನ್ನು ಯಮನಿಗೆ, ಹದಿನಾರನೆಯದನ್ನು ಆ ಪುರುಷನಿಗೆ ಕೊಡಬೇಕು. ತತ್ವವನ್ನು ತಿಳಿದ ಜನರು ಇದನ್ನೇ ಮಧ್ಯಮ ಷೋಡಶ ಎಂದು ಕರೆಯುತ್ತಾರೆ.

ಹನ್ನೆರಡು ತಿಂಗಳುಗಳಲ್ಲಿ ಪ್ರತಿತಿಂಗಳೂ, ಪಾಕ್ಷಿಕ, ತ್ರಿಪಾಕ್ಷಿಕ, ಊನ ಷಾಣ್ಮಾಸಿಕ, ಮತ್ತು ಊನಾಬ್ದಿಕಗಳಲ್ಲಿ ಪಿಂಡಗಳನ್ನು ಕೊಡಬೇಕು. ಇದು ಉತ್ತಮ ಷೋಡಶ ಎನಿಸುತ್ತದೆ.

ಈ ಒಟ್ಟು ನಲವತ್ತೆಂಟು ಶ್ರಾದ್ಧಗಳು ಪ್ರೇತತ್ವವನ್ನು ನಾಶಮಾಡುತ್ತವೆ. ಇವು

---

41. ಬಾಲ್ಯೇ ಕೌಮಾರೇ ಪೌಗಂಡೇ ಯೌವನೇ ವಾರ್ಧಕೇ ಕೃತಮ್ ।
ಯತ್ಪಾಪಂ ತದ್ವಿನಶ್ಯೇತ ವೃಷೋತ್ಸರ್ಗಾನ್ನ ಸಂಶಯಃ ॥ ಗರುಡ ಪುರಾಣ 12-51

42. ಸ್ಥಾನೇ ದ್ವಾರೇಽರ್ಧಮಾರ್ಗೇ ಚ ಚಿತಾಯಾಂ ಶವಹಸ್ತಕೇ ।
ಅಸ್ಥಿಸಂಚಯನೇ ಷಷ್ಠೋ ದಶ ಪಿಂಡಾ ದಶಾಹ್ನಿಕಾಃ ॥
ಮಲಿನಂ ಷೋಡಶಂ ಚೈತತ್ ಪ್ರಥಮಂ ಪರಿಕೀರ್ತಿತಮ್ ॥

ಯಾರಿಗಾಗಿ ವಿಧಿಪೂರ್ವಕ ಮಾಡಲ್ಪಡುವವೋ ಆವನು ಪಿತೃಗಳ ಪಂಕ್ತಿಯಲ್ಲಿ ಎಣಿಸಲ್ಪಡುತ್ತಾನೆ. ಇವುಗಳನ್ನೂ ಮಾಡದಿದ್ದರೆ ಮೃತನು ಪ್ರೇತವಾಗಿ ಇರುತ್ತಾನೆ.

ಈ ರೀತಿಯಾಗಿ ಹನ್ನೊಂದನೆಯ ದಿನ ಕರ್ಮಗಳನ್ನು ಮಾಡಿ ನಂತರ ಸಂಪಿಂಡೀಕರಣ ವನ್ನು ಮಾಡಬೇಕು, ಸಪಿಂಡೀಕರಣವನ್ನು ಮಾಡದೇ ಪುತ್ರನು ಶುದ್ಧನಾಗುವದಿಲ್ಲ. (ಅಂದರೆ ಸೂತಕವು ಹೋಗುವುದಿಲ್ಲ)

ಹನ್ನೆರಡನೆಯ ದಿನ, ಮೂರನೆಯ ಪಕ್ಷದಲ್ಲಿ, ಆರನೆಯ ತಿಂಗಳಲ್ಲಿ, ಅಥವಾ ವರ್ಷಾಂತ್ಯದಲ್ಲಿ ಸಪಿಂಡೀಕರಣವನ್ನು ಮಾಡಬೇಕೆಂದು ಜ್ಞಾನಿಗಳು ಹೇಳುತ್ತಾರೆ.[43]

ಕಲಿಧರ್ಮದ ಅನಿತ್ಯತೆಯಿಂದ, ಪುರುಷನ ಆಯುಷ್ಯ ಕ್ಷೀಣವಾಗುವುದರಿಂದಲೂ ಶರೀರದ ಅಸ್ಥಿರತೆಯಿಂದಲೂ ಹನ್ನೆರಡನೆಯ ದಿನ ಸಪಿಂಡೀಕರಣಕ್ಕೆ ಶ್ರೇಷ್ಠ ದಿನ ವಾಗಿದೆ.[44]

ಹನ್ನೆರಡನೆಯ ದಿನ ಸ್ನಾನಮಾಡಿ ಮೃತಸ್ಥಾನದಲ್ಲಿ ಹಸುವಿನ ಶಗಣೆಯಿಂದ ಸಾರಿಸಿ ಶಾಸ್ತ್ರದಲ್ಲಿ ಹೇಳಿರುವ ವಿಧಾನದಿಂದ ಪುತ್ರನು ಊರ ಹೊರಗೆ ಸಪಿಂಡೀಕರಣ ಶ್ರಾದ್ಧಮಾಡಿಬಂದ ನಂತರ ಮನೆಯಲ್ಲಿ ಸ್ನಾನ ಮಾಡಿ ಶುದ್ಧ ಪುಣ್ಯಾಹವಾಚನಮಾಡಿಕೊಳ್ಳಬೇಕು.

ದಶಾಹದ ಒಳಗೆ ಮುಖ್ಯ ಕರ್ತೃವಿನ ಹೆಂಡತಿಯು ಪ್ರಸೂತಳಾದರೆ ಏಕೋದ್ದಿಷ್ಟ ಪರ್ಯಂತ ಮಾಡಿ, ಹೆತ್ತ ಹನ್ನೊಂದನೆಯ ದಿನ ಪುಣ್ಯಾಹ, ಷೋಡಶಮಾಸಿಕ ಸಪಿಂಡೀಕರಣ ಗಳನ್ನು ಮಾಡಬೇಕು.[45]

ತಂದೆಯು ಮೃತನಾದ ಮೇಲೆ ಪಿತಾಮಹನು ಬದುಕಿದ್ದರೆ, ಆಗ ಪುತ್ರನು ಪ್ರಪಿತಾಮಹ

---

43. ದ್ವಾದಶಾಹೇ ತ್ರಿಪಕ್ಷೇ ವಾ ಷಣ್ಮಾಸೇ ವತ್ಸರೇಽಪಿವಾ ।
ಸಪಿಂಡೀಕರಣಂ ಪ್ರೋಕ್ತಂ ಮುನಿಭಿಸ್ತತ್ವದರ್ಶಿಭಿಃ ॥ *ಗರುಡ ಪುರಾಣ 13-28*

44. ಆನಂತ್ಯಾತ್ಕಲಿಧರ್ಮಾಣಾಂ ಪುಂಸಾಂ ಚೈವಾಯುಷಃ ಕ್ಷಯಾತ್ ।
ಅಸ್ಥಿರತ್ವಾತ್ ಶರೀರಸ್ಯ ದ್ವಾದಶಾಹೇ ಪ್ರಶಸ್ಯತೇ ॥ ಗರುಡಪುರಾಣ 13-29

45. ಮಂತ್ರಗೃಹೀತುರ್ಭಾರ್ಯಾ ಚೇತ್ ಪ್ರಸೂತಾಯತ್ತದಂತರೇ ॥ ದಶಾಹಮಧ್ಯೇ॥
ಏಕೋದ್ದಿಷ್ಟಾವಸಾನ ಸ್ಯಾತ್ಕರ್ಮ ಸರ್ವಂ ಯಥಾವಿಧಿ।
ಸಪಿಂಡೀಕರಣಂ ತತ್ರ ಸೂತಕಾಂತೇ ಚರೇದಿತಿ॥ ಸ್ಮೃತಿಸಾರ ಸಮುಚ್ಚಯೇ

ಮತ್ತು ಅವನ ಹಿಂದಿನವರಿಗೆ ಮೂರು ಪಿಂಡಗಳನ್ನು ಕೊಡಬೇಕು. ಪಿತನಿಗೆ ಕೊಟ್ಟ ಪಿಂಡವನ್ನು ಮೂರುಭಾಗಗಳನ್ನಾಗಿ ಮಾಡಿ ಆ ಪಿಂಡಗಳಲ್ಲಿ ಸೇರಿಸಬೇಕು.

ಸಪಿಂಡೀಕರಣದಲ್ಲಿ ವೇದವನ್ನು ತಿಳಿದವನ ಪಾದವನ್ನು ಚಂದನ, ಅಕ್ಷತೆಗಳಿಂದ ಪೂಜಿಸಬೇಕು. ಅಕ್ಷಯ ತೃಪ್ತಿಗೋಸ್ಕರ ಅವನಿಗೆ ದಾನವನ್ನು ಕೊಡಬೇಕು.

ಒಂದು ವರ್ಷದ ಜೀವಿಕೆ(ವರ್ಷವೃತ್ತಿ), ತುಪ್ಪ, ಆಹಾರ, ಚಿನ್ನ, ಬೆಳ್ಳಿ, ಸುಂದರವಾದ ಗೋವು, ಕುದುರೆ, ಆನೆ, ರಥ, ಭೂಮಿ ಇವುಗಳನ್ನು ಆಚಾರ್ಯನಿಗೆ ದಾನ ಕೊಡಬೇಕು.

ಅನಂತರ ಸ್ವಸ್ತಿವಾಚನ ಪೂರ್ವಕವಾಗಿ ಮಂತ್ರಗಳಿಂದ ಕುಂಕುಮ ಅಕ್ಷತೆ ಮತ್ತು ನೈವೇದ್ಯಗಳಿಂದ ನವಗ್ರಹಗಳನ್ನು, ದೇವಿಯನ್ನು ಮತ್ತು ವಿನಾಯಕನನ್ನು ಪೂಜಿಸಬೇಕು.

12 ಜನ ಬ್ರಾಹ್ಮಣರಿಗೆ 12 ಘಟಗಳನ್ನು ದಕ್ಷಿಣೆಯ ಸಹಿತವಾಗಿ ದಾನಮಾಡಿ ನಾನಾ ಪ್ರಕಾರದ ಹಿತವಾದ ಮಿಷ್ಟಾನ್ನಗಳನ್ನು ಅವರಿಗೆ ಭೋಜನ ಮಾಡಿಸಬೇಕು.

ಈ ರೀತಿಯಾಗಿ ಸಪಿಂಡೀಕರಣವನ್ನು ಮಾಡಿ ಕರ್ಮಮಾಡುವಾಗ ಧರಿಸಿದ ವಸ್ತ್ರವನ್ನು ತೆಗೆದು ಹಾಕಿ ಬಿಳಿಯ ಬಟ್ಟೆಯನ್ನು ಧರಿಸಿ ಶಯ್ಯಾದಾನ ಮಾಡಬೇಕು, ದಂಪತಿಗಳನ್ನು ಅಲ್ಲಿ ಶಯ್ಯೆಯ ಮೇಲೆ ಕೂಡ್ರಿಸಿ, ಲಕ್ಷ್ಮೀನಾರಾಯಣರ ಬೆಳ್ಳಿ, (ಚಿನ್ನದ) ಪ್ರತಿಮೆ ಇಟ್ಟು ಪೂಜೆಮಾಡಿ ದಾನ ಕೊಡಬೇಕು.

ಅಷ್ಟಮಹಾದಾನಗಳನ್ನು ಕೊಡತಕ್ಕ ವಿವರಗಳು ಇಂತಿವೆ- ತಿಲ, ಕಬ್ಬಿಣ, ಹಿರಣ್ಯ, ಹತ್ತಿ, ಉಪ್ಪು, ಸಪ್ತಧಾನ್ಯ, ಭೂದಾನ, ಗೋದಾನ.

''ವಿತ್ತಶಾಠ್ಯಂನಕುರ್ವೀತ'' ಉಕ್ತಿಯಂತೆ ಕರ್ತೃವು ತನ್ನಯೋಗ್ಯತೆಗೆ ಅನುಗುಣವಾಗಿ ವಂಚನೆ ಇಲ್ಲದೇ ದಾನ ಕೊಡಬೇಕು.

ಛತ್ರಿ, ಪಾದರಕ್ಷೆ, ಮುದ್ರಿಕೆ, ಉದಕುಂಭ, ಆಸನ, ಪಂಚಪಾತ್ರ, ದಂಡ, ರಜತ, ತಾಮ್ರದ ಪಾತ್ರೆ, ಅಕ್ಕಿ, ಹಣ, ಯಜ್ಞೋಪವೀತ, ಭೋಜನ (ಭೋಜನ ಸಾಮಗ್ರಿ) ಹೀಗೆ **ಕನಿಷ್ಠ 13 ದಾನಗಳನ್ನಾದರೂ** ಕೊಡಬೇಕು. (ಇದಕ್ಕೆ **'ಪದದಾನ'** ವೆಂದು ಹೆಸರು)

ಸಪಿಂಡೀಕರಣದ ನಂತರ ಒಂದು ವರ್ಷದವರೆಗೆ ಪ್ರತಿ ತಿಂಗಳು, ಪಿಂಡದ ಜೊತೆಯಲ್ಲಿ ಜಲಕುಂಭವನ್ನು ದಾನ ಕೊಡಬೇಕು.

(ಮೇಲೆ ಹೇಳಿದ ಸಾಮಗ್ರಿಗಳನ್ನು ದಾನ ಕೊಡುವುದಲ್ಲದೇ, ದೀಪ, ತಾಂಬೂಲ, ಚಂದನ, ಶ್ರೀಗಂಧ, ಚಿನ್ನ, ಉದ್ದು, ಹೆಸರು, ಹುರುಳಿ, ತೊಗರಿ, ಕಡಲೆ, ಶಾಮಕ್ಕಿ, ಅವರೆ, ಪುಸ್ತಕ, ಜಪಮಾಲೆ, ಬೀಸಣಿಕೆ, ಕನ್ನಡಿ, ಹಾಲು, ಮೊಸರು, ಜೇನು, ಸಕ್ಕರೆ, ಗೋಪೀಚಂದನ, ಉತ್ತತ್ತಿ, ದ್ರಾಕ್ಷಿ, ಬಾದಾಮಿ, ಕಲ್ಲುಸಕ್ಕರೆ, ಖರ್ಜೂರ, ಫಲಗಳು, ಅನುಕೂಲವಿದ್ದವರು ಆನೆ, ಕುದುರೆ, ರಥಗಳನ್ನು ದಾನ ಮಾಡಬಹುದು.)

ಕಬ್ಬಿನ ತುಂಡುಗಳನ್ನು ಡೋಣಿಯಾಕೃತಿಯಲ್ಲಿ ನೂಲಿನಿಂದ ಕಟ್ಟಿ, ಕೆಂಪು ವಸ್ತ್ರದ ತುಂಡು, ಹತ್ತಿ, ಕಂಚಿನ ಬಟ್ಟಲಿನಲ್ಲಿ ತುಪ್ಪದ ದೀಪವನ್ನಿಟ್ಟು ಅಲಂಕರಿಸಿ ಮಂತ್ರಪೂರ್ವಕವಾಗಿ ದಾನಕೂಡಬೇಕು. ಇದಕ್ಕೆ '**ವೈತರಣಿದಾನ**' ಎನ್ನುತ್ತಾರೆ.

ಪ್ರಥಮ ವರ್ಷದಲ್ಲಿ ಒಟ್ಟು 16 ಮಾಸಿಕ ಶ್ರಾದ್ಧಗಳನ್ನು ಮಾಡಬೇಕು. (1) ಆದ್ಯ (2) ಊನಮಾಸಿಕ (3) ದ್ವಿತೀಯ (4) ತ್ರೈಪಾಕ್ಷಿಕ (5) ತೃತೀಯ (6) ಚತುರ್ಥ (7) ಪಂಚಮ (8) ಷಷ್ಠ (9) ಊನಷಾಣ್ಮಾಸಿಕ (10) ಸಪ್ತಮ (11) ಅಷ್ಟಮ (12) ನವಮ (13) ದಶಮ (14) ಏಕಾದಶ (15) ದ್ವಾದಶ (16) ಊನಾಬ್ದಿಕ. ಈ ಕ್ರಮದಲ್ಲಿ ಮಾಡಬೇಕು.

ಅಂದರೆ,

13ನೇ ದಿನದಿಂದ 18ನೆ ದಿನಗಳ ಒಳಗೆ **ಆದ್ಯಮಾಸಿಕ,**

27ನೇ ದಿನದಿಂದ 29 ದಿನಗಳಲ್ಲೊಂದು ದಿನ **ಊನಮಾಸಿಕ,**

2ನೇ ತಿಂಗಳಲ್ಲಿ 41 ದಿನದಿಂದ 45ನೆ ದಿನಗಳಲ್ಲೊಂದು ದಿನ **ತ್ರೈಪಾಕ್ಷಿಕ,**

171ನೇ ದಿನದಿಂದ 180 ದಿನಗಳಲ್ಲೊಂದು ದಿನ ಊನ **ಷಾಣ್ಮಾಸಿಕ,**

341 ನೇ ದಿನದಿಂದ 355 ದಿನಗಳಲ್ಲೊಂದು ದಿನ ಒಂದು **ಊನಾಬ್ದಿಕ.**

ಪ್ರತಿ ತಿಂಗಳಲ್ಲಿ ಮೃತತಿಥಿಯಲ್ಲಿ ಮಾಸಿಕ ಶ್ರಾದ್ಧ ಮಾಡಬೇಕಾದುದು ಅವಶ್ಯ.

ಸಪಿಂಡೀಕರಣವನ್ನು ಹನ್ನೆರಡನೆಯ ದಿನ ಮಾಡಿದರೂ, ಮೃತನಿಗೆ ಪ್ರೇತ ಲೋಕವನ್ನು ದಾಟಲಿಕ್ಕೆ ಒಂದು ವರ್ಷ ಕಾಲ ಬೇಕಾಗುವುದರಿಂದ ಈ ಕಾಲವನ್ನು ದಾಟಿದ ನಂತರವೇ ಮೃತನು ಪ್ರೇತದೇಹವನ್ನು ಬಿಟ್ಟು ಭೋಗ ದೇಹವನ್ನು ಹೊಂದಿ ಪಿತೃಲೋಕವನ್ನು ಸೇರುತ್ತಾನೆ.

ಏಕಾದಶೀ ತಿಥಿಯಲ್ಲಿ ಮರಣವಾದರೆ ಅಬ್ದಪೂರ್ತಿ ಮಾಸಿಕವನ್ನು ದಶಮಿ ದಿನ ಮಾಡಬೇಕು.

ಏಕಾದಶಿ ತಿಥಿ ದಿನ ಮರಣಕಾಲಕ್ಕೆ ದ್ವಾದಶಿ ತಿಥಿ ಬಂದಿದ್ದರೆ, ದ್ವಾದಶಿ ದಿನವೇ ಅಬ್ದಪೂರ್ತಿ ಹಾಗೂ ಪ್ರಥಮಾಬ್ದಿಕ ಶ್ರಾದ್ಧಮಾಡಬೇಕು.

ಏಕಾದಶೀ ಉಪವಾಸದ ದಿನ ಮೃತನಾದರೆ ಕೇವಲ ದಹನ ಮಾತ್ರ ಮಾಡಬೇಕು. ಮರುದಿನ ಅಸ್ಥಿಗಳಿಗೆ ಮಂತ್ರಾಗ್ನಿಕೊಟ್ಟು ನಿಯಮದಂತೆ ಕ್ರಿಯಾ ಕೆಲಸಗಳನ್ನು ಮಾಡಬೇಕು.

ಒಂಭತ್ತನೆಯ ದಿನದೊಳಗೆ ಏಕಾದಶಿ ಬಂದರೆ ಆ ದಿನದ ಕ್ರಿಯೆಯನ್ನು ದ್ವಾದಶಿ ಮಾಡಬೇಕು. ಹತ್ತನೆಯ ದಿನ ಏಕಾದಶಿ ಬಂದರೆ ಹತ್ತನೆಯ ದಿನದ ಕೆಲಸವನ್ನು ಮುಂಚಿನ ಒಂಭತ್ತನೆಯ ದಿನ ಮಾಡಬೇಕು. ಆ ದಿನ (10ನೆಯ ದಿನ) ಕೇವಲ ಸ್ನಾನ ಮಾತ್ರ ಮಾಡತಕ್ಕದ್ದು.

ಹನ್ನೊಂದನೆಯ ದಿನ ಏಕಾದಶಿಯು ಬಂದರೆ ಆ ದಿನದ ಎಲ್ಲ ಕಾರ್ಯಗಳನ್ನು ದ್ವಾದಶಿ ದಿನ ಮಾಡತಕ್ಕದ್ದು.

ಹನ್ನೆರಡನೆಯ ದಿನ ಏಕಾದಶಿ ಬಂದರೆ ಸಪಿಂಡೀಕರಣದ ಕಾರ್ಯವನ್ನು ದ್ವಾದಶಿ ದಿನ ಮಾಡಬೇಕು. ಅಥವಾ ಹನ್ನೊಂದನೆಯ ದಿನ (ದಶಮಿ) ದಂದು ಸೇರಿಸಿ ಮಾಡಬಹುದು.

ಸಪಿಂಡೀಕರಣ ಶ್ರಾದ್ಧವು ಮುಗಿದನಂತರ ಪಾಥೇಯ ಶ್ರಾದ್ಧವನ್ನು ಅನ್ನದಿಂದ, ಪಕ್ವ ಫಲದಿಂದ ಅಥವಾ ಹಿಟ್ಟಿನ ಪಿಂಡಗಳಿಂದ ಮಾಡಬೇಕು. ಮೃತನು ಪ್ರೇತಲೋಕದಿಂದ ಪಿತೃಲೋಕಕ್ಕೆ ಹೋಗುವಾಗ ಬೇಕಾದ ಸಾಧನೆಯ ಅನುಕೂಲತೆಗಾಗಿ, ಸುಖರೂಪವಾಗಿ ಹೋಗಲು ಪಾಥೇಯ ಶ್ರಾದ್ಧವನ್ನು ಮಾಡಲೇಬೇಕು. ಇದು ಮೃತನನ್ನು ಸಪಿಂಡೀಕರಣ ಮಾಡಿ ಪಿತೃಗಳಲ್ಲಿ ಸೇರಿಸಿ ಆನಂತರ ಮಾಡುವ ಕೆಲಸವಾದ್ದರಿಂದ ವಸು, ರುದ್ರ, ಆದಿತ್ಯ ರೂಪಗಳನ್ನು ಉಚ್ಚರಿಸಿ ಮೂರು ಪಿಂಡ ಪ್ರದಾನ ಮಾಡಿಯೇ ಮಾಡಬೇಕು. ಈ ಶ್ರಾದ್ಧದ ಕುರಿತಂತೆ ಶ್ರಾದ್ಧಾಂಗವಾಗಿ ಮೂರು ಜನ ಬ್ರಾಹ್ಮಣರನ್ನು ಪೂಜಿಸಿ ಉದಕ ಕುಂಭ, ವಸ್ತ್ರ ಫಲತಾಂಬೂಲ ದಕ್ಷಿಣೆಕೊಟ್ಟು ಆಶೀರ್ವಾದ ಪಡೆದು ಅವರನ್ನು ಬೀಳ್ಕೊಡಬೇಕು.

ನೀರಿನಲ್ಲಿ ಹಾಕಿದ ಎಣ್ಣೆಯು ಹೇಗೆ ವಿಸ್ತಾರವಾಗಿ ಪಸರಿಸುವದೋ ಅದೇ

ರೀತಿಯಲ್ಲಿ ಸತ್ಪಾತ್ರರಿಗೆ ಕೊಟ್ಟ ದಾನದ ಫಲವು ಅನಂತ ಗುಣವಾಗಿ ಲಭಿಸುತ್ತದೆ. ಹಾಗಾಗಿ ಮೃತರಾದ ಹಿರಿಯರಿಗೋಸ್ಕರ ಮತ್ತು ಜೀವಂತನಾಗಿರುವಾಗ ತನ್ನ ಉದ್ದೇಶವಾಗಿ ಸಹ ದಾನಗಳನ್ನು ಸತ್ಪಾತ್ರರಲ್ಲಿ ಕೊಡುತ್ತಾನೋ ಅವನು ಮುಂದಿನ ಮಾರ್ಗದಲ್ಲಿ ಸುಖಿಯಾಗಿ ಉತ್ತಮಲೋಕಗಳನ್ನು ಕುರಿತು ಹೋಗುತ್ತಾನೆ.

ಮನುಷ್ಯನು ಹುಟ್ಟಿದಾರಭ್ಯ ಅವಸಾನ ಪರ್ಯಂತ ಮಾಡಿದ ಸಮಸ್ತ ಪಾಪ ನಿವೃತ್ತಿಗಾಗಿ, ಸುಖದಿಂದ ಪ್ರಾಣೋತ್ಕ್ರಮಣದ ಕುರಿತು, ಯಮದ್ವಾರದಲ್ಲಿರುವ ವೈತರಣಿ ನದಿಯನ್ನು ಸುಖದಿಂದ ದಾಟುವುದಕ್ಕೋಸ್ಕರ, ಹಿಂದಿನ ಜನ್ಮ ಜನ್ಮಾಂತರಗಳಲ್ಲಿ ಮಾಡಿದ ಪಾತಕಗಳ ನಿವೃತ್ತಿ ಹಾಗೂ ಮೋಕ್ಷದಾಯಕ ಶ್ರೀ ವಿಷ್ಣುವಿನ ಪ್ರೀತ್ಯರ್ಥವಾಗಿ, ಈ ಪ್ರಕಾರ ಐದು ಗೋದಾನಗಳನ್ನು ಮಾಡಬೇಕು ಎಂದು ಯಾಜ್ಞವಲ್ಕ್ಯಾದಿ ಸ್ಮೃತಿಗಳಲ್ಲಿ ತಿಳಿಸಲಾಗಿದೆ.

ಇನ್ನು 13ನೆಯ ದಿನದಲ್ಲಿ ಕೇಶವಾದಿ 12 ನಾಮಗಳಿಂದ, ಮತ್ತು 13ನೆಯದಾಗಿ ಶ್ರೀಮಹಾವಿಷ್ಣುವಿನ ನಾಮದಿಂದ ಅವರ ಪ್ರೀತ್ಯರ್ಥವಾಗಿ 13 ಜನ ಬ್ರಾಹ್ಮಣರ ಭೋಜನ ಮಾಡಿಸಿ ಇಷ್ಟ ಮಿತ್ರ ಬಂಧು, ಬಾಂಧವರನ್ನು ಕೂಡಿ ಅನ್ನ ಸಂತರ್ಪಣೆ ಮಾಡಬೇಕು. ಇದನ್ನು 14ನೆಯ ದಿನ ವೈಕುಂಠ ಸಮಾರಾಧನೆಯಂದು ಮಾಡುವ ಪದ್ಧತಿಯು ಕೆಲವು ಕಡೆ ಉಂಟು. ಅವರವರ ಸಂಪ್ರದಾಯಗಳನ್ನು ತಿಳಿದು ಆಚರಿಸುವದು ಉತ್ತಮ.

ಹಿಂದೆ ಅಧಿಕ ಮಾಸದಲ್ಲಿ ಮೃತರಾದವರ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅದೇ ಮಾಸವು ಪುನಃ ಅಧಿಕ ಮಾಸವಾಗಿ ಬಂದಾಗ ಆ ಅಧಿಕಮಾಸದಲ್ಲಿಯೇ ಮಾಡಬೇಕು. ಹಿಂದೆ ಶುದ್ಧಮಾಸದಲ್ಲಿ ಮೃತಿ ಹೊಂದಿದವರಿಗೆ ಅದೇ ಮಾಸವೇ ಅಧಿಕಮಾಸವಾಗಿ ಬಂದಾಗ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅಧಿಕ ಮಾಸದಲ್ಲಿ ಸಂಕಲ್ಪ ಮಾತ್ರ ಮಾಡಿ ಮುಗಿಸಿ ಶುದ್ಧ ಮಾಸದಲ್ಲಿ ಪಿಂಡ ಪ್ರದಾನ ಸಹಿತವಾಗಿ ಮಾಡಬೇಕು. ಆದರೆ ಪ್ರಥಮಾಬ್ದಿಕವನ್ನು ಮಾತ್ರ ಅಧಿಕಮಾಸದಲ್ಲಿಯೇ ಮಾಡಬೇಕು.

ಮರಣ ಹೊಂದಿದವರ ಹನ್ನೊಂದು ದಿನಗಳ ಕರ್ಮ ಮತ್ತು ಸಪಿಂಡೀಕರಣಗಳು ಅಧಿಕ ಮಾಸದಲ್ಲಿ ಬಂದರೆ ಅವುಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು. ಎರಡನೆಯ ತಿಂಗಳಿಗೆ ಮಾಸಿಕದಿಂದ ಹನ್ನೆರಡನೆಯ ತಿಂಗಳಿನ ಮಾಸಿಕದವರೆಗೆ ಮಧ್ಯದಲ್ಲಿ ಅಧಿಕಮಾಸ ಬಂದರೆ ಆ ತಿಂಗಳಿನ ಮಾಸಿಕವನ್ನು ಅಧಿಕ ಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಮಾಡಬೇಕು.

ಹನ್ನೆರಡನೆಯ ತಿಂಗಳು ಅಧಿಕಮಾಸವಾಗಿ ಬಂದರೆ ಆ ತಿಂಗಳಿನ ಮಾಸಿಕವನ್ನು ಹನ್ನೆರಡನೆಯ ತಿಂಗಳಾದ ಅಧಿಕ ಮಾಸದಲ್ಲಿಯೂ, ಹದಿಮೂರನೆಯ ತಿಂಗಳಾದ ಶುದ್ಧ ಮಾಸದಲ್ಲಿಯೂ ಮಾಡಿ ಹದಿನಾಲ್ಕನೆಯ ತಿಂಗಳಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು.

ಪ್ರತಿವರ್ಷವೂ ಮೃತನ ಹನ್ನೆರಡನೆಯ ತಿಂಗಳಿನಲ್ಲಿ ಮೃತನಾದ ವ್ಯಕ್ತಿಯನ್ನುದ್ದೇಶಿಸಿ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು. ಆದರೆ ಅಧಿಕ ಮಾಸವು ಬಂದಾಗ ಹನ್ನೆರಡರ ಬದಲಾಗಿ ಹದಿಮೂರನೆಯ ತಿಂಗಳಿನಲ್ಲಿ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕಾಗುತ್ತದೆ.

ಬೇರೆ ಮಾಸದಲ್ಲಿ ಮೃತನಾದ ವ್ಯಕ್ತಿಯ ಪ್ರಥಮ ಸಾಂವತ್ಸರಿಕ ಶ್ರಾದ್ಧವು ಅಧಿಕ ಮಾಸದಲ್ಲಿ ಬಂದರೆ ಅಧಿಕ ಮಾಸದಲ್ಲಿಯೇ ಪ್ರಥಮ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು. ಏಕೆಂದರೆ ಶ್ರಾದ್ಧಕ್ಕೆ ಯಾವ ಮಾಸ, ಯಾವ ಪಕ್ಷ ಯಾವ ತಿಥಿಯಿರುವಾಗ ಮೃತನಾಗಿರುವನೋ, ಪ್ರತಿವರ್ಷದಲ್ಲಿಯೂ ಅದೇ ಮಾಸ, ಅದೇ ಪಕ್ಷ, ಅದೇ ತಿಥಿಯಲ್ಲಿ ಮೃತಾಹ ಶ್ರಾದ್ಧವನ್ನು ಮಾಡಬೇಕೆಂಬ ವಿಧಿಯಿದೆ.

ಸಕೇಶಿ ಮೃತಳಾದರೆ ನಿಯಮದ ಪ್ರಕಾರ ಮೊದಲು ಶವವನ್ನು ಸ್ನಾನ ಮಾಡಿಸಿ ಉತ್ತರಾಧಿಕಾರಿಯು ವಿಧವಾ ಧರ್ಮನಿಯಮ ವಿಚ್ಛೇದನ ದೋಷ ಪರಿಹಾರದ ಬಗ್ಗೆ ಕಳೆದ ವರ್ಷಕ್ಕೊಂದರಂತೆ ಸೂತಕ ನಿವೃತ್ತಿಯ ನಂತರ ಹಿರಣ್ಯದಾನ, ಗೋದಾನ, ಕೃಛ್ರ ಪವಮಾನದಿಂದ ತಿಲಹವನಾದಿ ಪ್ರಾಯಶ್ಚಿತ್ತಗಳನ್ನು ಮಾಡುವೆನೆಂದು ಸಂಕಲ್ಪ ಮಾಡಿ ವಪನ ಪ್ರತ್ಯಾಮ್ನಾಯವಾಗಿ ಮೃತ್ತಿಕಾ, ವಿಭೂತಿ, ಪಂಚಗವ್ಯ, ಗೋಮಯ ಹಾಕಿದ ನೀರನ್ನು 108 ಸಲ ಸಾರಣಿಗೆಯಲ್ಲಿ ಹಾಕಿ ಸ್ನಾನ ಮಾಡಿಸಿ ವಸ್ತ್ರಾದಿಗಳಿಂದ ಅಲಂಕರಿಸಿ ನಿಯಮ ಪ್ರಕಾರ ದಹನಾದಿ ಕಾರ್ಯಗಳನ್ನು ಮಾಡಬೇಕು.

ಅಶೌಚದಲ್ಲಿ ನಿತ್ಯಕರ್ಮ -

ಅಶೌಚವಿರುವಾಗ ಸಂಧ್ಯಾವಂದನವೆಂಬ ನಿತ್ಯಕಾರ್ಯವನ್ನು ಬಿಡಬಾರದು. ಆದರೆ ಮಂತ್ರಗಳ ಉಚ್ಚಾರಣೆಯಿಲ್ಲದೆ, ಮನಸ್ಸಿನಲ್ಲಿಯೂ ಪಠಿಸದೇ ಪ್ರಾಣಾಯಾಮ ಮಾಡಬೇಕು. ಮಾರ್ಜನ ಮಂತ್ರಗಳನ್ನು ಮನಸ್ಸಿನಲ್ಲಿಯೇ ಉಚ್ಚರಿಸಿ ಮಾರ್ಜನ ಮಾಡಿಕೊಳ್ಳಬೇಕು. ಗಾಯತ್ರೀ ಉಚ್ಚರಿಸಿ ಸೂರ್ಯನಾರಾಯಣನಿಗೆ ಅರ್ಘ್ಯ ಕೊಡಬೇಕು. ಅಂದರೆ ಅರ್ಘ್ಯಾಂತ ಸಂಧ್ಯಾ ಮಾಡಬೇಕು. (ಸೂರ್ಯೋಪಸ್ಥಾನ, ಜಪ, ಗೋತ್ರಾಭಿವಾದನ ಮಾಡಕೂಡದು)

ಅಶೌಚವಿರುವಾಗ ಹೋಮ ಮಾಡಬಾರದು, ದಾನ ಕೊಡಬಾರದು ತೆಗೆದುಕೊಳ್ಳಬಾರದು. ವೇದಾಭ್ಯಾಸ ಮಾಡಬಾರದು, ಮಾಡಿಸಬಾರದು, ಪಾರಾಯಣ, ಪಿತೃ ಶ್ರಾದ್ಧ, ತರ್ಪಣಾದಿಗಳನ್ನು ಮಾಡಬಾರದು. ವಿವಾಹ, ಉಪನಯನ ಇತ್ಯಾದಿ ಶುಭಕರ್ಮಗಳನ್ನು ಮಾಡಬಾರದು. ಪರಾನ್ನ ಭೋಜನವನ್ನು ವರ್ಜಿಸಬೇಕು.

ಮೃತಾಹದಿನ ತಿಳಿಯದಿದ್ದರೆ ಕರ್ತೃವು ತನ್ನ ಪಿತೃಗಳ ಸಾಂವತ್ಸರಿಕ ಶ್ರಾದ್ಧವನ್ನು ಅಮಾವಾಸ್ಯೆಯ ದಿನ ಮಾಡಬೇಕು. ಯಾವ ಮಾಸವೆಂಬುದು ಕೂಡ ಗೊತ್ತಿಲ್ಲವಾದರೆ ಭಾದ್ರಪದ ಅಮಾವಾಸ್ಯೆಯ ದಿನ ಮಾಡಬೇಕು.

ಅಮಾವಾಸ್ಯೆಯ ದಿನ ಶ್ರಾದ್ಧ ಮಾಡಲು ಆಗದಿದ್ದರೆ ಕೃಷ್ಣಪಕ್ಷದ ದ್ವಾದಶಿದಿನ ಮಾಡಬೇಕೆಂದು ತಾತ್ಪರ್ಯವು.

ಸೂತಕಾದೌ ಯಥಾ ಶ್ರಾದ್ಧಂ ಸೂತಕಾಂತೇ ವಿಧೀಯತೇ।
ತದ್ವತ್ ಏಕಾದಶೀಶ್ರಾದ್ಧಂ ದ್ವಾದಶ್ಯಾಮೇವ ಕಾರಯೇತ್॥

ಎಂಬಂತೆ ಏಕಾದಶೀ ಶ್ರಾದ್ಧವನ್ನು ದ್ವಾದಶೀ ದಿನವೇ ಮಾಡಬೇಕು. ದ್ವಾದಶೀ ಮಾಡಿದರೆ ಮೃತಾಹ ಅತಿಕ್ರಮಣ ದೋಷವು ಬರುವುದಿಲ್ಲ.

★★★

ಶ್ರೀಮದ್‌ಭಾಗವತ, ರಾಮಾಯಣ, ಹರಿವಂಶಗಳಲ್ಲಿ ಶ್ರಾದ್ಧದ ಉಲ್ಲೇಖ

ಶ್ರೀಮದ್ ಭಾಗವತದ ಸಪ್ತಮಸ್ಕಂಧ ಹಾಗೂ ದಶಮ ಸ್ಕಂಧಗಳಲ್ಲಿ ಶ್ರಾದ್ಧದ ಕುರಿತಾದ ವಿವರಣೆ ಬಂದಿದೆ. ಇದರ ಕುರಿತಂತೆ ಇಲ್ಲಿ ವಿವೇಚನೆ ಮಾಡಲಾಗಿದೆ.

ಧನವಿರುವ ಗೃಹಸ್ಥನು ತನ್ನ ಯೋಗ್ಯತೆಗೆ ಅನುಗುಣವಾಗಿ (ವಿತ್ತಶಾಠ್ಯಮಾಡದೆ) ತೀರಿ ಹೋದ ತಂದೆ ತಾಯಿಗಳ ಮತ್ತು ಅವರ ಬಂಧುಗಳ ಉದ್ದೇಶದಿಂದ ಶ್ರಾದ್ಧವನ್ನು ಮಾಡಬೇಕಾದುದು ಅವಶ್ಯವಾಗಿದೆ.

ಭಾದ್ರಪದ ಕೃಷ್ಣಪಕ್ಷ (ಸೂರ್ಯನು ಆಗ ಕನ್ಯಾರಾಶಿಯಲ್ಲಿ ಇರುತ್ತಾನೆ. ''ಕಾರಣ

"ಕನ್ಯಾಮಾಸ" ವೆಂದೂ ಹೆಸರು) ದಲ್ಲಿ ಎಲ್ಲ ಪಿತೃಗಳ ಅಂತರ್ಯಾಮಿಯಾದ ಶ್ರೀಹರಿಯ ಪ್ರೀತ್ಯರ್ಥವಾಗಿ ಶ್ರಾದ್ಧಕರ್ಮವನ್ನು ಮಾಡಬೇಕು.[46]

ಉತ್ತರಾಯಣ, ದಕ್ಷಿಣಾಯನ, ಮೇಷ ತುಲಾ ಸಂಕ್ರಮಣಗಳಲ್ಲಿ ವ್ಯತೀಪಾತ, ಅಪರಾಹ್ಣ, ಚಂದ್ರ ಸೂರ್ಯ ಗ್ರಹಣಗಳಲ್ಲಿ, ಅಮಾವಾಸ್ಯೆಯಲ್ಲಿ ಪಾರಣಯೋಗ್ಯ ದ್ವಾದಶೀ ತಿಥಿಗಳಲ್ಲಿ, ಅಷ್ಟಮೀ, ನವಮೀ, ತ್ರಯೋದಶೀ ತಿಥಿಗಳಲ್ಲಿ ಪಿತ್ರಂತರ್ಯಾಮಿ ಶ್ರೀಹರಿಯನ್ನು ಉದ್ದೇಶಿಸಿ ಶ್ರಾದ್ಧ ಮಾಡಬೇಕು.[47]

ಅಕ್ಷಯತೃತೀಯಾ, ಕಾರ್ತಿಕ ನವಮೀ, ನಾಲ್ಕು ಅಷ್ಟಕಗಳು, ಮತ್ತು ಹೇಮಂತ, ಶಿಶಿರ ಋತುಗಳಲ್ಲಿ ಶ್ರಾದ್ಧ ಕರ್ಮವನ್ನು ಮಾಡಬೇಕು.[48] **"ಹೇಮಂತೇ ಶಿಶಿರೇ ಚೈವ ನಿತ್ಯಶ್ರಾದ್ಧೇ ಗುಣೋತ್ತರಮ್"** ವಚನದಂತೆ ಈ ಎರಡೂ ಋತುಗಳು ವಿಶಿಷ್ಟಕಾಲ. ಅಂದರೆ ಮಾರ್ಗಶಿರ ಕೃಷ್ಣಪಕ್ಷ ಹಾಗೆಯೇ ಪುಷ್ಯ, ಮಾಘ, ಫಾಲ್ಗುಣ ಕೃಷ್ಣಪಕ್ಷಗಳು ಎಂದರ್ಥ (ಇವುಗಳಲ್ಲಿ ಬರುವ ಅಷ್ಟಕಗಳು ಪ್ರಶಸ್ತ).

ಮಾಘಶುದ್ಧ ಸಪ್ತಮೀ, ಮಾಘ ಹುಣ್ಣಿಮೆ, ಚಿತ್ರಾ ನಕ್ಷತ್ರಯುಕ್ತ ಹುಣ್ಣಿಮೆಗಳು ಶ್ರಾದ್ಧಕ್ಕೆ ಶ್ರೇಷ್ಠಕಾಲಗಳು. ಅನುರಾಧಾಯುಕ್ತ ದ್ವಾದಶೀ, ಉಪವಾಸಾರ್ಹವಲ್ಲದ ಶ್ರವಣಯುಕ್ತ ದ್ವಾದಶೀ, ಶ್ರವಣ, ಉತ್ತರಾ, ಉತ್ತರಾಷಾಢ, ಉತ್ತರಾಭಾದ್ರಪದ, ಜನ್ಮ ನಕ್ಷತ್ರವಿರುವ ಮೃಗಶಿರ ಇವು ಶ್ರಾದ್ಧಕ್ಕೆ ಶ್ರೇಯಸ್ಕರ ಕಾಲಗಳು.[49] ಏಕಾದಶಿ ದಿನದಲ್ಲಿ ಮಾಡಿದ ಜಪದಾನಾದಿಗಳಂತೆ ಈ ಕಾಲದಲ್ಲಿ ಮಾಡಿದ ಶ್ರಾದ್ಧಗಳು ಸಫಲ.

ಈ ಕಾಲಗಳಲ್ಲಿ ಸ್ನಾನ, ಜಪ, ಹೋಮ, ವ್ರತ, ದೇವತಾರ್ಚನ, ಬ್ರಾಹ್ಮಣ ಸತ್ಕಾರ,

---

46. ಕುರ್ಯಾದಪರ ಪಕ್ಷೀಯಂ ಮಾಸಿ ಪ್ರೋಷ್ಠಪದೇ ದ್ವಿಜಃ ।
ಶ್ರಾದ್ಧಂ ಪಿತ್ರೋರ್ಯಥಾವಿತ್ತಂ ತದ್ಬಂಧೂನಾಂ ಚ ವಿತ್ತವಾನ್ ॥ *ಶ್ರೀಮದ್ಭಾಗವತ 7-15-20*

47. ಅಯನೇ ವಿಷುವೇ ಕುಹ್ವಾಂ ವ್ಯತೀಪಾತೇ ದಿನಕ್ಷಯೇ ।
ಚಂದ್ರಾದಿತ್ಯೋಪರಾಗೇ ಚ ದ್ವಾದಶ್ಯಾಂ ಶ್ರವಣೇಷು ಚ ॥ *7-15-21*

48. ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ ।
ಚತಸ್ರಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ ॥ *7-15-22*

49. ಮಾಘೇ ಚ ಸಿತಸಪ್ತಮ್ಯಾಂ ಮಘಾರಾಕಾಸಮಾಗಮೇ ।
ರಾಕಯಾ ವಾನುಮತ್ಯಾವಾ ಮಾಸ ರ್ಕ್ಷಾಣಿ ಯುತಾನ್ಯಪಿ ॥
ದ್ವಾದಶ್ಯಾಮನುರಾಧಾ ಸ್ಯಾಚ್ಛ್ರವಣಃ ತಿಸ್ರ ಉತ್ತರಾಃ ।
ತಿಸೃಷ್ವೇಕಾದಶೀ ಚಾಸು ಜನ್ಮರ್ಕ್ಷಂ ಸೌಮ್ಯಯೋಗಯುಕ್ ॥ 7-15-23,24

ಪಿತೃಯಜ್ಞ, ದಾನ ಇವೆಲ್ಲವೂ ಹರಿಸ್ಮರಣ ಪೂರ್ವಕ ಮಾಡಲ್ಪಟ್ಟಲ್ಲಿ ಅಕ್ಷಯ ಫಲದಾಯಕವಾಗುತ್ತದೆ.[50]

ಹೆಂಡತಿಯ, ಮಗುವಿನ, ತನ್ನ ಸಂಸ್ಕಾರ ಕಾಲದಲ್ಲಿ ಔರ್ಧ್ವದೇಹಿಕ ಕಾರ್ಯಗಳಲ್ಲಿ, ಮೃತತಿಥಿಗಳಲ್ಲಿ, ಶುಭಕಾರ್ಯಗಳಲ್ಲಿ ಹರಿಸ್ಮರಣೆ ಪೂರ್ವಕ ಕೊಟ್ಟದ್ದು ಅಕ್ಷಯಫಲ ತರುತ್ತದೆ.[51]

ಪೂರ್ವಕಾಲದಲ್ಲಿ ತಾರಣ ಎಂಬ ಕಡುಬಡವನಾದ ಬ್ರಾಹ್ಮಣನು ತನ್ನ ಕಷ್ಟಕಾಲದಲ್ಲಿ ತನ್ನ ತಂದೆಯ ಶ್ರಾದ್ಧವನ್ನು ಮಾಡುವಾಗ ಸಾಸಿವೆಯಿಂದ ಪಿಂಡವನ್ನು ಮಾಡಿ ಬಂದ ಬ್ರಾಹ್ಮಣರಿಗೆ ಭಕ್ತಿಯಿಂದ ಅದನ್ನೇ ಸಮರ್ಪಿಸಿದನು. ಇದರಿಂದ ಸಂತುಷ್ಟನಾದ ಭಗವಂತನು ಆತನಿಗೆ ಅಪಾರ ಸಿರಿವಂತಿಕೆಯನ್ನು ಕೊಟ್ಟನು. ಸಿರಿವಂತಿಕೆಯ ಮದದಿಂದ ಈ ತಾರಣನು ನಂತರ ತಂದೆಯ ಶ್ರಾದ್ಧ ಪ್ರಾಪ್ತವಾದಾಗ ಶ್ರಾದ್ಧ ಕಾಲದಲ್ಲಿ ಸಾಸಿವೆಯ ಪಿಂಡವನ್ನು ಮಾಡಿ ಬ್ರಾಹ್ಮಣರಿಗೆ ನೀಡಿ ಇದು ನಮ್ಮ ಮನೆತನದ ಪದ್ಧತಿ, ಸ್ವೀಕರಿಸಿರಿ ಎಂದಾಗ ಆ ಬ್ರಾಹ್ಮಣರು ಕ್ರುದ್ಧರಾಗಿ ಆತನಿಗೆ ಶಾಪ ಕೊಟ್ಟರು. ಈ ಪ್ರಸಂಗದಿಂದ ಯಾರು ಕೂಡ ಶ್ರಾದ್ಧಕಾಲದಲ್ಲಿ ವಿತ್ತಶಾಠ್ಯ ಮಾಡದೇ ತಮ್ಮ ಯೋಗ್ಯತಾನುಸಾರವಾಗಿ ಬಂದ ಬ್ರಾಹ್ಮಣರಿಗೆ ಭೋಜನ, ವಸ್ತ್ರಾದಿಗಳನ್ನಿತ್ತು ಸತ್ಕರಿಸಬೇಕು ಎಂಬ ಅಂಶವು ಸ್ಪಷ್ಟವಾಗುತ್ತದೆ.

ಹಿಂದೆ ಕೌಶಿಕ ಗೋತ್ರದ ಬ್ರಾಹ್ಮಣನೊಬ್ಬನು ''ನಾರಾಯಣಕವಚ''ವನ್ನು ಧರಿಸಿ ಯೋಗಧಾರಣೆಯಿಂದ ತನ್ನ ಶರೀರವನ್ನು ತ್ಯಜಿಸಿದನು. ಒಂದು ದಿನ ಗಂಧರ್ವ ರಾಜನಾದ ಚಿತ್ರರಥನು ತನ್ನ ಪತ್ನೀ ಪರಿವಾರದೊಂದಿಗೆ ವಿಮಾನದಲ್ಲಿ ಸಂಚರಿಸುತ್ತ ಈ ಬ್ರಾಹ್ಮಣನ ಶರೀರ ಬಿದ್ದ ಸ್ಥಳದ ಮೇಲುಗಡೆ ಬಂದಾಗ ಆತನು ತಲೆಕೆಳಗಾಗಿ ವಿಮಾನದಿಂದ ಭೂಮಿಗೆ ಬಿದ್ದುಬಿಟ್ಟನು. ನಂತರ ಅಲ್ಲಿಯೇ ಸಮೀಪದಲ್ಲಿದ್ದ ವಾಲಖಿಲ್ಯ ಮುನಿಗಳನ್ನು ಗಂಧರ್ವರಾಜನು ವಿಚಾರಿಸಲು ಅವರು ''ಇದು ನಾರಾಯಣಕವಚ ಧರಿಸಿದ ಪ್ರಭಾವ. ನೀನು ಆ ಬ್ರಾಹ್ಮಣನ ಮೂಳೆಗಳನ್ನು ಸರಸ್ವತೀ ನದಿಯಲ್ಲಿ ವಿಸರ್ಜನೆ ಮಾಡು'' ಎಂದರು.

---

50. ಏಷು ಸ್ನಾನಂ ಜಪೋ ಹೋಮೋ ವ್ರತಂ ದೇವದ್ವಿಜಾರ್ಚನಮ್।
ಪಿತೃದೇವ ನೃ ಭೂತೇಭ್ಯೋ ಯದ್ದತ್ತಂ ತದ್ಧ್ಯನಶ್ವರಮ್ ॥ 7-15-26

51. ಸಂಸ್ಕಾರಕಾಲೋ ಜಾಯಾಯಾ ಅಪತ್ಯಸ್ಯಾತ್ಮನಸ್ತಥಾ।
ಪ್ರೇತಸಂಸ್ಥಾ ಮೃತಾಹಶ್ಚ ಕರ್ಮಣ್ಯಭ್ಯುದಯೇ ನೃಪ ॥ 7-15-27

ಆ ಪ್ರಕಾರ ಗಂಧರ್ವರಾಜನು ಬ್ರಾಹ್ಮಣನ ಮೂಳೆಗಳನ್ನು ಸರಸ್ವತೀನದಿಯಲ್ಲಿ ವಿಸರ್ಜನೆ ಮಾಡಿ ಸ್ನಾನ ಮಾಡಿ ತನ್ನ ಲೋಕಕ್ಕೆ ಹೋದನಂತೆ. ಇದರಿಂದ ಬ್ರಾಹ್ಮಣನ ಶರೀರಕ್ಕೆ ಸಂಸ್ಕಾರಗಳು ಆಗಲೇಬೇಕು ಎಂಬುದು ವಿದಿತವಾಗುತ್ತದೆ.

ಶ್ರೀರಾಮಚಂದ್ರನು ಚಿತ್ರಕೂಟ ಪರ್ವತದಲ್ಲಿದ್ದಾಗ ಭರತನಿಂದ ದಶರಥ ಮಹಾರಾಜನ ಮರಣವಾರ್ತೆಯನ್ನು ಕೇಳಿದ ಕ್ಷಣದಲ್ಲಿಯೇ ಲಕ್ಷ್ಮಣನಿಂದೊಡಗೂಡಿ ತಿಲಾಂಜಲಿ, ದಾನಗಳಿಂದ ತಂದೆಯ ಔರ್ಧ್ವದೇಹಿಕ ಕ್ರಿಯೆಗಳನ್ನು ಶ್ರದ್ಧಾಭಕ್ತಿ ಪೂರ್ವಕವಾಗಿ ಮಾಡಿರುವ ವಿಚಾರವು ರಾಮಾಯಣದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ನಂತರ ದಶರಥರಾಜನ ಸಾಂವತ್ಸರಿಕ ಶ್ರಾದ್ಧ ಬಂತು- ಆಗ ಶ್ರೀರಾಮಚಂದ್ರನು ತಪಸ್ವಿಗಳಾದ ಮಹಾಮಹಾ ಋಷಿಗಳನ್ನು ದೇವಸ್ಥಾನ, ಪಿತೃಸ್ಥಾನಗಳಲ್ಲಿ ಕುಳ್ಳಿರಿಸಿ ಶ್ರಾದ್ಧ ಮಾಡಿದ. ಸ್ವತಃ ಸೀತಾದೇವಿ ತಾನೇ ಅಡಿಗೆ ಮಾಡಿ ಬಡಿಸುತ್ತಿದ್ದಳು. ಆಗ ಬ್ರಾಹ್ಮಣರನ್ನು ನೋಡಿ ನಾಚಿಕೆಯಿಂದ ಗಾಬರಿಯಾಗಿ ಒಳಗೆ ಹೋದಳು. ಶ್ರೀರಾಮಚಂದ್ರನು ಸೀತೆಯನ್ನು ಕುರಿತು ಹಾಗೇಕೆ ಒಳಗೆ ಅಡಗಿಕೊಂಡೆ? ಎಂದು ಪ್ರಶ್ನಿಸಲು ಸೀತಾದೇವಿ ಉತ್ತರಿಸುವಳು:-

ಪ್ರಭು! ನಿಮ್ಮ ತಂದೆ ಶ್ರೀದಶರಥ ಮಹಾರಾಜರನ್ನು ಈ ಬ್ರಾಹ್ಮಣರ ದೇಹದಲ್ಲಿ ಕಂಡೆ. ಅದರಿಂದ ನಾಚಿಕೆಯಾಗಿ ನಾನು ಒಳಗೆ ಹೋದೆ. ಏಕೆಂದರೆ ನಿಮ್ಮ ತಂದೆ ನನ್ನನ್ನು ಹಿಂದೆ ಸರ್ವಾಭರಣ ಭೂಷಿತಳನ್ನಾಗಿ ನೋಡಿದ್ದರು. ಈಗ ಬಳಲಿ ಬೆವರಿದ ನಾರು ಮಡಿಯುಟ್ಟ ನನ್ನನ್ನು ನೋಡಿ, ಅವರೇನು ಅಂದು ಕೊಳ್ಳಬಹುದು? ಅದಕ್ಕಾಗಿ ನಾನು ಒಳಗೆ ಹೋದೆ ಎಂದು ಉತ್ತರಿಸಿದಳು.[52]

ಶ್ರೀರಾಮದೇವರು ರಾವಣನನ್ನು ಸಂಹರಿಸಿದ ನಂತರ ಅವನ ತಮ್ಮನಾದ ವಿಭೀಷಣನಿಂದ ಶಾಸ್ತ್ರೋಕ್ತವಾದ ಸಂಸ್ಕಾರ, ಉತ್ತರಕ್ರಿಯೆಗಳನ್ನು ಮಾಡಿಸಿದ ಉಲ್ಲೇಖವು ಯುದ್ಧಕಾಂಡದಲ್ಲಿ ಬಂದಿದೆ.

---

52. ಪಿತಾ ತವ ಮಯಾದೃಷ್ಟಃ ಬ್ರಾಹ್ಮಣಾಂಗೇಷು ರಾಘವ।
ದೃಷ್ಟ್ವಾ ತ್ರಪಾನ್ವಿತಾ ಚಾಹಮಪಕ್ರಾಂತಾ ತವಾಂತಿಕಾತ್॥
ಯಾಹಂ ರಾಜ್ಞಾ ಪುರಾ ದೃಷ್ಟಾ ಸರ್ವಾಲಂಕಾರಭೂಷಿತಾ।
ಸಾ ಸ್ವೇದಮಲದಿಗ್ಧಾಂಗೀ ಕಥಂ ಪಶ್ಯಾಮಿ ಭೂಮಿಪಮ್॥ ಶ್ರೀಪದ್ಮ ಮಹಾ ಪುರಾಣ

ಶ್ರೀಹರಿವಂಶದಲ್ಲಿ ಒಂದು ಪ್ರಸಂಗ- ಒಂದು ದಿನ ಧರ್ಮರಾಜನು ಪಿತಾಮಹರಾದ ಭೀಷ್ಮರನ್ನು ಕುರಿತು ಶ್ರಾದ್ಧಕ್ರಿಯಾ ಸಂಸ್ಕಾರ ತಾರಕವಾಗುವ ಬಗೆ ಹೇಗೆ ಎಂದು ಪ್ರಶ್ನೆ ಮಾಡುವನು- ಆಗ ಭೀಷ್ಮರು ಉತ್ತರಿಸುವರು-

ಎಲೈ ರಾಜನೇ! ನಾನು ಹಿಂದೆ ಶ್ರಾದ್ಧ ಕ್ರಿಯೆಯನ್ನು ಮಾಡುತ್ತಿದ್ದಾಗ ನನ್ನ ತಂದೆಯ ತೃಪ್ತಿಗಾಗಿ ಪಿಂಡ ಪ್ರದಾನ ಮಾಡಲು ಕೈ ಎತ್ತಿದೆ. ಆಗ ಆ ಪ್ರದೇಶದ ಭೂಭಾಗವನ್ನು ಭೇದಿಸಿಕೊಂಡು ನನ್ನ ತಂದೆಯು ಆ ಪಿಂಡವನ್ನು ಸ್ವೀಕರಿಸಲು ಕೈ ಚಾಚಿದನು. ಆಗ ಅವನ ಆಕೃತಿಯು ವಿವಿಧ ಆಭರಣಗಳಿಂದ ಭೂಷಿತವಾಗಿತ್ತು. ಜೀವಂತನಾಗಿದ್ದಾಗ ನಾನು ನೋಡಿದ್ದಂತೆಯೇ ಅವನು ರೂಪ ಸಂಪದ್ಭರಿತನಾಗಿದ್ದನು. ಅಂದಿನವರೆಗೆ ಕಾಣದಿರುವ ಸನ್ನಿವೇಶವನ್ನು ಕಂಡು ಆಶ್ಚರ್ಯ ಭರಿತನಾಗಿ ಆಲೋಚನೆ ಗೊಳಗಾದೆನು. ಕೊನೆಗೆ ಏನೂ ತಿಳಿಯದಂತಾಗಲು ಆದದ್ದಾಗಲಿ ಎಂದೆಣಿಸಿ ವಿಧ್ಯುಕ್ತರೀತಿಯಿಂದ ದರ್ಭಾಸನದಲ್ಲಿಯೇ ಪಿಂಡಪ್ರದಾನ ಮಾಡಿದೆ. ಆಗ ನನ್ನ ತಂದೆಯು ಮಗನೇ ! ನಿನ್ನಿಂದಾಗಿ ನಾನು ಪುತ್ರವಂತನಾದೆನು, ನಿನ್ನಿಂದಾಗಿ ನನಗೆ ಇಹ ಪರಗಳೆರಡರಲ್ಲೂ ಸುಖಶಾಂತಿ ಲಭಿಸಿತು.

ನಿನ್ನಲ್ಲಿ ಅಂಕುರಿಸಿದ ಶ್ರಾದ್ಧ ವಿಚಾರ ಜಿಜ್ಞಾಸೆಯ ಪರಿಹಾರಕ್ಕಾಗಿ ನಾನೀಗ ನಿನಗೆ ಕಾಣಿಸಿಕೊಂಡೆನು. ಇದರಿಂದಾಗಿ ಜನತೆಗೆ ಶ್ರಾದ್ಧ ವಿಧಾನದಲ್ಲಿ ಆಸ್ಥೆ ಉಂಟಾಗುವುದು ನಿಶ್ಚಿತ. ನೀನು ಮಾಡುತ್ತಿರುವ ಶ್ರಾದ್ಧಕರ್ಮಾಚರಣೆಯು ಪ್ರಜೆಗಳಿಗೆ ದಾರಿದೀಪ ವಾಗುತ್ತದೆ. ಪಿತೃಪ್ರೀತಿಜನಕವಾದ ಈ ಶ್ರಾದ್ಧಕ್ರಿಯೆಯಿಂದ ನನಗೆ ಅಪ್ರತಿಮ ಸಂತೋಷ ವನ್ನುಂಟು ಮಾಡಿರುವಿ. ನಿನ್ನ ಈ ಕ್ರಿಯೆಯಿಂದ ಸಂತುಷ್ಟನಾದ ನಾನು ನಿನಗೆ ''ಇಚ್ಛಾಮರಣಿ'' ಯಾಗು ಎಂಬ ವರವನ್ನು ಕೊಟ್ಟಿರುವೆ. ನಿನ್ನ ಮನಸ್ಸಿನಲ್ಲಿ ಏನಿದೆಯೋ ಎಲ್ಲವನ್ನೂ ಕೇಳು. ನಿನ್ನ ಇಷ್ಟಾರ್ಥವನ್ನು ಪೂರೈಸುವೆ' ಎಂದನು.

ಆಗ ಭೀಷ್ಮರು ಪಿತೃದೇವತೆಗಳೆಂದರೆ ಯಾರು? ಅವರ ಸ್ಥಾನ ಯಾವುದು? ಎಷ್ಟುಗಣದವರಿದ್ದಾರೆ ಎಂದು ಕೇಳಲು ಎಲ್ಲವನ್ನೂ ವಿಸ್ತಾರವಾಗಿ ತಿಳಿಸಿ ತಂದೆಯು ಅಂತರ್ಧಾನ ಹೊಂದಿದನು.

★★★

ಪಿತೃಗಳು- ಪಿತೃಪೂಜೆ

ಪಿತೃಗಳು ಎಂಬ ಹೆಸರಿನ ಒಂದು ಗಣವಿರುತ್ತದೆ. ಅವರು ಬ್ರಹ್ಮದೇವರ ಮಕ್ಕಳು. ಅವರನ್ನು ದೇವತೆಗಳು, ಮನುಷ್ಯರು ಎಲ್ಲರೂ ಪೂಜಿಸುತ್ತಾರೆ. ಇವರನ್ನು ಕುರಿತು ಶ್ರಾದ್ಧ ಮಾಡಿದರೆ ಮೃತರಾದ ಜೀವರು ಎಲ್ಲಿದ್ದರೂ ಅವರಿಗೆ ತೃಪ್ತಿ ಉಂಟಾಗುವಂತೆ ಮಾಡುತ್ತಾರೆ. ಅದು ಹೇಗೆ ? ಎಂದರೆ ಮೃತರಾದವರ ನಾಮ ಗೋತ್ರಗಳನ್ನು ಹೇಳಿ ಪಿಂಡ ಪ್ರದಾನಮಾಡಿದರೆ ಪಿತೃಗಳು, ಆ ಮೃತರಾದ ಜೀವರು ಯಾವ ಯೋನಿಯಲ್ಲಿದ್ದರೂ ಅವರಿಗೆ ಯೋಗ್ಯವಾದ ಆಹಾರವನ್ನು ತಲುಪಿಸಿ ತೃಪ್ತಿಪಡಿಸುತ್ತಾರೆ. ಇದರಿಂದ ಶ್ರಾದ್ಧ ಮಾಡಿದವರಿಗೆ ಸಂಪತ್ತು ಇತ್ಯಾದಿಗಳು ಲಭ್ಯವಾಗುತ್ತವೆ.

ಶ್ರೀಹರಿವಂಶದಲ್ಲಿ ಪಿತೃಗಳ ಕಥೆ ಬಂದಿದೆ. ಪೂರ್ವದಲ್ಲಿ ಬ್ರಹ್ಮದೇವರು ದೇವತೆಗಳನ್ನು ಸೃಷ್ಟಿಮಾಡಿದರು. ದೇವತೆಗಳೆಲ್ಲರೂ ತನ್ನನ್ನು ಪೂಜಿಸುವರೆಂಬ ಭಾವನೆ ಅವರಿಗಿತ್ತು. ಅದರೆ ದೇವತೆಗಳು ಬ್ರಹ್ಮದೇವರನ್ನು ಪೂಜಿಸುವುದನ್ನು ಬಿಟ್ಟು ಇಂದ್ರಿಯ ಸುಖದಲ್ಲಿ ಆಸಕ್ತರಾಗಿ ಇದ್ದುಬಿಟ್ಟರು, ಬ್ರಹ್ಮದೇವರು ಅವರಿಗೆ ಶಾಪ ಕೊಟ್ಟರು. ಶಾಪದ ಫಲವಾಗಿ ದೇವತೆಗಳು ಜ್ಞಾನ ಹೀನರಾದರು. ದೇವತೆಗಳು ಜ್ಞಾನಹೀನರಾಗಲು ಅವರನ್ನು ಅನುಸರಿಸಿ ಇದ್ದವರೆಲ್ಲರೂ ಜ್ಞಾನಹೀನರಾಗಿಬಿಟ್ಟರು. ತರುವಾಯ ದೇವತೆಗಳು ಬ್ರಹ್ಮದೇವರನ್ನು ನಮಸ್ಕರಿಸಿ ಕ್ಷಮೆ ಬೇಡಿದರು. ಮತ್ತು ಜ್ಞಾನವನ್ನು ಅನುಗ್ರಹಿಸಲು ಬೇಡಿಕೊಂಡರು. ಆಗ ಬ್ರಹ್ಮದೇವರು ''ದೇವತೆಗಳಿರಾ! ನೀವು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ನಿಮ್ಮ ಮಕ್ಕಳ ಹತ್ತಿರ ಹೋಗಿ ಕೇಳಿರಿ. ಅವರು ಹೇಳಿದಂತೆ ಪ್ರಾಯಶ್ಚಿತ್ತ ಮಾಡಿಕೊಂಡು ಜ್ಞಾನವನ್ನು ಪಡೆಯಿರಿ'' ಎಂದು ಹೇಳಿದರು.

ದೇವತೆಗಳು ತಮ್ಮ ಮಕ್ಕಳ ಹತ್ತಿರ ಹೋದರು- ಆಗ ದೇವತೆಗಳ ಮಕ್ಕಳು ತಮ್ಮ ತಂದೆಗಳಾದ ದೇವತೆಗಳಿಗೆ ಪ್ರಾಯಶ್ಚಿತ್ತವನ್ನು ವಿಸ್ತಾರವಾಗಿ ಉಪದೇಶಿಸಿ ''ಮಕ್ಕಳೇ ಹೋಗಿಬನ್ನಿರಿ'' ಎಂದರು. ಇದನ್ನು ಕೇಳಿ ದೇವತೆಗಳಿಗೆ ಅವಮಾನವೆನಿಸಿತು. ಕೋಪ ಬಂದಿತು. ನಮಗೆ ಮಕ್ಕಳಾಗಿ ಹುಟ್ಟಿ ತಂದೆಗಳಾದ ನಮ್ಮನ್ನು ಮಕ್ಕಳೇ ಎಂದು ಸಂಬೋಧನೆ ಮಾಡಿದಿರಲ್ಲ. ಇದು ಸರಿಯಲ್ಲ ಎಂದುಕೊಂಡು ಮನಸ್ಸಿನಲ್ಲಿ ನೊಂದವರಾಗಿ ಬ್ರಹ್ಮದೇವರ ಹತ್ತಿರ ಬಂದು ನಡೆದ ವೃತ್ತಾಂತವನ್ನು ತಿಳಿಸಿದರು. ಆಗ ಬ್ರಹ್ಮದೇವರು ''ದೇವತೆಗಳೇ! ಜ್ಞಾನವನ್ನು ಯಾರು ಉಪದೇಶಿಸುವರೋ ಅವರು ತಂದೆ ಎನಿಸುತ್ತಾರೆ. ನಿಮ್ಮ ಮಕ್ಕಳು ಪ್ರಾಯಶ್ಚಿತ್ತವನ್ನು ಉಪದೇಶಿಸಿ ನಿಮಗೆ ಜ್ಞಾನವನ್ನು ನೀಡಿದ್ದಾರೆ. ಆದ್ದರಿಂದ ಅವರು ನಿಮಗೆ ತಂದೆಗಳಾಗುತ್ತಾರೆ.''

ಜನಿತಾ ಚೋಪನೇತಾ ಚ ಯಸ್ತು ವಿದ್ಯಾಂ ಪ್ರಯಚ್ಛತಿ ।
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥

ಈ ಕಾರಣದಿಂದ ಅವರು ನಿಮ್ಮನ್ನು ''ಮಕ್ಕಳೇ'' ಎಂದು ಸಂಬೋಧಿಸಿರುವುದು ಸರಿಯೇ. ನಿಮ್ಮ ಮಕ್ಕಳೂ ನಿಮಗೆ ಉಪದೇಶಿಸಿ ವಿದ್ಯೆ ನೀಡಿದ ಕಾರಣ ಅವರು ''ಪಿತೃಗಳು'' ಎಂದು ಕರೆಯಲ್ಪಡುವರು.

ದೇವತೆಗಳು ಬ್ರಹ್ಮದೇವರ ಮಾತನ್ನು ಕೇಳಿ ಅವರಿಗೆ ನಮಸ್ಕರಿಸಿ ತಮ್ಮ ಮಕ್ಕಳ ಹತ್ತಿರ ಬಂದು ನಡೆದ ವಿಷಯವನ್ನು ತಿಳಿಸಿ ಅವರಿಗೆ ''ನೀವು ಇನ್ನು ಮುಂದೆ 'ಪಿತೃಗಳು' ಎಂದು ಪ್ರಸಿದ್ಧರಾಗಿರಿ'' ಎಂದು ಹೇಳಿ ಹೊರಟು ಹೋದರು.

ಈ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧಮಾಡುವುದರಿಂದ ಮಾನವರು ಉತ್ತಮ ಫಲಗಳನ್ನು ಹೊಂದುತ್ತಾರೆ.

★★★

ಪಿತೃಗಣಗಳು-ಪರಿಚಯ

ಪಿತೃಗಳು ಏಳುಗಣದವರು ಇರುತ್ತಾರೆ. ವೈರಾಜ ಅಗ್ನಿಷ್ವಾತ್ತ, ಬರ್ಹಿಷದ ಹೆಸರುಳ್ಳ ಮೂರುಗಣದ ಪಿತೃಗಳು ಸೂಕ್ಷ್ಮದೇಹವುಳ್ಳವರು. ಸುಕಾಲ, ಅಂಗಿರಸ, ಸುಸ್ವಧಾ, ಮತ್ತು ಸೋಮಪಾ ಹೆಸರುಳ್ಳ ನಾಲ್ಕುಗಣದ ಪಿತೃಗಳು ದೊಡ್ಡ ದೇಹವುಳ್ಳವರು.

''ವೈರಾಜ'' ಹೆಸರಿನಿಂದ ಪಿತೃಗಳು ಮೊದಲಗಣದವರು. ಇವರು ವಿರಾಜ ಎಂಬ ಪ್ರಜಾಪತಿಯ ಮಾನಸಪುತ್ರರು. ಇವರಿಗೆ ''ಮೇನಾ'' ಎಂಬ ಮಾನಸಕನ್ಯೆ ಹುಟ್ಟಿದಳು. ಇವಳು ಹಿಮವಂತನಿಗೆ ಪತ್ನಿಯಾದಳು. ಇವಳ ಮಗನೇ ಮೈನಾಕ. ಮೇನೆಯಲ್ಲಿ ಹಿಮವಂತನಿಂದ ಅಪರ್ಣಾ, ಏಕಪರ್ಣಾ, ಮತ್ತು ಏಕಪಾಟಲಾ ಎಂಬ ಮೂರು ಕನ್ಯೆಯರು ಜನಿಸಿದರು. ಈ ಮೂರು ಕನ್ಯೆಯರು ದೇವದಾನವರಿಂದ ಅಸಾಧ್ಯವಾದ ಕಠಿಣ ತಪಸ್ಸನ್ನು ಆಚರಿಸುತ್ತಿದ್ದರು. ಏಕಪರ್ಣೆಯು ಒಂದೇ ಒಂದು ಎಲೆಯನ್ನು ತಿಂದು ತಪಸ್ಸು ಮಾಡುತ್ತಿದ್ದಳು, ಏಕಪಾಟಲೆಯು ಒಂದೇ ಒಂದು ಪುಷ್ಪವನ್ನು ತಿಂದು ತಪಸ್ಸು ಮಾಡುತ್ತಿದ್ದಳು. ಅಪರ್ಣೆಯು ಉಪವಾಸದಿಂದ ತಪಸ್ಸು ಮಾಡುತ್ತಿದ್ದಳು. ಇವಳನ್ನು ನೋಡಿ ತಾಯಿಯು ಅತಿದುಃಖದಿಂದ ಉಮಾ ಎಂದು ತಡೆದಳು. ಉ= ಎಲೆ ಮಗಳೇ, ಮಾ= ತಪಸ್ಸು ಮಾಡಬೇಡ. ಈ ರೀತಿಯಾಗಿ ಅವಳನ್ನು ಸಂಬೋಧಿಸಿದ ಕರೆದ ಪ್ರಯುಕ್ತ

ಇವಳಿಗೆ ''ಉಮಾ'' ಎಂದು ಹೆಸರಾಯಿತು. ಈ ಮೂವರು ಪುತ್ರಿಯರಲ್ಲಿ ಉಮಾ ಶ್ರೇಷ್ಠಳು. ಇವಳು ರುದ್ರದೇವರಿಗೆ ಪತ್ನಿಯಾದಳು. ಏಕಪರ್ಣೆಯು ದೇವಲರ ಪತ್ನಿಯಾದಳು, ಏಕಪಾಟಲೆಯು ಜೈಗೀಷವ್ಯರ ಪತ್ನಿಯಾದಳು.

''ಅಗ್ನಿಷ್ವಾತ್ತ'' ಹೆಸರಿನ ಪಿತೃಗಳು ಎರಡನೆಯ ಗಣದವರು. ಇವರು ಸೋಮಪದ ಎಂಬ ಲೋಕದಲ್ಲಿರುವರು. ಮರೀಚಿ ಋಷಿಗಳ ಮಕ್ಕಳು. ಇವರನ್ನು ದೇವತೆಗಳೂ ಪೂಜಿಸುತ್ತಾರೆ. ಇವರಿಗೆ ಅಚ್ಛೋದಾ ಎಂಬ ಮಗಳು ಹುಟ್ಟಿದಳು. ಇವಳು ನದೀದೇವತೆಯು ಇವಳಿಂದ ಅಚ್ಛೋದಾ ಎಂಬ ಸರೋವರವು ನಿರ್ಮಾಣವಾಯಿತು. ಹುಟ್ಟಿದಾರಭ್ಯ ಇವಳು ತಂದೆಯನ್ನು ತಿಳಿದಿರಲಿಲ್ಲ. ಒಂದು ದಿನ ಆಕಾಶದಲ್ಲಿ ವಿಮಾನವೊಂದನ್ನು ನೋಡಿದಳು, ಆ ವಿಮಾನದಲ್ಲಿ ಅದ್ರಿಕಾ ಎಂಬ ಅಪ್ಸರಾಸ್ತ್ರೀಯು ಕುಳಿತಿದ್ದಳು. ಆವಳ ಜೊತೆ ಉಪರಿಚರ ಎಂಬ ವಸುರಾಜ ಕುಳಿತಿದ್ದನು. ಹೀಗೆ ವಿಮಾನದಲ್ಲಿ ಕುಳಿತು ಹೋಗುತ್ತಿದ್ದ ವಸುರಾಜನನ್ನು ನೋಡಿ ''ಇವನೇ ನನ್ನ ತಂದೆ'' ಎಂದು ತಿಳಿದಳು. ಇನ್ನೊಬ್ಬ ಪುರುಷನನ್ನು ತಪ್ಪಾಗಿ ತನ್ನ ತಂದೆಯೆಂದು ತಿಳಿದ ಪ್ರಯುಕ್ತ ಯೋಗ ಭ್ರಷ್ಟಳಾಗಿ ಮೇಲಿನ ಲೋಕದಿಂದ ಕೆಳಗೆ ಬಿದ್ದಳು. ಹೀಗೆ ಅವಳು ಕೆಳಗೆ ಬೀಳುತ್ತಿರುವಾಗ ಅತಿಸೂಕ್ಷ್ಮವಾದ ಮೂರು ವಿಮಾನಗಳನ್ನು ನೋಡಿದಳು. ಆ ವಿಮಾನಗಳಲ್ಲಿ ಕುಳಿತಿರುವ ತನ್ನ ಪಿತೃಗಳನ್ನು ನೋಡಿ ಕೂಡಲೇ ಕೈಯೆತ್ತಿ ಸ್ವಾಮಿ! ನನ್ನನ್ನು ರಕ್ಷಿಸಿರಿ! ರಕ್ಷಿಸಿರಿ! ಎಂದು ಬೇಡಿಕೊಂಡಳು. ಅವರು ಮಗಳೇ ಹೆದರಬೇಡ, ಎಂದು ಸಂತೈಸಿದರು. ಅವಳು ಆಕಾಶದಲ್ಲೇ ನಿಂತಳು. ನಂತರ ಇವರೇ ತನ್ನ ಪಿತೃಗಳೆಂದು ಖಾತ್ರಿಯಾಯಿತು. ಆ ಪಿತೃಗಳು ಮಗಳೇ! ನೀನು ಅಜ್ಞಾನ ಮೂಲಕವಾಗಿ ಒಬ್ಬ ಸಾಮಾನ್ಯ ಮನುಷ್ಯನನ್ನು ತಂದೆಯೆಂದು ಭಾವಿಸಿದ ಪ್ರಯುಕ್ತ ನೀನು ಯೋಗಭ್ರಷ್ಟಳಾಗಿ ಬೀಳುತ್ತಿರುವಿ. ಹೆದರಬೇಡ! ''ನೀನು ಯಾರನ್ನು ತಂದೆಯೆಂದು ಭಾವಿಸಿದೆಯೋ ಆ ವಸುರಾಜನಿಗೆ ಮಗಳಾಗಿ ಹುಟ್ಟುವಿ. ಈ ಅದ್ರಿಕೆಯು ಮೀನಾಗಿ ಹುಟ್ಟಲಿದ್ದಾಳೆ. ಮೀನಿನ ಹೊಟ್ಟೆಯಿಂದ ನೀನು ಹುಟ್ಟಿ ಬರುವಿ. ನಂತರ ಭೂಮಿಯಲ್ಲಿ ಪರಾಶರರನ್ನು ಹೊಂದಿ ಸಾಕ್ಷಾತ್ ಭಗವಂತನನ್ನು 'ವೇದವ್ಯಾಸ' ರೂಪದಿಂದ ಮಗನನ್ನಾಗಿ ಪಡೆಯುವಿ ಮತ್ತು ಶಂತನುರಾಜನನ್ನು ವಿವಾಹ ಮಾಡಿಕೊಂಡು ಚಿತ್ರಾಂಗದ, ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳನ್ನು ಪಡೆಯುವಿ. ನಂತರ ನೀನು ಉತ್ತಮಲೋಕಗಳನ್ನು ಹೊಂದುವಿ'' ಎಂದು ಹೇಳಿ ಸಂತೈಸಿದರು. ಅದೇ ರೀತಿಯಾಗಿ ಅಚ್ಛೋದೆಯು ಸತ್ಯವತಿಯಾಗಿ ಹುಟ್ಟಿ ಪರಾಶರರಿಂದ 'ವೇದವ್ಯಾಸ ರನ್ನು ಮಗನಾಗಿ ಪಡೆದು, ನಂತರ ಶಂತನು ಮಹಾರಾಜರನ್ನು ಮದುವೆಯಾಗಿ ಇಬ್ಬರು ಮಕ್ಕಳನ್ನು ಪಡೆದವಳಾಗಿ ಉತ್ತಮ ಲೋಕವನ್ನು ಹೊಂದಿದಳು.

''**ಬರ್ಹಿಷದ**'' ಹೆಸರಿನ ಪಿತೃಗಳು ಮೂರನೆಯ ಗಣದವರು. ಇವರು ವೈಭ್ರಾಜ ಎಂಬ ಲೋಕದಲ್ಲಿರುವವರು. ಇವರನ್ನು ದೇವತೆಗಳು, ಯಕ್ಷ, ಗಂಧರ್ವ ಮೊದಲಾದ ವರೆಲ್ಲರೂ ಪೂಜಿಸುತ್ತಾರೆ. ಇವರು ''ಪುಲಸ್ತ್ಯ'' ಎಂಬ ಪ್ರಜೇಶ್ವರರ ಮಕ್ಕಳು. ಇವರಿಗೆ ಪೀವರಿ ಎಂಬ ಒಬ್ಬ ಮಾನಸಪುತ್ರಿ ಇದ್ದಳು. ಇವಳು ದ್ವಾಪರಯುಗದಲ್ಲಿ ಜನ್ಮ ತಾಳಿ ಶ್ರೀವೇದವ್ಯಾಸರ ಮಕ್ಕಳಾದ ಶುಕಾಚಾರ್ಯರಿಗೆ ಪತ್ನಿಯಾದಳು. ಮಹಾತಪಸ್ವಿಗಳಾದ ಶುಕಾಚಾರ್ಯರು ಇವಳಲ್ಲಿ ಕೃಷ್ಣ, ಗೌರ, ಪ್ರಭು, ಶಂಭು ಎಂಬ ನಾಲ್ಕು ಗಂಡು ಮಕ್ಕಳನ್ನು, ಕೃತ್ವೀ ಎಂಬ ಹೆಣ್ಣುಮಗಳನ್ನು ಪಡೆದು, ತಂದೆಯಾದ ಶ್ರೀವೇದವ್ಯಾಸರಿಂದ ತತ್ವೋಪದೇಶವನ್ನು ಕೇಳಿ ಉತ್ತಮ ಗತಿಯನ್ನು ಹೊಂದಿದರು. ಕೃತ್ವಿಯು ಅಣುಹ ಎಂಬ ರಾಜನನ್ನು ಮದುವೆಯಾಗಿ ಬ್ರಹ್ಮದತ್ತನೆಂಬ ಪುತ್ರನನ್ನು ಪಡೆದಳು.

''**ಸುಕಾಲ**'' ಹೆಸರಿನ ಪಿತೃಗಳು ನಾಲ್ಕನೆಯ ಗಣದವರು. ಇವರು ವಸಿಷ್ಠ ಪ್ರಜಾಪತಿಯ ಮಕ್ಕಳು. ಸ್ವರ್ಗದಲ್ಲಿ ಪ್ರಕಾಶಮಾನವಾದ ಲೋಕದಲ್ಲಿ ಇರುವರು. ಇವರನ್ನು ಬ್ರಾಹ್ಮಣರು ಪೂಜಿಸುವರು. ಇವರಿಗೆ ಗೌಃ ಎಂಬ ಪ್ರಸಿದ್ಧಳಾದ ಹೆಣ್ಣುಮಗಳಿದ್ದಳು ಇವಳು ಮಾನಸಪುತ್ರಿಯಾಗಿದ್ದಳು .ಇವಳು ಭೂಮಿಯಲ್ಲಿ'' ಏಕಶೃಂಗಾ'' ಎಂಬ ಹೆಸರಿನಿಂದ ಹುಟ್ಟಿ ಬಂದಳು. ಶುಕನೆಂಬ ರಾಜನಿಗೆ ಭಾರ್ಯೆ ಯಾದಳು.

''**ಅಂಗಿರಸ**'' ಹೆಸರಿನ ಪಿತೃಗಳು ಐದನೆಯ ಗಣದವರು. ಕ್ಷತ್ರಿಯರು ಇವರನ್ನು ಪೂಜಿಸಿ ಆರಾಧಿಸುತ್ತಾರೆ. ''ಯಶೋದಾ'' ಎಂಬವಳು ಇವರ ಮಾನಸ ಪುತ್ರಿಯು. ಇವಳು ವಿಶ್ವಮಹಾನ್ ಎಂಬುವನ ಪತ್ನಿಯಾಗಿದ್ದಳು, ವೃದ್ಧಶರ್ಮನ ಸೊಸೆಯು. ದಿಲೀಪರಾಜನ ತಾಯಿಯು . ದಿಲೀಪರಾಜನು ಲೋಕದಲ್ಲಿ ಅತಿ ಪ್ರಸಿದ್ಧಿ ಪಡೆದ ರಾಜನಾಗಿದ್ದನು.

''**ಸುಸ್ವಧಾ**'' ಹೆಸರಿನ ಪಿತೃಗಳು ಆರನೆಯ ಗಣದವರು .ಇವರು ಕರ್ದಮ ಪ್ರಜಾಪತಿಯ ಪಿತೃಗಳಾಗಿದ್ದಾರೆ .ಇವರು ಪುಲಹ ಮಹರ್ಷಿಗಳಿಂದ ಹುಟ್ಟಿದವರು. ಇವರನ್ನು ವೈಶ್ಯರು ಪೂಜಿಸುತ್ತಾರೆ. ವಿರಜಾ ಎಂಬುವಳು ಇವರ ಮಾನಸ ಪುತ್ರಿಯು, ಇವಳು ನಹುಷರಾಜನ ಭಾರ್ಯೆ. ಇವಳ ಮಗನೇ ಯಯಾತಿರಾಜನು.

''**ಸೋಮಪಾ**'' ಹೆಸರಿನ ಪಿತೃಗಳು ಏಳನೆಯ ಗಣದವರು. ಇವರು ಕವಿಯ ಮಗಳಾದ ''ಸ್ವಧಾ'' ದೇವಿಯಲ್ಲಿ ಅಗ್ನಿದೇವರಿಂದ ಹುಟ್ಟಿದ ಮಕ್ಕಳು. ಇವರನ್ನು ಶೂದ್ರರು ಪೂಜಿಸುತ್ತಾರೆ. ಇವರು ''ಮಾನಸ'' ಎಂಬ ಲೋಕದಲ್ಲಿರುವರು. ಇವರ

ಮಾನಸ ಪುತ್ರಿಯು ನರ್ಮದೆ. ಇವಳು ನದೀಶ್ರೇಷ್ಠಳು. ಪುರುಕುತ್ಸರಾಜನ ಹೆಂಡತಿಯು, ತ್ರಸದಸ್ಯುವಿನ ತಾಯಿಯು.

ಮನುಪ್ರಜಾಪತಿಯು ಪ್ರತಿಯುಗದ ಆರಂಭದಲ್ಲಿ ಅಗ್ನಿಷ್ವಾತ್ತಾದಿ ಪಿತೃಗಳನ್ನು ಪೂಜ್ಯರೆಂದು ಭಾವಿಸಿ ಲುಪ್ತವಾದ ಶ್ರಾದ್ಧಧರ್ಮಗಳನ್ನು ಉದ್ಧಾರ ಮಾಡುವ ಸಲುವಾಗಿ ಶ್ರಾದ್ಧಗಳನ್ನು ಪ್ರಚುರಗೊಳಿಸುತ್ತಾನೆ.

ಯಮನು ಈ ಏಳು ಬಗೆಯ ಪಿತೃಗಣಗಳಿಗಿಂತ ಮೊದಲು ಹುಟ್ಟಿದವನು ಮತ್ತು ಈ ಧರ್ಮ ಪ್ರವರ್ತಕನು. ಆದುದರಿಂದ ಯಮನನ್ನು ''ಶ್ರಾದ್ಧದೇವ'' ನೆಂದು ಕರೆಯುತ್ತಾರೆ.

ಈ ಎಲ್ಲಾ ಪಿತೃಗಳ ಪ್ರೀತ್ಯರ್ಥವಾಗಿ ಬೆಳ್ಳಿಯ ಪಾತ್ರೆ ಅಥವಾ ಬೆಳ್ಳಿ ಮಿಶ್ರಿತವಾದ ಪಾತ್ರೆಯಲ್ಲಿ ''ಸ್ವಧಾಪಿತೃಭ್ಯಃ'' ಎಂದು ಹೇಳಿ ಮಾಡಲ್ಪಡುವ ಶ್ರಾದ್ಧವು ಪಿತೃಗಳಿಗೆ ತೃಪ್ತಿ, ಪ್ರಸನ್ನತೆಯನ್ನು ಉಂಟುಮಾಡುತ್ತದೆ.

ಸರ್ವೇಷಾಂ ರಾಜತಂ ಪಾತ್ರಮಥವಾ ರಜತಾನ್ವಿತಮ್।
ದತ್ತಂ ಸ್ವಧಾಂ ಪುರೋಧಾಯ ಶ್ರಾದ್ಧಂ ಪ್ರೀಣಾತಿ ವೈ ಪಿತೄನ್ ॥

ಹರಿವಂಶ 18. ಅ. 72 ಶ್ಲೋಕ

★★★

ಮಂಗಳ ಶ್ರಾದ್ಧ (ನಾಂದೀ ಶ್ರಾದ್ಧ)

ಯಾವುದೇ ಶುಭಕಾರ್ಯ ಮಾಡುವ ಸಮಯದಲ್ಲಿ (ಸಂದರ್ಭದಲ್ಲಿ) ಮಾತೃಕಾ ದೇವತೆಗಳನ್ನು ಪೂಜಿಸುವುದರ ಜೊತೆಗೆ ವಿಶ್ವೇದೇವತೆಗಳನ್ನು, ಮಾತಾ, ಪಿತೃಗಳ ಮತ್ತು ಮಾತಾಮಹ, ಮಾತಾಮಹಿ ಇತ್ಯಾದಿ ದ್ವಾದಶಪಿತೃಗಳನ್ನು (ಸ್ವರ್ಗಸ್ಥರಾಗದಿದ್ದವರನ್ನು ಬಿಟ್ಟು) ಕುರಿತು ನಾಮಗೋತ್ರಾದಿಗಳನ್ನು ಉಚ್ಚರಿಸದೇ ಅರ್ಘ್ಯ, ಆಸನ, ಗಂಧಾದಿ ಉಪಚಾರಗಳನ್ನು ಸಲ್ಲಿಸಬೇಕು. ಮಂಗಳಕಾರ್ಯಗಳಲ್ಲಿ ಪಿತೃಗಳನ್ನು ಕುರಿತಂತೆ ಮಾಡುವ ಈ ಕಾರ್ಯಕ್ಕೆ ನಾಂದೀ ಶ್ರಾದ್ಧ ಅಥವಾ ನಾಂದೀ ಸಮಾರಾಧನವೆಂದು ಕರೆಯುತ್ತಾರೆ. ಇದಕ್ಕೆ ವೃದ್ಧಿಶ್ರಾದ್ಧವೆಂದೂ ಹೆಸರುಂಟು. ಈ ನಾಂದೀ ಶ್ರಾದ್ಧದಲ್ಲಿ ಸತ್ಯವಸುಗಳು ವಿಶ್ವೇದೇವತೆಗಳಾಗಿದ್ದಾರೆ.

ಈ ವೃದ್ಧಿ ಶ್ರಾದ್ಧದಿಂದ ನಾಂದೀಮುಖ ಎಂಬ ಹೆಸರಿನ ಪಿತೃಗಳು ಪ್ರಸನ್ನರಾಗುತ್ತಾರೆ. ಆದುದರಿಂದ ಎಲ್ಲ ವಿಧವಾದ ಮಂಗಲಕಾರ್ಯಗಳಲ್ಲಿ ಇದನ್ನು ಮಾಡಬೇಕು, ಮಕ್ಕಳ ಮದುವೆ, ಗೃಹ ಪ್ರವೇಶ, ಬಾಲಕರ ಚೌಲ, ಉಪನಯನ, ಸೀಮಂತ ಮುಂತಾದ ಸಂಸ್ಕಾರಗಳಲ್ಲಿಯೂ, ಪಿತೃಗಳ ಬಳಗವನ್ನು ಉದ್ದೇಶಿಸಿ ಗೃಹಸ್ಥಾಶ್ರಮಿಯು ಭಕ್ತಿಯಿಂದ ಈ ನಾಂದೀಶ್ರಾದ್ಧವನ್ನು ಮಾಡತಕ್ಕದ್ದು.

ಗೃಹಸ್ಥನು ಯಜ್ಞ, ಯಾಗ, ಶಾಂತಿ, ಮಂಗಲ ಕಾರ್ಯಗಳಲ್ಲಿ ವೃದ್ಧಿಶ್ರಾದ್ಧ (ನಾಂದೀ ಶ್ರಾದ್ಧ) ವನ್ನು ಆಚರಿಸದಿದ್ದರೆ ಆ ಕರ್ಮವು ಸತ್ಕರ್ಮವೆಂದೆನಿಸದೇ ತಾಮಸ ಕರ್ಮವೆನಿಸುತ್ತದೆ. ವೃದ್ಧಿಶ್ರಾದ್ಧದಿಂದ ತೃಪ್ತರಾದ ಪಿತೃದೇವತೆಗಳ ಅನುಗ್ರಹದಿಂದ ಮಂಗಲ ಕಾರ್ಯಗಳಿಗೆ ಕೌಟುಂಬಿಕವಾಗಿ ಉಂಟಾಗುವ ಪ್ರತಿಬಂಧಕದೋಷವು ಬಾಧಕವಾಗುವುದಿಲ್ಲ.[53]

ನಾಂದೀಶ್ರಾದ್ಧವಾದ ಮೇಲೆ ಅಶೌಚ ಪ್ರತಿಬಂಧಕವಾಗದಿರುವ ಅವಧಿಯು ಯಜ್ಞಯಾಗಾದಿಗಳಿಗೆ 21 ದಿನಗಳೆಂದೂ, ವಿವಾಹಕ್ಕೆ 10 ದಿನಗಳೆಂದೂ, ಉಪನಯನಕ್ಕೆ 6 ದಿನಗಳೆಂದೂ, ಚೂಡಾಕರ್ಮಕ್ಕೆ 3 ದಿನಗಳೆಂದೂ ಇತರ ಶಾಂತಿ ಹಾಗೂ ಸಂಸ್ಕಾರಗಳಲ್ಲಿ ಕರ್ಮಪ್ರಾರಂಭದಿಂದ ಸಮಾಪ್ತಿ ತನಕವೆಂದೂ ತಿಳಿಯಬೇಕು, ಆದರೆ ಯಜ್ಞಾದಿಗಳಲ್ಲಿ ಮೇಲೆ ತಿಳಿಸಿದ ಅವಧಿಯೊಳಗೆ ಕರ್ಮ ಸಮಾಪ್ತಿಯಾದರೆ ಬಳಿಕ ಅಶೌಚಾದಿಗಳು ದೋಷವೆನಿಸುತ್ತವೆ.[54]

★★★

ಶ್ರಾದ್ಧಕರ್ಮದಲ್ಲಿ ಉಪಯುಕ್ತ ಸಲಹೆ ಸೂಚನೆಗಳು

1. ಶ್ರಾದ್ಧ ದಿನದಂದು ರಂಗವಲ್ಲಿ ಹಾಕಿ ಮನೆ ಸಿಂಗರಿಸಬಾರದು. ಎಡಗೈಯಲ್ಲಿ ಹಿಡಿದ ದರ್ಭೆ, ಮನೆಯಲ್ಲಿ ಹಾಕಿದ ರಂಗವಲ್ಲಿ, ಹಣೆಯಲ್ಲಿ ಧರಿಸಿದ ಅಕ್ಷತೆ (ಶ್ರಾದ್ಧ

---

53. ವೃದ್ಧೌ ನ ತರ್ಪಿತಾ ಯೇನ ಪ್ರೀತ್ಯರ್ಥೇ ಗೃಹಮೇಧಿನಃ ।
ತದ್ದಾನ ಫಲಂ ಸರ್ವಮಾಸುರೋವಿಧಿರೇವ ಚ ॥ ಪ್ರಚೇತಸರ ವಚನ

54. ಏಕವಿಂಶತ್ಯಹರ್ಯಜ್ಞೇ ವಿವಾಹೇ ದಶವಾಸರಾಃ ।
ತ್ರಿಷಟ್ಸು ಚೌಲೋಪನಯನೇ ನಾಂದಿಶ್ರಾದ್ಧಂ ವಿಧೀಯತೇ ॥ ನಿರ್ಣಯ ಸಿಂಧು

ಮುಗಿಯುವ ವರೆಗೆ) ಇವುಗಳನ್ನು ನೋಡಿ ಶ್ರಾದ್ಧಕ್ಕಾಗಿ ಬಂದ ಪಿತೃಗಳು ನಿರಾಶರಾಗಿ ಹಿಂದಿರುಗಿ ಹೋಗುತ್ತಾರೆ.[55]

2. ಯಾವ ಮನುಷ್ಯನು ಊರ್ಧ್ವಪುಂಡ್ರಗಳನ್ನು ಧಾರಣ ಮಾಡಿ (ಮುದ್ರಾದಿಗಳನ್ನು ಕೂಡ ಧರಿಸಿ) ಶ್ರಾದ್ಧಕರ್ಮವನ್ನು ಮಾಡುವನೋ ಅವನು ಸಾವಿರ ಕೋಟಿಕಲ್ಪಗಳಲ್ಲಿ ಗಯಾಶ್ರಾದ್ಧ ಮಾಡಿದ ಫಲವನ್ನು ಹೊಂದುತ್ತಾನೆ.[56]

3. ಯಾವ ಮನುಷ್ಯನು ಊರ್ಧ್ವಪುಂಡ್ರ, ಮುದ್ರೆಗಳನ್ನು ಧರಿಸಿದ ಬ್ರಾಹ್ಮಣನನ್ನು ಶ್ರಾದ್ಧಕರ್ಮದಲ್ಲಿ ಆಹ್ವಾನ ಮಾಡಿ ಊಟ ಮಾಡಿಸುವನೋ , ಅವನ ಪಿತೃಗಳು ಕೋಟಿಕಲ್ಪಗಳವರೆಗೆ ಪ್ರಸನ್ನರಾಗುತ್ತಾರೆ.[57]

4. ಶ್ರಾದ್ಧಕರ್ತನು ಆಚಮನವನ್ನು ಪೂರ್ವದಿಕ್ಕಿಗೆ ಕುಳಿತು ಮಾಡಿ, ಶ್ರಾದ್ಧ ಸಂಕಲ್ಪ, ಶ್ರಾದ್ಧಕರ್ಮವನ್ನು ದಕ್ಷಿಣ ದಿಕ್ಕಿಗೆ ಕುಳಿತು ಮಾಡಬೇಕು.

5. ಶ್ರಾದ್ಧಾನಂತರದಲ್ಲಿ ಪಿಂಡಗಳನ್ನು ಜಲದಲ್ಲಾಗಲೀ, ಅಗ್ನಿಯಲ್ಲಾಗಲೀ ಹಾಕಬೇಕು. ಆಕಳಿಗೆ ಇಡುವುದರಿಂದ (ತಿನ್ನಿಸುವುದರಿಂದ) ಪಿತೃಗಳಿಗೆ ಉತ್ತಮ ಗತಿಯಾಗುತ್ತದೆ.[58]

6. ಶ್ರಾದ್ಧಕರ್ಮ ಪೂರ್ತಿಗಾಗಿ, ಗೋವಿಂದ, ಪುಂಡರೀಕಾಕ್ಷ, ಗದಾಧರ ರೂಪಗಳನ್ನು, ಹಾಗೂ ಕಾಶಿ, ಗಯಾ, ಗಂಗಾದಿ ತೀರ್ಥಗಳನ್ನು ಭಕ್ತಿಯಿಂದ ಸ್ಮರಿಸಬೇಕು.[59]

7. ಶ್ರಾದ್ಧಕರ್ಮ ಮಾಡುವ ಯಜಮಾನನು ಶ್ರಾದ್ಧ ದಿನದಂದು ಹಲ್ಲುತಿಕ್ಕಕೂಡದು. ತಾಂಬೂಲ ತಿನ್ನಕೂಡದು, ತೈಲಾಭ್ಯಂಗ ಮಾಡಕೂಡದು . ಸಾಯಂಕಾಲ ಭೋಜನ ಮಾಡಕೂಡದು. ಸ್ತ್ರೀಸಂಗ ಮಾಡಕೂಡದು, ಔಷಧ ಸೇವನೆ ಮಾಡಕೂಡದು, ಪರಾನ್ನ ಸ್ವೀಕರಿಸಕೂಡದು, ಈ ನಿಯಮಗಳನ್ನುಪಾಲಿಸಲೇಬೇಕು.

---

55. ವಾಮಹಸ್ತೇ ಚ ದರ್ಭಾಂಸ್ತು ಗೃಹೇ ರಂಗವಲೀಂ ತಥಾ।
ಲಲಾಟೇ ತಿಲಕಂ ದೃಷ್ಟ್ವಾ ನಿರಾಶಾಃ ಪಿತರೋ ಗತಾಃ॥ ಪುರಾಣವಚನ

56. ಊರ್ಧ್ವ ಪುಂಡ್ರಧರೋ ಯಸ್ತು ಕುರ್ಯಾತ್ ಶ್ರಾದ್ಧಂ ಶುಭಾನನೇ।
ಕಲ್ಪಕೋಟಿ ಸಹಸ್ರಾಣಿ ಗಯಾ ಶ್ರಾದ್ಧಫಲಂ ಲಭೇತ್ ॥ ಪದ್ಮಮಹಾಪುರಾಣ

57. ಊರ್ಧ್ವಪುಂಡ್ರಧರಂ ವಿಪ್ರಂ ಯಃ ಶ್ರಾದ್ಧೇ ಭೋಜಯಿಷ್ಯತಿ।
ಆ ಕಲ್ಪಕೋಟಿ ಪಿತರಸ್ತಸ್ಯ ಹೃಷ್ಟಾ ನ ಸಂಶಯಃ ॥ ಪದ್ಮಮಹಾಪುರಾಣ

58. ಪಿಂಡಾಸ್ತು ಗೋಽಜವಿಪ್ರೇಭ್ಯೋ ದದ್ಯಾದಗ್ನೌ ಜಲೇಽಪಿವಾ ।
ಉತ್ತಮಾಂ ಗತಿಮನ್ವಿಚ್ಛನ್ ಗೋಷು ನಿತ್ಯಂ ಪ್ರಯಚ್ಛತಿ ॥ ಪುರಾಣವಚನ

59. ಗೋವಿಂದಂ ಪುಂಡರೀಕಾಕ್ಷಂ ಗಂಗಾಂ ಕಾಶೀಂ ಗಯಾಂ ತಥಾ।
ಗದಾಧರಂ ಸ್ಮರೇತ್ ಭಕ್ತ್ಯಾ ಶ್ರಾದ್ಧ ಷಾಡ್ಗುಣ್ಯ ಹೇತವೇ ॥ ಪುರಾಣವಚನ

8. ಶ್ರಾದ್ಧ ಭೋಜನ ಮಾಡುವ ಬ್ರಾಹ್ಮಣನು ಆ ದಿನ ಸಾಯಂಕಾಲ ಭೋಜನ, ಅಭ್ಯಂಗ, ಭಾರವಹನ, ಅಧ್ಯಯನ, ಸ್ತ್ರೀಸಂಗ, ಸಂಧ್ಯಾ, ದಾನಸ್ವೀಕಾರ, ಮತ್ತು ಹೋಮ ಈ ಎಂಟನ್ನು ವರ್ಜಿಸಬೇಕು.(ಸಂಧ್ಯಾಕರ್ಮವನ್ನು ಬಿಡಕೂಡದು. ನಿತ್ಯಕರ್ಮವಾದ್ದರಿಂದ ಅದನ್ನು ಮಧ್ಯಾಹ್ನ ಭೋಜನ ಪೂರ್ವದಲ್ಲಿ ಮಾಡಿಯೇ ಊಟ ಮಾಡಬೇಕು).

9. ಪಾಣಿ ಹೋಮ ಮಾಡುವದರಿಂದ ದೇವಲೋಕ ಹೊಂದಿದ ಪಿತೃಗಳಿಗೆ ತೃಪ್ತಿ ಆಗುತ್ತದೆ. ಬ್ರಾಹ್ಮಣಭೋಜನದಿಂದ ಸ್ವರ್ಗಸ್ಥರಾದ ಪಿತೃಗಳ ತೃಪ್ತಿ, ಪಿಂಡ ಪ್ರದಾನದಿಂದ ಯಮಲೋಕದಲ್ಲಿರುವ ಪಿತೃಗಳ ತೃಪ್ತಿ, ವಿಕಿರಾನ್ನದಿಂದ ನರಕದಲ್ಲಿರುವ ಪಿತೃಗಳ ಸಂತುಷ್ಟಿ, ತಿಲೋದಕಗಳಿಂದ ತಿರ್ಯಕ್ ಯೋನಿಗಳಲ್ಲಿ ಜನಿಸಿರುವ ಪಿತೃಗಳ ತೃಪ್ತಿ, ದಕ್ಷಿಣಾದಾನದಿಂದ ಮನುಷ್ಯ ಯೋನಿಯಲ್ಲಿ ಜನಿಸಿದ ಪಿತೃಗಳ ತೃಪ್ತಿ, ಭೂರಿ ಭೋಜನ ದಿಂದ ಅಸುರ ಯೋನಿಯಲ್ಲಿ ಜನಿಸಿದ ಪಿತೃಗಳ ತೃಪ್ತಿ, ಆಗುತ್ತದೆಂದು ತಿಳಿಯಬೇಕು. ಹೀಗೆ ಶ್ರಾದ್ಧವು ಸಪ್ತ ವಿಧವಾಗಿದೆ.[60]

10. ಶ್ರಾದ್ಧದಲ್ಲಿ ಪಿಂಡಪೂಜೆಯನ್ನು ತುಲಸೀದಲದಿಂದ ಮಾಡಿ ಪೂಜಿಸಿದರೆ ಸೂರ್ಯ ಚಂದ್ರರಿರುವ ಪರ್ಯಂತ ಪಿತೃಗಳು ತೃಪ್ತರಾಗುವರು.[61]

11. ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರು ಸಿಕ್ಕದೇ ಇದ್ದಲ್ಲಿ ತಾನು ಮಂತ್ರಜ್ಞನಾಗಿದ್ದು ದರ್ಭಮಯ ಬ್ರಾಹ್ಮಣರನ್ನು ಇಟ್ಟುಕೊಂಡು ಚಟಕಶ್ರಾದ್ಧ (ಕ್ಷಣ ಕೊಟ್ಟು) ಮಾಡಬೇಕು ಅನಂತರದಲ್ಲಿ ಬ್ರಾಹ್ಮಣರಿಗೆ ಅನ್ನದಾನ ಮಾಡಬೇಕು. ಎಲ್ಲವೂ ಅಭಾವವಾದಲ್ಲಿ ಗೋವಿಗೆ ಗ್ರಾಸವನ್ನು ಕೊಟ್ಟು ತೃಪ್ತಿಪಡಿಸಬೇಕು.[62]

12. ಯಾವನು ಸುದರ್ಶನ, ಸಾಲಿಗ್ರಾಮಗಳ ಸಾನಿಧ್ಯವಿಟ್ಟುಕೊಂಡು ಶ್ರಾದ್ಧಕರ್ಮವನ್ನು ಆಚರಿಸುವನೋ, ಅವನು ಮಾಡಿದ ಶ್ರಾದ್ಧವು ಗಯಾಶ್ರಾದ್ಧದ ಅನಂತ ಫಲವನ್ನು ಕೊಡುತ್ತದೆ.[63]

---

60. ಅಗ್ನೌ ಕರಣೇನ ದೇವಸ್ಥಾಃ ಸ್ವರ್ಗಸ್ಥಾ ವಿಪ್ರಭೋಜನೇ।
ಋಷಿಸ್ಥಾ ದಕ್ಷಿಣಾದಾನೇ ಶ್ರಾದ್ಧಂ ಸಪ್ತವಿಧಂ ಸ್ಮೃತಂ ॥ ಸ್ಮೃತಿಮುಕ್ತಾವಲೀ

61. ಪಿತೃಪಿಂಡಾರ್ಚನಂ ಶ್ರಾದ್ಧೇ ಯೈಃಕೃತಂ ತುಲಸೀದಲೈಃ ।
ಪ್ರೀಣೀತಾಃ ಪಿತರಸ್ತೈಸ್ತು ಯಾವಚ್ಚಂದ್ರಾರ್ಕಮೇದಿನೀ॥ ಪುರಾಣವಚನ

62. ಬ್ರಾಹ್ಮಣಾನಾಮಸಂಪತ್ತೌ, ಕೃತ್ವಾ ದರ್ಭಮಯಾನ್ ದ್ವಿಜಾನ್।
ಶ್ರಾದ್ಧಂ ಕೃತ್ವಾ ವಿಧಾನೇನ ಪಶ್ಚಾದ್ವಿಪ್ರೇಷು ದಾಪಯೇತ್ ॥ ಶ್ರಾದ್ಧಮಂಜರೀ

63. ಯಃ ಶ್ರಾದ್ಧಂ ಕುರುತೇ ವಿಪ್ರಃ ಶಾಲಿಗ್ರಾಮ ಶಿಲಾಗ್ರತಃ ।
ಪಿತೃಣಾಂ ತತ್ರ ತೃಪ್ತಿಃ ಸ್ಯಾತ್ ಗಯಾಶ್ರಾದ್ಧಾದನಂತಕಮ್॥ ವೃದ್ಧಹಾರೀತಸ್ಮೃತಿ

13. ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರಿಗೂ, ಪಿಂಡಕ್ಕೂ ವಸ್ತ್ರಗಳನ್ನು ಕೊಡಬೇಕು. ಇಲ್ಲದಿದ್ದರೆ ಯಜ್ಞೋಪವೀತ (ಜನಿವಾರ) ವನ್ನಾದರೂ ಕೊಡಬೇಕು, ವಸ್ತ್ರದ ಸ್ಥಾನದಲ್ಲಿ ಯಜ್ಞೋಪವೀತ ಕೊಟ್ಟರೆ ವಸ್ತ್ರದ ಫಲವನ್ನು ಹೊಂದುತ್ತಾರೆ. ಅಥವಾ ತತ್ಪ್ರತಿನಿಧಿ ಯಥಾಶಕ್ತಿ ದ್ರವ್ಯದಾನ ಮಾಡಬೇಕು, ಇಲ್ಲಿ ಯಜ್ಞೋಪವೀತ ದಾನ ಮಾಡುವುದರಿಂದ ವೇದದಾನ ಮಾಡಿದ ಫಲಪ್ರಾಪ್ತಿಯಾಗುವದೆಂದು ಮಾರ್ಕಂಡೇಯ, ಲೌಗಾಕ್ಷೀ ಸ್ಮೃತಿಗಳಲ್ಲಿ ಹೇಳಿದ್ದಾರೆ.[64]

14. ಶ್ರಾದ್ಧಮಾಡುವ ಯಜಮಾನನಿಗೆ ತನ್ನ ಗೋತ್ರಗೊತ್ತಿಲ್ಲವಾದರೆ ''ಕಶ್ಯಪ'' ಗೋತ್ರ ಇಟ್ಟುಕೊಂಡು ಶ್ರಾದ್ಧಕರ್ಮ ಮಾಡಬೇಕು.

15. ಯಾವ ವ್ಯಕ್ತಿಯ ತಂದೆ, ತಾಯಿಗಳು ಮೃತರಾದ ತಿಥಿ, ಮಾಸ, ಗೊತ್ತಿಲ್ಲವಾದರೆ - ಭಾದ್ರಪದ ಅಮಾವಾಸ್ಯೆ ದಿನದಂದು ಶ್ರಾದ್ಧಕರ್ಮವನ್ನು ಆಚರಿಸಬೇಕು ಬಿಡಕೂಡದು.[65]

16. ವೈಷ್ಣವರು ಏಕಾದಶೀ ಶ್ರಾದ್ಧವನ್ನು ದ್ವಾದಶೀ ದಿನದಂದು ಮಾಡತಕ್ಕದ್ದು.

★★★

ಶ್ರಾದ್ಧ ಕರ್ತೃವು ಪಾಲಿಸಬೇಕಾದ ನಿಯಮಗಳು

ಶ್ರಾದ್ಧಕರ್ತನು ಪಿತೃಶ್ರಾದ್ಧವನ್ನು ಮಾಡುವ ದಿನದಂದು ಮುಖ್ಯವಾಗಿ ಸಿಟ್ಟು ಬಿಡಬೇಕು, ಆ ದಿನ ಲೋಕದ ಹರಟೆಯನ್ನು ಬಿಟ್ಟು ಶಾಸ್ತ್ರ ವಿಷಯಕ ಚರ್ಚೆಯನ್ನು ಮಾಡುತ್ತಿರಬೇಕು. ಬಾಹ್ಯಶೌಚವನ್ನು ಹೊಂದಿರುವಂತೆ ಈ ರೀತಿಯಾದ ಅಂತಃ ಶೌಚವೂ ಅತ್ಯವಶ್ಯವಾಗಿದೆ.

ಈ ಕಾರಣದಿಂದ ಕರ್ತನು/ ಯಜಮಾನನು ಬಂದ ಬ್ರಾಹ್ಮಣರನ್ನು ವಂದಿಸಿ ಈ ರೀತಿ ಪ್ರಾರ್ಥಿಸಬೇಕು.

---

64. ಯಜ್ಞೋಪವೀತಂ ದಾತವ್ಯಂ ವಸ್ತ್ರಾಭಾವೇ ವಿಜಾನತಾ।
ಪಿತೃಭ್ಯೋ ವಸ್ತ್ರದಾನಸ್ಯ ಫಲಂ ತೇನಾಶ್ನುತೇ ಽಖಿಲಮ್ ।
ನಿಷ್ಕ್ರಿಯೋ ವಾ ಯಥಾಶಕ್ತಿ ವಸ್ತ್ರಾಭಾವೇ ಪ್ರದೀಯತೇ॥ ಲೌಗಾಕ್ಷಿ ಸ್ಮೃತಿ

65. ಮೃತಾಹಂ ಯೋ ನ ಜಾನಾತಿ ಮಾನವೋ ಜೀವಿತಾತ್ಮವಾನ್।
ತೇನ ಕಾರ್ಯಮಮಾವಾಸ್ಯಾಂ ಶ್ರಾದ್ಧಂ ಸಾಂವತ್ಸರಂ ನೃಪ ॥ ಭವಿಷ್ಯ ಪುರಾಣ

ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮವಾದಿಭಿಃ ।
ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧಕರ್ಮಣಿ ॥

ಇನ್ನು ಶ್ರಾದ್ಧಕರ್ತನು ಶ್ರಾದ್ಧದದಿನದಂದು ಬ್ರಷ್, ಹಲ್ಲುಪುಡಿ, ಹಲ್ಲುಕಡ್ಡಿ ಮುಂತಾದವು ಗಳಿಂದ ಹಲ್ಲುಜ್ಜಬಾರದು. ತಾಂಬೂಲ ಹಾಕಿಕೊಳ್ಳಬಾರದು. ಎಣ್ಣೆ ಹಚ್ಚಿ ಎರೆದುಕೊಳ್ಳಬಾರದು, ಆ ದಿನ ಸಾಯಂಕಾಲ ಊಟ ಮಾಡಬಾರದು ಹಾಗೂ ಸ್ತ್ರೀಸಂಗ ಮಾಡ ಬಾರದು, ಅನಿವಾರ್ಯ ಪ್ರಸಂಗವಿಲ್ಲದಿದ್ದರೆ ಔಷಧಿಯನ್ನು ಸೇವಿಸಬಾರದು. ಚಹಾ , ಕಾಫಿ, ಇತ್ಯಾದಿ ಪೇಯಗಳನ್ನು ತೆಗೆದುಕೊಳ್ಳಬಾರದು. ಮನೆಯಲ್ಲಿ ಪಿತೃಶ್ರಾದ್ಧಮಾಡಿ ಬೇರೆಯವರ ಮನೆಗೆ ಊಟಕ್ಕೆ ಹೋಗಬಾರದು.[66]

ಬ್ರಾಹ್ಮಣರನ್ನು ಆಮಂತ್ರಿಸಿದ ಮೇಲೆ, ಶ್ರಾದ್ಧಕರ್ಮ ಪ್ರಾರಂಭವಾದ ಮೇಲೆ ಅವರ ಬಗ್ಗೆಯಾಗಲೀ, ತನ್ನ ಬಗ್ಗೆಯಾಗಲೀ ಅಪಾವಿತ್ರ್ಯದ ಕಲ್ಪನೆ ಮಾಡಬಾರದು. (ಅಶೌಚ) ಅಪವಿತ್ರತೆ ಉಂಟಾಗುವದೇ ಇಲ್ಲ.[67]

ಶ್ರಾದ್ಧಕ್ಕೆ ಬರಲು ಬ್ರಾಹ್ಮಣರಿಗೆ ಆಮಂತ್ರಣ ನೀಡಿ ನಂತರ ಆ ಬ್ರಾಹ್ಮಣರಿಗೆ ನೀವು ಬರಬೇಡಿರಿ ಎಂಬುದಾಗಿ ನಿಷೇಧ ಮಾಡಿದರೆ ಶ್ರಾದ್ಧಕರ್ತನಿಗೆ ಬ್ರಹ್ಮಹತ್ಯಾದೋಷ ಬರುವುದಲ್ಲದೇ, ಅವನು ವರ್ಣಬಾಹಿರನಾಗಿ ಹುಟ್ಟುತ್ತಾನೆ.

ಶ್ರಾದ್ಧಕರ್ತನು ಆಮಂತ್ರಿತ ಬ್ರಾಹ್ಮಣರ ಇಚ್ಛೆಯನ್ನು ಅಪೇಕ್ಷಿಸಿ ದಾನ ಮಾಡಬೇಕು. (ಬ್ರಾಹ್ಮಣನು ಯಜಮಾನನ / ಕರ್ತನ ಯೋಗ್ಯತೆ ಮೀರಿ ಅಪೇಕ್ಷಿಸಬಾರದು) ಒಟ್ಟಿನಲ್ಲಿ ಆಮಂತ್ರಿತರನ್ನು ಸಂತೋಷಪಡಿಸಬೇಕು.

ಉಪ್ಪು ಬೇಕೆ ಎಂದು ಕೇಳಬಾರದು, ಅವಶ್ಯಕತೆ ನೋಡಿಕೊಂಡು ಬ್ರಾಹ್ಮಣರಿಗೆ (ಹಸ್ತ ಶ್ರಾದ್ಧ ಬಿಟ್ಟು) ಇತರತ್ರ ಉಪ್ಪು ಬಡಿಸಬಹುದು.

ಶ್ರಾದ್ಧಕಾಲದಲ್ಲಿ ಅನವಶ್ಯಕ ಮಾತು ಆಡದೇ ಶಾಂತ ರೀತಿಯಿಂದ ಇರಬೇಕು. ಏಕೆಂದರೆ ಶ್ರಾದ್ಧ ಕರ್ಮದಲ್ಲಿ ಮಂತ್ರ ಪುರಸ್ಸರವಾಗಿ ವಿಶ್ವೇದೇವತೆಗಳನ್ನು ಹಾಗೂ ಪಿತೃ

---

66. ದಂತಧಾವನ ತಾಂಬೂಲಂ ತೈಲಾಭ್ಯಂಗಂ ದ್ವಿಭೋಜನಮ್ ।
ರತ್ಯೌಷಧಿ ಪರಾನ್ನಂ ಚ ಶ್ರಾದ್ಧಕರ್ತಾ ವಿವರ್ಜಯೇತ್ ॥ ಶ್ರೀ ಕೃ.ಸ್ಮೃ. ಮುಕ್ತಾವಲಿ
67. ನಿಯಂತ್ರಿತೇಷು ವಿಪ್ರೇಷು ಪ್ರಾರಬ್ಧೇ ಶ್ರಾದ್ಧಕರ್ಮಣಿ ।
ವಸಂತಿ ಪಿತರೌ ಗೇಹೇ ನಾಶೌಚಂ ಜಾಯತೇ ಕ್ವಚಿತ್॥ ಶ್ರೀ ಕೃ.ಸ್ಮೃ. ಮುಕ್ತಾವಲಿ

ದೇವತೆಗಳನ್ನು ಆವಾಹಿಸಿರುವುದರಿಂದ ಶಾಸ್ತ್ರ ಚರ್ಚೆ ಬಿಟ್ಟು ಅನವಶ್ಯಕ ಮಾತಾಡಿದರೆ ಅವರನ್ನು ಅವಮಾನಿಸಿದಂತೆ ಆಗುತ್ತದೆ. ಬ್ರಾಹ್ಮಣರಿಗೆ ಊಟಕ್ಕೆ ಬಡಿಸುವಾಗ ಸವ್ಯದಿಂದಲೇ ಬಡಿಸಬೇಕೆಂಬುದಾಗಿ ಹೇಮಾದ್ರಿ ಮುಂತಾದ ಗ್ರಂಥಕಾರರು ತಿಳಿಸಿದ್ದಾರೆ.

ಶ್ರದ್ಧೆಯಿಂದ ಮಾಡತಕ್ಕ ಕ್ರಿಯೆಯು (ಶ್ರಾದ್ಧವು) ನಿಜವಾಗಿಯೂ ಪಿತೃಗಳಿಗೆ ತೃಪ್ತಿಕರವಾಗಿದೆ. ಆದ್ದರಿಂದ ಕರ್ತನು ''ನಾನು ಈ ದಿನ ಆಚರಿಸುವ ಪ್ರತಿಯೊಂದು ಕ್ರಿಯೆಯು ಶಾಸ್ತ್ರೋಕ್ತವಾಗಿದೆ. ಅಂಥ ವಿಶ್ವಾಸದಿಂದ ಮಾಡುತ್ತೇನೆ. ಅವಿಶ್ವಾಸದಿಂದ ಮಾಡುತ್ತಿಲ್ಲ, ಈ ಶ್ರಾದ್ಧಕ್ರಿಯೆಯನ್ನು (ಕರ್ಮವನ್ನು) ಮನಃ ಪೂರ್ವಕವಾಗಿ ತಿಳಿದು ಮಾಡುತ್ತಿದ್ದೇನೆ'' ಎಂಬುದಾಗಿ ವಿಶ್ವಾಸ ಹೊಂದಿರಬೇಕು. ಶ್ರಾದ್ಧಕರ್ಮದಲ್ಲಿ ಪೂಜ್ಯತ್ವ ಬುದ್ಧಿಯನ್ನು ಹೊಂದಿರಬೇಕು.

ಶ್ರಾದ್ಧಕರ್ತನು ಮೊದಲೇ ಧರ್ಮಶಾಸ್ತ್ರ ತಿಳಿದವರ ಹತ್ತಿರ ಹೋಗಿ ಶ್ರಾದ್ಧವೆಂದರೇನು? ಏಕೆ ಮಾಡಬೇಕು? ಹೇಗೆಮಾಡಬೇಕು? ತಿಳಿದುಕೊಂಡು ಶ್ರದ್ಧಾ ಭಕ್ತಿಯಿಂದ ಮಾಡಿದರೆ ಪಿತೃಗಳು ತೃಪ್ತರಾಗಿ ಹರಸಿ ಆಶೀರ್ವಾದ ಮಾಡುತ್ತಾರೆ.

ಈ ರೀತಿ ಜಿಜ್ಞಾಸೆ ಇಲ್ಲದೇ ಪುರೋಹಿತರನ್ನು ಕರೆಸಿ ಅವರು ಹೇಳಿದಂತೆ ಎಳ್ಳು, ನೀರು ಬಿಟ್ಟು ನಾಲ್ಕಾರು ಪಿಂಡಗಳನ್ನು ಇಟ್ಟು ಶ್ರಾದ್ಧಕರ್ಮ ನಡೆಸಿದರೆ ಆಗದು ಅದು ಬರೀ ಕಾಟಾಚಾರವಾಗಿ ಬಿಡುತ್ತದೆ.

ಶ್ರಾದ್ಧಕರ್ಮದಲ್ಲಿ ಕರ್ತನು ಕೆಲವೊಂದು ಮಂತ್ರಗಳನ್ನು ಅವನೇ ಉಚ್ಚರಿಸ ಬೇಕಾಗುತ್ತದೆ. ಉದಾ- ಅಸ್ಮತ್ ಪಿತೃ, ಪಿತಾಮಹ, ಪ್ರಪಿತಾಮಹಾನಾಂ ಗೋತ್ರಾಣಾಂ ''ತೃಪ್ತ್ಯರ್ಥಂ'' ಕರಿಷ್ಯೇ ॥ ಎಂದು ಹೇಳಬೇಕಾಗುತ್ತದೆ. (ಬ್ರಾಹ್ಮಣರು ''ಕುರುಷ್ವ'' ಎಂದು ಹೇಳಬೇಕು). ಈ ವಾಕ್ಯ ಪುರೋಹಿತರು ಹೇಳುವುದಲ್ಲ ಹೊರತು ಕರ್ತೃವೇ ಹೇಳಬೇಕು. ಏಕೆಂದರೆ ಅಲ್ಲಿ ನಡೆಯುತ್ತಿರುವ (ಶ್ರಾದ್ಧ) ಕರ್ಮವು ಪುರೋಹಿತನ ಅಪ್ಪ/ ಅವ್ವನದ್ದಲ್ಲ ಹೊರತು ಕರ್ತನ ಅಪ್ಪ/ ಅವ್ವನ ಶ್ರಾದ್ಧವಾಗಿರುತ್ತದೆ. ಶ್ರಾದ್ಧಕರ್ತನು ಸ್ನಾನಮಾಡಿ ಗೋಪೀಚಂದನ, ಮುದ್ರಾಧಾರಣೆಯನ್ನು ಮಾಡಿಕೊಂಡು, ಸಂಧ್ಯಾದಿ ಕರ್ಮಮುಗಿಸಿ ಶ್ರಾದ್ಧಕರ್ಮವನ್ನು ಪ್ರಾರಂಭಿಸಬೇಕು. ಇದು ಅತೀ ಅವಶ್ಯ. ಶ್ರಾದ್ಧ ಮಾಡುವವರು ಕೆಲವು ಮಂತ್ರಗಳ ಅರ್ಥವನ್ನಾದರೂ ತಿಳಿದು ಮಾಡುವುದು ಉತ್ತಮ. ತಿಳಿಯದೇ ಮಾಡಿದ ಕರ್ಮಕ್ಕೆ ವಿಶೇಷ ಪುಣ್ಯ ದೊರೆಯಲಾರದು.

ಯಾರಾದರೂ ಮಕ್ಕಳು, ಮಿತ್ರರು ಈ ವಿಷಯ ಕುರಿತು ಕೇಳಿದಾಗ ಅವರಿಗೆ ಸರಿಯಾದ ಮಾಹಿತಿ ನೀಡದೇ ಹಾರಿಕೆಯ ಉತ್ತರ ಕೊಡಬಾರದು. ನಮ್ಮ ಹಿರಿಯರು ಮಾಡುತ್ತಾ ಬಂದಿದ್ದಾರೆ. ನಾನೂ, ಮಾಡುತ್ತಿದ್ದೇನೆ ಎಂದು ಹೇಳಿ ಜಾರಿಕೊಳ್ಳಬಾರದು. ನಿಜವಾದ ವಿಷಯವನ್ನು, ಶ್ರಾದ್ಧದ ತಾತ್ವಿಕ ಹಿನ್ನೆಲೆಯನ್ನು ತಿಳಿಸಿಕೊಡುವದು ಅವಶ್ಯವಾಗಿದೆ.

ಈ ಎಲ್ಲ ಕಾರಣಗಳಿಂದ ಶ್ರಾದ್ಧಕರ್ತನು ತಾನು ಮಾಡುವ ಕ್ರಿಯೆಯ ಕುರಿತು ಸಮರ್ಪಕವಾಗಿ ತಿಳಿದುಕೊಂಡು ಆಚರಿಸಿದಲ್ಲಿ ಭಗವಂತನ ಪ್ರೀತಿ ಉಂಟಾಗುತ್ತದೆ ನಿಶ್ಚಿತ.

★★★

ಶ್ರಾದ್ಧಕರ್ಮದಲ್ಲಿ ಪಾತ್ರೆಗಳು

ಶ್ರಾದ್ಧಕರ್ಮಕ್ಕೆ ಉಪಯೋಗಿಸುವ ಪಾತ್ರೆಗಳು ಬೆಳ್ಳಿಯವೇ ಆಗಿರಬೇಕು. ಬೆಳ್ಳಿಯು ರುದ್ರದೇವರ ಕಣ್ಣಿನಿಂದ ಹುಟ್ಟಿದೆ. ಪಿತೃಗಳಿಗೆ ಈ ಧಾತುವು ಅತ್ಯಂತ ಪ್ರಿಯವಾಗಿದೆ. ಆದ್ದರಿಂದಲೇ ದೇವಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡುವ ಸಂದರ್ಭದಲ್ಲಿ ಸುವರ್ಣವನ್ನು ಕೊಟ್ಟರೆ ಪಿತೃಬ್ರಾಹ್ಮಣರಿಗೆ ''ತತ್ತುಲ್ಯಂ ರಜತಂ'' ಎಂಬಂತೆ ಬೆಳ್ಳಿಯನ್ನು ಕೊಡುವದುಂಟು. ಪಿತೃಗಳಿಗೆ ಅನ್ನ ನಿರ್ದೇಶನ ಮಾಡುವಾಗ ''ರಜತಮಯಪಾತ್ರೇ ಸ್ಥಿತಮನ್ನಂ'' ಎಂದು ಹೇಳಲಾಗುತ್ತದೆ. ಆದುದರಿಂದ ಪಿತೃಕಾರ್ಯಗಳಿಗೆ ಬೆಳ್ಳಿಯ ಪ್ರಾತೆಗಳು ಅವಶ್ಯ ಹಾಗೂ ಅನಿವಾರ್ಯ. ಈ ಕಾರ್ಯದಲ್ಲಿ ಬೇಕಾಗುವಷ್ಟು ಬೆಳ್ಳಿಯ ಪಾತ್ರೆಗಳನ್ನ ಸಂಗ್ರಹ ಮಾಡುವ ಯೋಗ್ಯತೆ ಇಲ್ಲದಿದ್ದರೆ ಒಂದಾದರೂ ಬೆಳ್ಳಿಯ ಪಾತ್ರೆಯನ್ನು ಇಟ್ಟು ಉಳಿದವುಗಳನ್ನು ತಾಮ್ರ ಅಥವಾ ಹಿತ್ತಾಳೆಯ ಪಾತ್ರೆಗಳನ್ನು ಆ ಬೆಳ್ಳಿಯ ಪಾತ್ರೆಗೆ ಮುಟ್ಟಿಸಿ ಪಿತೃಕಾರ್ಯದಲ್ಲಿ ಉಪಯೋಗಿಸಬೇಕು.

ಶ್ರಾದ್ಧಕಾರ್ಯದಲ್ಲಿ ಕಬ್ಬಿಣದ ಪ್ರಾತೆಗಳು ಪೂರ್ಣ ನಿಷಿದ್ಧವಾಗಿದೆ. ಶ್ರಾದ್ಧದ ಅಡುಗೆಯಲ್ಲಿ ಕೂಡ ಕಬ್ಬಿಣ ಆಥವಾ ಸ್ಟೀಲಪ್ರಾತೆಗಳನ್ನು, ಸೌಟನ್ನು ಉಪಯೋಗಿಸ ಬಾರದು ಬ್ರಾಹ್ಮಣರನ್ನು ಕೂಡ್ರಿಸಲು ಕಬ್ಬಿಣದ ಮೊಳೆಗಳಿದ್ದ ಮಣೆಗಳನ್ನು ಉಪಯೋಗಿಸದೇ ಅಖಂಡ ಮಣೆಗಳನ್ನು ಉಪಯೋಗಿಸುವುದು ಉತ್ತಮ. ಹೀಗೆ ಶ್ರಾದ್ಧಕರ್ಮದಲ್ಲಿ ಉಪಯೋಗಿಸಿದ ವಸ್ತುಗಳಲ್ಲಿ ಸ್ವಲ್ಪಕಬ್ಬಿಣದ ಅಂಶವಿದ್ದರೂ ಪಿತೃಗಳು ಶ್ರಾದ್ಧದಲ್ಲಿ ಕೊಡಲ್ಪಟ್ಟ ಅನ್ನಾದಿಗಳನ್ನು ಸ್ವೀಕರಿಸದೇ ಆ ಸ್ಥಳದಿಂದ ಓಡಿ ಹೋಗುತ್ತಾರೆ. ಇದಕ್ಕೆ-

"ಅಯಸೋ ದರ್ಶನಾದೇವ ಪಿತರೋ ವಿದ್ರವಂತಿ ಹಿ" (ಪದ್ಮಪುರಾಣ ನಾಗರಖಂಡ) ಈ ಪ್ರಮಾಣ ವಚನವೇ ಸಾಕ್ಷಿಯಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಶ್ರಾದ್ಧಕರ್ಮದಲ್ಲಿ ಬೆಳ್ಳಿ ಮೊದಲಾದ ಯೋಗ್ಯ ಪಾತ್ರೆಗಳನ್ನಷ್ಟೇ ಬಳಸಬೇಕೆಂದು ತಿಳಿದು ಬರುತ್ತದೆ.

ಶ್ರೀಹರಿವಂಶಪುರಾಣದ ಈ ಕೆಳಗಿನ ಪ್ರಮಾಣವಚನವು ಇದನ್ನೇ ಪುಷ್ಟೀಕರಿಸುತ್ತದೆ.

ಸರ್ವೇಷಾಂ ರಾಜತಂ ಪಾತ್ರಮಥವಾ ರಜತಾನ್ವಿತಮ್
ದತ್ತಂ ಸ್ವಧಾಂ ಪುರೋಧಾಯ ಶ್ರಾದ್ಧಂ ಪ್ರೀಣಾತಿ ವೈ ಪಿತೄನ್॥

ಎಲ್ಲ ಪಿತೃಗಳ ಪ್ರೀತ್ಯರ್ಥವಾಗಿ ಬೆಳ್ಳಿಯ ಪಾತ್ರೆ ಅಥವಾ ಬೆಳ್ಳಿಮಿಶ್ರಿತವಾದ ಪಾತ್ರೆಯಲ್ಲಿ "ಸ್ವಧಾ ಪಿತೃಭ್ಯಃ" ಎಂದು ಹೇಳಿ ಮಾಡಲ್ಪಡುವ ಶ್ರಾದ್ಧವು ಪಿತೃಗಳಿಗೆ ತೃಪ್ತಿಯನ್ನು ಉಂಟುಮಾಡುತ್ತದೆ.

★★★

ಶ್ರಾದ್ಧಕರ್ಮದಲ್ಲಿ ನಿಷಿದ್ಧ ಪದಾರ್ಥಗಳು

ನಿಷಿದ್ಧ ಧಾನ್ಯಗಳನ್ನು ಶ್ರಾದ್ಧದಲ್ಲಿ ಉಪಯೋಗಿಸಬಾರದು. ಒಗ್ಗರಣೆಗೆ ಹಾಕುವ ಪದಾರ್ಥಗಳಲ್ಲಿ ಇಂಗನ್ನು (ಹಿಂಗನ್ನು) ಉಪಯೋಗಿಸಬಾರದು. ತರಕಾರಿಗಳಲ್ಲಿ ಈರುಳ್ಳಿ, (ಉಳ್ಳಾಗಡ್ಡಿ) ಬೆಳ್ಳುಳ್ಳಿ, ನುಗ್ಗೇಕಾಯಿ, ಕೆಂಚನಾಳದ ಕಾಯಿ, ಗಜ್ಜರಿ ಅಥವಾ ಗಾಜಿನ ಗೆಡ್ಡೆ, ಬೂದುಗುಂಬಳ, ಸೋರೆಕಾಯಿ, ಕಪ್ಪು ಉಪ್ಪುಮುಂತಾದವುಗಳನ್ನು ಉಪಯೋಗಿಸಬಾರದು.[68]

ಎಲ್ಲ ವಿಧವಾದ ಉಪ್ಪನ್ನು, ನೇರಳೆಯಹಣ್ಣನ್ನು ವರ್ಜಿಸಬೇಕು. ಸೀನಿನಿಂದ ಮತ್ತು ಕಣ್ಣೀರಿನಿಂದ ದೂಷಿತವಾದ ಪದಾರ್ಥಗಳನ್ನು ಶ್ರಾದ್ಧಕರ್ಮದಲ್ಲಿ ವರ್ಜಿಸಬೇಕು.[69]

---

68. ಅಶ್ರಾದ್ಧೇ ಯಾನಿ ಧಾನ್ಯಾನಿ ಕೋದ್ರವಾಃ ಪುಲಕಾಸ್ತಥಾ ।
ಹಿಂಗುದ್ರವ್ಯೇಷು ಶಾಕೇಷು ಪಲಾಂಡುಂ ಲಸುನಂ ತಥಾ ॥
ಸೌಭಾಂಜನಃ ಕೋವಿದಾರಸ್ತಥಾ ಗೃಂಜನಕಾದಯಃ ।
ಕೂಷ್ಮಾಂಡಜಾತ್ಯಲಾಬುಂಚ ಕೃಷ್ಣಂ ಲವಣಮೇವಚ ॥ ಅನುಶಾಸನಪರ್ವ

69. ವರ್ಜಯೇಲ್ಲವಣಂ ಸರ್ವಂ ತಥಾ ಜಂಬೂಫಲಾನಿ ಚ ।
ಅವಕ್ಷುತಾವರುದಿತಂ ತಥಾ ಶ್ರಾದ್ಧೇ ಚ ವರ್ಜಯೇತ್॥ ಅನುಶಾಸನಪರ್ವ

ಪಿತೃತರ್ಪಣ ಸಮಯದಲ್ಲಾಗಲೀ, ಹವ್ಯಕವ್ಯಗಳಲ್ಲಾಗಲೀ ನಾಯಿಯ ದರ್ಶನವು ಗರ್ಹಿತವಾದುದು. ನಾಯಿಯು ನೋಡಿದ ಹವಿಸ್ಸನ್ನು ಪಿತೃಗಳಾಗಲೀ ದೇವತೆಗಳಾಗಲೀ ಇಷ್ಟಪಡುವುದಿಲ್ಲ.[70]

ಪಿಂಡಪ್ರದಾನ ಸಮಯದಲ್ಲಿ ಚಂಡಾಲನಾಗಲೀ, ಶ್ವಪಚನಾಗಲೀ ಇರಬಾರದು! ಕಾಷಾಯ ವಸ್ತ್ರವನ್ನು ಧರಿಸಿರುವವನು, ಕುಷ್ಠರೋಗಿಯು, ಪತಿತನು, ಬ್ರಹ್ಮಹತ್ಯೆ ಮಾಡಿದವನು, ಸಂಕರಯೋನಿಯಲ್ಲಿ ಹುಟ್ಟಿದ ಬ್ರಾಹ್ಮಣನು, ಧರ್ಮಭ್ರಷ್ಟನಾದ ಸಂಬಂಧಿ ಇವರನ್ನು ವಿದ್ವಾಂಸನಾದವನು ಶ್ರಾದ್ಧಕರ್ಮದಲ್ಲಿ ವರ್ಜಿಸಬೇಕು.[71]

ಕೇತಕೀ, ಬಕುಳ, ಕರವೀರ, ಅವರೆ ಹೂ, ಜಾಜೀ ಮುಂತಾದ ಪರಿಮಳ ಹೂಗಳನ್ನು ಶ್ರಾದ್ಧಕರ್ಮದಲ್ಲಿ ಉಪಯೋಗಿಸಬಾರದು. ಇವುಗಳ ದರ್ಶನದಿಂದ ಪಿತೃಗಳು ನಿರಾಶರಾಗಿ ಹೊರಟು ಹೋಗುತ್ತಾರೆ.[72]

ರಜಸ್ವಲೆ ಸ್ತ್ರೀಯಿಂದ ನೋಡಲ್ಪಟ್ಟ ಪಿಂಡವನ್ನು ಸ್ವೀಕರಿಸದೇ ಪಿತೃಗಳು ಮರಳಿ ಹೋಗುತ್ತಾರೆ. ಕಾರಣ ರಜಸ್ವಲೆಯರು ಶ್ರಾದ್ಧಕ್ರಿಯೆಯನ್ನು ನೋಡುವದು ನಿಷಿದ್ಧ. ಅವರು ಆ ಸ್ಥಳದಲ್ಲಿ ಇರಕೂಡದು.

★★★

ಶ್ರಾದ್ಧ ಕರ್ಮದಲ್ಲಿ ಉಪಯುಕ್ತ ಪದಾರ್ಥಗಳು.

ಶ್ರಾದ್ಧ ಕರ್ಮದಲ್ಲಿ ಅನಿಷಿದ್ಧವಾದ ಉಪಯುಕ್ತ ಪದಾರ್ಥಗಳನ್ನು ಇಲ್ಲಿ ತಿಳಿಸಿಕೊಡಲಾಗಿದೆ.

---

70. ನಿವಾಪೇ ಹವ್ಯಕವ್ಯೇ ವಾ ಗರ್ಹಿತಂ ಚ ಶ್ವದರ್ಶನಮ್ ।
ಪಿತರಶ್ಚ ಹಿ ದೇವಾಶ್ಚ ನಾಭಿನಂದಂತಿ ತದ್ಧವಿಃ ॥ ಅನುಶಾಸನ ಪರ್ವ

71. ಚಾಂಡಾಲಶ್ವಪಚಾ ವರ್ಜ್ಯಾ ನಿವಾಪೇ ಸಮುಪಸ್ಥಿತೇ ।
ಕಾಷಾಯವಾಸಾಃ ಕುಷ್ಠೀ ವಾ ಪತಿತೋ ಬ್ರಹ್ಮಹಾಪಿ ವಾ ॥
ಸಂಕೀರ್ಣಯೋನಿರ್ವಿಪ್ರಶ್ಚ ಸಂಬಂಧೀ ಪತಿತಶ್ಚಯಃ ।
ವರ್ಜನೀಯಾ ಬುಧೈರೇತೇ ನಿವಾಪೇ ಸಮುಪಸ್ಥಿತೇ ॥ ಅನುಶಾಸನಪರ್ವ

72. ಕೇತಕಿ ಬಕುಲಶ್ಚೈವ ಕರವೀರಾಣಿ ಬರ್ಬರಾ ।
ಜಾತೀದರ್ಶನ ಮಾತ್ರೇಣ ನಿರಾಶಾ ಪಿತರೋಗತಾಃ ॥ ಪ್ರಯೋಗ ಪಾರಿಜಾತ

1. ಶಾಲಿಗ್ರಾಮ ಅಥವಾ ಸುದರ್ಶನ, ವಿಷ್ಣುಪಾದ, ತೀರ್ಥ, ಅಕ್ಕಿ, ಎಳ್ಳು, ದರ್ಭೆ, ನೈವೇದ್ಯಮಾಡಿದ ಅನ್ನ, ತುಪ್ಪ, ಸಕ್ಕರೆ, ಬಿಳಿಸಾಸುವೆ, ಜೇನುತುಪ್ಪ, ಹಾಲು, ಮೊಸರು, ಇತ್ಯಾದಿ
2. ಬಾಳೆ, ಹೂವು, ದ್ರಾಕ್ಷಿ, ಖರ್ಜೂರ, ದಾಳಿಂಬೆ, ಬೆಳವಲ, (ಬಳೋಲ) ನೆಲ್ಲಿ
3. ಬಾಳೆಕಾಯಿ, ಹಾಗಲಕಾಯಿ, ಗೆಣಸು, ಸೌತೇಕಾಯಿ, ಬೆಂಡೆಕಾಯಿ, ಚವಳಿಕಾಯಿ, ಖಾರಗೆಣಸು, ಕರಬೇವು (ಚಾತುರ್ಮಾಸ್ಯದಲ್ಲಿ ಕೆಲವು ವರ್ಜನೀಯವಾಗಿವೆ. ನೋಡಿಕೊಂಡು, ಹಿರಿಯರಿಂದ ತಿಳಿದುಕೊಂಡು ಉಪಯೋಗಿಸಬೇಕು).
4. ಜೀರಿಗೆ, ಕೋತಂಬ್ರಿ ಬೀಜ, ಹುಣಸೇ ಹಣ್ಣು, ಸೈಂಧವ ಲವಣ (ಉಪ್ಪು)
5. ಜವೆ ಗೋದಿ, ಎಳ್ಳು, ಉದ್ದಿನಬೇಳೆ, ಗೋದಿರವೆ, ಸಾವಕ್ಕಿ, ಸವಣಕ್ಕಿ, ಹೆಸರುಬೇಳೆ, ಸಾಸಿವೆ, ಇವು ಪ್ರಶಸ್ತ. (ಚಾತುರ್ಮಾಸ್ಯ ವ್ರತದಲ್ಲಿ ತಿಳಿದು ಇವುಗಳನ್ನು ಉಪಯೋಗಿಸಬೇಕು).
6. ಆಕಳಹಾಲು, ಮೊಸರು, ಮಜ್ಜಿಗೆ, ತುಪ್ಪ ಇವು ಪ್ರಶಸ್ತವಾಗಿವೆ. (ವ್ರತಕಾಲದಲ್ಲಿ ತಿಳಿದು ಉಪಯೋಗಿಸಬೇಕು)
7. ಇಪ್ಪಿ ಎಲೆ, ಬಾಳೆ ಎಲೆ, ಮುತ್ತಲ, ಬಸರಿ, ಅತ್ತಿ, ಮಲಕಂಟಿ, ಹಲಸು, ನೇರಲ ಈ ಎಲೆಗಳು ಶ್ರಾದ್ಧದಲ್ಲಿ ಪ್ರಶಸ್ತವಾಗಿವೆ.

★★★

ಶ್ರಾದ್ಧ ಕರ್ಮದಲ್ಲಿ ಬೇಕಾಗುವ ಪದಾರ್ಥಗಳು ಮತ್ತು ಶ್ರಾದ್ಧದ ಪ್ರಮುಖ ಅಂಶಗಳು

ಪಿಂಡಪ್ರದಾನ ಶ್ರಾದ್ಧ ಕರ್ಮದಲ್ಲಿ ಈ ಕೆಳಗಿನ ಪದಾರ್ಥಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವದು ಅವಶ್ಯವಾಗಿದೆ.

(1) ಅನ್ನ (2) ಪಾಯಸ (3) ಅಪೂಪ/ಘಾರಿಗೆ (4) ಜವೆಗೋದಿ (5) ಕಬ್ಬಿನ ಹಾಲು, ಬೆಲ್ಲ, ಸಕ್ಕರೆ. (6) ಎಳ್ಳು (7) 15 ಬಿಡಿ ರೂ.ಗಳು (8) ದರ್ಭೆ. (6 ಪವಿತ್ರಗಳು, ಒಂದು ಕೂರ್ಚ, 40-50 ದರ್ಭೆತುಂಡುಗಳು) (9) ಯಜ್ಞೋಪವೀತಗಳು-5, (10) ಅಡಕೆಬೆಟ್ಟ-10, (ಅಡಕೆ ಪುಡಿ) (11) ವೀಳ್ಯದೆಲೆ-15, (12) ಗೋಪೀ ಚಂದನ 3

ತುಂಡುಗಳು. (13) ಭೃಂಗರಾಜಪತ್ರ (ಕಾಡಿಗ್ಗರಗು), (14) ಎರಡು ಮಣೆಗಳು. (15) ಡಜನ್ ಬಾಳೆ ಎಲೆಗಳು. (16) ಆಕಳ ಹಾಲು, (17) ಆಕಳ ಮೊಸರು (18) ಆಕಳ ತುಪ್ಪ, (19) ಜೇನುತುಪ್ಪ, (20) ಬಾಳೆಹಣ್ಣು, (21) ದೊನ್ನೆಗಳು- 10, (22) ನಾಲ್ಕು ತಂಬಿಗೆ ಮೀಸಲ ನೀರು. (23) ಬಿಳಿ ಸಾಸುವೆ. (24) ಗೋಮಯ, (25) ವಿಷ್ಣುಪಾದ, (26) ಶ್ರೀವಿಷ್ಣುವಿನ ತೀರ್ಥ, (27) ಒಂದು ಪಾವು ಅಕ್ಕಿ (2 ಸೇರು), (28) ಪಿಂಡಕ್ಕೆ ಏರಿಸಲು ಪಂಚೆ ಅಥವಾ ಯಜ್ಞೋಪವೀತ- (29) ದೀಪ, (30) ಬೆಳ್ಳಿಯ ಪಾತ್ರೆಗಳು (ತಾಮ್ರ ಅಥವಾ ಹಿತ್ತಾಳೆ) (31) ಆಚಮನಥಾಲಿ, ಸವಟು- (32) ಅರ್ಚನ ಪಾತ್ರೆ (ಬುಟ್ಟಿ) (33) ತಟ್ಟೆ.

ಮೇಲೆ ತಿಳಿಸಿದ ಎಲ್ಲ ಪದಾರ್ಥಗಳನ್ನು ಶ್ರಾದ್ಧ ಕರ್ತೃವು ಮೊದಲೇ ಸಿದ್ಧ ಪಡಿಸಿ ಇಟ್ಟುಕೊಳ್ಳಬೇಕು. ಶ್ರಾದ್ಧದ ದಿನ ಯಾವ ಕಾಲದಲ್ಲಿಯೂ ಸಿಟ್ಟಿಗೆ ಬರತಕ್ಕದ್ದಲ್ಲ. ಎಲ್ಲವೂ ಸಿದ್ಧವೇ ಆಗಿದ್ದಲ್ಲಿ ಸಿಟ್ಟಿಗೆ ಬರುವ ಪ್ರಮೇಯ ತಪ್ಪುತ್ತದೆ.

ಶ್ರಾದ್ಧಕರ್ಮದ ಪ್ರಮುಖ ಅಂಶಗಳು (ಅಂಗಗಳು)

ಶ್ರಾದ್ಧಕರ್ಮಕ್ಕೆ ಅನ್ನವನ್ನು ಮಾಡಿ ದೇವರಿಗೆ ನೈವೇದ್ಯ, ವೈಶ್ವದೇವಗಳನ್ನು ಮಾಡಿ ಅಣಿಯಾದ ತರುವಾಯ ಶ್ರಾದ್ಧಕರ್ಮ ಪ್ರಾರಂಭಿಸಬೇಕು.

(1) ಆಚಮನ (2) ಪವಿತ್ರಧಾರಣ (3) ಪುನರಾಚಮನ (4) ಯವೋದಕ-ತಿಲೋದಕ (5) ದರ್ಭೆಯ ಬ್ರಾಹ್ಮಣರಿಗೆ (ಕ್ಷಣ) ಆಮಂತ್ರಣ ಕೊಡುವುದು, (6) ಪಾದ ಪ್ರಕ್ಷಾಲನ, (7) ಆಸನ (8) ಅರ್ಘ್ಯ (9) ಅಂತರ್ಯಾಮಿಪೂಜಾ (10) ಆವಾಹನ (11) ಗಂಧ (12) ಮಂಡಲ (13) ಪಾತ್ರಾಸಾದನ (14) ಪಾಣಿಹೋಮ (ಯಜುರ್ವೇದಿಗಳು ಅಗ್ನೌಕರಣ ಮಾಡಬೇಕು) (15) ಭೋಜನ (16) ಪಿಂಡಪ್ರದಾನ (17) ಪಿಂಡಪೂಜಾ (18) ಭೋಜನನಿಯಮ (19) ಪಿಂಡ ವಿಸರ್ಜನೆ (20) ಬ್ರಾಹ್ಮಣ ವಿಸರ್ಜನೆ (21) ಬ್ರಾಹ್ಮಣರಿಂದ ಆಶೀರ್ವಾದ ಪಡೆಯುವುದು, (22) ಯಜಮಾನನ ಭೋಜನ (23) ಕೃಷ್ಣಾರ್ಪಣ ಹೇಳುವುದು.

★★★

ಶ್ರಾದ್ಧಕರ್ಮದಲ್ಲಿ ಅವಶ್ಯಕವಾಗಿ ಉಪಯೋಗಿಸಬೇಕಾದ ಆಹಾರ ಪದಾರ್ಥಗಳು

ಶ್ರಾದ್ಧ ಕರ್ತನು ಬ್ರಾಹ್ಮಣರಿಗೆ ಭೋಜನ ಮಾಡಿಸುವ ಸಂದರ್ಭದಲ್ಲಿ ಕೆಲವೊಂದು ಪದಾರ್ಥಗಳನ್ನು ಅವಶ್ಯಕವಾಗಿ ಸಂಗ್ರಹಿಸಿ ಉಪಯೋಗಿಸಬೇಕು. ಬ್ರಾಹ್ಮಣರಿಗೆ ಬಡಿಸಬೇಕು. ಇದು ಅನಿವಾರ್ಯಕೂಡ. ಆ ಪದಾರ್ಥಗಳು ಯಾವವು? ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಕಬ್ಬಿನರಸ ಮತ್ತು ಕಬ್ಬಿನ ರಸದಿಂದ ತಯಾರಾದ ಬೆಲ್ಲ, ಸಕ್ಕರೆ, ಕಾಕವಿ, ಗೋದಿಯ ಹಿಟ್ಟು ಅಥವಾ ರವೆಯಿಂದ ಸಿದ್ಧ ಪಡಿಸಿದ ಪದಾರ್ಥಗಳು. ಪಾಯಸ, ಅನ್ನ, ಹೆಸರುಬೇಳೆ ತೊವ್ವೆ, ಪುರಿ, ಗೋಕ್ಷೀರ, ಗಾರಿಗೆ, ಅನಾರಸ, ಭತ್ತರಳು, ಉದ್ದಿನ ಬೇಳೆಯಿಂದ ತಯಾರಿಸಿದ ಕರಿದ ವಡೆ ಇತ್ಯಾದಿ ಪದಾರ್ಥಗಳು, ತುಪ್ಪದಲ್ಲಿ ಪಕ್ವವಾದ ಭಕ್ಷ್ಯಗಳು ಅನಿವಾರ್ಯವಾಗಿವೆ. ಹಾಗೆಯೇ ಆಯಾ ಋತುಗಳಲ್ಲಿ, ಆಯಾ ಮಾಸಗಳಲ್ಲಿ ಉಪದಿಷ್ಟವಾದ ಪದಾರ್ಥಗಳು ಗ್ರಾಹ್ಯವೇ ಆಗಿವೆ. ಉದಾ- ಚೈತ್ರ-ವೈಶಾಖ ಮಾಸಗಳಲ್ಲಿ- ಮಾವಿನ ಹಣ್ಣಿನ ಸೀಕರಣೆ ಇತ್ಯಾದಿಗಳನ್ನು ಅವಶ್ಯ ಉಪಯೋಗಿಸಬೇಕು.

ಈ ಪದಾರ್ಥಗಳಲ್ಲಿ ಫಲ, ಪಾನಕಗಳನ್ನು ಬಿಟ್ಟು ಉಳಿದೆಲ್ಲ ಪದಾರ್ಥಗಳು ಬಿಸಿಯಾಗಿಯೇ ಇರಬೇಕು.

ಜೇನುತುಪ್ಪವೂ ಅನಿವಾರ್ಯ ಪದಾರ್ಥಗಳಲ್ಲಿ ಒಂದಾಗಿದೆ. ಜೇನುತುಪ್ಪ, ಆಕಳ ಹಾಲು ಇಲ್ಲದ ಶ್ರಾದ್ಧವು ಪಿತೃಗಳಿಗೆ ತೃಪ್ತಿಕರವಾಗುವುದಿಲ್ಲ.

ಶ್ರಾದ್ಧ ಕರ್ತನು ಸ್ವತಃ ಅಡಿಗೆಯನ್ನು ಮಾಡಬಹುದು. ಇಲ್ಲದಿದ್ದರೆ ಅವನ ತಾಯಿ, ಹೆಂಡತಿ, ಸಮೀಪದ ಬಂಧುಗಳು, ಸಪಿಂಡರು, ಸಗೋತ್ರಜರು, ಸಮಾನ ಪ್ರವರರು, ಉಪಕೃತರು, ಮಾತಾ ಪಿತೃವಂಶಜರು, ಪತಿಪುತ್ರರುಳ್ಳ ಶುಚಿರ್ಭೂತರಾದ ಪರಿಚಿತ ಬ್ರಾಹ್ಮಣ ಸ್ತ್ರೀಯರು ಕೂಡ ಶ್ರಾದ್ಧದ ಅಡಿಗೆಯನ್ನು ಮಾಡಬಹುದು-

ಬಂಜೆ, ಜಾರಿಣಿಯು, ಗರ್ಭಿಣಿ, ವಿಧವೆ (ಸಕೇಶಿನಿ) ಇವರು ಮಾಡಿದ ಅಡಿಗೆ ಶ್ರಾದ್ಧಕ್ಕೆ ಬರುವುದಿಲ್ಲ.

ಅಡಿಗೆಯವರನ್ನು ಕರೆದು ಅಡಿಗೆ ಮಾಡಿಸುವದು ಈಗ ರೂಢಿಯಲ್ಲಿದೆ. ಆದರೆ ಯೋಗ್ಯರಾದ ಅಡಿಗೆಯವರನ್ನು ಕರೆದು ಅಡಿಗೆ ಮಾಡಿಸುವುದು ಪ್ರಶಸ್ತವಾಗಿದೆ.

ಅದರ ಬದಲು ಯಜಮಾನನು ಸ್ವತಃ ಮಾಡಬೇಕು ಅಥವಾ ಅವನ ಪತ್ನಿಯು ಏಕಾದಶೀ ಉಪವಾಸ, ಪಂಚಗವ್ಯ ಪ್ರಾಶನ ಮಾಡಿ ಶುಚಿತ್ವವನ್ನು ಸಂಪಾದಿಸಿಕೊಂಡು ಅಡಿಗೆ ಮಾಡಬೇಕು. ಇದರಿಂದ ಪಿತೃಗಳು ತೃಪ್ತರಾಗುತ್ತಾರೆ ನಿಶ್ಚಿತ.

★★★

ಶ್ರಾದ್ಧಕರ್ಮ ಮಾಡುವ ಸ್ಥಳ ಹೇಗಿರಬೇಕು?

ಶ್ರಾದ್ಧಕರ್ಮ ಮಾಡುವ ಸ್ಥಳವು ಅತ್ಯಂತ ಪವಿತ್ರವಾಗಿರಬೇಕು. ಈ ಕಾರಣದಿಂದ ನದೀತೀರ, ತೀರ್ಥಕ್ಷೇತ್ರಗಳು ಪ್ರಶಸ್ತವಾಗಿವೆ. ಶ್ರಾದ್ಧಕರ್ಮವನ್ನು ಯಜಮಾನನು ತನ್ನ ಮನೆಯಲ್ಲಿ ಮಾಡುವುದು ಉತ್ತಮ ಪಕ್ಷವಾಗಿದೆ. ಮನೆಯಲ್ಲಿ ಶ್ರಾದ್ಧಕರ್ಮವನ್ನು ಮಾಡುವ ಸ್ಥಳವನ್ನು ಮೊದಲು ಗೋಮಯದಿಂದ ಸಾರಿಸಿ ಶುದ್ಧಿಗೊಳಿಸಬೇಕು. ಆ ಸ್ಥಳದಲ್ಲಿ ಜಂತು, ಕ್ರಿಮಿ, ಕೀಟಾದಿಗಳು ಇರದಂತೆ ನೋಡಿಕೊಳ್ಳಬೇಕು. ನೆಲವು ತಗ್ಗು, ದಿನ್ನೆಗಳಿಂದ ಕೂಡಿರಬಾರದು. ಅದು ಸಮತಟ್ಟಾದ ಪ್ರದೇಶವಾಗಿರಬೇಕು. ಆ ಪ್ರದೇಶದಲ್ಲಿ ಯಾವುದೇ ತರಹದ ದುರ್ಗಂಧ ಇರಬಾರದು.

ವಿಧಿಪೂರ್ವಕವಾಗಿ ಸ್ಥಾಪಿಸಲ್ಪಟ್ಟು ಶಾಸ್ತ್ರೋಕ್ತವಿಧಾನದಿಂದ ದೇವ ಪೂಜಾದಿಗಳು, ಜ್ಞಾನಕಾರ್ಯಗಳು ನೆರವೇರುವ ದೇವಸ್ಥಾನ, ಮಠ ಇತ್ಯಾದಿಗಳು ತೀರ್ಥಕ್ಷೇತ್ರವೆನಿಸುವುದರಿಂದ ಮನೆಯಲ್ಲಿ ಶ್ರಾದ್ಧ ಮಾಡಲು ಆಗದಿರುವ ಪ್ರಸಂಗ ವಿದ್ದಾಗ ಅಲ್ಲಿಗೆ ಹೋಗಿ ಮಾಡಬಹುದು. ಇದು ಅನಿವಾರ್ಯ ಪಕ್ಷವೆಂದು ತಿಳಿಯತಕ್ಕದ್ದು.

ಮನೆಯಲ್ಲಿ ಶ್ರಾದ್ಧ ಮಾಡುವಾಗ ಮೇಲೆ ತಿಳಿಸಿದಂತೆ ಗೋಮಯ, ಗೋಮೂತ್ರಗಳಿಂದ ಸ್ಥಳವನ್ನು ಶುದ್ಧಿ ಮಾಡುವುದಲ್ಲದೇ, ರಜಸ್ವಲಾಸ್ತ್ರೀಯರ ದರ್ಶನವಾಗದಂತೆ ನೋಡಿಕೊಂಡು ಶ್ರಾದ್ಧಕರ್ಮವನ್ನು ಪೂರೈಸುವುದು ಅವಶ್ಯವಾಗಿದೆ.

ಬೆಕ್ಕು, ಕೋಳಿ, ಹಂದಿ, ನಾಯಿ ಮೊದಲಾದ ಪ್ರಾಣಿಗಳು ಆ ಶ್ರಾದ್ಧಕರ್ಮ ಸ್ಥಳದ ಹತ್ತಿರ ಬರದಂತೆ ನೋಡಿಕೊಳ್ಳಬೇಕು. ಅಂದರೆ ಆ ಸ್ಥಳದ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳಬೇಕು.

★★★

ಶ್ರಾದ್ಧಕರ್ಮದಲ್ಲಿ ಆಮಂತ್ರಣಯೋಗ್ಯ, ಅಯೋಗ್ಯ ಬ್ರಾಹ್ಮಣರು ಯಾರು?

ದೇವಕಾರ್ಯದಲ್ಲಿ ಆಮಂತ್ರಿಸುವ ಬ್ರಾಹ್ಮಣನನ್ನು ಅವನ ಸತ್ವಶುದ್ಧಿಯ ವಿಷಯದಲ್ಲಿ ಪರೀಕ್ಷಿಸುವ ಕಾರಣವಿಲ್ಲ. ಆದರೆ ಪಿತೃಕಾರ್ಯದಲ್ಲಿ ಆಮಂತ್ರಿಸುವ ಬ್ರಾಹ್ಮಣರ ವಿದ್ಯೆ, ಆಚಾರ ವಿಚಾರಗಳನ್ನು ಪರೀಕ್ಷಿಸಿಯೇ ಆಮಂತ್ರಣ ನೀಡಬೇಕಾದುದು ಅವಶ್ಯವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[73]

ಶ್ರಾದ್ಧ ಕರ್ಮದಲ್ಲಿ ಆಮಂತ್ರಣಕ್ಕೆ ಯೋಗ್ಯ ಬ್ರಾಹ್ಮಣರು ಯಾರು? ಅಯೋಗ್ಯರು ಯಾರು? ಎಂಬುದನ್ನು ಶ್ರೀಮನ್ ಮಹಾಭಾರತ ಅನುಶಾಸನ ಪರ್ವದಲ್ಲಿ ತಿಳಿಸಿಕೊಟ್ಟಿದ್ದಾರೆ.

ಸತ್ಕುಲ ಪ್ರಸೂತನಾಗಿಯೂ, ಕರ್ಮಠನಾಗಿಯೂ, ವೇದವಿದ್ವಾಂಸನಾಗಿಯೂ, ದಯಾಳುವಾಗಿಯೂ, ಲಜ್ಜಾಶೀಲನಾಗಿಯೂ, ಸರಳ, ಸತ್ಯನಿಷ್ಠನಾಗಿಯೂ, ಇರುವ ಬ್ರಾಹ್ಮಣನು ಶ್ರಾದ್ಧಕರ್ಮದಲ್ಲಿ ಆಮಂತ್ರಣ ಯೋಗ್ಯನಾಗಿದ್ದಾನೆ.[74]

ಯಾವ ಬ್ರಾಹ್ಮಣನು ತ್ರಿಸಂಧ್ಯಗಳನ್ನು ಗಾಯತ್ರೀ ಮಂತ್ರವನ್ನು ಜಪಿಸುವನೋ, ಭಿಕ್ಷಾವೃತ್ತಿಯಿಂದ ಜೀವಿಸುವನೋ, ಕ್ರಿಯಾನಿಷ್ಠನೋ, ಅವನು ಶ್ರಾದ್ಧಕರ್ಮದಲ್ಲಿ ಆಮಂತ್ರಣಯೋಗ್ಯನಾಗಿದ್ದಾನೆ.[75]

ಪತಿತನಾಗಿರುವ, ಜಡನಾಗಿರುವ, ಉನ್ಮತ್ತರಾಗಿರುವ ಬ್ರಾಹ್ಮಣರನ್ನು ದೇವ, ಪಿತೃಕರ್ಮಗಳಲ್ಲಿ ಆಮಂತ್ರಿಸಬಾರದು.[76]

---

73. ನ ಬ್ರಾಹ್ಮಣಂ ಪರೀಕ್ಷೇತ ದೈವೇಷು ಸತತಂ ನರಃ।
ಕವ್ಯ ಪ್ರದಾನೇ ತು ಬುಧಾಃ ಪರೀಕ್ಷ್ಯ ಬ್ರಾಹ್ಮಣಂ ವಿದುಃ ॥
ಶ್ರೀಮನ್ ಮಹಾಭಾರತಅನುಶಾಸನ ಪರ್ವ

74. ಕುಲೀನಃ ಕರ್ಮಕೃದ್ವೈದ್ಯಸ್ತಥೈವಾಪ್ಯಾನೃಶಂಸ್ಯವಾನ್।
ಹ್ರೀಮಾನ್ ಋಜುಃ ಸತ್ಯವಾದೀ ಪಾತ್ರಂ ಪೂರ್ವೇ ಚ ಯೇತ್ರಯಃ॥
ಶ್ರೀಮನ್ ಮಹಾಭಾರತಅನುಶಾಸನ ಪರ್ವ

75. ಸಾವಿತ್ರೀಂ ಜಪತೇ ಯಸ್ತು ತ್ರಿಕಾಲಂ ಭರತರ್ಷಭಃ ।
ಭಿಕ್ಷಾವೃತ್ತಿಃ ಕ್ರಿಯಾ ವಾಂಶ್ಚ ಸರಾಜನ್ ಕೇತನಕ್ಷಮಃ ॥ ಮ. ಭಾ., ಅ. ಪ.

76. ಯಾವಂತಃ ಪತಿತಾ ವಿಪ್ರಾ ಜಡೋನ್ಮತ್ತಾಸ್ತಥೈವ ಚ ।
ದೈವೇ ವಾಪ್ಯಥ ಪಿತ್ರೇ ವಾ ರಾಜನ್ ನಾರ್ಹಂತಿ ಕೇತನಮ್॥ ಮ. ಭಾ., ಅ. ಪ.

ತೊನ್ನುರೋಗಿ, ನಪುಂಸಕ, ಕುಷ್ಠರೋಗಿ, ಕ್ಷಯರೋಗಿ, ಮೂರ್ಛೆರೋಗಿ, ಕುರುಡ, ಇಂಥ ಬ್ರಾಹ್ಮಣರು ಶ್ರಾದ್ಧಕರ್ಮದಲ್ಲಿ ಆಮಂತ್ರಣಕ್ಕೆ ಅಯೋಗ್ಯರೆನಿಸಿದ್ದಾರೆ.[77]

ಶೂದ್ರರಿಗೆ ಯಜ್ಞಮಾಡಿಸುವವ, ಶೂದ್ರರಿಗೆ ಅಧ್ಯಯನ ಮಾಡಿಸುವವ, ಶೂದ್ರರೇ ಶಿಷ್ಯರಾಗಿ ಉಳ್ಳವ, ಇವರು ಶ್ರಾದ್ಧಕರ್ಮದಲ್ಲಿ ಆಮಂತ್ರಣ ಅಯೋಗ್ಯರಾಗಿದ್ದಾರೆ. [78]

ಮೊದಲು ಶ್ರೇಷ್ಠಬ್ರಾಹ್ಮಣನಾಗಿ, ಸದಾಚಾರಸಂಪನ್ನನಾಗಿ, ನಂತರ ನೀಚ ವರ್ಣದ ಸ್ತ್ರೀಯನ್ನು ಪರಿಗ್ರಹ ಮಾಡಿದರೆ ಅಂಥ ಬ್ರಾಹ್ಮಣನು ಸಕಲವಿದ್ಯಾ ಪಾರಂಗತ ನಾಗಿದ್ದರೂ ಶ್ರಾದ್ಧಕರ್ಮದಲ್ಲಿ ಆಮಂತ್ರಣ ಅಯೋಗ್ಯನೆನಿಸಿದ್ದಾನೆ.[79]

ಬಡ್ಡಿಗಾಗಿ ಹಣಕೊಡುವ, ಹೆಚ್ಚು ಬಡ್ಡಿಯನ್ನು ಕೊಡುವ, ಪ್ರಾಣಿಗಳ ಕ್ರಯ ವಿಕ್ರಯ ಮಾಡುವ ಬ್ರಾಹ್ಮಣನು ಶ್ರಾದ್ಧಕರ್ಮದಲ್ಲಿ ಆಮಂತ್ರಣ ಅಯೋಗ್ಯನಾಗಿದ್ದಾನೆ.[80]

ಯಾರು ಹೆಂಗಸರಿಗೆ ಪ್ರಾಧಾನ್ಯತೆ ಕೊಟ್ಟು ಅವರ ಅಡಿಯಾಳಾಗಿರುವನೋ, ಶಸ್ತ್ರಾಸ್ತ್ರ ತಯಾರಿಸಿ ಜೀವನ ಮಾಡುವನೋ ಮತ್ತು ಸಂಧ್ಯಾ, ಗಾಯತ್ರೀ ಜಪ ಮಾಡುವುದಿಲ್ಲವೋ ಅಂತಹ ಬ್ರಾಹ್ಮಣನು ಶ್ರಾದ್ಧಕರ್ಮದಲ್ಲಿ ಆಮಂತ್ರಣಕ್ಕೆ ಅಯೋಗ್ಯನಾಗಿದ್ದಾನೆ.[81]

★★★

ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರ ಸಂಖ್ಯೆ, ಆಹ್ವಾನ ಇತ್ಯಾದಿ

ಶ್ರಾದ್ಧದ ಹಿಂದಿನ ದಿನ ಸಾಯಂಕಾಲ ವೇದಾಧ್ಯಯನ ಸಂಪನ್ನರಾದ

77. ಶ್ವಿತ್ರೀ ಕ್ಲೀಬಶ್ಚ ಕುಷ್ಠೀ ಚ ತಥಾ ಯಕ್ಷ್ಮಹತಶ್ಚಯಃ ।
ಅಪಸ್ಮಾರೀ ಚ ಯಶ್ಚಾಂಧೋ ರಾಜನ್ ನಾರ್ಹಂತಿ ಕೇತನಮ್ ॥ ಮ. ಭಾ., ಅ. ಪ.

78. ಹೋತಾರೋ ವೃಷಲಾನಾಂ ಚ ವೃಷಲಾಧ್ಯಾಪಕಸ್ತಥಾ ।
ತಥಾ ವೃಷಲ ಶಿಷ್ಯಾಶ್ಚ ರಾಜನ್ನಾರ್ಹಂತಿ ಕೇತನಮ್ ॥ ಮ. ಭಾ., ಅ. ಪ.

79. ಅಗ್ರಣೀರ್ಯಃ ಕೃತಂ ಪೂರ್ವಂ ವರ್ಣಾವರ ಪರಿಗ್ರಹಃ ।
ಬ್ರಾಹ್ಮಣಃ ಸರ್ವವಿದ್ಯೋऽಪಿ ರಾಜನ್ನಾರ್ಹಂತಿ ಕೇತನಮ್ ॥
ಶ್ರೀಮನ್ ಮಹಾಭಾರತಅನುಶಾಸನ ಪರ್ವ

80. ಋಣಕರ್ತಾಚ ಯೋ ರಾಜನ್ಯಶ್ಚ ವಾರ್ಧುಷಿಕೋನರಃ ।
ಪ್ರಾಣಿ ವಿಕ್ರಯ ವೃತ್ತಿಶ್ಚ ರಾಜನ್ನಾರ್ಹಂತಿ ಕೇತನಮ್ ॥ ಮ. ಭಾ., ಅ. ಪ.

81. ಸ್ತ್ರೀಪೂರ್ವಾಃ ಕಾಂಡಪೃಷ್ಠಾಶ್ಚ ಯಾವಂತೋ ಭರತರ್ಷಭ ।
ಅಜಪಾ ಬ್ರಾಹ್ಮಣಾಶ್ಚೈವ ಶ್ರಾದ್ಧೇ ನಾರ್ಹಂತಿ ಕೇತನಮ್ ॥ ಮ. ಭಾ., ಅ. ಪ.

ಸದಾಚಾರಿಗಳಾದ ಬ್ರಾಹ್ಮಣರನ್ನು ನಿಮಂತ್ರಿಸಬೇಕು. ಶ್ರಾದ್ಧಕ್ಕಾಗಿ ನಿಮಂತ್ರಣ ಮಾಡಿದ ಮೇಲೆ ಶ್ರಾದ್ಧ ಭೋಕ್ತೃವಿಗೂ, ಶ್ರಾದ್ಧಕರ್ತೃವಿಗೂ ಬ್ರಹ್ಮಚರ್ಯದಿಂದ ಇರಬೇಕೆಂಬ ನಿಯಮ ಉಂಟು. ಶ್ರಾದ್ಧಕ್ಕಾಗಿ ನಿಮಂತ್ರಣ ಮಾಡುವಾಗ ''ದೋಗ್ಧ್ರೀನ್'' ಎಂಬ ಮಂತ್ರ ಜಪಿಸಬೇಕು. ಆಮಂತ್ರಿತ ಬ್ರಾಹ್ಮಣನು '' ನಿಷಂಗಿಣಃ'' ಎಂಬ ಮಂತ್ರ ಜಪಿಸಬೇಕು. ಶ್ರಾದ್ಧ ಭೋಜನವಾದ ಮೇಲೆ ''ಕಯಾನಶ್ಚಿತ್ರ'' ಎಂಬ ವಾಮದೇವ್ಯ ಸೂಕ್ತವನ್ನು ಪಠಿಸಬೇಕು. ಹೀಗೆ ಮಾಡಿದರೆ ಶ್ರಾದ್ಧ ಭೋಜನ ಪ್ರಯುಕ್ತವಾದ ಪಾಪವು ಭೋಕ್ತೃವಿಗೆ ಬರುವುದಿಲ್ಲ.

ದೈವಸ್ಥಾನಕ್ಕೆ ಇಬ್ಬರು ಬ್ರಾಹ್ಮಣರನ್ನು, ಪಿತೃಸ್ಥಾನಕ್ಕೆ ವಿಷಮಸಂಖ್ಯೆಯಲ್ಲಿ ಅಂದರೆ ಒಂದು, ಮೂರು, ಐದು ಸಂಖ್ಯೆಯಲ್ಲಿ ಬ್ರಾಹ್ಮಣರನ್ನು ನಿಮಂತ್ರಿಸಬೇಕು.

ಶ್ರಾದ್ಧಕರ್ತೃವು ಅತ್ಯಂತ ಸಮೃದ್ಧನಾಗಿದ್ದರೂ, ಮೇಲೆ ಹೇಳಿದ ರೀತಿಯಲ್ಲಿ ಬ್ರಾಹ್ಮಣರನ್ನು ನಿಮಂತ್ರಿಸಬೇಕು. ಶ್ರಾದ್ಧ ವಿಸ್ತಾರವನ್ನು ಮಾಡಕೂಡದು. ಇದಕ್ಕೆ ಕಾರಣ ಹೀಗಿದೆ.

ಶ್ರಾದ್ಧಕ್ಕೆ ಬಹಳ ಜನಗಳನ್ನು ನಿಮಂತ್ರಿಸಿದರೆ ಬಂದ ಬ್ರಾಹ್ಮಣರರಿಗೆ ಯಥೋಚಿತ ಉಪಚಾರ ನಡೆಸಲು ಸಾಧ್ಯವಾಗುವುದಿಲ್ಲ. ದೇಶ, ಸ್ಥಳ ಸಾಕಾಗದೆ ಮಡಿ, ಮೈಲಿಗೆ ಸರಿಯಾಗಿ ಆಗದಿರಬಹುದು. ಶ್ರಾದ್ಧದ ಕಾಲಾತಿ ಪಾತವೂ ಆಗಬಹುದು.

ಶ್ರಾದ್ಧದಲ್ಲಿ ನಿಮಂತ್ರಿತ ಬ್ರಾಹ್ಮಣರ ಸಂಖ್ಯೆ ಕಡಿಮೆಯಾದಷ್ಟು ಶ್ರಾದ್ಧಕಾರ್ಯ ಚೆನ್ನಾಗಿ ನೆರವೇರುತ್ತದೆ.

ಶ್ರಾದ್ಧದಲ್ಲಿ ಬ್ರಾಹ್ಮಣ ಸಂಖ್ಯೆಯ ಕುರಿತು ಪುರಾಣಗಳಲ್ಲಿ ಹೀಗೆ ತಿಳಿಸಿದ್ದಾರೆ. ದೇಶ, ಕಾಲ, ಮನೆಯ ಸೌಕರ್ಯಗಳೆಲ್ಲಾ ಇಲ್ಲದಿದ್ದಾಗ ದೈವ, ಪಿತೃಸ್ಥಾನ ಎರಡರಲ್ಲಿಯೂ ಒಬ್ಬೊಬ್ಬ ಬ್ರಾಹ್ಮಣರನ್ನು ನಿಮಂತ್ರಿಸಬೇಕು.

ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಕೂಡಿದಾಗ ಹರಟೆ, ಮಾತುಕತೆಗಳಲ್ಲಿ ಮನಸ್ಸು ತೊಡಗಿ, ಶ್ರಾದ್ಧಕರ್ಮದಲ್ಲಿ ಏಕಾಗ್ರತೆಯು ಹೊರಟು ಹೋಗುತ್ತದೆ.

ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರನ್ನು ನಿಮಂತ್ರಿಸಿ ಶ್ರಾದ್ಧವನ್ನು ಚೆನ್ನಾಗಿ ನೆರವೇರಿಸಿ ದೇವ, ಪಿತೃಗಳ ಅನುಗ್ರಹವನ್ನು ಸಂಪಾದಿಸಬೇಕು.

★★★

ಶ್ರಾದ್ಧಾಚರಣೆಯಲ್ಲಿ ಕುತಪಕಾಲ

ಶ್ರಾದ್ಧಕರ್ಮವನ್ನು ಆಚರಿಸುವಾಗ ಕುತಪಕಾಲ, ಎಳ್ಳು (ತಿಲ), ದೌಹಿತ್ರ (ಮಗಳ ಮಗ) ಇವು ಮೂರು ಅತ್ಯವಶ್ಯವಾಗಿ ಇರಲೇಬೇಕು. ಇವುಗಳಲ್ಲಿ ಕುತಪಕಾಲದ ಕುರಿತಂತೆ ಪರಿಚಯ ಇಲ್ಲಿದೆ.

ದಿವಸಸ್ಯಾಷ್ಟಮೇ ಭಾಗೇ ಮಂದೀಭವತಿ ಭಾಸ್ಕರಃ ।
ಸ ಕಾಲಃ ಕುತಪೋಜ್ಞೇಯಃ ಪಿತೃಣಾಂ ದತ್ತಮಕ್ಷಯಮ್॥

ಮತ್ಸ್ಯಪುರಾಣ

ಹಗಲಿನ ಹದಿನೈದು ಮುಹೂರ್ತಗಳಲ್ಲಿ ಎಂಟನೆಯ ಮುಹೂರ್ತವು 'ಕುತಪ' ಕಾಲವೆನಿಸುತ್ತದೆ. ಈ ಕುತಪಕಾಲದಲ್ಲಿ ಮಾಡಿದ ಶ್ರಾದ್ಧವು ಅಕ್ಷಯ ಫಲವನ್ನು ಕೊಡುತ್ತದೆ.

ಕುತ್ಸಿತವಾದ ಪಾಪವೆಲ್ಲಸುಟ್ಟು ನಾಶವಾಗುವುದರಿಂದ ಇದಕ್ಕೆ ''ಕುತಪ'' ಕಾಲವೆಂದು ಹೆಸರು ಬಂದಿದೆ. ಮಧ್ಯಾಹ್ನ ಕಾಲವು ''ಕುತಪ'' ಎನಿಸಿದೆ. ಈ ಕಾಲದಲ್ಲಿ ಮಾಡುವ ಶ್ರಾದ್ಧ ಕಾರ್ಯದಲ್ಲಿ ಅವಶ್ಯವಾಗಿ ಇರಬೇಕಾದ ಎಂಟು ವಸ್ತುಗಳಿಗೂ ''ಕುತಪ''ವೆಂದೇ ಹೆಸರಿದೆ.

ಮಧ್ಯಾಹ್ನಃ ಖಡ್ಗಪಾತ್ರಂ ಚ ತಥಾ ನೈಪಾಲಕಂಬಲಃ।
ರೂಪ್ಯಂ ದರ್ಭಾಸ್ತಿಲಾ ಗಾವೋ ದೌಹಿತ್ರಶ್ಚಾಷ್ಟಮಃ ಸ್ಮೃತಃ।
ಪಾಪಂ ಕುತ್ಸಿತಮಿತ್ಯಾಹುಸ್ತಸ್ಯ ಸಂತಾಪಕಾರಕಾಃ ।
ಅಷ್ಟಾವೇತೇ ಯತಸ್ತಸ್ಮಾತ್ ಕುತಪಾ ಇತಿ ವಿಶ್ರುತಾಃ॥

ಕಾಲಿಕಾ ಪುರಾಣ

(1) ಮಧ್ಯಾಹ್ನಕಾಲ (2) ಖಡ್ಗಪಾತ್ರ (3) ನೇಪಾಳದ ಕಂಬಳಿ (4) ಬೆಳ್ಳಿ (5) ದರ್ಭೆ (6) ಎಳ್ಳು (7) ಗೋವು (8) ಮಗಳ ಮಗ (ಮೊಮ್ಮಗ) ಈ ಎಂಟರಲ್ಲಿಯೂ ''ಕುತಪ'' ಶಬ್ದದ ಪ್ರಯೋಗವಿದೆ.

''ಕು'' ಶಬ್ದಕ್ಕೆ ಕುತ್ಸಿತವಾದ ಪಾಪವೆಂದರ್ಥ. ಮೇಲೆ ತಿಳಿಸಿದ ಎಂಟೂ ವಸ್ತುಗಳು ಕುತ್ಸಿತವಾದ ಪಾಪಗಳನ್ನು ನಾಶಮಾಡುತ್ತವೆ.

ಕಾರಣ ಮಧ್ಯಾಹ್ನಕಾಲ ಮುಂತಾದ ಎಂಟು ವಸ್ತುಗಳನ್ನು ''ಕುತಪ'' ಗಳೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಬೆಳಿಗ್ಗೆ 11-30 ಗಂಟೆಯ ನಂತರ ಕುತಪ ಕಾಲ

ಪ್ರಾರಂಭವಾಗಿ ಮಧ್ಯಾಹ್ನ 3-30 ಗಂಟೆಯವರೆಗೆ ಇರುವುದು. ಈ ಕಾಲದಲ್ಲಿ ಶ್ರಾದ್ಧ ಮಾಡುವದು ಪ್ರಶಸ್ತ. ನಂತರ ಮಾಡುವುದು ನಿಷಿದ್ಧವಾಗಿದೆ.

ಆದ್ದರಿಂದ ಈ ಕಾಲವನ್ನು 'ಸ್ವಧಾಭವನ ಕಾಲ'' ಎಂದು ಕರೆಯುತ್ತಾರೆ. ಈ ವಿಷಯವನ್ನು ಮತ್ಸ್ಯಪುರಾಣದಲ್ಲಿ ತಿಳಿಸಿದ್ದಾರೆ.

ಇನ್ನು ''ದ್ವಾದಶೀ ಶ್ರಾದ್ಧ ವಿಷಯೇ ಕುತಪೋ ನ ಹ್ಯಪೇಕ್ಷತೇ'' ಉಕ್ತಿಯಂತೆ, ದ್ವಾದಶೀ ಶ್ರಾದ್ಧ ವಿಷಯದಲ್ಲಿ ''ಕುತಪ'' ಕಾಲದ ನಿರ್ಬಂಧ ವಿಲ್ಲವೆಂದು ತಿಳಿಯುವುದು ಅವಶ್ಯ.

★★★

ಶ್ರಾದ್ಧಾಚರಣೆಯಲ್ಲಿ ತಿಲ, ದೌಹಿತ್ರ

ದೇವತೆಗಳನ್ನು ಉದ್ದೇಶಿಸಿ ಮಾಡುವ ಹವ್ಯಕಾರ್ಯಗಳಲ್ಲಿಯೂ, ಪಿತೃಗಳನ್ನು ಉದ್ದೇಶಿಸಿ ಮಾಡುವ ಕವ್ಯ(ಶ್ರಾದ್ಧಾದಿ) ಕಾರ್ಯಗಳಲ್ಲಿಯೂ ತಿಲ (ಎಳ್ಳು) ಅತ್ಯಂತ ಅವಶ್ಯಕ ವಸ್ತುವಾಗಿದೆ. ದೇವತಾ ಪಿತೃ ಕಾರ್ಯಗಳನ್ನು ಸಾಂಗವಾಗಿ ಪೂರೈಸಿ ಯಜಮಾನನನ್ನು ರಕ್ಷಿಸಲು ತಿಲದ ಅವಶ್ಯಕತೆ ಉಂಟು.

ಮಧುನಾಮಕ ದೈತ್ಯನನ್ನು ಶ್ರೀಹರಿಯು ಸಂಹಾರ ಮಾಡುವಾಗ ಅವನ ದೇಹದ ಬೆವರಿನ ಹನಿಗಳಿಂದ ಎಳ್ಳು, ದರ್ಭೆ, ಉದ್ದು ಹುಟ್ಟಿವೆ. ಆದ್ದರಿಂದ ಇವು ಮೂರು ಪವಿತ್ರವಾಗಿವೆ. ಈ ಕೆಳಗಿನ ಪುರಾಣವಾಕ್ಯಗಳಲ್ಲಿ ಇದನ್ನು ತಿಳಿಸಿದ್ದಾರೆ.

ಯಸ್ಮಾನ್ಮಧುವಧೇ ಕಾಲೇ ವಿಷ್ಣೋರ್ದೇಹ ಸಮುದ್ಭವಾಃ ।
ತಿಲಾಃ ಕುಶಾಶ್ಚ ಮಾಷಾಶ್ಚ ತಸ್ಮಾತ್ ಶಾಂತ್ಯೈ ಭವಂತ್ವಿಹ ॥ ಮತ್ಸ್ಯಪುರಾಣ
ಮಮ ಸ್ವೇದ ಸಮುದ್ಭೂತಾ ಯತಸ್ತೇ ಪಾವನಾಸ್ತಿಲಾಃ ॥

ಗರುಡಪುರಾಣ

ತಿಲದಲ್ಲಿ ಬಿಳಿ, ಕಂದು, ಕಪ್ಪು ಹೀಗೆ ಮೂರು ಪ್ರಕಾರಗಳಿವೆ ಎಂಬುದಾಗಿ ಗರುಡ ಪುರಾಣದಲ್ಲಿ ತಿಳಿಸಿರುವರು.

ವರ್ಧಮಾನ ತಿಲಂ ಶ್ರಾದ್ಧಂ ಅಕ್ಷಯ್ಯಂ ಮನುರಬ್ರವೀತ್ ।
ಸರ್ವಕಾಮ್ಯೈಃ ಸ ಯಜತೇ ಯಸ್ತಿಲೈರ್ಯಜತೇ ಪಿತೄನ್ ॥

ಶ್ರೀಮನ್ ಮಹಾ-

ಎಳ್ಳು ಉಪಯೋಗಿಸಿ ಮಾಡಿದ ಶ್ರಾದ್ಧದಿಂದ ಪಿತೃಗಳ ತೃಪ್ತಿಯು, ಕುಟುಂಬದ ಅಭಿವೃದ್ಧಿಯು ಅಕ್ಷಯವಾಗುತ್ತದೆ. ಎಳ್ಳುಗಳಿಂದ ಯಾರು ಪಿತೃಗಳನ್ನು ಆರಾಧಿಸುವರೋ ಅವರು ಸಕಲ ಕಾಮನೆಗಳನ್ನು, ಸಿದ್ಧಿಯನ್ನು ಹೊಂದುತ್ತಾರೆ.

ಶ್ರಾದ್ಧಕರ್ಮದಲ್ಲಿ ಕಪ್ಪುಬಣ್ಣದ ಎಳ್ಳು ಅತಿ ಶ್ರೇಷ್ಠವಾದುದು ಎಂಬುದಾಗಿ ಪುರಾಣಗಳೂ ತಿಳಿಸುತ್ತವೆ. ಶ್ರಾದ್ಧಾರಂಭ ಕಾಲದಲ್ಲಿ ಶ್ರಾದ್ಧಮಾಡುವ ನೆಲದ ಸುತ್ತಲೂ ಬಾಗಿಲಿನವರೆಗೆ ತಿಲವನ್ನು ಚೆಲ್ಲಬೇಕು

ತಿಲಾನ್ ಅವಕಿರೇತ್ ತತ್ರ ಸರ್ವತೋ ಬಂಧಯೇದ್ ದಿಶಃ ।
ಅಸುರೋಪಹತಂ ಸರ್ವಂ ತಿಲೈಃ ಶುದ್ಧಂ ಜಲೇನ ಚ ॥ *ಪ್ರಚೇತಸ ವಚನ*

ಬ್ರಾಹ್ಮಣನು ಭೋಜನ ಮಾಡುವ ಸ್ಥಳಕ್ಕೆ ಬಂದು ಕುಳಿತ ಕೂಡಲೇ ಅಲ್ಲಿ ಎಲ್ಲ ಕಡೆಗಳಲ್ಲಿಯೂ ಎಳ್ಳನ್ನು ಚೆಲ್ಲಿ ದುಷ್ಟ ಶಕ್ತಿಗಳು ಪ್ರವೇಶಿಸದಂತೆ ದಿಗ್ಬಂಧನವನ್ನು ಮಾಡಬೇಕು. ಇದರಿಂದ ಬ್ರಾಹ್ಮಣರಿಗೆ ಒಳ್ಳೆಯ ರಕ್ಷಣೆ ನೀಡಿದಂತೆ ಆಗುತ್ತದೆ. ಅಸುರ, ರಾಕ್ಷಸ, ದಾನವ, ಪಿಶಾಚ ಮುಂತಾದ ದುಷ್ಟಶಕ್ತಿಗಳು ಶ್ರಾದ್ಧಭೋಜನ ಮಾಡುವ ಬ್ರಾಹ್ಮಣರಲ್ಲಿ ಆವಿಷ್ಟವಾಗುವ ಸಂಭವ ತಪ್ಪಿ ಹೋಗುತ್ತದೆ.

ಅಸುರಾದಿಗಳ ಸಂಪರ್ಕದಿಂದ ದುಷ್ಟವಾದ, ಅಪವಿತ್ರವಾದ ಎಲ್ಲವೂ ಜಲ ಮತ್ತು ತಿಲಗಳಿಂದ ಶುದ್ಧವಾಗುತ್ತದೆ. ಈ ಕಾರಣದಿಂದ ಶ್ರಾದ್ಧಕಾಲದಲ್ಲಿ '' ಅಪಹತಾ ಅಸುರಾ ರಕ್ಷಾಂಸಿ ಪಿಶಾಚಾಃ'' ಎಂಬಂತೆ - ಅಪ್ರದಕ್ಷಿಣಾಕಾರವಾಗಿ ತಿಲವನ್ನು ಎಲ್ಲಕಡೆ ಹಾಕುವ ಪದ್ಧತಿ ಬಂದಿದೆ.

ಅಡವಿಯಲ್ಲಿ ಹುಟ್ಟಿದ ಎಳ್ಳು ''ಜರ್ತಿಲ'' ಎಂದು ಪ್ರಸಿದ್ಧವಾಗಿದೆ. ಅದು ಶ್ರಾದ್ಧದಲ್ಲಿ ಅತ್ಯಂತ ಪವಿತ್ರವಾದದ್ದು. ಇದು ಸಿಗದಿದ್ದರೆ ಹೊಲದಲ್ಲಿ ಬೆಳೆದ ತಿಲವೂ ಗ್ರಾಹ್ಯವೇ. ಜರ್ತಿಲ ಆಗದಿದ್ದರೆ ಕರಿ ಎಳ್ಳನ್ನು, ಅದು ಸಿಗದಿದ್ದರೆ ನಾನಾ ಬಣ್ಣದ ಕೆಂಪು, ಕಂದು, ಅಥವಾ ಬಿಳಿ ಎಳ್ಳನ್ನು ಶ್ರಾದ್ಧಕರ್ಮಾಚರಣೆಯಲ್ಲಿ ಉಪಯೋಗಿಸಬಹುದೆಂದು ಯಮಸ್ಮೃತಿಕಾರರು ತಿಳಿಸಿದ್ದಾರೆ.

ಶ್ರಾದ್ಧಕರ್ಮದಲ್ಲಿ ಮಗಳ ಮಗನು (ದೌಹಿತ್ರನು) ಅತಿ ಪವಿತ್ರನೆನಿಸಿದ್ದಾನೆ. ಅವನನ್ನು ಅವಶ್ಯವಾಗಿ ಆಹ್ವಾನಿಸಿ ಶ್ರಾದ್ಧವನ್ನು ಮಾಡಬೇಕು.

ಶ್ರಾದ್ಧೇ ತ್ರೀಣಿ ಪವಿತ್ರಾಣಿ ದೌಹಿತ್ರಂ ಕುತಪಸ್ತಿಲಃ ॥

ಉಕ್ತಿಯಂತೆ - ಶ್ರಾದ್ಧಕರ್ಮದಲ್ಲಿ ಮಗಳಮಗ, ಕುತಪಕಾಲ, ಎಳ್ಳು ಈ ಮೂರು ಪವಿತ್ರವಾಗಿದೆ ಎಂಬುದನ್ನು ಮರೆಯಲಾಗದು.

★★★

ಶ್ರಾದ್ಧಾಚರಣೆಯಲ್ಲಿ ದರ್ಭೆಯ ಪಾತ್ರ

ಶ್ರಾದ್ಧಕರ್ಮವನ್ನು ಪ್ರಾರಂಭಿಸುವಾಗ ಆಚಮನ ಮಾಡಿದ ನಂತರ ದರ್ಭೆಗಳಿಂದ ಮಾಡಿದ ಪವಿತ್ರವು ಧರಿಸಲ್ಪಡುತ್ತದೆ, ದರ್ಭೆಗೆ ಕುಶ, ಬರ್ಹಿ, ಪವಿತ್ರ ಎಂಬ ನಾಮಾಂತರಗಳು ಇವೆ.

'ವಿರಿಂಚಿನಾ ಸಹೋತ್ಪನ್ನ ಪರಮೇಷ್ಠಿನಿಸರ್ಗಜ'' ಎಂಬ ಶ್ರೀನಾರದ ಮಹಾ ಪುರಾಣದ ವಾಕ್ಯದಂತೆ ದರ್ಭೆಯು ಬ್ರಹ್ಮದೇವರ ಜೊತೆಯಲ್ಲಿ ಉತ್ಪನ್ನವಾಯಿತೆಂದು ತಿಳಿದುಬರುತ್ತದೆ.

ನೀರಿನಲ್ಲಿದ್ದರೂ ಕಮಲದ ಎಲೆಗೆ ನೀರು ಅಂಟಿಕೊಳ್ಳದಿರುವಂತೆ ಪವಿತ್ರವನ್ನು ಧರಿಸಿದ ಕೈಗಳಿಗೆ ಯಾವ ದೋಷದ ಲೇಪವು ತಟ್ಟುವದಿಲ್ಲ. ಈ ಕಾರಣದಿಂದ ಶ್ರಾದ್ಧಕರ್ಮದ ಪ್ರಾರಂಭದಲ್ಲಿ ಪವಿತ್ರವನ್ನು ಧರಿಸಿಯೇ ಪ್ರಾರಂಭಿಸಬೇಕು.[82]

ಹೇಗೆ ದೇವೇಂದ್ರನ ಕೈಯಲ್ಲಿ ವಜ್ರಾಯುಧವೋ, ಹೇಗೆ ವಿಷ್ಣುವಿನ ಕೈಯಲ್ಲಿ ಸುದರ್ಶನ ಚಕ್ರವೋ, ಹೇಗೆ ರುದ್ರದೇವರ ಕೈಯಲ್ಲಿ ತ್ರಿಶೂಲವೋ ಹಾಗೇ ವಿಪ್ರನ ಕೈಯಲ್ಲಿರುವ ಆಯುಧವೆಂದರೆ ಪವಿತ್ರವು.[83]

ಪೌಷ್ಟಿಕ ಎಂದರೆ ವಿವಾಹವೇ ಮೊದಲಾಗಿ ಕರ್ಮಗಳಲ್ಲಿ ಐದು ದರ್ಭೆಯ ಪವಿತ್ರ ವನ್ನು, ಶಾಂತಿಕವಾದ ಹೋಮಹವನಾದಿಗಳಲ್ಲಿ ನಾಲ್ಕು ದರ್ಭೆಯ ಪವಿತ್ರವನ್ನು, ಪಿತೃ ಕಾರ್ಯಗಳಲ್ಲಿ ಮೂರು ದರ್ಭೆಯ ಪವಿತ್ರವನ್ನು, ನಿತ್ಯಕರ್ಮದಲ್ಲಿ ಎರಡು ದರ್ಭೆಯ ಪವಿತ್ರ ಧರಿಸಬೇಕು.[84]

---

82. ಯಥಾ ಪುಷ್ಕರ ಪರ್ಣೇಷು ಅಪಾಂ ಲೋಪೋ ನ ವಿದ್ಯತೇ ।
ಏವಂ ಪವಿತ್ರಹಸ್ತಸ್ಯ ನ ಲೇಪೋ ವಿದ್ಯತೇ ಕ್ವಚಿತ್ ॥ ಪುರಾಣವಚನ

83. ಯಥಾ ವಜ್ರಂ ಸುರೇಂದ್ರಸ್ಯ ಯಥಾ ಚಕ್ರಂ ಹರೇಸ್ತಥಾ ।
ತ್ರಿಶೂಲಂ ತ್ರಿನೇತ್ರಸ್ಯ ಯಥಾ ವಿಪ್ರ ಪವಿತ್ರಕಮ್ ॥ ಪುರಾಣವಚನ

84. ಪೌಷ್ಟಿಕಂ ಪಂಚ ದರ್ಭಾಶ್ಚ ಚತುರ್ದರ್ಭಾಶ್ಚ ಶಾಂತಿಕೇ ।
ಪೈತ್ರಿಕೇ ತು ತ್ರಿದರ್ಭಾಶ್ಚ ದ್ವೌ ದರ್ಭೌ ನಿತ್ಯಕರ್ಮಣಿ ॥ ಪುರಾಣವಚನ

''ಮಂತ್ರಂ ವಿನಾ ಧೃತಾ ಯತ್ತತ್ ಪವಿತ್ರಂ ನಿಷ್ಫಲಂ ಭವೇತ್'' ಉಕ್ತಿಯಂತೆ ಮಂತ್ರವಿಲ್ಲದೇ ಧರಿಸಿದ ಪವಿತ್ರವು ನಿಷ್ಫಲವಾಗುತ್ತದೆ. ಕಾರಣ ''ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ'' ಈ ಮಂತ್ರ ಹೇಳುತ್ತ ಪವಿತ್ರವನ್ನು ಧರಿಸಿ ಮತ್ತೆ ಆಚಮನ ಮಾಡಬೇಕು.

ಬ್ರಾಹ್ಮಣನಾದವನು ಅಹಂಕಾರರಹಿತನಾಗಿ ದರ್ಭೆಯ ಪವಿತ್ರವನ್ನು ಧರಿಸಬೇಕು. ಬೆಂಕಿಯು ಅರಳೆಯ ರಾಶಿಯನ್ನು ನಾಶ ಮಾಡುವಂತೆ ದರ್ಭೆಯ ಪವಿತ್ರ ಧರಿಸಿದವನ ಪಾಪಗಳು ನಾಶವಾಗುತ್ತವೆ.[85]

ಸ್ನಾನ, ಹೋಮ, ಜಪ, ದಾನ, ಸಾಧ್ಯಾಯ, ಪಿತೃಕಾರ್ಯ(ಶ್ರಾದ್ಧ) ಸಂಧ್ಯಾವಂದನೆ ಕಾರ್ಯಗಳನ್ನು ಮಾಡುವಾಗ ದರ್ಭೆಯ ಪವಿತ್ರವನ್ನು ಧರಿಸಿಯೇ ಮಾಡಬೇಕು.[86]

ಹೀಗಿರುವುದರಿಂದ ಶ್ರಾದ್ಧಕಾರ್ಯದಲ್ಲಿ ದರ್ಭೆಯ ಪವಿತ್ರವನ್ನು ಧರಿಸಿಯೇ ಮಾಡಬೇಕಾದುದು ಅವಶ್ಯವಾಗಿದೆ.

ಶ್ರಾದ್ಧಕರ್ಮದಲ್ಲಿ ಎಳ್ಳು, ದರ್ಭೆ, ಅಕ್ಷತೆ, ನೀರು ಅವಶ್ಯ ಏಕೆ?

ಶ್ರಾದ್ಧಕರ್ಮವನ್ನು ಮಾಡುವಾಗ ಎಳ್ಳು, ದರ್ಭೆ, ಬಿಳಿ ಅಕ್ಷತೆ, ನೀರು - ಇವುಗಳನ್ನು ಹಿಡಿದುಕೊಂಡೇ ದಾನ ಕೊಡುವ ಪದ್ಧತಿ ಇದೆ. ಇದಕ್ಕೆ ಕಾರಣವೇನೆಂಬುದನ್ನು ಶ್ರೀಪದ್ಮ ಮಹಾಪುರಾಣದಲ್ಲಿ ತಿಳಿಸಿದ್ದಾರೆ.

ಪೂರ್ವಕಾಲದಲ್ಲಿ ಮಾನವರು ಬಹು ವಿಧವಾದ ದಾನಗಳನ್ನು ನೀಡುತ್ತಿದ್ದರು. ಆದರೆ ದುಷ್ಟರಾದ ದೈತ್ಯರು ಅಲ್ಲಿ ಪ್ರವೇಶಿಸಿ ಬಲಾತ್ಕಾರದಿಂದ ಆ ದಾನಗಳನ್ನು ತಾವೇ ಸ್ವೀಕರಿಸುತ್ತಿದ್ದರು. ಆಗ ದೇವತೆಗಳು, ಪಿತೃಗಳು ಬ್ರಹ್ಮದೇವರ ಬಳಿಗೆ ಹೋಗಿ ಹೀಗೆ ನಿವೇದಿಸಿಕೊಂಡರು. ''ದೇವೋತ್ತಮ! ಈ ದುಷ್ಟರಾದ ದೈತ್ಯರು ನಮ್ಮ ಕಣ್ಣೆದುರೇ ನಾವು ನೋಡುತ್ತಿರುವಂತೆ ನಾವು ನೀಡಿದ ದಾನಗಳನ್ನು ಅಪಹರಿಸುತ್ತಿದ್ದಾರೆ. ನಾವು ಕೊಟ್ಟ ದಾನ ನಷ್ಟವಾಗಿ ಹೋಗುತ್ತಿದೆ. ಇದರಿಂದ ನಮ್ಮನ್ನು ರಕ್ಷಿಸಬೇಕು.''

ಆಗ ಬ್ರಹ್ಮದೇವರು ದೀರ್ಘವಿಚಾರ ಮಾಡಿ ಒಂದು ಉಪಾಯವನ್ನು ಹುಡುಕಿ ತೆಗೆದರು. ಪಿತೃಗಳಿಗೆ ಎಳ್ಳುಸಹಿತವಾಗಿ ದಾನ ಕೊಡಬೇಕು. ದೇವತೆಗಳಿಗೆ ದರ್ಭೆ, ಬಿಳಿ

---

85. ಕುಶ ಪಾಣಿಃ ಸದಾ ತಿಷ್ಠೇತ್ ಬ್ರಾಹ್ಮಣೋ ದಂಭ ವರ್ಜಿತಃ ।
ಸನಿತ್ಯಂ ಹಂತಿ ಪಾಪಾನಿ ತೂಲರಾಶಿಮಿವಾನಲಃ ॥ ಪುರಾಣವಚನ

86. ಸ್ನಾನೇ ಹೋಮೇ ಜಪೇ ದಾನೇ ಸ್ವಾಧ್ಯಾಯೇ ಪಿತೃಕರ್ಮಣಿ ।
ಕರೌ ಸದರ್ಭೌ ಕುರ್ವೀತ ತಥಾ ಸಂಧ್ಯಾಭಿವಾದನೇ ॥ ಆಚಾರಾರ್ಕಃ

ಅಕ್ಷತೆ, ನೀರು ಸಹಿತವಾಗಿ ದಾನ ಕೊಡಬೇಕು. ಎಳ್ಳು, ಬಿಳಿ ಅಕ್ಷತೆ, ದರ್ಭೆ, ನೀರು ಈ ನಾಲ್ಕು ಪದಾರ್ಥಗಳು ಯಜ್ಞಾಂಗಳಾಗಿರುವುದರಿಂದ ಇವು ಇದ್ದಲ್ಲಿ ದೈತ್ಯರು ಬರಲಾರರು. ಇವು ನಾಲ್ಕು ಪರಮ ಪವಿತ್ರ ಪದಾರ್ಥಗಳಾಗಿವೆ. ಈ ಪವಿತ್ರ ಪದಾರ್ಥಗಳ ಜೊತೆ ನೀಡಿದ ದಾನವನ್ನು ಮುಟ್ಟುವ ಶಕ್ತಿ ದೈತ್ಯರಿಗೆ ಇರುವುದಿಲ್ಲ ಆದ್ದರಿಂದ ದೇವತೆಗಳಿಗೆ ದಾನ ನೀಡುವಾಗ ಬಿಳಿ ಅಕ್ಷತೆಯನ್ನು , ಪಿತೃಗಳಿಗೆ ದಾನ ನೀಡುವಾಗ ಎಳ್ಳುಗಳನ್ನು, ಎರಡೂ ಕಡೆ ದರ್ಭೆ, ನೀರುಯುಕ್ತವಾಗಿ ದಾನ ನೀಡಿದರೆ ಅದನ್ನು ದೈತ್ಯರು ಮುಟ್ಟಲು ಬಾರದೇ ನೇರವಾಗಿ ಪಿತೃ, ದೇವತೆಗಳಿಗೆ ಮಾತ್ರ ಅದು ಸೇರುತ್ತದೆ. ಮತ್ತು ಈ ನಾಲ್ಕು ಇಲ್ಲದೇ ದಾನ ನೀಡಿದರೆ ದೈತ್ಯರು ಬಲಾತ್ಕಾರವಾಗಿ ತಮ್ಮ ಅಧಿಕಾರ ಸ್ಥಾಪಿಸುತ್ತಾರೆ. ದಾನ ನೀಡುವವರಿಗೆ ಯಾವ ಫಲವೂ ದೊರೆಯುವದಿಲ್ಲ, ಪುಣ್ಯ ಪ್ರಾಪ್ತಿಯೂ ಆಗುವದಿಲ್ಲ.

ಆದ್ದರಿಂದ ಶಾಸ್ತ್ರದಲ್ಲಿ ಈ ಎಳ್ಳು, ಅಕ್ಷತೆ, ದರ್ಭೆ, ನೀರು ಈ ನಾಲ್ಕು ವಸ್ತುಗಳ ಸಹಿತವಾಗಿ ದೇವಕಾರ್ಯ ಪಿತೃಕಾರ್ಯ ಮಾಡಬೇಕೆಂದು ಕಡ್ಡಾಯ ಮಾಡಿದ್ದಾರೆ.

ಶ್ರಾದ್ಧಕರ್ಮದಲ್ಲಿ ದೇವತೆ. ಪಿತೃಗಳಿಗೆ ಉಪಚಾರ ಹೇಗೆ?

ಶ್ರಾದ್ಧಕರ್ಮಗಳಲ್ಲಿ ದೇವತೆಗಳ ಮತ್ತು ಪಿತೃಗಳ ಉಪಚಾರ ಕ್ರಮದಲ್ಲಿ ವ್ಯತ್ಯಾಸಗಳಿವೆ. ಅವುಗಳನ್ನು ಸರಿಯಾಗಿ ತಿಳಿದುಕೊಂಡು ಕಾರ್ಯ ಪ್ರವೃತ್ತರಾಗುವದು ಒಳಿತು.

	ಉಪಚಾರ	ದೇವತೆಗಳಿಗೆ	ಪಿತೃಗಳಿಗೆ
1.	ದರ್ಭೆ	ಸಮಸಂಖ್ಯೆ	ವಿಷಮಸಂಖ್ಯೆ
2.	ಮಂಡಲ	ದೀರ್ಘಚತುರಸ್ರ	ವೃತ್ತ(ವರ್ತುಳ)
3.	ಪೂಜೆ	ಅಕ್ಕಿಕಾಳು	ತಿಲ
4.	ಉಪವೀತಿ	ಸವ್ಯ	ಅಪಸವ್ಯ
5.	ಪಾತ್ರೆ, ದಕ್ಷಿಣೆ	ಸುವರ್ಣ	ರಜತ
6.	ಚಲನ	ಪ್ರದಕ್ಷಿಣಾಕಾರ	ಅಪ್ರದಕ್ಷಿಣಾಕಾರ
7.	ಅರ್ಪಣೆ	ಸ್ವಾಹಾಕಾರ	ಸ್ವಧಾಕಾರ
8.	ತೀರ್ಥ	ದೇವತೀರ್ಥ	ಪಿತೃತೀರ್ಥ
9.	ಬ್ರಾಹ್ಮಣರು	ಇಬ್ಬರುಅಥವಾ ಒಬ್ಬರು	ಮೂವರು ಅಥವಾ ಒಬ್ಬರು

ಶ್ರಾದ್ಧಕರ್ಮದಲ್ಲಿ ವಿಶ್ವೇದೇವತೆಗಳು

ದಕ್ಷಪ್ರಜಾಪತಿಗೆ ''ವಿಶ್ವಾ'' ಎಂಬ ಮಗಳಿದ್ದಳು. ಬ್ರಹ್ಮನು ಅವಳನ್ನು ಧರ್ಮನಿಗೆ ಕೊಟ್ಟು ಮದುವೆ ಮಾಡಿದನು. ಅವಳಲ್ಲಿ ಜನಿಸಿದ ಹದಿಮೂರು ದೇವತೆಗಳಿಗೆ ವಿಶ್ವೇ ದೇವತೆಗಳೆಂದು ಕರೆಯುತ್ತಾರೆ. ಇವರು ತ್ರಿಲೋಕ ಪ್ರಸಿದ್ಧರು. ಒಂದು ಸಲ ಇವರು ಹಿಮವತ್ ಪರ್ವತದ ಮೇಲೆ ಘೋರ ತಪಸ್ಸನ್ನು ಮಾಡಿದರು. ಆಗ ಸಂತುಷ್ಟರಾದ ಪಿತೃದೇವತೆಗಳು ಮತ್ತು ಬ್ರಹ್ಮನು ಪ್ರತ್ಯಕ್ಷರಾಗಿ ''ವರ ಕೇಳಿಕೊಳ್ಳಿರಿ'' ಎಂದರು. ಅಗ ಇವರು ''ಶ್ರಾದ್ಧದಲ್ಲಿ ನಮಗೆ ಭಾಗವು ಸಿಗಲಿ'' ಎಂದು ವರ ಕೇಳಿಕೊಂಡರು. ಬ್ರಹ್ಮನು ಹಾಗೆ ಆಗಲಿ ಎಂದನು. ಪಿತೃಗಳು '' ಶ್ರಾದ್ಧ ಮಾಡುವವರು ನಮ್ಮ ಜೊತೆಯಲ್ಲಿಯೇ ನಿಮ್ಮನ್ನು ಪೂಜಿಸಲಿ, ಗಂಧ, ಮಾಲ್ಯ, ವಸ್ತ್ರ ಅನ್ನಾದಿಗಳನ್ನು ನಮಗಿಂತ ಮೊದಲು ನಿಮಗೆ ಕೊಡಲಿ. ಮಂಡಲವಿಸರ್ಜನೆ ಮಾತ್ರ ಮೊದಲು ನಮ್ಮದಾಗಲಿ ನಂತರ ನಿಮ್ಮದಾಗಲಿ'' ಎಂದು ವರ ಕೊಟ್ಟರು.

ಬೇರೆ ಬೇರೆ ಶ್ರಾದ್ಧಗಳಲ್ಲಿ ಅವರ (ವಿಶ್ವೇದೇವತೆಗಳ) ಹೆಸರು ಈ ರೀತಿಯಾಗಿದೆ

(1)	ನಾಂದೀ ಶ್ರಾದ್ಧದಲ್ಲಿ -	ಸತ್ಯ, ವಸು.
(2)	ಪಾರ್ವಣ ಶ್ರಾದ್ಧದಲ್ಲಿ - (ಸಾಂವತ್ಸರಿಕ ಶ್ರಾದ್ಧದಲ್ಲಿಕೂಡ)	ಪುರೂರವ, ಆದ್ರ.
(3)	ತೀರ್ಥ ಶ್ರಾದ್ಧದಲ್ಲಿ - (ಮಹಾಲಯ ಶ್ರಾದ್ಧದಲ್ಲಿಕೂಡ)	ಧುರಿ, ವಿಲೋಚನ
(4)	ಸಪಿಂಡೀಕರಣ ಶ್ರಾದ್ಧದಲ್ಲಿ(ನೈಮಿತ್ತಿಕ) -	ಕಾಮ, ಕಾಲ
(5)	ಕಾಮ್ಯ (ಇಷ್ಟಿ) ಶ್ರಾದ್ಧದಲ್ಲಿ -	ಕ್ರತು, ದಕ್ಷ
(6)	ಹಿರಣ್ಯ ಶ್ರಾದ್ಧದಲ್ಲಿ -	ಧನು, ರುಚಿ
(7)	ಏಕೋದ್ದಿಷ್ಟ ಶ್ರಾದ್ಧದಲ್ಲಿ -	ರುದ್ರ

ಆಯಾ ಶ್ರಾದ್ಧಕ್ಕೆ ಕ್ಲುಪ್ತರಾದ ವಿಶ್ವೇದೇವತೆಗಳು ಆಯಾ ಪಿತೃಗಳನ್ನು ಜೊತೆಯಲ್ಲಿ ಕರೆದುಕೊಂಡು ಬರುವರೆಂದೂ, ಹೋಗುವಾಗ ಪಿತೃಗಳು ಮುಂದೆಯೂ, ವಿಶ್ವೇದೇವತೆಗಳು ಹಿಂದೆಯೂ ಹೋಗುವರೆಂದು ತಿಳಿದುಬರುತ್ತದೆ.

ಇವರ ಈ ಜನ್ಮ ಚರಿತ್ರೆ ಮತ್ತು ಹೆಸರು ಗೊತ್ತಿಲ್ಲದವರು ಕನಿಷ್ಟಪಕ್ಷ ಶ್ರಾದ್ಧದ ಸಂದರ್ಭದಲ್ಲಿ ಈ ಶ್ಲೋಕವನ್ನು ಹೇಳಬೇಕು.

ಆಗಚ್ಛಂತು ಮಹಾಭಾಗಾ ವಿಶ್ವೇದೇವಾಃ ಮಹಾಬಲಾಃ।
ಯೇ ಅತ್ರವಿಹಿತಾಃ ಶ್ರಾದ್ಧೇ ಸಾವಧಾನಾ ಭವಂತು ತೇ॥

ಪುರಾಣವಚನ

ಶ್ರಾದ್ಧಕರ್ಮದಲ್ಲಿ ಬರುವ ಒಂದು ಮಂತ್ರದ ಹಿನ್ನೆಲೆ

ಶ್ರಾದ್ಧಕರ್ಮವನ್ನು ಪ್ರಾರಂಭಿಸುವ ಕಾಲದಲ್ಲಿ ಯಜಮಾನನು ಬ್ರಹ್ಮದಂಡವನ್ನು (ತಿಲ, ಹಿರಣ್ಯ, ಕುಶ, ಯವ, ಇವುಗಳನ್ನು ತಟ್ಟೆಯಲ್ಲಿಟ್ಟು) ಹಿಡಿದುಕೊಂಡು ಬ್ರಾಹ್ಮಣರ ಪ್ರದಕ್ಷಿಣೆಯನ್ನು ಈ ಕೆಳಗಿನ ಮಂತ್ರವನ್ನು ಹೇಳುತ್ತ ಮಾಡುವದು ವಾಡಿಕೆಯಾಗಿ ಬಂದಿದೆ.

ಸಮಸ್ತ ಸಂಪತ್ ಸಮವಾಪ್ತಿ ಹೇತವಃ
ಸಮುತ್ಥಿತಾಪತ್ಕುಲ ಧೂಮಕೇತವಃ।
ಅಪಾರಸಂಸಾರ ಸಮುದ್ರ ಸೇತವಃ
ಪುನಂತು ಮಾಂ ಬ್ರಾಹ್ಮಣಪಾದಪಾಂಸವಃ॥

ಈ ಮಂತ್ರವು ಪದ್ಮಮಹಾಪುರಾಣದಲ್ಲಿ ಉಕ್ತವಾಗಿದೆ. ಇದರ ಹಿನ್ನೆಲೆ ಹೀಗಿದೆ.

ಹಿಂದೊಮ್ಮೆ ಶ್ರೀ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಲು ಹೊರಟ ಭೃಗುಮುನಿಗಳು ಮೊದಲು ಕೈಲಾಸವಾಸಿಯಾದ ರುದ್ರದೇವರ ಹತ್ತಿರ ಬರುತ್ತಾರೆ. ಆಗ ರುದ್ರದೇವರು ಪಾರ್ವತೀದೇವಿಯರೊಂದಿಗೆ ಕ್ರೀಡಿಸುತ್ತ ಇರುತ್ತಾರೆ. ತಮ್ಮಲ್ಲಿಗೆ ಬಂದ ಭೃಗು ಮುನಿಗಳನ್ನು ಸತ್ಕರಿಸದೇ ಇದ್ದ ಪ್ರಯುಕ್ತ ಭೃಗು ಮುನಿಗಳು ಶಾಪಕೊಟ್ಟು ಅಲ್ಲಿಂದ ಹೊರಟು ಸತ್ಯ ಲೋಕದಲ್ಲಿದ್ದ ಬ್ರಹ್ಮದೇವರ ಹತ್ತಿರ ಬರುತ್ತಾರೆ. ಬ್ರಹ್ಮದೇವರೂ ಕೂಡ ಅವರನ್ನು ಸತ್ಕರಿಸಲಿಲ್ಲ. ಆಗ ಭೃಗುಮುನಿಗಳು ಬ್ರಹ್ಮದೇವರನ್ನು ಕುರಿತು ''ಯಾರೂ ನಿನ್ನನ್ನು ಪೂಜಿಸದಿರಲಿ'' ಎಂದು ಹೇಳಿ ಹೊರಟುಹೋಗುತ್ತಾರೆ.

ನಂತರ ಭೃಗುಮುನಿಗಳು ವೈಕುಂಠಕ್ಕೆ ಬರುತ್ತಾರೆ. ಕ್ಷೀರಸಮುದ್ರದ ಉತ್ತರತಟದಲ್ಲಿದ್ದ ವಿಷ್ಣುಲೋಕದಲ್ಲಿ ಅವರನ್ನು ಯಾರೂ ತಡೆಯಲಿಲ್ಲ. ಶೇಷಪರ್ಯಂಕದಲ್ಲಿದ್ದ ಶ್ರೀವಿಷ್ಣುವು ಲಕ್ಷ್ಮೀದೇವಿಯರಿಂದ ಸೇವಿತನಾಗಿದ್ದನ್ನು ನೋಡುತ್ತಲೇ ಕೋಪದಿಂದ

ಭೃಗುಮುನಿಗಳು ಶ್ರೀವಿಷ್ಣುವಿನ ವಕ್ಷಸ್ಥಳಕ್ಕೆ ತಮ್ಮ ಎಡಗಾಲಿನಿಂದ ಒದ್ದುಬಿಡುತ್ತಾರೆ. ಕೂಡಲೇ ಶ್ರೀವಿಷ್ಣುವು ಎದ್ದು ಭೃಗುಮುನಿಗಳಿಗೆ ನಮಸ್ಕಾರ ಮಾಡಿ ಮೆಲ್ಲನೇ ಅವರ ಕಾಲನ್ನು ಎತ್ತಿ ಒತ್ತುತ್ತ ಮಧುರ ಮಾತುಗಳನ್ನಾಡುತ್ತಾನೆ. ಬ್ರಾಹ್ಮಣೋತ್ತಮರೇ! ನಾನು ಇಂದು ಧನ್ಯನಾದೆ, ಕೃತ ಕೃತ್ಯನಾದೆ. ನನ್ನ ದೇಹಕ್ಕೆ ತಮ್ಮ ಪಾದಸ್ಪರ್ಶವಾಯಿತು. ನನಗೆ ಮುಂದೆ ಎಲ್ಲ ವಿಧ ಮಂಗಲ ಉಂಟಾಗುತ್ತದೆ, ಎನ್ನುತ್ತ ಹೀಗೆ ಸ್ತೋತ್ರ ಮಾಡುತ್ತಾನೆ.

ಸಮಸ್ತಸಂಪತ್ ಸಮವಾಪ್ತಿ ಹೇತವಃ
ಸಮುತ್ಥಿತಾಪತ್ಕುಲ ಧೂಮಕೇತವಃ।
ಅಪಾರ ಸಂಸಾರ ಸಮುದ್ರ ಸೇತವಃ
ಪುನಂತು ಮಾಂ ಬ್ರಾಹ್ಮಣಪಾದಪಾಂಸವಃ॥

ಎಲ್ಲ ವಿಧವಾದ ಸಂಪತ್ತು ಬರಲು ಕಾರಣವಾದ , ಆಪತ್ತು, ಕುತ್ತುಗಳಿಗೆಲ್ಲ ಧೂಮಕೇತುವಿನಂತಿರುವ, ಅಪಾರ ಸಂಸಾರವೆಂಬ ಸಮುದ್ರ ಸೇತುವಿನಂತಿರುವ ಬ್ರಾಹ್ಮಣರ ಪಾದಧೂಳಿಯು ನನ್ನನ್ನು ಪವಿತ್ರನನ್ನಾಗಿ ಮಾಡಲಿ.

ಹೀಗೆ ಹೇಳಿ ಶ್ರೀ ವಿಷ್ಣುವು ಲಕ್ಷ್ಮೀದೇವಿಯರಿಂದೊಡಗೂಡಿ ಅರ್ಘ್ಯ, ಪಾದ್ಯ, ಆಚಮನ, ಗಂಧ, ಚಂದನ, ದಿವ್ಯಹಾರಗಳಿಂದ ಭೃಗು ಮುನಿಗಳನ್ನು ಪೂಜೆ ಮಾಡುತ್ತಾನೆ. ಭಗವಂತನ ಈ ಕ್ಷಮಾಗುಣವನ್ನು ನೋಡಿ ಭೃಗುಮುನಿಗಳು ಆನಂದಭರಿತರಾಗಿ ಶ್ರೀವಿಷ್ಣುವೇ ಸರ್ವೋತ್ತಮನೆಂದು ಸಾರುತ್ತ ತಮ್ಮ ಸ್ಥಾನಕ್ಕೆ ಹೊರಟು ಹೋಗುತ್ತಾರೆ.

ಬ್ರಾಹ್ಮಣರ ಪಾದಧೂಳಿಯ ಮಹಿಮೆಯನ್ನು ಸಾರುವ ಈ ಮಂತ್ರವನ್ನು ಶ್ರಾದ್ಧದ ಪ್ರಾರಂಭದಲ್ಲಿ ಪ್ರತಿಯೊಬ್ಬರೂ ಉಚ್ಚರಿಸುತ್ತಿರುವುದು ಗಮನಾರ್ಹವಾಗಿದೆ.

ಶ್ರಾದ್ಧಕಾಲದಲ್ಲಿ ಅಗ್ನಿಗೆ ಆಹುತಿ ಏಕೆ ?

ಹಿಂದೆ ನಿಮಿರಾಜನು ಶ್ರಾದ್ಧಕರ್ಮವನ್ನು ಪ್ರಾರಂಭಿಸಿದ ನಂತರ ಎಲ್ಲ ಮಹರ್ಷಿಗಳು ಶಾಸ್ತ್ರವಿಧಿಗೆ ಅನುಸಾರವಾಗಿ ಪಿತೃಯಜ್ಞ(ಶ್ರಾದ್ಧ)ವನ್ನು ಮಾಡಲು ಆರಂಭಿಸಿದರು. ಹೀಗೆ ಶ್ರಾದ್ಧ ಮಾಡುವವರ ಸಂಖ್ಯೆ ಬೆಳೆದಂತೆ ದೇವತೆಗಳು ಮತ್ತು ಪಿತೃಗಳು ಅಜೀರ್ಣರೋಗದಿಂದ ಪೀಡಿತರಾದರು. ಅತಿಯಾದ ಶ್ರಾದ್ಧಾನ್ನದಿಂದ ಪೀಡಿತರಾದ ಅವರು ಅಜೀರ್ಣರೋಗ ನಿವಾರಣೋಪಾಯವನ್ನು ಕಂಡುಕೊಳ್ಳಲು ಸೋಮನ ಬಳಿಗೆ ಹೋಗಿ ಅವನಲ್ಲಿ ತಮ್ಮ ಅಜೀರ್ಣ ರೋಗದ ಕುರಿತು ತಿಳಿಸಿ ನಿವಾರಣೋಪಾಯ ಕೇಳಿದರು.

ಆಗ ಸೋಮನು ''ದೇವತೆಗಳೇ! ನೀವು ಶ್ರೇಯಸ್ಸನ್ನು ಬಯಸುವವರಾಗಿದ್ದರೆ ಈಗಲೇ ಬ್ರಹ್ಮಭವನಕ್ಕೆ ಹೋಗಿ ಬ್ರಹ್ಮದೇವರನ್ನು ಪ್ರಾರ್ಥಿಸಿರಿ'' ಎಂದನು. ಸೋಮನು ತಿಳಿಸಿದಂತೆ ದೇವತೆಗಳು ಮೇರುಶಿಖರದಲ್ಲಿ ವಿರಾಜಮಾನರಾದ ಬ್ರಹ್ಮ ದೇವರ ಬಳಿಗೆ ಬಂದು ತಮ್ಮ ಕಷ್ಟವನ್ನು ನಿವೇದಿಸಿದರು. '' ಪೂಜ್ಯರೇ! ನಾವು ಅಪಾರವಾದ ಶ್ರಾದ್ಧಾನ್ನವನ್ನು ತಿಂದು ಅಜೀರ್ಣರೋಗದಿಂದ ಕಷ್ಟ ಪಡುತ್ತಿದ್ದೇವೆ. ನಮ್ಮ ವಿಷಯದಲ್ಲಿ ಕೃಪೆ ತೋರಬೇಕು''ಎಂದರು.

ಆಗ ಬ್ರಹ್ಮದೇವರು '' ದೇವ, ಪಿತೃಗಳೇ! ನನ್ನ ಸಮೀಪದಲ್ಲಿರುವ ಈ ಅಗ್ನಿದೇವನು ನಿಮಗೆ ಶ್ರೇಯಸ್ಸನ್ನುಂಟುಮಾಡುತ್ತಾನೆ.'' ಎಂದು ಹೇಳಲು ಅಗ್ನಿಯು ದೇವತೆಗಳನ್ನು ಸಂತೈಸುತ್ತ ಹೇಳಿದನು.

ಸಹಿತಾಸ್ತಾತ ಭೋಕ್ಷ್ಯಾಮೋ ನಿವಾಪೇ ಸಮುಪಸ್ಥಿತೇ।
ಜರಯಿಷ್ಯಥ ಚಾಪ್ಯನ್ನಂ ಮಯಾಸಾರ್ಧಂ ನ ಸಂಶಯಃ॥

ಶ್ರೀಮನ್ ಮಹಾಭಾರತ ಅನುಶಾಸನ ಪರ್ವ

ದೇವ ಪಿತೃಗಳೇ! ಶ್ರಾದ್ಧದ ಸಮಯದಲ್ಲಿ ನಾವೆಲ್ಲರೂ ಸೇರಿಯೇ ಭೋಜನವನ್ನು ಮಾಡೋಣ. ನನ್ನೊಡನೆ ಭೋಜನ ಮಾಡುವ ನೀವು ಶ್ರಾದ್ಧಾನ್ನವನ್ನು ಅರಗಿಸಿಕೊಳ್ಳುವಿರಿ, ಇದರಲ್ಲಿ ಸಂಶಯವೇ ಇಲ್ಲ.

ಅಗ್ನಿಯ ಈ ಮಾತನ್ನು ಕೇಳಿ ಪಿತೃದೇವತೆಗಳು ನಿಶ್ಚಿಂತರಾದರು. ಈ ಕಾರಣದಿಂದ ಶ್ರಾದ್ಧ ಕಾಲದಲ್ಲಿ ಅಗ್ನಿಗೆ ಆಹುತಿ ಕೊಡುವುದು ವಾಡಿಕೆಯಾಗಿ ಬಂದಿತು.

ಆಹುತಿ ಕೊಡುವ ಕ್ರಮ ಹೀಗಿದೆ-

ಸೋಮಾಯೇತಿ ಚ ವಕ್ತವ್ಯಂ ತಥಾ ಪಿತೃಮತೇತಿ ಚ।

ಪಿಂಡ ಪ್ರದಾನ ಮಾಡುವ ಮೊದಲು ಅಗ್ನಿಗೂ ಹಾಗೂ ಸೋಮನಿಗೂ ಆಹುತಿಗಳನ್ನು ಕೊಡಬೇಕು. ಅದರ ಮಂತ್ರ ಹೀಗಿದೆ-

ಅಗ್ನಯೇ ಕವ್ಯವಾಹನಾಯ ಸ್ವಧಾನಮಃ।
ಸೋಮಾಯ ಪಿತೃಮತೇ ಸ್ವಧಾನಮಃ॥

ಹೀಗೆ ಅಗ್ನಿಗೆ ಹವಿರ್ಭಾಗವನ್ನು ಕೊಟ್ಟ ನಂತರ ಪಿತೃಗಳಿಗೆ ಪಿಂಡ ಪ್ರದಾನ ಮಾಡುತ್ತಾರೆ. ಅಂತಹ ಪಿಂಡವನ್ನು ಬ್ರಹ್ಮರಾಕ್ಷಸರು ದೂಷ್ಯವನ್ನಾಗಿ ಮಾಡುವದಿಲ್ಲ ಓಡಿ ಹೋಗುತ್ತಾರೆ.

ನಂತರ ಮೊದಲು ತಂದೆಗೆ ಪಿಂಡ ಪ್ರದಾನವನ್ನು ಮಾಡಬೇಕು ಆಮೇಲೆ ಪಿತಾಮಹನಿಗೆ, ತದನಂತರ ಪ್ರಪಿತಾಮಹನಿಗೆ ಪಿಂಡ ಪ್ರದಾನ ಮಾಡಬೇಕು. ಇದನ್ನೇ ''ಶ್ರಾದ್ಧವಿಧಿ'' ಎನ್ನುತ್ತಾರೆ. ಶ್ರಾದ್ಧದಲ್ಲಿ ಒಂದೊಂದು ಪಿಂಡವನ್ನಿಡುವಾಗಲೂ ಏಕಾಗ್ರಚಿತ್ತನಾಗಿ ಮನಸ್ಸಿನಲ್ಲಿ ''ಗಾಯತ್ರೀ'' ಮಂತ್ರವನ್ನು ಉಚ್ಚರಿಸುತ್ತಿರಬೇಕು.

ಶ್ರಾದ್ಧಕರ್ಮದಲ್ಲಿ ವಿಭಕ್ತಿ ನಿಯಮಗಳು

ಶ್ರಾದ್ಧಕರ್ಮವನ್ನು ಆಚರಿಸುವಾಗ ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ವಿಭಕ್ತಿಗಳನ್ನು ಬಳಸಿ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಇದರ ಕುರಿತು ಇಲ್ಲಿ ವಿವೇಚಿಸಲಾಗಿದೆ.

ಸಂಕಲ್ಪಾಸನಯೋಃ ಷಷ್ಠೀ ದ್ವಿತೀಯಾಽಽವಾಹನೇ ತಥಾ।
ಅನ್ನದಾನೇ ಚತುರ್ಥೀ ಸ್ಯಾಚ್ಛೇಷಾಃ ಸಂಬುದ್ಧಯಃ ಸ್ಮೃತಾಃ॥ *

(ನಿರ್ಣಯ ಸಿಂಧು)

ಶ್ರಾದ್ಧಸಂಕಲ್ಪವನ್ನು ಮಾಡುವಾಗ, ಆಸನ, ಕ್ಷಣ (ಆಮಂತ್ರಣ) ಇತ್ಯಾದಿಗಳಲ್ಲಿ ಷಷ್ಠೀ ವಿಭಕ್ತಿಯನ್ನು ಉಚ್ಚರಿಸಬೇಕು.

ದೇವ ಪಿತೃಗಳ ಆವಾಹನ ಕಾಲದಲ್ಲಿ ದ್ವಿತೀಯಾ ವಿಭಕ್ತಿಯನ್ನು ಅನ್ನದಾನಕಾಲದಲ್ಲಿ ಚತುರ್ಥೀ ವಿಭಕ್ತಿಯನ್ನು ಉಚ್ಚರಿಸಬೇಕು.

ಪಿಂಡದಾನ ಕಾಲದಲ್ಲಿ ಸಂಬುದ್ಧ್ಯಂತವಾಗಿ, ಪಿಂಡಾರ್ಚನ ಕಾಲದಲ್ಲಿ ಚತುರ್ಥ್ಯಂತವಾಗಿ ಉಚ್ಚರಿಸಬೇಕಾಗುತ್ತದೆ.

ಉದಾಹರಣೆ ಹೀಗಿದೆ.

1. ಪಿತೃ ಪಿತಾಮಹ ಪ್ರಪಿತಾಮಹಾನಾಂ -- ಮಾತೃ ಪಿತಾಮಹೀ ಪ್ರಪಿತಾಮಹೀನಾಂ ತೃಪ್ತ್ಯರ್ಥಂ ಕರಿಷ್ಯೇ ॥-**ಸಂಕಲ್ಪ**

2. ಪಿತೃ ಪಿತಾಮಹ ಪ್ರಪಿತಾಮಹಾನಾಂ ಸ್ಥಾನೇ ಇದಮಾಸನಂ ॥-**ಆಸನ**

---

* ಅನ್ನದಾನೇ ಚತುರ್ಥೀಚ ಶೇಷೇ ಸಂಭೋಧನಂ ತಥಾ ॥ ಪಾಠಾಂತರ
ತತ್ರ ಷಷ್ಠೀ ನಿರ್ದೇಶಃ ಸಂಕಲ್ಪೇ ಯಥಾಕೃತಃ।
ತಥಾ ಆಸನೇ ಅಕ್ಷಯೋದಕ ದಾನೇ ಚ ಯೋಜ್ಯಃ ॥

3. ಪಿತೃ ಪಿತಾಮಹ ಪ್ರಪಿತಾಮಹಾನ್ ಶರ್ಮಣಃ ಗೋತ್ರಾನ್ ವಸು- ರುದ್ರ- ಆದಿತ್ಯ- ಸ್ವರೂಪಾನ್ ತದಂತರ್ಯಾಮಿ ಪ್ರದ್ಯುಮ್ನ-ಸಂಕರ್ಷಣ- ವಾಸುದೇವಾನ್ ಭವತ್ಸು ಆವಾಹಯಿಷ್ಯೇ ॥ - **ಆವಾಹನ**

4. ಪಿತೃ ಪಿತಾಮಹ ಪ್ರಪಿತಾಮಹೇಭ್ಯಃ ಶರ್ಮಭ್ಯಃ ಗೋತ್ರೇಭ್ಯಃ ಇದಮಿದಮನ್ನಮ್ ॥

ಪಿತ್ರೇ ಶರ್ಮಣೇ ಗೋತ್ರಾಯ ವಸುರೂಪಾಯ - ಯೇ ಚ ತಮನುಗಚ್ಛಂತಿ ತೇಭ್ಯಶ್ಚ ಅಯಂ ಪಿಂಡಃ ತಸ್ಮೈ ತೇ ಸ್ವಧಾನಮಃ ॥[87]

5. ಪಿತೃ ಪಿತಾಮಹ ಪ್ರಪಿತಾಮಹಾಃ ....ಶರ್ಮಾಣಃ ಗೋತ್ರಾಃ ವಸು..... । ಮಾತೃ- ಪಿತಾಮಹೀ- ಪ್ರಪಿತಾಮಹ್ಯಃ ....ದಾಃ ಗೋತ್ರಾಃ ವಸು- ರುದ್ರ- ಆದಿತ್ಯ....... । ಇದಂ ವೋಽರ್ಘ್ಯಮ್ ॥ ಇತ್ಯಾದಿ

ಶ್ರಾದ್ಧಕರ್ಮದಲ್ಲಿ ಆಸನ, ಆವಾಹನ, ಪಾದಪ್ರಕ್ಷಾಲನ, ಅನ್ನದಾನ, ಅಕ್ಷಯ್ಯವಾಚನ, ಪಿಂಡಪ್ರದಾನ ಈ ಆರುಕಾಲಗಳಲ್ಲಿ ಪಿತೃಗಳ ಹೆಸರು, ಗೋತ್ರಗಳನ್ನು ಮೇಲೆ ತಿಳಿಸಿದಂತೆ ಉಚ್ಚಾರ ಮಾಡಬೇಕಾಗುತ್ತದೆ.[88]

ಶ್ರಾದ್ಧಕರ್ಮದಲ್ಲಿ ಪಿತೃಗಳಿಗೆ ಪಿಂಡಮಾಧ್ಯಮದಲ್ಲಿ ಆರಾಧನೆ ಏಕೆ ?

ಶ್ರಾದ್ಧಕರ್ಮದಲ್ಲಿ ಪಿತೃಗಳಿಗೆ ಅಂದರೆ ಪಿತೃ, ಪಿತಾಮಹ, ಪ್ರಪಿತಾಮಹರನ್ನು ಕುರಿತು ಮೂರು ಪಿಂಡಗಳನ್ನು ಇಟ್ಟು ಪೂಜಿಸುವುದು ರೂಢಿಯಲ್ಲಿ ಬಂದಿದೆ. ಇದರ ಹಿನ್ನಲೆಯನ್ನು ಶ್ರೀಮನ್ ಮಹಾಭಾರತ ಶಾಂತಿಪರ್ವದಲ್ಲಿ ತಿಳಿಸಿದ್ದಾರೆ.

ಹಿಂದೆ ನಾರದರು ದೇವಕಾರ್ಯವನ್ನು ಪೂರೈಸಿ ಪಿತೃಕಾರ್ಯದಲ್ಲಿ ತೊಡಗಿದ್ದರು. ಆ ಸಮಯದಲ್ಲಿ ಅವರು ನರನಾರಾಯಣರನ್ನು ಕುರಿತು ಶ್ರಾದ್ಧದಲ್ಲಿ ಪಿಂಡಾರಾಧನೆಯ ಬಗ್ಗೆ ಪ್ರಶ್ನೆ ಕೇಳುವರು.

ದೇವತೆಗಳು ಮೊದಲು ನೆಲದ ಮೇಲೆ ದರ್ಭೆಗಳನ್ನು ಹಾಸಿ ನಂತರ ಅವುಗಳ ಮೇಲೆ

---

87. ಮಾತೃಪಿಂಡ ಪ್ರದಾನದಲ್ಲಿ ಲಿಂಗ ವ್ಯತ್ಯಾಸ ಮಾಡಿ- ತಾಭ್ಯಶ್ಚ ಅಯಂ ಪಿಂಡಃ ತಸ್ಯೈ ತೇ ಸ್ವಧಾನಮಃ ॥ ಎಂದು ಹೇಳಬೇಕು

88. ಆಸನಾವಾಹನೇ ಪಾದ್ಯೇ ಅನ್ನದಾನೇ ತಥೈವ ಚ ।
ಅಕ್ಷಯೇ ಪಿಂಡ ದಾನೇ ಚ ಷಟ್ಸು ನಾಮಾನಿ ಕೀರ್ತಯೇತ್ ॥

ಮೂರು ಪಿಂಡಗಳನ್ನು ಇಟ್ಟು ಪೂಜಿಸುತ್ತಿದ್ದುದರ ಕಾರಣವೇನು? ಪಿತೃಸಂಜ್ಞೆಯನ್ನು ಹೇಗೆ ಪಡೆದರು? [89]

ಇದಕ್ಕೆ ಉತ್ತರವಾಗಿ ನರನಾರಾಯಣರು ಹೇಳುತ್ತಾರೆ-

ನಾರದನೇ ಕೇಳು! ಹಿಂದೆ ಗೋವಿಂದನು ನಷ್ಟವಾಗಿ ಹೋಗಿದ್ದ ಸಾಗರಗಳಿಂದ ಸುತ್ತುವರಿಯಲ್ಪಟ್ಟಿರುವ ಈ ಭೂಮಿಯನ್ನು ವರಾಹರೂಪಧರಿಸಿ ಬೇಗನೆ ಮೇಲಕ್ಕೆತ್ತಿದ್ದನು. ಲೋಕಹಿತದ ಕಾರ್ಯವನ್ನು ಆರಂಭಿಸಿದ ಆ ಭಗವಂತನು ಭೂಮಿಯನ್ನು ಉದ್ಧಾರಮಾಡಿ ಸ್ವಸ್ಥಾನವನ್ನು ಸ್ಥಾಪಿಸಿದನು. ಆಗ ಸೂರ್ಯನು ಹಗಲಿನ ಮಧ್ಯ ಭಾಗಕ್ಕೆ ಬಂದು ಮಾಧ್ಯಾಹಿಕ ಕಾಲವು ಪ್ರಾಪ್ತವಾಗಲು, ವರಾಹ ರೂಪೀ ಭಗವಂತನು ತನ್ನ ಕೋರೆ ಹಲ್ಲುಗಳಿಗೆ ಮೆತ್ತಿಕೊಂಡಿದ್ದ ಮಣ್ಣಿನಿಂದ ಮೂರು ಪಿಂಡಗಳನ್ನು ಮಾಡಿ ನೆಲದ ಮೇಲೆ ದರ್ಭೆ ಹಾಸಿ ಅದರ ಮೇಲೆ ಮೂರು ಪಿಂಡಗಳನ್ನು ಸ್ಥಾಪಿಸಿ ತನ್ನನ್ನೇ ಉದ್ದೇಶಿಸಿ ಆ ಪಿಂಡಗಳಲ್ಲಿ ಪಿತೃಗಳನ್ನು ಆವಾಹಿಸಿ ಮಾಡಿ ಯಥಾ ವಿಧಿಯಾಗಿ ಪೂಜಿಸಿದನು. [90]

ಈ ಮೂರು ಪಿಂಡಗಳ ಮೇಲೆ ಅಪಸವ್ಯದಿಂದ ತನ್ನ ದೇಹದಿಂದಲೇ ಹುಟ್ಟಿದ ಎಳ್ಳುಗಳಿಂದ ಪ್ರೋಕ್ಷಿಸಿ ಪಿಂಡ ಪೂಜೆಯ ವಿಷಯದಲ್ಲಿ ಒಂದು ನಿಯಮವನ್ನು ಸ್ಥಾಪಿಸುವ ಸಲುವಾಗಿ ವರಾಹ ರೂಪಿಯು ಹೀಗೆ ಹೇಳಿದನು.

ನಾನೇ ಎಲ್ಲ ಲೋಕಗಳ ಸೃಷ್ಟಿಕರ್ತನಾಗಿದ್ದೇನೆ. ನಾನು ಯಾವಾಗ ಪಿತೃದೇವತೆಗಳನ್ನು ಸೃಷ್ಟಿಸಲು ಆರಂಭಿಸಿದೆನೋ ಮತ್ತು ಇತರ ಪಿತೃಕಾರ್ಯ ವಿಧಿಗಳನ್ನು ಯೋಚಿಸುತ್ತಿದ್ದೆನೋ ಆ ಕ್ಷಣದಲ್ಲಿಯೇ ನನ್ನ ಕೋರೆಹಲ್ಲುಗಳಿಂದ ಮೂರು ಪಿಂಡಗಳು ದಕ್ಷಿಣದಿಕ್ಕಿಗೆ

---

89. ತ್ರೀನ್ ಪಿಂಡಾನ್ ನ್ಯಸ್ಯ ವೈ ಪೃಥ್ವ್ಯಾಂ ಪೂರ್ವಂ ದತ್ವಾ ಕುಶಾನಿತಿ।
ಕಥಂ ತು ಪಿಂಡಸಂಜ್ಞಾಂ ತೇ ಪಿತರೋ ಲೇಭಿರೇ ಪುರಾ॥
ಶ್ರೀಮನ್ ಮಹಾಭಾರತ ಶಾಂತಿ ಪರ್ವ 345 ಅಧ್ಯಾಯ

90. ಪ್ರಾಪ್ತೇ ಚಾಹ್ನಿಕಕಾಲೇ ತು ಮಧ್ಯದೇಶಗತೇ ರವೌ।
ದಂಷ್ಟ್ರಾವಿಲಗ್ನಾನ್ ತ್ರೀನ್ ಪಿಂಡಾನ್ ವಿಧಾಯ ಸಹಸಾ ಪ್ರಭುಃ॥
ಸ್ಥಾಪಯಾಮಾಸ ವೈ ಪೃಥ್ವ್ಯಾಂ ಕುಶಾನಾಸ್ತೀರ್ಯ ನಾರದ।
ಸ ತೇಷು ಆತ್ಮಾನಮುದ್ದಿಶ್ಯ ಪಿತ್ರ್ಯಂ ಚಕ್ರೇ ಯಥಾವಿಧಿ॥
ಶ್ರೀಮನ್ ಮಹಾಭಾರತ ಶಾಂತಿಪರ್ವ 345 ಅಧ್ಯಾಯ

ಭೂಮಿಯ ಮೇಲೆ ಬಿದ್ದವು. ಆದ್ದರಿಂದ ಈ ಮೂರು ಪಿಂಡಗಳು ಪಿತೃಸ್ವರೂಪಗಳೇ ಆಗಿದೆ.[91]

ದೇಹರಹಿತರಾದ ಪಿತೃಗಳು ಪಿಂಡಾಕಾರವನ್ನು ಧರಿಸುತ್ತಾರೆ. ನನ್ನಿಂದ ಸೃಷ್ಟರಾದ ಪಿಂಡರೂಪದಲ್ಲಿರುವ ಈ ಮೂವರು ಸನಾತನ ಪಿತೃಗಳಾಗಲಿ.[92]

ಈ ಮೂರು ಪಿಂಡಗಳು ಪಿತೃ, ಪಿತಾಮಹ, ಪ್ರಪಿತಾಮಹ ರೂಪವಾಗಿವೆ. ಈ ಮೂರು ಪಿಂಡಗಳಲ್ಲಿಯೂ ಅವರ ರೂಪಿನಿಂದ ನಾನೇ ಇರುತ್ತೇನೆ.[93]

ಈ ವಿಶ್ವದಲ್ಲಿ ನನ್ನಿಂದ ಅಧಿಕನಾದವನು ಯಾರೂ ಇಲ್ಲ. ಸಾಕ್ಷಾತ್ ನನ್ನಿಂದ ಪೂಜೆ ಮಾಡಲ್ಪಡುವವನು ಯಾವನಿದ್ದಾನೆ? ಈ ಪ್ರಪಂಚದಲ್ಲಿ ನನಗೆ ತಂದೆ ಯಾರು? ಎಲ್ಲರಿಗೂ ಪಿತಾಮಹನಾಗಿರುತ್ತೇನೆ. ಪಿತಾಮಹನಿಗೂ ನಾನೇ ತಂದೆಯಾಗಿದ್ದೇನೆ. ಈ ಜಗತ್ತಿಗೆ ನಾನೇ ಕಾರಣನಾಗಿದ್ದೇನೆ.[94]

ಹೀಗೆ ಸಂದೇಶನೀಡಿದೆ ವರಾಹರೂಪೀ ಭಗವಂತನು ತನ್ನನ್ನು ತಾನೇ ಆರಾಧಿಸಿ ಕೊಂಡು ಅಂತರ್ಧಾನನಾದನು.

ಈ ರೀತಿಯಲ್ಲಿ ಶ್ರೀವರಾಹರೂಪೀ ಭಗವಂತನ ಸಂದೇಶಕ್ಕನುಸಾರವಾಗಿ ಪಿತೃಗಳು ಪಿಂಡದಲ್ಲಿದ್ದು ಕೊಂಡು ಪೂಜೆಯನ್ನು ಸ್ವೀಕರಿಸುವರು.[95]

---

91. ಅಹಂ ಹಿ ಪಿತರಃ ಸ್ರಷ್ಟುಮುದ್ಯತೋ ಲೋಕಕೃತ್ ಸ್ವಯಮ್।
ಯಸ್ಯ ಚಿಂತಯತಃ ಸದ್ಯಃ ಪಿತೃಕಾರ್ಯ ವಿಧೀನ್ ಪರಾನ್॥
ದಂಷ್ಟ್ರಾಭ್ಯಾಂ ಪ್ರವಿನಿರ್ಧೂತಾ ಮಮೈತೇ ದಕ್ಷಿಣಾಂ ದಿಶಮ್।
ಆಶ್ರಿತಾ ಧರಣೀಂ ಪಿಂಡಾಸ್ತಸ್ಮಾತ್ ಪಿತರ ಏವ ತೇ॥
ಶ್ರೀಮನ್ ಮಹಾಭಾರತ ಶಾಂತಿಪರ್ವ 345 ಅಧ್ಯಾಯ

92. ತ್ರಯೋ ಮೂರ್ತಿ ವಿಹೀನಾ ವೈ ಪಿಂಡಮೂರ್ತಿಧರಾಸ್ತ್ವಿಮೇ।
ಭವಂತು ಪಿತರೋ ಲೋಕೇ ಮಯಾ ಸೃಷ್ಟಾಃ ಸನಾತನಾಃ॥ *ಶಾಂತಿಪರ್ವ*

93. ಪಿತೃ ಪಿತಾಮಹಶ್ಚೈವ ತಥೈವ ಪ್ರಪಿತಾಮಹ।
ಅಹಮೇವಾತ್ರ ವಿಜ್ಞೇಯಸ್ತ್ರಿಷು ಪಿಂಡೇಷು ಸಂಸ್ಥಿತಃ॥ *ಶಾಂತಿಪರ್ವ*

94. ಕೋ ವಾ ಮಮ ಪಿತಾ ಲೋಕೇ ಅಹಮೇವ ಪಿತಾಮಹಃ।
ಪಿತಾಮಹ ಪಿತಾ ಚೈವ ಅಹಮೇವಾತ್ರಕಾರಣಮ್॥ *ಶಾಂತಿಪರ್ವ*

95. ಏಷಾ ತಸ್ಯ ಸ್ಥಿತಿರ್ವಿಪ್ರ ಪಿತರಃ ಪಿಂಡ ಸಂಸ್ಥಿತಾಃ।
ಲಭಂತೇ ಸತತಂ ಪೂಜಾಂ ವೃಷಾಕಪಿವಚೋ ಯಥಾ॥ *ಶಾಂತಿಪರ್ವ*

ಶ್ರಾದ್ಧಕರ್ಮದಲ್ಲಿ ವರಾಹರೂಪೀ ಭಗವಂತನು ಪಿಂಡ ಪ್ರದಾನ ಕ್ರಿಯೆಯ ಮೂಲಕ ಪಿತೃಗಳ ಆರಾಧನೆಯನ್ನು ನಡೆಸಲು ಸಂದೇಶ ನೀಡಿದ ಪ್ರಯುಕ್ತ ಅವನನ್ನು ಕೂಡ ಅವಶ್ಯವಾಗಿ ಶ್ರಾದ್ಧ ದಿನದಂದು ಪೂಜಿಸಬೇಕು. ಇದರಿಂದ ಅವನ ಪ್ರೀತಿ ಉಂಟಾಗುವುದು ನಿಶ್ಚಿತ.

ಶ್ರಾದ್ಧದ ವಿಧಿ (ಪರಿಚಯಾತ್ಮಕ)

ಪಿಂಡಪ್ರದಾನ ಪೂರ್ವಕ ಮಾಡುವ ಶ್ರಾದ್ಧ

ಸೂರ್ಯೋದಯದಿಂದ ಅಷ್ಟಮ ಮುಹೂರ್ತ ಎಂದರೆ ಸಾಮಾನ್ಯವಾಗಿ ಮಧ್ಯಾಹ್ನ 11.30 ರಿಂದ 12.30ರ ವರೆಗಿನ ಕಾಲಕ್ಕೆ ಕುತಪಕಾಲ ಎನ್ನುತ್ತಾರೆ. ಇಷ್ಟರೊಳಗಾಗಿ ಶ್ರಾದ್ಧಕರ್ಮವನ್ನು ಪ್ರಾರಂಭಿಸಬೇಕು. ಈ ವೇಳೆಯಿಂದ ಮಧ್ಯಾಹ್ನ 3.30 ರೊಳಗಾಗಿ ಶ್ರಾದ್ಧವನ್ನು ಮುಗಿಸಲೇಬೇಕು. 3.30ರ ನಂತರ ಕಾಲಕ್ಕೆ ''ರಾಕ್ಷಸ ಕಾಲ'' ವೆಂದು ಕರೆಯುತ್ತಾರೆ. ಈ ಕಾಲದಲ್ಲಿ ಶ್ರಾದ್ಧ ಮಾಡಿದರೆ ಪಿತೃಗಳು ಸ್ವೀಕರಿಸುವುದಿಲ್ಲ.

ಯಜಮಾನನು ಸ್ನಾನ ಮಾಡಿ ಶುಚಿ, ಮಡಿ ಬಟ್ಟೆಗಳನ್ನು ಉಟ್ಟುಕೊಂಡು ಗೋಪೀಚಂದನ, ಮುದ್ರಾಧಾರಣೆ ಮಾಡಿಕೊಂಡು ಸಂಧ್ಯಾ, ದೇವ ಪೂಜಾದಿಗಳನ್ನು ಮಾಡಿ ಶ್ರಾದ್ಧಕ್ಕೆ ಬೇಕಾಗುವ ಅನ್ನವನ್ನು[96] ಭಗವಂತನಿಗೆ ನಿವೇದಿಸಿ ವೈಶ್ವದೇವ ಮಾಡಿ ಹಿಂದೆ ಹೇಳಿದ ಎಲ್ಲ ಪದಾರ್ಥಗಳನ್ನು ಇಟ್ಟುಕೊಂಡು ಶ್ರಾದ್ಧ ಕರ್ಮ ಪ್ರಾರಂಭಿಸಬೇಕು. ವಿಷ್ಣು ನೈವೇದ್ಯ ಮಾಡದೇ ಶ್ರಾದ್ಧ ಮಾಡುವವನು ನರಕಕ್ಕೆ ಹೋಗುತ್ತಾನೆ.

ಶ್ರಾದ್ಧಕ್ಕೆ ಬಂದ ಬ್ರಾಹ್ಮಣನು ಊರ್ಧ್ವಪುಂಡ್ರ, ಶಂಖ ಚಕ್ರಾದಿ ಮುದ್ರೆಗಳನ್ನು ಧರಿಸಿದವನಾಗಿದ್ದರೆ ಪಿತೃಗಳು, ಕೋಟಿ ಕಲ್ಪಾಂತ್ಯದವರೆಗೆ ತೃಪ್ತರಾಗುತ್ತಾರೆ.[97] ಶ್ರಾದ್ಧಕರ್ತನು ಶಂಖ ಚಕ್ರಧಾರಿಯಾಗಿ ಮಾಡಿದ ಶ್ರಾದ್ಧವು ಗಯಾ ಶ್ರಾದ್ಧಕ್ಕೆ ಸಮವೆನಿಸುತ್ತದೆ.[98]

---

96. ಶ್ರಾದ್ಧದ ಅನ್ನವನ್ನು ತುಳಸೀ ಕಾಷ್ಠವನ್ನು ಉಪಯೋಗಿಸಿ ಮಾಡಿದರೆ ಪಿತೃಗಳಿಗೆ ಅದು ಮೇರು ಪರ್ವತದ ಸಮವಾಗಿ ತೃಪ್ತಿಕೊಡುತ್ತದೆ (ಕೃ.ಸ್ಮೃ.ಮುಕ್ತಾವಳಿ)
97. ಊರ್ಧ್ವಪುಂಡ್ರಧರಂ ವಿಪ್ರಂ ಯಃ ಶ್ರಾದ್ಧೇ ಭೋಜಯಿಷ್ಯತಿ।
ಆಕಲ್ಪಕೋಟಿ ಪಿತರಸ್ತಸ್ಯ ಹೃಷ್ಟಾ ನ ಸಂಶಯಃ ॥ *(ಪದ್ಮ ಪುರಾಣ ಊರ್ಧ್ವಪುಂಡ್ರಮಹಾತ್ಮೆ)*
98. ಊರ್ಧ್ವಪುಂಡ್ರಧರೋ ಯಸ್ತು ಕುರ್ಯಾತ್ ಶ್ರಾದ್ಧಂ ಶುಭಾನನೇ।
ಕಲ್ಪಕೋಟಿಸಹಸ್ರಾಣಿ ಗಯಾಶಾದ್ಧ ಫಲಂ ಲಭೇತ್ ॥ ಪದ್ಮಪುರಾಣ

1. ಆಚಮನ- ಶ್ರಾದ್ಧದ ಆರಂಭದಲ್ಲಿ, ಸಮಾಪ್ತಿಯಲ್ಲಿ, ಪಾದಪ್ರಕ್ಷಾಲನ, ವಿಕಿರ, ಉಚ್ಛಿಷ್ಟಪಿಂಡ, ಪಿಂಡದಾನಗಳ ಅನಂತರ ಆಚಮನ ಮಾಡಲೇಬೇಕು. ಆರಂಭ, ಸಮಾಪ್ತಿ ಕಾಲಗಳಲ್ಲಿ ಎರಡು ಸಾರಿ ಆಚಮನ ಮಾಡಬೇಕು. ಉಳಿದ ಸಂದರ್ಭಗಳಲ್ಲಿ ಒಂದು ಸಲ, ಎಲ್ಲ ಆಚಮನಗಳನ್ನು ಪೂರ್ವಾಭಿಮುಖವಾಗಿಯೂ ಪಾದ ಪ್ರಕ್ಷಾಲನದ ನಂತರ ಆಚಮನವನ್ನು ಈಶಾನ್ಯಕ್ಕೆ ಅಭಿಮುಖವಾಗಿ ಮಾಡಬೇಕು.

2. ಪವಿತ್ರಧಾರಣ- ಪಿತೃಕಾರ್ಯಗಳಲ್ಲಿ ಮೂರು ದರ್ಭೆಗಳಿಂದ (ಸಾಗ್ರವಾದ) ಮಾಡಿದ ಪವಿತ್ರಗಳನ್ನು ಧರಿಸಬೇಕು. ಪಾದಪ್ರಕ್ಷಾಲನೆ, ಆಘ್ರಾಣ, ಉಚ್ಛಿಷ್ಟ ಪಿಂಡದಾನಗಳ ನಂತರ ಮೊದಲಿನ ಪವಿತ್ರವನ್ನು ವಿಸರ್ಜಿಸಿ ಹೊಸ ಪವಿತ್ರವನ್ನು ಧರಿಸ ಬೇಕು. ಎರಡೂ ಕೈಗಳ ಅನಾಮಿಕ ಬೆರಳುಗಳಲ್ಲಿ ಎರಡು ಪವಿತ್ರ ಧರಿಸಬೇಕು ಅಥವಾ ಬಲಗೈಯ ಅನಾಮಿಕ ಬೆರಳಿನಲ್ಲಿ ಆಗಲಿ ಪವಿತ್ರ ಧರಿಸಬೇಕು.[99]

3. ಪುನರಾಚಮನ- ಪವಿತ್ರವನ್ನು ಧರಿಸಿದ ನಂತರ ಪುನರಾಚಮನ ಮಾಡಬೇಕಾದುದು ಅವಶ್ಯವಾಗಿದೆ.

4. ಯವೋದಕ, ತಿಲೋದಕ- ಈಗ ದೇಶಕಾಲಾದಿಗಳನ್ನು ಹೇಳಿ ಅಪಸವ್ಯದಿಂದ ಪಿತೃಗಳ ಹೆಸರು ಗೋತ್ರ ಉಚ್ಚಾರಮಾಡಿ ವಸು ರುದ್ರ, ಆದಿತ್ಯಾಂತರ್ಗತ ಪ್ರದ್ಯುಮ್ನ, ಸಂಕರ್ಷಣ, ವಾಸುದೇವಾದಿರೂಪಗಳನ್ನು ಉಚ್ಚರಿಸಿ ಶ್ರಾದ್ಧ ಸಂಕಲ್ಪವನ್ನು ಮಾಡಿ ಸವ್ಯದಿಂದ ಯವೋದಕವನ್ನು (ಅಕ್ಕಿ, ನೀರನ್ನು) ಅಪಸವ್ಯದಿಂದ ತಿಲೋದಕ (ಎಳ್ಳುನೀರನ್ನು) ಬಿಡಬೇಕು.

5. ದರ್ಭೆ ಬ್ರಾಹ್ಮಣರಿಗೆ ಆಮಂತ್ರಣ ಕೊಡುವುದು- ಇದಕ್ಕೆ ಮೊದಲು ಪಾತ್ರಸ್ಥಾಪನ ವನ್ನು ಮಾಡಿ, ಮಾರ್ಜನ ಮಾಡಿಕೊಂಡು, ಬ್ರಹ್ಮದಂಡವನ್ನು ಹಿಡಿದುಕೊಂಡು ಬ್ರಾಹ್ಮಣರಿಗೆ ಪ್ರದಕ್ಷಿಣೆ ಮಾಡಿ[100] ಎರಡು ನಮಸ್ಕಾರಮಾಡಿ, ಶ್ರಾದ್ಧಕ್ಕೆ ಅಧಿಕಾರವನ್ನು ಪಡೆದುಕೊಂಡು ಅವರಿಗೆ (ದರ್ಭೆಬ್ರಾಹ್ಮಣರಿಗೆ) ಆಮಂತ್ರಣವನ್ನು ಕೊಡಬೇಕು.

---

99. ಅನಾಮಿಕಾಧೃತಾದರ್ಭಾ ಹ್ಯೇಕಾನಾಮಿಕಾಯಾಪಿ ವಾ ।
ದ್ವಾಭ್ಯಾಮನಾಮಿಕಾಭ್ಯಾಂ ತು ಧಾರ್ಯೇ ದರ್ಭಪವಿತ್ರಕೇ॥ ನಿರ್ಣಯಸಿಂಧು

100. ಬ್ರಹ್ಮದಂಡಾರ್ಥಮಾದಾಯ ಹಿರಣ್ಯಂ ಸಕುಶಂ ತಿಲಂ।
ದ್ರವ್ಯಂ ನಿವೇದ್ಯ ವಿಪ್ರಾಣಾಂ ಪುರತೋಽಯಸ್ತು ಶಕ್ತಿತಃ ॥ ವ್ಯಾಘ್ರಸ್ಮೃತಿ
(ಬ್ರಹ್ಮದಂಡ - ದಕ್ಷಿಣೆ, ದರ್ಭೆ, ಎಳ್ಳು)

6. ಪಾದ ಪ್ರಕ್ಷಾಲನ- ಬ್ರಾಹ್ಮಣರಿಗೆ ಸ್ವಾಗತವನ್ನು ಬಯಸಿ (ಹೇಳಿ) ಬ್ರಾಹ್ಮಣರನ್ನು ಕೂಡಿಸಿಯೇ ಪಾದ ತೊಳೆಯಬೇಕು. ನಿಲ್ಲಿಸಿ ಪಾದ ತೊಳೆದರೆ ಪಿತೃಗಳು ನಿರಾಶರಾಗಿ ಹೋಗುತ್ತಾರೆ. ಪಾದ ತೊಳೆಯುವಾಗ ಪವಿತ್ರವನ್ನು ತೆಗೆದು ಬಲಗಿವಿಯಲ್ಲಿ ಇಟ್ಟು ಕೊಳ್ಳಬೇಕು. ಕೈಯಲ್ಲಿ ಪವಿತ್ರವಿದ್ದರೆ ಪಿತೃಗಳಿಗೆ ವಜ್ರದಿಂದ ಹೊಡೆದಷ್ಟು ನೋವಾಗುತ್ತದೆ. ಈ ನೀರನ್ನು ಯಜಮಾನನು ಶಿರಸ್ಸಿನಲ್ಲಿ ಧರಿಸಬೇಕು.[101]

ಪಿತೃಬ್ರಾಹ್ಮಣರ ಪಾದ ಪ್ರಕ್ಷಾಲನೆಯ ವೇಳೆಯಲ್ಲಿ ಪಾದದ ಮುಂಭಾಗದಲ್ಲಿ ಪ್ರಪಿತಾಮಹನನ್ನು, ಮಧ್ಯದಲ್ಲಿ ಪಿತಾಮಹನನ್ನು, ಪಾದ ಮೂಲದಲ್ಲಿ ಪಿತನನ್ನು ಉದ್ದೇಶಿಸಿ ನೀರು ಹಾಕಬೇಕು. ಈ ಸಂದರ್ಭದಲ್ಲಿ ಬ್ರಾಹ್ಮಣರು ಪೂರ್ವಾಭಿಮುಖ ವಾಗಿಯೂ, ಕರ್ತನು ಪಶ್ಚಿಮಾಭಿಮುಖವಾಗಿಯೂ ಇರಬೇಕು.

ನಂತರ ಕರ್ತನು ಮೊದಲು ಈಶಾನ್ಯಾಭಿಮುಖನಾಗಿ ಆಚಮನ ಮಾಡಬೇಕು. ಆಮೇಲೆ ಬ್ರಾಹ್ಮಣನು ಆಚಮನ ಮಾಡಬೇಕು.

7. ಆಸನ- ಬ್ರಾಹ್ಮಣರಿಗೆ ದರ್ಭಾಸನವನ್ನು ಕೊಡಬೇಕು. ಇಲ್ಲವಾದರೆ ಮೊಳೆಯನ್ನು ಹೊಡೆಯದ ಮಣೆಯನ್ನು ಕೊಡಬೇಕು, ದೇವಬ್ರಾಹ್ಮಣರು ಪೂರ್ವಾಭಿಮುಖ ವಾಗಿಯೂ, ಪಿತೃಬ್ರಾಹ್ಮಣರು ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ದಕ್ಷಿಣಾಭಿಮುಖವಾಗಿ ಅವರು ಕೂಡಲೇ ಬಾರದು. ಆಸನವನ್ನು ಕೊಡುವಾಗ 'ಇದಮಾಸನಂ' ಎಂದು ಕರ್ತನು ಹೇಳಿದಾಗ 'ಸುಖಾಸನಂ' ಎಂದು ಬ್ರಾಹ್ಮಣರು ಹೇಳಬೇಕು. ದೇವ, ಪಿತೃಗಳನ್ನು ಆವಾಹಿಸಭೇಕು.

8. ಅರ್ಘ್ಯ- ಅರ್ಘ್ಯವನ್ನು ಕೊಡುವಾಗ 'ಇದಮರ್ಘ್ಯಂ' ಎಂದು ಕರ್ತನು ಹೇಳಿದಾಗ ''ಅಸ್ತು ಅರ್ಘ್ಯಂ'' ಎಂದು ಬ್ರಾಹ್ಮಣರು ಹೇಳಬೇಕು.

9. ಅಂತರ್ಯಾಮಿಪೂಜಾ- ಪಿತೃಗಳ ಪೂಜೆಯ ಸಂದರ್ಭದಲ್ಲಿ ಪಿತೃ, ಪಿತಾಮಹ, ಪ್ರಪಿತಾಮಹರ ಅಂತರ್ಗತರಾದ (ಕ್ರಮವಾಗಿ) ವಸು, ರುದ್ರ, ಆದಿತ್ಯರನ್ನು ಮತ್ತು ತದಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ, ಸಂಕರ್ಷಣ, ವಾಸುದೇವರನ್ನು ಪೂಜಿಸಬೇಕು. ಹೀಗೆ ಮಾಡದಿದ್ದರೆ ಆ ಶ್ರಾದ್ಧವನ್ನು ರಾಕ್ಷಸರು ಸ್ವೀಕರಿಸುತ್ತಾರೆ.

---

101. ವಿಪ್ರಪಾದೋದಕಂ ಶಿರಸಿ ಧಾರಯೇತ್ ॥

10. ಆವಾಹನ- ದೇವ ಪಿತೃಗಳ ಆವಾಹನ ಪೂರ್ವದಲ್ಲಿ ದೇವತೆಗಳಿಗೆ, ಪಿತೃಗಳಿಗೆ, ಮಹಾಯೋಗಿಗಳಿಗೆ, ಸ್ವಾಹಾ, ಸ್ವಧಾ ಇವರಿಗೆ ನಿತ್ಯದಲ್ಲಿ ನಮಸ್ಕರಿಸುತ್ತೇನೆ, ಎಂದು ಹೇಳಬೇಕು.[102] ಈ ಮಂತ್ರ ಮೂರು ಸಾರಿ ಹೇಳಿದರೆ ಪಿತೃಗಳು ಬೇಗನೆ ಬರುತ್ತಾರೆ.

11. ಗಂಧ- ಆವಾಹನೆಯನ್ನು ಮಾಡಿದ ನಂತರ ಗಂಧ, ತುಳಸಿಗಳನ್ನು ತಪ್ಪದೇ ಕೊಡಬೇಕು. ಇದರಿಂದ ಶ್ರಾದ್ಧವು ಅಕ್ಷಯವಾಗುತ್ತದೆ. ಗಂಧಕೊಡುವಾಗ ಕೈಯಲ್ಲಿ ಪವಿತ್ರವಿರಬಾರದು.

12. ಮಂಡಲ- ಪಿತೃಮಂಡಲವನ್ನು ವರ್ತುಲಾಕಾರವಾಗಿ ಈಶಾನ್ಯದಿಂದ ನೈಋತ್ಯಾಭಿಮುಖವಾಗಿ, ಅಪ್ರದಕ್ಷಿಣಾಕಾರವಾಗಿ ಮೊದಲು ಮಾಡಬೇಕು. ಅನಂತರ ದೇವಸ್ಥಾನದಲ್ಲಿ ನೈಋತ್ಯದಿಂದ ಈಶಾನ್ಯಾಭಿಮುಖವಾಗಿ ಪ್ರದಕ್ಷಿಣಾಕಾರವಾಗಿ ಚೌಕಮಂಡಲವನ್ನು ಮಾಡಬೇಕು. ಅನಂತರ ಭಸ್ಮದಿಂದ ಪುನಃ ಮಂಡಲ ಮಾಡಬೇಕು. ಭಸ್ಮದಿಂದ ಮಂಡಲ ಮಾಡದಿದ್ದರೆ ಆ ಸ್ಥಳವು ಆಸುರವಾಗುವುದು.

13. ಪಾತ್ರಾಸಾದನ- ಬ್ರಾಹ್ಮಣರ ಊಟಕ್ಕೆ ಮುತ್ತುಗದ ಎಲೆ (ಪಲಾಶ) ಶ್ರೇಷ್ಠವಾಗಿದೆ. ಹೆಚ್ಚಿನ ಧರ್ಮಶಾಸ್ತ್ರಕಾರರು ಶ್ರಾದ್ಧಭೋಜನದಲ್ಲಿ ಬಾಳೆ ಎಲೆಯನ್ನು ನಿಷೇಧಿಸಿದ್ದಾರೆ. ''ಹೇಮಾದ್ರಿ'' ಎಂಬುವರು ಅನಿವಾರ್ಯವಾದಲ್ಲಿ ಬಾಳೆ ಎಲೆ ಉಪಯೋಗಿಸಬಹುದು ಎಂದು ಹೇಳಿದ್ದಾರೆ.

14. ಪಾಣಿ ಹೋಮ- ಗೃಹಸ್ಥಾಶ್ರಮಿಗಳು ಪಾಣಿ ಹೋಮವನ್ನು ಪಿತೃಬ್ರಾಹ್ಮಣರ ಕೈಯಲ್ಲಿಯೂ, ಬ್ರಹ್ಮಚಾರಿ ಹಾಗೂ ವಿಧುರರು ದೇವ ಬ್ರಾಹ್ಮಣರ ಕೈಯಲ್ಲಿಯೂ ಪಾಣಿ ಹೋಮ ಮಾಡಬೇಕೆಂದು ತಿಳಿಸಿದ್ದಾರೆ.

15. ಭೋಜನ- ಪಾತ್ರಾಭಿಘಾರವನ್ನು ಮಾಡಿ ಅನ್ನ, ಪಾಯಸ, ಭಕ್ಷ್ಯ, ತುಪ್ಪ, ವ್ಯಂಜನಾದಿ ಪದಾರ್ಥಗಳು, ತೊವ್ವೆ, ಇವುಗಳನ್ನು ವಿಶ್ವದೇವತೆಗಳನ್ನು ಮೊದಲು ಮಾಡಿ ಎಲೆಯಲ್ಲಿ ಬಡಿಸಬೇಕು.[103] ನಂತರ ಅನ್ನ ಸೂಕ್ತ ಪಠಿಸಿ ಬ್ರಾಹ್ಮಣರಿಗೆ ತೀರ್ಥ ಕೊಟ್ಟು, ಅನ್ನವನ್ನು

102. ದೇವತಾಭ್ಯಃ ಪಿತೃಭ್ಯಶ್ಚ ಮಹಾಯೋಗಿಭ್ಯ ಏವ ಚ ।
ನಮಃ ಸ್ವಾಹಾಯೈ ಸ್ವಧಾಯೈ ಚ ನಿತ್ಯಮೇವ ನಮೋನಮಃ ॥

103. ಅನ್ನಂ ಚ ಪಾಯಸಂ ಭಕ್ಷ್ಯಂ ಘೃತಂ ಚ ವ್ಯಂಜನಾದಿಕಮ್ ।
ಸೂಪಮಂತೇ ಪ್ರದಾತವ್ಯಂ ವಿಶ್ವೇದೇವ ಪುರಸ್ಸರಂ ॥

ಗಾಯತ್ರಿಯಿಂದ ಪ್ರೋಕ್ಷಿಸಿ ಆಪೋಶನ ಹಾಕಬೇಕು. ಭೋಜನ ಸಮಯದಲ್ಲಿ ಮೌನದಿಂದ ಇರಬೇಕು. ಕರ್ತನು ಅಭಿಶ್ರವಣ ಸೂಕ್ತ ಅಥವಾ ಕಠೋಪನಿಷತ್ತನ್ನು ಪಾರಾಯಣ ಮಾಡಬೇಕು.

16. ಪಿಂಡಪ್ರದಾನ- ಬ್ರಾಹ್ಮಣರ ಭೋಜನ ಸಮಯದಲ್ಲಿ ಕರ್ತನು ಪಿತೃಗಳನ್ನು ಉದ್ದೇಶಿಸಿ ಪಿಂಡಪ್ರದಾನವನ್ನು ಮಾಡಬೇಕು. ಪಿಂಡಗಳ ಆಕಾರವು ಮಾಸಿಕ-ವಾರ್ಷಿಕ ಶ್ರಾದ್ಧಗಳಲ್ಲಿ ತೆಂಗಿನಕಾಯಿಯಷ್ಟು, ತೀರ್ಥ ಹಾಗೂ ದರ್ಶಶ್ರಾದ್ಧಗಳಲ್ಲಿ ಮೊಟ್ಟೆಯ ಅಥವಾ ಬಿಲ್ವ ಪತ್ರೆಯ ಕಾಯಿಯ ಆಕಾರದಷ್ಟು, ಮಹಾಲಯ ಹಾಗೂ ಗಯಾ ಶ್ರಾದ್ಧಗಳಲ್ಲಿ ನೆಲ್ಲಿಕಾಯಿಯಷ್ಟು ಇರಬೇಕು.

17. ಪಿಂಡಪೂಜಾ- ಪಿಂಡ ಪೂಜೆಯನ್ನು ವಿಷ್ಣುನಿರ್ಮಾಲ್ಯವಾದ ಹೂ, ತುಳಸಿ, ಗಂಧ, ಭೃಂಗರಾಜಪತ್ರ (ಕಾಡಿಗ್ಗರಗು) ವಸ್ತ್ರ, ದೀಪ, ಅಭ್ಯಂಜನ, ತಾಂಬೂಲ, ದಕ್ಷಿಣೆಗಳಿಂದ ಮಾಡಬೇಕು. ಪಿಂಡಪೂಜೆಗೆ ಕೇದಗೆ, ಜಾಜಿ ಮತ್ತು ಕೆಂಪು ಬಣ್ಣದ ಪುಷ್ಪಗಳು ನಿಷಿದ್ಧವಾಗಿವೆ. ದೀಪವು ತುಪ್ಪ, ಎಳ್ಳೆಣ್ಣೆ, ಕುಸುಬೆ ಎಣ್ಣೆಗಳದ್ದು ಆಗಬಹುದು.

18. ಭೋಜನ ನಿಯಮ- ಊಟಕ್ಕೆ ಬಡಿಸುವಾಗ ಎಂದಿಗೂ ಭೇದಭಾವ ಮಾಡ ಕೂಡದು. ಊಟಕ್ಕೆ ಕುಳಿತಾಗ ಬ್ರಾಹ್ಮಣರು ಪದಾರ್ಥಗಳನ್ನು ಹೊಗಳಬಾರದು. ಊಟಕ್ಕೆ ಕುಳಿತ ಬ್ರಾಹ್ಮಣರು ಉಪ್ಪನ್ನು ಬೇಡಿದರೆ ಪಿತೃಗಳು ಉಚ್ಛಿಷ್ಟರಾಗಿ ಹೊರಟು ಹೋಗುತ್ತಾರೆ. ಊಟಕ್ಕೆ ಕುಳಿತಿರುವವರು ಪರಸ್ಪರ ಮುಟ್ಟಬಾರದು. ನಿಮಗೆ ಇಷ್ಟವಾದದ್ದನ್ನು ಬೇಡಿ ಸ್ವೀಕರಿಸಿರಿ- ಅನಪೇಕ್ಷಿತವಾದದ್ದನ್ನು ಬಿಟ್ಟು ಬಿಡಿರಿ ಎಂದು ಹೇಳಬೇಕು.[104]

19. ಪಿಂಡ ವಿಸರ್ಜನೆ- ಪಿಂಡಗಳನ್ನು ತೆಗೆದು ಇಡುವಾಗ ''ಪಿಂಡಾನ್ ಉದ್ವಾಸಯಿಷ್ಯೇ'' ಎಂದು ಕರ್ತನು ಕೇಳಬೇಕು. ಬ್ರಾಹ್ಮಣರು '' ಉದ್ವಾಸಯ'' ಎಂದು ಹೇಳಿದ ಮೇಲೆ ಪಿಂಡಗಳನ್ನು ಸಾವಕಾಶವಾಗಿ ತಟ್ಟೆಯಲ್ಲಿ ತೆಗೆದಿಟ್ಟು ದಕ್ಷಿಣಕ್ಕೆ ಮುಖಮಾಡಿ ಆಕಳಿಗೆ ತಿನ್ನಿಸಬೇಕು.

---

104. ಅಪೇಕ್ಷಿತಂ ಯಾಚಿತವ್ಯಂ ತ್ಯಾಜ್ಯಂ ಚೈವ ಅನಪೇಕ್ಷಿತಂ।
ಉಪವಿಶ್ಯ ಸುಖೇನೈವ ಭೋಕ್ತವ್ಯಂ ಸ್ವಸ್ಥಮಾನಸೈಃ ॥
ಮಯಾದತ್ತಾ ಭವದ್ಭೋಗೇ ಶಾಕಪಾಕಾಶ್ಚ ಕಲ್ಪಿತಾಃ।
ಸ್ವೇಚ್ಛಯಾ ಪ್ರತಿರುಚ್ಯಾಸ್ತೇ ಸಾವಕಾಶಂ ಹಿ ಭುಂಜತಾಂ ॥

20 ಬ್ರಾಹ್ಮಣ ವಿಸರ್ಜನೆ– ಭೋಜನಾನಂತರದಲ್ಲಿ ಬ್ರಾಹ್ಮಣರಿಗೆ ಕೈತೊಳೆಯಲು ನೀರು ಕೊಟ್ಟು, ಮತ್ತೆ ತೀರ್ಥಕೊಟ್ಟು, ಅವರಿಗೆ ತಾಂಬೂಲ ದಕ್ಷಿಣೆ ಕೊಟ್ಟು, ಪಿತ್ರರ್ಘ್ಯ ಪಾತ್ರವನ್ನು ಅಲುಗಾಡಿಸಿ ಬ್ರಾಹ್ಮಣರನ್ನು ವಿಸರ್ಜಿಸಬೇಕು. ಬ್ರಾಹ್ಮಣರಿಗೆ ನಮಸ್ಕರಿಸಬೇಕು.

21. ಆಶೀರ್ವಾದ ಪಡೆಯುವುದು– ಶ್ರಾದ್ಧಕರ್ತೃವು ಬ್ರಾಹ್ಮಣರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದ ಪಡೆಯಬೇಕು. ಬ್ರಾಹ್ಮಣರು "ಗಯಾ ಶ್ರಾದ್ಧಫಲಮಸ್ತು" ಎಂದು ಆಶೀರ್ವದಿಸಬೇಕು.

22. ಯಜಮಾನನ ಭೋಜನ– ಶ್ರಾದ್ಧಕರ್ತೃವು ಮಡಿಯಿಂದ ಪಿತೃಶೇಷವನ್ನು ಬಂಧುಗಳ ಜೊತೆ ಊಟಮಾಡಬೇಕು. ಒಂದು ವೇಳೆ ಶ್ರಾದ್ಧಶೇಷಾನ್ನವನ್ನು ಊಟ ಮಾಡದಿದ್ದರೆ ಶ್ರಾದ್ಧದ ಫಲವು ನಾಶವಾಗುತ್ತದೆ.

23. ಕೃಷ್ಣಾರ್ಪಣ ಹೇಳುವುದು– ಸಕಲ ಕರ್ಮಗಳ ಕೊನೆಯಲ್ಲಿ ಕರ್ತೃವು "ಭಾರತೀರಮಣ ಮುಖ್ಯಪ್ರಾಣಾಂತರ್ಗತ ಜನಾರ್ದನ ವಾಸುದೇವಃ ಪ್ರೀಯತಾಮ್" ಎಂದು ಹೇಳಿ ಭಗವಂತನಿಗೆ ಅರ್ಪಿಸಬೇಕು. ಇಲ್ಲವಾದರೆ ಶ್ರಾದ್ಧಕರ್ಮ ವ್ಯರ್ಥವಾಗುವುದು. ಕೊನೆಗೆ ವಿಷ್ಣವೇ ನಮಃ ಎಂದು ಮೂರು ಬಾರಿ ಹೇಳಬೇಕು.

ಬ್ರಾಹ್ಮಣರ ಭೋಜನ ಕಾಲದಲ್ಲಿ ಶ್ರಾದ್ಧ ಕರ್ತೃವಿನ ನಿಯಮಗಳು.

ಶ್ರಾದ್ಧ ಕರ್ತೃವು ಬ್ರಾಹ್ಮಣರ ಭೋಜನ ಕಾಲದಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬ್ರಹ್ಮಾಂಡ ಪುರಾಣದಲ್ಲಿ ತಿಳಿಸಿದ್ದಾರೆ.

1. ಯಾವ ಸಂದರ್ಭದಲ್ಲಿಯೂ ಕಣ್ಣೀರು ಸುರಿಸಬಾರದು. ಶ್ರಾದ್ಧಕರ್ತನು ಯಾರನ್ನು ಉದ್ದೇಶಿಸಿ ಶ್ರಾದ್ಧಮಾಡಿರುವರೋ ಅವರನ್ನು ಸ್ಮರಿಸಿ – "ಅಯ್ಯೋ, ಯಾರು ನಮ್ಮ ಜೊತೆಗೆ ಇದ್ದು ಅತ್ಯಂತ ಸ್ನೇಹದಿಂದ ವ್ಯವಹರಿಸುತ್ತ ಭೋಜನಮಾಡುತ್ತಿದ್ದನೋ, ಅವರನ್ನು ಉದ್ದೇಶಿಸಿ ಈ ದಿನ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕಾಯಿತಲ್ಲಾ ಅವರಿಗೆ ಸಾಕ್ಷಾತ್ತಾಗಿ ಭೋಜನ ಮಾಡಿಸುವ ಭಾಗ್ಯ ತಪ್ಪಿ ಹೋಯಿತಲ್ಲಾ" ಎಂಬುದಾಗಿ ನೆನೆಸಿಕೊಂಡು ಕಣ್ಣೀರು ಸುರಿಸಬಾರದು.

   ಮಾತನಾಡುವ ಸಂದರ್ಭವಿದ್ದರೂ, ಮಾತನಾಡಲು ತಾನು ಶಕ್ತನಾಗಿದ್ದರೂ ಮಾತನಾಡಬಾರದು. ಅಂದರೆ ಭೋಜನಮಾಡುತ್ತಿರುವ ಬ್ರಾಹ್ಮಣರನ್ನು ಭೋಜನ ಸಂದರ್ಭದಲ್ಲಿ ಮಾತನಾಡಿಸಬಾರದು.

ಊಟ ಮಾಡುತ್ತಿರುವ ಬ್ರಾಹ್ಮಣರನ್ನು ಎವೆಯಿಕ್ಕದೇ ನೋಡಬಾರದು.

ಊಟ ಮಾಡುತ್ತಿರುವ ಬ್ರಾಹ್ಮಣರ ಎದುರಿನಲ್ಲಿ ತಾನು ದೀನರಾಗಿ ಸಪ್ಪೆ ಮುಖ ಮಾಡಿಕೊಂಡಿರಬಾರದು.

ಕ್ರೂರ ದೃಷ್ಟಿಯಿಂದ ಭೋಜನ ಮಾಡುತ್ತಿರುವ ಬ್ರಾಹ್ಮಣರನ್ನು ನೋಡಬಾರದು.

ಶ್ರಾದ್ಧಕರ್ತೃವು ಅನ್ಯಮನಸ್ಕನಾಗಿ, ಎಲ್ಲೋ ನೋಡುತ್ತ ಭೋಜನ ಮಾಡಿಸುವ ವಿಚಾರದಲ್ಲಿ ಅನಾದರಣೆ ತೋರಬಾರದು.[105]

2. ಬ್ರಾಹ್ಮಣರು ಅಪೇಕ್ಷಿಸಿದುದನ್ನು ಶ್ರಾದ್ಧಕರ್ತೃವು ಊಟಕ್ಕೆ ಬಡಿಸಬೇಕು. ಶ್ರಾದ್ಧಕ್ಕಾಗಿ ತಯಾರಿಸಿದ ಭಕ್ಷ್ಯ ಭೋಜನಗಳನ್ನು ಬ್ರಾಹ್ಮಣರು ಅಪೇಕ್ಷಿಸಿದರೂ ಬಡಿಸದಿದ್ದರೆ ಅಂತಹ ತಿಳಿಗೇಡಿಯು ಶ್ರಾದ್ಧದ ಫಲಹೊಂದುವುದಿಲ್ಲ.[106]

3. ಪಂಕ್ತಿಯಲ್ಲಿ ಕುಳಿತ ಬ್ರಾಹ್ಮಣರಲ್ಲಿ ವೈಷಮ್ಯ ತೋರಿಸಬಾರದು.[107]

4. ಶ್ರಾದ್ಧಕರ್ತೃನು ಶ್ರಾದ್ಧಭೋಜನಕ್ಕಾಗಿ ಕರೆದಿರುವ ಬ್ರಾಹ್ಮಣರ ಪಂಕ್ತಿಯಲ್ಲಿ ಬೇರೆಯವರನ್ನು ಕೂಡಿಸಿ ಸಹಪಂಕ್ತಿ ಭೋಜನ ಮಾಡಿಸಿದರೆ, ಒಂದು ತಿಂಗಳು ಪೂರ್ತಿಯಾಗಿ ಅವನ ಪಿತೃಗಳು ಎಂಜಲು ತಿನ್ನುತ್ತಾ ಇರುತ್ತಾರೆ.[108]

5. ತಂದೆಯ ಶ್ರಾದ್ಧವನ್ನು ಪೂರ್ತಿ ಮುಗಿಸದೇ, ಬ್ರಾಹ್ಮಣರ ಪಂಕ್ತಿಯಲ್ಲಿ ಶ್ರಾದ್ಧಕರ್ತನು

---

105. ನ ಚಾಶ್ರು ಪಾತಯೇಜ್ಜಾತು ನ ಶಕ್ತೋ ಗಿರಮೀರಯೇತ್ ।
ನ ಚೋದ್ವೀಕ್ಷೇತ ಭುಂಜಾನಂ ನ ಚ ಕುರ್ವೀತ ಮತ್ಸರಮ್ ॥
ನ ದೀನೋ ನಾಪಿ ವಾ ಕ್ರೂರೋ ನ ಚೈವಾನ್ಯಮನಾ ನರಃ ।
ಏಕಾಗ್ರಮನ ಆಧಾಯ ಶ್ರಾದ್ಧಮ್ ಕುರ್ಯಾತ್ ಸದಾ ಬುಧಃ ॥ ಬ್ರಹ್ಮಾಂಡಪುರಾಣ

106. ಅಪೇಕ್ಷಿತಂ ಯೋ ನ ದದ್ಯಾತ್ ಶ್ರಾದ್ಧಾರ್ಥಮುಪಕಲ್ಪಿತಂ।
ಕೃಪಣೋ ಮಂದಬುದ್ಧಿಶ್ಚ ನ ಚ ಶ್ರಾದ್ಧಫಲಂ ಲಭೇತ್ ॥ ಪುರಾಣವಚನ

107. ಏಕಪಂಕ್ತ್ಯುಪವಿಷ್ಟಾನಾಂ ವಿಷಮಂ ಯಃ ಪ್ರಯಚ್ಛತಿ।
ದುಷ್ಕೃತಂ ಹರತೇ ಪಂಕ್ತ್ಯಾಃ ದಾತಾ ಗೃಹ್ಣಾತಿ ದುಷ್ಕೃತಂ ॥ ಪುರಾಣವಚನ

108. ಸಪಂಕ್ತಿ ಭೋಜನ್ಯೈಃ ಕರ್ತಾಯಃ ಶ್ರಾದ್ಧಂ ಕುರುತೇದ್ವಿಜಃ।
ಆಮಾಸಂ ಪಿತರಸ್ತಸ್ಯ ಭವಂತ್ಯುಚ್ಛಿಷ್ಟ ಭೋಜಿನಃ॥ ಪುರಾಣವಚನ

ಕುಳಿತು ಊಟ ಮಾಡಿದರೆ ಅವನ ಪಿತೃಗಳು ಆರು ತಿಂಗಳ ಕಾಲ ಉಚ್ಛಿಷ್ಟಭೋಜಿ (ಎಂಜಲು ತಿನ್ನುವವರು) ಆಗುತ್ತಾರೆ.[109]

6. ತಂದೆಯ ಶ್ರಾದ್ಧವನ್ನು ಮಾಡಿದ ಶ್ರಾದ್ಧಕರ್ತೃವು, ಬೇರೊಂದು ಶ್ರಾದ್ಧದಲ್ಲಿ ಭೋಜನ ಮಾಡಿದ್ದಾದರೆ ಅವನು ಭಯಂಕರವಾದ ರೌರವ, ಕಾಲಸೂತ್ರ ಎಂಬ ನರಕಗಳಲ್ಲಿ ಬೀಳುತ್ತಾನೆ.[110]

ಶ್ರಾದ್ಧ ಕರ್ಮದಲ್ಲಿ ಭೋಜನಕಾಲದಲ್ಲಿ (ಭೋಕ್ತೃವಿನ) ಬ್ರಾಹ್ಮಣನ ನಿಯಮಗಳು

ಶ್ರಾದ್ಧಕರ್ಮದಲ್ಲಿ ಭೋಜನಕ್ಕೆ ನಿಮಂತ್ರಿತನಾದ ಬ್ರಾಹ್ಮಣನು ಕೆಲವೊಂದು ನಿಯಮಗಳನ್ನು ಅನುಸರಿಸಬೇಕು.

1. ಶ್ರಾದ್ಧಭೋಜನದಲ್ಲಿ ಯಾವ ಬ್ರಾಹ್ಮಣನು ಕಾಷ್ಠಮೌನ ವ್ರತದಿಂದ ಭೋಜನ ಮಾಡುತ್ತಾನೋ ಅವನು ತನ್ನನ್ನು ಸಂಸಾರದಿಂದ ಉದ್ಧಾರ ಮಾಡಿಕೊಳ್ಳುತ್ತಾನೆ. ತನ್ನ ಪಿತೃಗಳನ್ನು ಉದ್ಧಾರಮಾಡುತ್ತಾನೆ. ಆ ದಿನ ಶ್ರಾದ್ಧಮಾಡಿದ ಯಜಮಾನನ ಪಿತೃಗಳನ್ನು ಸ್ವರ್ಗಲೋಕಕ್ಕೆ ಸೇರಿಸುತ್ತಾನೆ. ಸ್ವರ್ಗಗತರಾದ ಪಿತೃಗಳನ್ನು ಇನ್ನೂ ಉತ್ತಮ ಲೋಕಗಳಿಗೆ ಹೋಗುವಂತೆ ಮಾಡುತ್ತಾನೆ.[111]

2. ಊಟಕ್ಕೆ ನಿಮಂತ್ರಿತನಾದ ಬ್ರಾಹ್ಮಣನು ಸೊಂಟವನ್ನು ಬಗ್ಗಿಸಿಕೊಂಡು ಊಟ ಮಾಡಿದರೆ; ಹಾಗೆಯೇ ಮೊಣಗಂಟಿನ ಹೊರ ಭಾಗದಲ್ಲಿ ಕೈಯಿಟ್ಟುಕೊಂಟು ಊಟ ಮಾಡಿದರೆ , ಊಟ ಮಾಡುವಾಗ ನಾನಾ ವಿಧವಾದ ಲೋಕವಾರ್ತೆಗಳನ್ನು ಮಾತಾಡುತ್ತಿದ್ದರೆ, ನಗುತ್ತಿದ್ದರೆ, ಆದಿನ ಆಹೂತರಾದ ಪಿತೃದೇವತೆಗಳು ನಿರಾಶರಾಗಿ ಹೊರಟು ಹೋಗುತ್ತಾರೆ.[112]

---

109. ಪಿತುಃ ಶ್ರಾದ್ಧಮನಿವರ್ತ್ಯ ಸಪಂಕ್ತೌ ಭುಜ್ಯತೇ ಯದಿ।
ಪಿತರಸ್ತಸ್ಯ ಷಣ್ಮಾಸಂ ಭವಂತ್ಯುಚ್ಛಿಷ್ಟಭೋಜಿನಃ॥ ಪುರಾಣವಚನ

110. ಪಿತುಃ ಶ್ರಾದ್ಧಮುಪಕ್ರಮ್ಯ ಯೋಽನ್ಯಶ್ರಾದ್ಧೇಷು ಭುಂಜತಿ ।
ರೌರವೇ ನರಕೇ ಘೋರೇ ಕಾಲಸೂತ್ರೇ ಪತೇದ್ ಧ್ರುವಂ ॥ ಪುರಾಣವಚನ

111. ಕಾಷ್ಠಮೌನೇನ ಯೋ ವಿಪ್ರೋ ಭುಂಕ್ತೇ ಹಿ ಶ್ರಾದ್ಧಕರ್ಮಣಿ।
ಸ ಆತ್ಮಾನಾಂ ತಾರಯತಿ ಪಿತರಃ ಸ್ವರ್ಗಗತಾಸ್ತಥಾ॥ ಸ್ಮೃತಿವಚನ

112. ಕಟಿಭಗ್ನಸ್ತು ಯೋ ವಿಪ್ರೋ ಬಹಿರ್ಜಾನುಕರಸ್ತಥಾ।
ವದತೇ ಹಸತೇ ಚೈವ ನಿರಾಶಾಃ ಪಿತರೋ ಗತಾಃ॥

3. ಶ್ರಾದ್ಧದಲ್ಲಿ ಬ್ರಾಹ್ಮಣನು ಪವಿತ್ರಸಹಿತವಾದ ಬಲಗೈಯಿಂದ ಭೋಜನ ಮಾಡಬೇಕು.[113]

4. ಒಂದು ಪಾತ್ರೆಯಲ್ಲಿಯ ನೀರನ್ನು ಅರ್ಧ ಕುಡಿದು ಪುನಃ ಊಟ ಮಾಡಿ ಅನಂತರ ಆ ಪಾತ್ರೆಯಲ್ಲಿದ್ದ ನೀರನ್ನು ಕುಡಿದು ಮತ್ತೆ ಊಟ ಮಾಡಿದರೆ ಪಿತೃಕಾರ್ಯವನ್ನು ಹಾಳು ಮಾಡಿದಂತೆ ಆಗುತ್ತದೆ.[114]

5. ಭೋಜನ ಮಾಡುವ ಬ್ರಾಹ್ಮಣನು ಎಡಗೈಯಿಂದ ಜಲಪಾತ್ರೆಯನ್ನು ಎತ್ತಿಕೊಂಡು ನೀರನ್ನು ಕುಡಿದರೆ ಆ ಜಲಪಾನವು ಸುರಾಪಾನಕ್ಕೆ ಸಮವಾಗುತ್ತದೆ. ಆದ್ದರಿಂದ ಎಡಗೈಯಿಂದ ಜಲಪಾತ್ರೆಯನ್ನು ಎತ್ತಿ ನೀರು ಕುಡಿಯಬಾರದು.[115]

6. ಭೋಜನ ಮಾಡುವ ಬ್ರಾಹ್ಮಣನು ಬಡಿಸಿದ ಭೋಜ್ಯ ಪದಾರ್ಥಗಳನ್ನು ನೋಡಿ ನಾಲಿಗೆ ಚಪ್ಪರಿಸುವುದು, ಆಶೆಯಿಂದ ಮುಟ್ಟಿನೋಡುವುದು, ಇತ್ಯಾದಿ ಮಾಡಬಾರದು.[116]

7. ಊಟ ಮಾಡುವ ಸಮಯದಲ್ಲಿ ಯಾರ ಮೇಲೆಯೂ ಸಿಟ್ಟು ಮಾಡಬಾರದು. ತನಗೆ ಇಷ್ಟವಾದುದನ್ನು ಮಾತ್ರ ಸ್ವೀಕರಿಸಬೇಕು. ತೃಪ್ತಿಯಾಗುವವರೆಗೆ ಭೋಜನ ಮಾಡಬೇಕು. ಭೋಜ್ಯ ಪದಾರ್ಥಗಳನ್ನು ಸುಮ್ಮನೇ ಎಲೆಯಲ್ಲಿ ಚೆಲ್ಲಬಾರದು.[117]

8. ಎಲೆಯಲ್ಲಿ ಬಡಿಸಿದ ಎಲ್ಲವನ್ನು ಸ್ವಲ್ಪವೂ ಉಳಿಸದೇ ಊಟ ಮಾಡಬಾರದು. .ಅಂದರೆ ಪ್ರಾಜ್ಞನಾದವನು ಸಶೇಷವಾಗಿ ಊಟ ಮಾಡಬೇಕು, (ಸರ್ವಂ ಸಶೇಷಮ್

---

113. ಪವಿತ್ರಂ ಧಾರಯೇದ್ವಿಪ್ರಃ ಕೌಶೇಯಂ ದಕ್ಷಿಣೇಕರೇ।
ಭುಂಜಾನಸ್ತು ವಿಶೇಷೇಣ ಸೋऽನ್ನದೋಷೈರ್ನ ಲಿಪ್ಯತೇ॥

114. ಅರ್ಧ ಭುಕ್ತೇನ ಯೋ ವಿಪ್ರಃ ತತ್ ಪಾತ್ರೇಣ ಜಲಂ ಪಿಬೇತ್।
ಭುಕ್ತ್ವಾ ದೈವಂ ಚ ಪಿತ್ರ್ಯಂ ಚ ಆತ್ಮಾನಂ ಚೋಪಘಾತಯೇತ್॥

115. ಉದ್ಧೃತ್ಯ ವಾಮಹಸ್ತೇನ ಯತ್ತೋಯಂ ಪಿಬತೇ ದ್ವಿಜಃ।
ಸುರಾಪಾನೇನ ತತ್ತುಲ್ಯಂ ಏವಮಾಹ ಪ್ರಜಾಪತಿಃ॥

116. ಪೀತ್ವಾ ಪೋಶನಮಶ್ನೀಯಾತ್ ಪಾತ್ರೇ ದತ್ತಮಗರ್ಹಿತಂ।
ಸರ್ವೇಂದ್ರಿಯಾಣಾಂ ಚಾಪಲ್ಯಂ ನ ಕುರ್ಯಾತ್ ಪಾಣಿಪಾದಯೋಃ॥

117. ಅಕ್ರೋಧನೋ ರಸಾನ್ ಸಮ್ಯಗ್ ದದ್ಯಾತ್ ಆದ್ಯಾತ್ ಪ್ರರೋಚನೇ।
ಅತೃಪ್ತಿಂ ಭೋಜನಂ ತೇಷಾಂ ಕಾಮತೋ ನಾವಶೇಷಯೇತ್॥

ಅಶ್ನೀಯಾತ್) ಆದರೆ ಮೊಸರು, ಹಾಲು, ಹಾಲಿನಿಂದ ತಯಾರಿಸಿದ ಪದಾರ್ಥಗಳು, ಹಿಟ್ಟು, ಹಿಟ್ಟಿನಿಂದ ತಯಾರಿಸಿದ ಪದಾರ್ಥಗಳನ್ನು ನಿಶ್ಶೇಷವಾಗಿ ಊಟ ಮಾಡಬೇಕು.[118]

9. ಬ್ರಾಹ್ಮಣನು ತಲೆಕೂದಲನ್ನು(ಚಂಡಿಕೆಯನ್ನು) ಗಂಟುಹಾಕಿಕೊಳ್ಳದೇ ಊಟ ಮಾಡಬಾರದು.[119]

10. ಎಡಗೈಯನ್ನು ನೆಲಕ್ಕೆ ಊರಿ ಕುಳಿತುಕೊಂಡು ಊಟ ಮಾಡಬಾರದು.[120]

11. ಶ್ರಾದ್ಧ ಭೋಜನ ಮಾಡುವ ಬ್ರಾಹ್ಮಣನು ತನಗೆ ಬೇಕಾದ ಅನ್ನ, ಭಕ್ಷ್ಯ, ಭೋಜ್ಯ ಇವುಗಳನ್ನು ಬಾಯಿಂದ ಬೇಡ ಬೇಡ ಎಂದು ಹೇಳಿ ತಡೆಯಬಾರದು, ತನಗ ಇಷ್ಟವಿಲ್ಲವೆಂದು ಹೆಚ್ಚಾಯಿತೆಂದು ತಿಳಿಸಬೇಕಾದರೆ ಕೈಯ ಸಂಜ್ಞೆಯಿಂದ ಬೇಡವೆಂದು ತಿಳಿಸಬೇಕು. ಬಾಯಿಂದ ಯಾವಾಗಲೂ ಹೇಳಬಾರದು.[121]

ಪರೇಽಹನಿ ತಿಲತರ್ಪಣ

(ಶ್ರಾದ್ಧದ ಮರುದಿನ ನೀಡುವ ತಿಲತರ್ಪಣ)

ಶ್ರಾದ್ಧ ಕರ್ತೃವು ಶ್ರಾದ್ಧದ ಮರುದಿನದವರೆಗೂ ನಿಯಮದಿಂದ ಇದ್ದು ಸೂರ್ಯೋದಯಾತ್ ಪೂರ್ವದಲ್ಲಿ ಸಂಧ್ಯಾಮಾಡಿ ಪಿತ್ರಾದಿ (ಮಾತ್ರಾದಿ) ಮೂವರಿಗೆ ಮಾತ್ರ ತಿಲ ತರ್ಪಣವನ್ನು ಕೊಡಬೇಕು ಇದಕ್ಕೆ ''ಪರೇಽಹನಿ ತಿಲತರ್ಪಣ'' ವೆನ್ನುತ್ತಾರೆ. ಇದು ತಂದೆ ತಾಯಿ ವಿಷಯದಲ್ಲಿ ಮಾತ್ರ.[122]

---

118. ಭೋಜನಂ ತು ನ ನಿಶ್ಶೇಷಂ ಕುರ್ಯಾತ್ ಪ್ರಾಜ್ಞಃ ಕಥಂಚನ।
ಅನ್ಯತ್ರ ದಧ್ನಃ ಕ್ಷೀರಾದಿ ಕ್ಷೌದ್ರ ಸಕ್ತುಭ್ಯ ಏವಚ॥

119. ನ ಚ ಮುಕ್ತ ಶಿರೋರುಹಃ ಅಶ್ನೀಯಾತ್॥

120. ನ ನಿಧಾಯಕರಂ ಭೂಮೌ ಅಶ್ನೀಯಾತ್॥

121. ನಾನ್ನಪಾನಾದಿಕಂ ಶ್ರಾದ್ಧೇ ವಾರಯೇನ್ಮುಖತಃ ಕ್ವಚಿತ್।
ಅನಿಷ್ಟತ್ವಾತ್ ಬಹುತ್ವಾದ್ವಾ ವಾರಯೇದ್ಧಸ್ತ ಸಂಜ್ಞಯಾ॥
ಶ್ರಾದ್ಧಾರ್ಥಂ ಕಲ್ಪಿತಂ ಚಾತ ನ ಯಾಚಯೇನ್ಮುಖತಃ ಕ್ವಚಿತ್।
ಹಸ್ತೇ ಚಕ್ಷುಷಾ ವಾಪಿ ತೃಪ್ತೇರೂರ್ಧ್ವಂ ನ ಯಾಚಯೇತ್॥

122. ಶ್ರಾದ್ಧಾಂಗ ತರ್ಪಣಂ ಕುರ್ಯಾತ್ ಸ ತಿಲಂ ತು ಪರೇಽಹನಿ।
ಪಿತ್ರೋರ್ವಿಷಯ ಏವ ಸ್ಯಾತ್ ನ ಚಾನ್ಯ ವಿಷಯೋ ಭವೇತ್॥

ಶ್ರಾದ್ಧದ ಮರುದಿನ ತರ್ಪಣ ಮಾಡಲು ಸಾಧ್ಯವಾಗದೇ ಇರುವುದರಿಂದ ಈಗಲೇ ಮಾಡಿಬಿಡುತ್ತೇನೆಂದು ಸಂಕಲ್ಪಮಾಡಿ ಶ್ರಾದ್ಧ ಕರ್ಮ ಮುಗಿದ ಕೂಡಲೇ ಮಾಡುತ್ತಾರೆ. ಮರುದಿನ ತರ್ಪಣ ಮಾಡದಿರಲು ಪ್ರಬಲ ಕಾರಣಗಳಿದ್ದರೆ ಅದು ಯುಕ್ತವೇ ಸರಿ. ಸಣ್ಣ ಪುಟ್ಟ ಕಾರಣಗಳಿಗಾಗಿ ಅವತ್ತೇ ಮಾಡುವದು, ಅಷ್ಟು ಉಚಿತವಲ್ಲ.

ಆಚಮನ ಮಾಡಿ ದೇಶಕಾಲಾದಿಗಳನ್ನು ಹೇಳಿ ಅಪಸವ್ಯದಿಂದ ಪಿತೃ-ಪಿತಾಮಹ-ಪ್ರಪಿತಾಮಹಾನಾಂ ವಸುರುದ್ರಾದಿತ್ಯಾಂತರ್ಗತ- ಭಾರತೀರಮಣ ಮುಖ್ಯಪ್ರಾಣಾಂತರ್ಗತ- ಪ್ರದ್ಯುಮ್ನ ಸಂಕರ್ಷಣ ವಾಸುದೇವಾನಾಂ ಪ್ರತಿಸಾಂವತ್ಸರಿಕ ಶ್ರಾದ್ಧಾಂಗ ಪರೇಽಹನಿ ಕರಿಷ್ಯಮಾಣ ತಿಲತರ್ಪಣಂ ಸದ್ಯಃ ಅಪಕೃಷ್ಯ ಕರಿಷ್ಯೇ॥

ಎಂಬಂತೆ ಸಂಕಲ್ಪಿಸಿ ಮೂರು ದರ್ಭೆಗಳ ಪವಿತ್ರವನ್ನು ಧರಿಸಿ ಶ್ರಾದ್ಧದ ದಿನಕ್ಕೆ ಆಕರ್ಷಣೆ ಮಾಡಿಕೊಂಡು ಈ ಪರೇಽಹನಿ ತಿಲತರ್ಪಣವನ್ನು ಕೊಡುವುದುಂಟು, ಇದನ್ನು ಮಾಡದಿದ್ದರೆ ಶ್ರಾದ್ಧವು ಸಾಂಗವಾಗುವುದಿಲ್ಲ.

ತೀರ್ಥ ಶ್ರಾದ್ಧ, ಗಯಾಶ್ರಾದ್ಧ, ಅನುಮಾಸಿಕ ಶ್ರಾದ್ಧಗಳು, ಅಬ್ದವಿಮೋಕ ಶ್ರಾದ್ಧ, ಸಪಿಂಡೀಕರಣ ಶ್ರಾದ್ಧ, ಪ್ರಥಮಾಬ್ದಿಕ ಶ್ರಾದ್ಧ, ಮತ್ತು ವೃದ್ಧಿ ಶ್ರಾದ್ಧಗಳಲ್ಲಿ ತಿಲತರ್ಪಣ ಕೊಡಬಾರದು. [123]

ಪರೇಽಹನಿ ತಿಲತರ್ಪಣವನ್ನು ಮರುದಿನ ಮಾಡುವದು ಉತ್ತಮ ಪಕ್ಷವಾಗಿದೆ.

ಗಯಾ, ಬದರಿ, ಶ್ರಾದ್ಧ ಮಾಡಿದ ಮೇಲೆ ವಾರ್ಷಿಕ (ಸಾಂವತ್ಸರಿಕ) ಶ್ರಾದ್ಧ ಅವಶ್ಯವೇ?

''ಗಯಾ, ಬದರಿ ಕ್ಷೇತ್ರಗಳಲ್ಲಿ ಶ್ರಾದ್ಧ ಮಾಡಿದರೆ ಪಿತೃಗಳಿಗೆ ಮುಕ್ತಿಯಾಗುತ್ತದೆ'' ಎಂದು ಹೇಳಿರುವುದು ನಿಜ, ಆದರೆ ''ಜ್ಞಾನದಿಂದಲೇ ಮೋಕ್ಷ'' ಎಂದು ಪ್ರಮಾಣ ವಚನವಿದೆ. [124] ಆದ್ದರಿಂದ ಅಂತಹ ಸಂದರ್ಭದಲ್ಲಿ ಮುಕ್ತಿ ಎಂದರೆ ಸಂಸಾರದಿಂದ ಮುಕ್ತಿ ಎಂದರ್ಥವಲ್ಲ, ''ಪಾಪದಿಂದ ಮುಕ್ತಿ'' ಎಂಬುದಾಗಿ ಆಚಾರ್ಯರು ಹೇಳಿದ್ದಾರೆ.

---

123. ತೀರ್ಥಶ್ರಾದ್ಧೇ, ಗಯಾಶ್ರಾದ್ಧೇ, ಪ್ರೇತ ಶ್ರಾದ್ಧೇಽನುಮಾಸಿಕೇ।
ಸಪಿಂಡೀಕರಣೇ ಚೈವ ನ ಕುರ್ಯಾತ್ ತಿಲತರ್ಪಣಮ್॥
ವೃದ್ಧಿ ಶ್ರಾದ್ಧೇ ಸಪಿಂಡ್ಯಾಂ ಚ ಮಾಸಿಕೇ ಚಾನುಮಾಸಿಕೇ।
ಅಬ್ದಿಕೇ ಪ್ರಥಮೇ ಚೈವ ನ ಕುರ್ಯಾತ್ತಿಲತರ್ಪಣಮ್॥
ಸಂವತ್ಸರ ವಿಮೋಕೇ ಚ ನ ಕುರ್ಯಾತ್ತಿಲತರ್ಪಣಮ್ ॥

124 ಜ್ಞಾನೇನೈವ ಪರಂ ಪದಮ್ ॥ ಅಣುಭಾಷ್ಯ

ಹೀಗೆ ಕ್ಷೇತ್ರಗಳ ಪ್ರಶಂಸೆ ಮಾಡುವ ಸಂದರ್ಭದಲ್ಲಿ ಕೆಲವು ವಾಕ್ಯಗಳು ಶಾಸ್ತ್ರಗಳಿಗೆ ವಿರುದ್ಧವಾಗಿ ಕಂಡರೆ ಅದಕ್ಕೆ '' ಅಂತಹ ಕ್ಷೇತ್ರಗಳು ಪ್ರಶಸ್ತ'' ಎಂದೇ ತಾತ್ಪರ್ಯವು. ಮತ್ತು ಗಯಾ, ಬದರಿಯಲ್ಲಿ ಮಾಡುವ ಶ್ರಾದ್ಧಗಳು ವಿಶಿಷ್ಟವಾದವುಗಳು ಎಂಬ ಪ್ರಶಂಸಾ ಪರವೇ ಹೊರತು ಅಲ್ಲಿ ಶ್ರಾದ್ಧಮಾಡಿದ ಮೇಲೆ ವಾರ್ಷಿಕ (ಸಾಂವತ್ಸರಿಕ) ಶ್ರಾದ್ಧ ಮಾಡಬಾರದು ಎನ್ನುವಲ್ಲಿ ತಾತ್ಪರ್ಯವಲ್ಲ.

ಒಮ್ಮೆ ಗಯೆಯಲ್ಲಿ ಪಿಂಡಪ್ರದಾನ ಮಾಡಿದರೂ, ಮತ್ತೊಮ್ಮೆ ಗಯೆಗೆ ಹೋದರೆ ಪಿಂಡಪ್ರದಾನ ಮಾಡಬಹುದು ಎಂಬುದಾಗಿ ನಿರ್ಣಯಿಸಿದ್ದಾರೆ. ಹಾಗೆ ಸಂಪ್ರದಾಯವೂ ಇದೆ. ಅಂತಹ ಸ್ಥಳದಲ್ಲಿ ಪಿಂಡ ಪ್ರದಾನ ಮಾಡಿದ್ದರಿಂದ ಪಿತೃಋಣ ಪರಿಹಾರವಾದರೂ ಮತ್ತೆ ವಾರ್ಷಿಕಶ್ರಾದ್ಧ ಮಾಡಲೇಬೇಕು. ಶ್ರಾದ್ಧವು ನಿತ್ಯಕರ್ಮವೆನಿಸಿದೆ.

ಯಾವ ಕರ್ಮವನ್ನು ಮಾಡದಿದ್ದರೆ ಪಾಪ ನಿಶ್ಚಿತವೋ ಅಂತಹ ಕರ್ಮ ನಿತ್ಯಕರ್ಮ. ಉದಾ- ಸಂಧ್ಯಾವಂದನೆ ಇತ್ಯಾದಿ ಯಾವ ಕ್ಷೇತ್ರಕ್ಕೆ ಹೋಗಿ ಬಂದರೂ ಈ ಕರ್ಮಮಾಡದಿದ್ದರೆ ಪಾಪನಿಶ್ಚಿತ. ಅದರಂತೆ ಶ್ರಾದ್ಧವೂ ನಿತ್ಯವಾದುದರಿಂದ ಅದನ್ನು ಮಾಡಲೇಬೇಕು. ಯಾವಕಾರಣಕ್ಕೂ ಶ್ರಾದ್ಧ ಲೋಪ ಉಚಿತವಲ್ಲ.

ಗಯಾ ಕ್ಷೇತ್ರದಲ್ಲಿ ಮಾಡುವ ಶ್ರಾದ್ಧ ನೈಮಿತ್ತಿಕವೆಂದೂ ವಾರ್ಷಿಕ ಶ್ರಾದ್ಧ ನಿತ್ಯವೆಂದು ಹೇಳಿರುವುದರಿಂದ ಪುತ್ರನು ತನ್ನ ಮರಣ ಪರ್ಯಂತ ಶ್ರಾದ್ಧ ಮಾಡಲೇಬೇಕು. ವಾರ್ಷಿಕ ಶ್ರಾದ್ಧಮಾಡದಿದ್ದರೆ ಪಿತೃಘಾತಕನೆನಿಸುವನು. ನಿತ್ಯವೆನಿಸುವ ವಾರ್ಷಿಕ (ಸಾಂವತ್ಸರಿಕ) ಶ್ರಾದ್ಧವನ್ನು ಸರ್ವಥಾ ಬಿಡಬಾರದು. ಮಾಡಲೇಬೇಕು.[125]

ಅಧಿಕ (ಮಲ) ಮಾಸದಲ್ಲಿ ಶ್ರಾದ್ಧ ವಿಚಾರ

ಪ್ರತಿವರ್ಷವೂ ಮೃತನ ಹನ್ನೆರಡನೆಯ ತಿಂಗಳಿನಲ್ಲಿ ಆ ವ್ಯಕ್ತಿಯನ್ನು ಉದ್ದೇಶಿಸಿ

---

125. ಗಯಾಶ್ರಾದ್ಧಂ ಕೃತೇನಾಪಿ ನತ್ಯಾಜ್ಯಂ ಪ್ರತಿವಾರ್ಷಿಕಮ್।
ನೈಮಿತ್ತಿಕಂ ಗಯಾಶ್ರಾದ್ಧಂ ನಿತ್ಯಂತು ಪ್ರತಿವಾರ್ಷಿಕಮ್॥
ಯದಾ ಪುತ್ರೇಣ ವೈ ಕಾರ್ಯಂ ಗಯಾಶ್ರಾದ್ಧಂ ಖಗೇಶ್ವರ।
ತದಾ ಸಂವತ್ಸರಾದೂರ್ಧ್ವಂ ಕರ್ತವ್ಯಂ ಪಿತೃಭಕ್ತಿತಃ॥ ಬೃಹದ್ಗಾರುಡವಚನ
ಯಾವಜ್ಜೀವಂ ಸದಾ ಕುರ್ಯಾದಕೃತೇ ದೋಷಭಾಗ್ ಭವೇತ್॥ ಶ್ರಾದ್ಧ ಪ್ರಕಾಶ

ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು, ಆದರೆ ಅಧಿಕ ಮಾಸವು ಬಂದಾಗ ಹನ್ನೆರಡರ ಬದಲಾಗಿ ಹದಿಮೂರನೆ ತಿಂಗಳಿನಲ್ಲಿ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು.

ಅಧಿಕ ಮಾಸದಲ್ಲಿ ಬರುವ ಶ್ರಾದ್ಧದ ದಿನಗಳಲ್ಲಿ ಬ್ರಾಹ್ಮಣ ಭೋಜನ ಮಾತ್ರಮಾಡಿಸಿ ಶುದ್ಧ(ನಿಜ) ಮಾಸದಲ್ಲಿ ಪಿಂಡಪ್ರದಾನ ಶ್ರಾದ್ಧವನ್ನು ಮಾಡಬೇಕು ಎಂದು ಶ್ರೀಕೃಷ್ಣಾಚಾರ್ಯ ಸ್ಮೃತಿಮುಕ್ತಾವಲಿಯಲ್ಲಿ ಹೇಳಲಾಗಿದೆ.[126]

ಬೇರೆ ಮಾಸದಲ್ಲಿ ಮೃತನಾದ ವ್ಯಕ್ತಿಯ ಪ್ರಥಮ ಸಾಂವತ್ಸರಿಕ ಶ್ರಾದ್ಧವು ಅಧಿಕಮಾಸದಲ್ಲಿ ಬಂದರೆ ಅಧಿಕಮಾಸದಲ್ಲಿಯೇ ಪ್ರಥಮ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು, ಏಕೆಂದರೆ ಶ್ರಾದ್ಧಕ್ಕೆ ಯಾವ ಮಾಸ ಯಾವ ಪಕ್ಷ ಯಾವ ತಿಥಿಯಲ್ಲಿ ಮೃತನಾಗಿರುವನೋ ಪ್ರತಿವರ್ಷ ಅದೇಮಾಸ, ಅದೇಪಕ್ಷ, ಅದೇತಿಥಿಯಲ್ಲಿ ಮೃತಾಹ-ಶ್ರಾದ್ಧವನ್ನು ಮಾಡಬೇಕೆಂದು ನಿಯಮವಿದ್ದೆ.

ಹಿಂದೆ ಅಧಿಕಮಾಸದಲ್ಲಿ ಮರಣಹೊಂದಿದವರ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅದೇ ಮಾಸವು ಪುನಃ ಅಧಿಕಮಾಸವಾಗಿ ಬಂದಾಗ ಆ ಅಧಿಕಮಾಸದಲ್ಲಿಯೇ ಮಾಡಬೇಕು.[127]

ಹಿಂದೆ ಶುದ್ಧಮಾಸದಲ್ಲಿ ಮೃತ ಹೊಂದಿದವರಿಗೆ. ಅದೇಮಾಸ ಅಧಿಕಮಾಸವಾಗಿ ಬಂದಾಗ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅಧಿಕ ಮಾಸದಲ್ಲಿ ಮಾಡಕೂಡದು. ಶುದ್ಧಮಾಸದಲ್ಲಿಯೇ, ಮಾಡಬೇಕು ಆದರೆ ಪ್ರಥಮಾಬ್ದಿಕವನ್ನು ಮಾತ್ರ ಅಧಿಕಮಾಸ ದಲ್ಲಿಯೇ ಮಾಡಬೇಕು.

ಮರಣ ಹೊಂದಿದವರ ಹನ್ನೊಂದು ದಿನಗಳ ಕರ್ಮ ಮತ್ತು ಸಪಿಂಡೀಕರಣವನ್ನು ಅಧಿಕಮಾಸದಲ್ಲಿಯೇ ಮಾಡಬೇಕು. ಎರಡನೆಯ ಮಾಸಿಕದಿಂದ ಹನ್ನೆರಡನೆಯ ಮಾಸಿಕದವರಗೆ ಮಧ್ಯದಲ್ಲಿ ಅಧಿಕ ಮಾಸ ಬಂದರೆ ಆ ತಿಂಗಳ ಮಾಸಿಕವನ್ನು ಶುದ್ಧ ಹಾಗೂ ಅಧಿಕ ಇವೆರಡರಲ್ಲಿಯೂ ಮಾಡಬೇಕು. ಹನ್ನೆರಡನೆಯ ತಿಂಗಳು ಅಧಿಕಮಾಸವಾಗಿ

---

126. ಮಲಮಾಸ ಶ್ರಾದ್ಧ ದಿನಸ್ಯ ವಂಧ್ಯತ್ವ ನಿರಾಸಾರ್ಥಂ ಪಿತ್ರುದ್ದೇಶೇನ
ಬ್ರಾಹ್ಮಣಾನ್ ಭೋಜಯಿತ್ವಾ ಶುದ್ಧಮಾಸೇ ಸಪಿಂಡಂ ಶ್ರಾದ್ಧಂ ಕುರ್ಯಾತ್॥
ಶ್ರೀ ಕೃಷ್ಣಾಚಾರ್ಯ ಸ್ಮೃತಿಮುಕ್ತಾವಲಿ

127. ಮಲಮಾಸೇ ಮೃತಾನಾಂಚ ಶ್ರಾದ್ಧಂ ಯತ್ ಪ್ರತಿವತ್ಸರಮ್।
ಮಲಮಾಸೇಽಪಿ ಕರ್ತವ್ಯಂ ನಾನ್ಯೇಷಾಂ ತು ಕಥಂಚನ॥ ಶ್ರಾದ್ಧಕಲ್ಪಲತಾ

ಬಂದರೆ ಆ ತಿಂಗಳ ಮಾಸಿಕವನ್ನು ಹನ್ನೆರಡನೆಯ ತಿಂಗಳಾದ ಅಧಿಕಮಾಸದಲ್ಲಿಯೂ, ಹದಿಮೂರನೆ ತಿಂಗಳಾದ ಶುದ್ಧಮಾಸದಲ್ಲಿಯೂ ಮಾಡಿ ಹದಿನಾಲ್ಕನೆಯ ತಿಂಗಳಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು.

★★★

ಕಡುಬಡವನೂ ಶ್ರಾದ್ಧಕರ್ಮಮಾಡುವ ಬಗೆ ಹೇಗೆ?

''ದೇವಕಾರ್ಯಾತ್ ಪಿತೃಕಾರ್ಯಂ ವಿಶಿಷ್ಯತೇ'' ಉಕ್ತಿಯಂತೆ ದೇವಕಾರ್ಯಕ್ಕಿಂತಲೂ ಪಿತೃಕಾರ್ಯವು ಬಹುಮಹತ್ವಪೂರ್ಣವಾಗಿದೆ, ಹಾಗಾಗಿ ಶ್ರಾದ್ಧಕರ್ಮವನ್ನು ಯಾರೂ ಬಿಡಕೂಡದು ಭಗವಂತನು ತಮಗೆ ಕೊಟ್ಟ ಹಣದಿಂದ ವಂಚನೆಮಾಡದೇ ಭಕ್ತಿಯಿಂದ ಶ್ರಾದ್ಧಕರ್ಮವನ್ನು ನೆರವೇರಿಸಬೇಕು, ಇದರಿಂದ ಪಿತೃಗಳು ಪ್ರೀತರಾಗಿ ಶ್ರಾದ್ಧಕರ್ತೃವಿಗೆ ವಿಶೇಷಫಲ ಕೊಡುತ್ತಾರೆ.

ಸರಿ, ಒಂದು ವೇಳೆ ಮನುಷ್ಯನು ಕಡುಬಡವನಾಗಿದ್ದರೆ ನಿರ್ಗತಿಕನಾಗಿದ್ದರೆ ಶ್ರಾದ್ಧವನ್ನು ಮಾಡುವ ಬಗೆ ಹೇಗೆ? ಎಂಬ ಪ್ರಶ್ನೆ ಸಹಜವೇ.

ಶ್ರೀ ಪದ್ಮ ಮಹಾಪುರಾಣದಲ್ಲಿ ಈ ವಿಷಯವನ್ನು ಒಬ್ಬ ಬ್ರಾಹ್ಮಣನ ದೃಷ್ಟಾಂತ ಮೂಲಕ ತಿಳಿಸಿಕೊಟ್ಟಿದ್ದಾರೆ.

ಪೂರ್ವಕಾಲದಲ್ಲಿ ದೀನಕ ಎಂಬ ಬ್ರಾಹ್ಮಣನಿದ್ದ. ಅವನು ವಿರಾಟರಾಜನ ರಾಜ್ಯದಲ್ಲಿ ನೆಲೆಸಿದ್ದ. ಅವನ ತಂದೆಯ ಶ್ರಾದ್ಧದ ದಿನ ಬಂತು. ಆದರೆ ಆ ಬ್ರಾಹ್ಮಣನು ತನ್ನ ಹೆಸರಿಗೆ ತಕ್ಕಂತೆ ಕಡುಬಡವನೇ ಆಗಿದ್ದನು. ಕೈಯಲ್ಲಿ ಕಾಸಿಲ್ಲ. ಮನೆಯಲ್ಲಿ ಪದಾರ್ಥಗಳಿಲ್ಲ. ಶ್ರಾದ್ಧಮಾಡಲು ಯಾವ ಸೌಕರ್ಯಗಳೂ ಇಲ್ಲ. ಶ್ರಾದ್ಧವನ್ನು ಮಾಡದೇ ಬಿಡುವಂತೆ ಇಲ್ಲ. ಅವನಿಗೆ ಏನು ಮಾಡಬೇಕೆಂಬುದು ತೋಚಲಿಲ್ಲ. ಮನಸ್ಸಿಗೆ ಬಹಳ ನೋವಾಯಿತು. ತಂದೆಯ ಶ್ರಾದ್ಧಮಾಡಲು ಯೋಗ್ಯತೆ ಇಲ್ಲದ್ದಕ್ಕಾಗಿ ತನ್ನನ್ನು ತಾನೇ ಹಳಿದುಕೊಂಡ. ರೋದಿಸತೊಡಗಿದ.

''ಶ್ರಾದ್ಧದ ದಿನ ನಿಜವಾಗಿಯೂ ಏನೂ ಇರದಿದ್ದರೆ ದುಃಖದಿಂದ ರೋದನ ಮಾಡಬೇಕೆಂದು ಹೇಳುವದುಂಟು.'' ಆದರೂ ಆ ಬ್ರಾಹ್ಮಣನಿಗೆ ಸಮಾಧಾನವಾಗಲಿಲ್ಲ. ಕೊನೆಗೆ ಅವನು ಜ್ಞಾನವೃದ್ಧರೊಬ್ಬರ ಹತ್ತಿರ ಹೋಗಿ ಕೇಳಿದ. ಆ ವೃದ್ಧರು ವೇದ, ಧರ್ಮಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ಅವರ ಹತ್ತಿರ ತನ್ನ ಮನಸ್ಸಿನ ದುಗುಡವನ್ನು ಹೇಳಿಕೊಂಡ.

ಸ್ವಾಮೀ! ಇಂದು ನನ್ನ ತಂದೆಯ ಶ್ರಾದ್ಧದಿನ, ಕೈಯಲ್ಲಿ ಕಾಸಿಲ್ಲ, ಮನೆಯಲ್ಲಿ ಪದಾರ್ಥಗಳಿಲ್ಲ. ನಾನೇನು ಮಾಡಲಿ? ಎಂದು ಕೇಳಿದ.

ಆಗ ಆ ವೃದ್ಧರು ಹೇಳಿದರು.''ಅಯ್ಯಾ ಬ್ರಾಹ್ಮಣಾ ನೀನು ಇಂದುಕಾಡಿಗೆ ಹೋಗು, ಈಗ ಶ್ರಾದ್ಧಕ್ಕೆ ''ಕುತಪ ಕಾಲ'' ಬಂದಿದೆ. ಇದು ಶ್ರಾದ್ಧ ಮಾಡಲು ಯೋಗ್ಯಕಾಲವೆನಿಸಿದೆ. ನೀನು ಅಡವಿಯಲ್ಲಿರುವ ಎಳೆ ಹುಲ್ಲನ್ನು ಕಿತ್ತು ತಂದೆಯ ಉದ್ದೇಶದಿಂದ ಆಕಳಿಗೆ ಕೊಡು. ಗೋವಿಗೆ ''ಹಸಿ ಹುಲ್ಲು'' ಹಾಕಿ ತಂದೆಯ ಹೆಸರಿನಿಂದ ತಿನ್ನಿಸಿದರೆ ಅದರಿಂದ ವಿಧಿಪೂರ್ವಕ ಶ್ರಾದ್ಧಮಾಡಿದ ಫಲ ಬರುತ್ತದೆ. ತ್ವರೆಯಾಗಿ ಹೋಗು'' ಎಂದು ಹೇಳಿದರು.

ದೀನಕ ಬ್ರಾಹ್ಮಣನು ಆ ವೃದ್ಧರ ಸಲಹೆಯಂತೆ ಕೂಡಲೇ ಕಾಡಿಗೆ ನಡೆದ. ಅಲ್ಲಿ ಎಳೆಯ ಹುಲ್ಲನ್ನು ಕಿತ್ತಿದ . ಆಕಳನ್ನು ಹುಡುಕಿ ಸಂಕಲ್ಪ ಪೂರ್ವಕ ತಂದೆಯ ಹೆಸರನ್ನು ತೆಗೆದುಕೊಂಡು ಎಳೆ ಹುಲ್ಲನ್ನು ತಂದೆಯ ಪ್ರೀತಿಗಾಗಿ ಆಕಳಿಗೆ ತಿನ್ನಿಸಿದ . ಆಕಳು ಸಂತುಷ್ಟವಾಯಿತು. ಈ ಪುಣ್ಯದಿಂದ ದೀನಕನು ಮರಣಾನಂತರ ಸ್ವರ್ಗವನ್ನು ಸೇರಿದ . ನಂತರ ಪುಣ್ಯಶೇಷದಿಂದ ಸಿರಿವಂತರ ಮನೆಯಲ್ಲಿ ಹುಟ್ಟಿದ. ಆಗ ಪಿತೃಯಜ್ಞ(ಶ್ರಾದ್ಧ)ವನ್ನು ತನ್ನ ವೈಭವಕ್ಕನುಗುಣವಾಗಿ ವಿಜೃಂಭಣೆಯಿಂದ ಆಚರಿಸಿದ. ಹೀಗೆ ಇಡೀ ಒಂದು ಜನ್ಮ ಅವನು ತನ್ನ ಪಿತೃಗಳನ್ನು ಉದ್ದೇಶಿಸಿ ಸಕಾಲಕ್ಕೆ ಶ್ರಾದ್ಧ, ದಾನ, ಧರ್ಮ ಮುಂತಾದ ಕರ್ಮಗಳನ್ನು ಮಾಡಿದ್ದರಿಂದ ಅವನು ನಂತರ ಭೂಲೋಕದಲ್ಲಿ ಚಕ್ರವರ್ತಿ ದೊರೆಯಾಗಿ ಜನಿಸಿದನು.

ತಾಯಿ ತಂದೆಗಳ ಶ್ರಾದ್ಧಕರ್ಮಕ್ಕೆ ''ಪಿತೃಯಜ್ಞ'' ವೆಂದು ಹೆಸರು. ಈ ಯಜ್ಞದಂತಹ ಶ್ರೇಷ್ಠಯಜ್ಞ ಬೇರೊಂದಿಲ್ಲ. ಕಾರಣ ಬಡವರಾದರೂ ಧನಿಕರಾದರೂ ತಮ್ಮ ತಮ್ಮ ಶಕ್ತ್ಯನುಸಾರ ವಿತ್ತಶಾಠ್ಯ(ವಂಚನೆ) ಮಾಡದೇ ಶ್ರಾದ್ಧಾದಿಗಳನ್ನು ಆಚರಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು.

ಕಾಕ-ಬಲಿ ಏಕೆ?

(ಕಾಗೆಗೂ ಪಿತೃಗಳಿಗೂ ಏನು ಸಂಬಂಧ?)

ಕಾಕಬಲಿ ಎಂದರೆ ಕಾಗೆಗಳಿಗೆ ಅನ್ನ ನೀಡುವುದು ಎಂದು ಅರ್ಥವಾಗುತ್ತದೆ. ಮೃತನಾದ ವ್ಯಕ್ತಿಯ ಸಲುವಾಗಿ 10ನೇಯ ದಿನದಂದು ಈ ಕಾಕಬಲಿಯನ್ನು ಇಡುವದುಂಟು. ಕಾಗೆ

ಆ ಬಲಿಯನ್ನು ಮುಟ್ಟದಿದ್ದರೆ, ತಿನ್ನದಿದ್ದರೆ ಪಿತೃಗಳಿಗೆ ತೃಪ್ತಿಯಾಗಲಿಲ್ಲ ಎಂದು ಭಾವಿಸುವುದುಂಟು. ಹಾಗಾದರೆ ಕಾಗೆಗೆ ಪಿತೃಗಳಿಗೆ ಸಂಬಂಧ ಉಂಟೇ? ಎಂಬ ಪ್ರಶ್ನೆ ಸಹಜ. ಉತ್ತರ ಹೀಗಿದೆ.

ರಾಮಾಯಣದ ಉತ್ತರಕಾಂಡದಲ್ಲಿ ಒಂದು ಪ್ರಸಂಗ ನಡೆಯಿತು. ಸೂರ್ಯವಂಶದ ಕ್ಷತ್ರಿಯವೀರ ಮರುತ್. ಅವನು ಬೃಹಸ್ಪತಿಯ ಸಹೋದರನಾದ ಸಂವರ್ತನೆಂಬ ಬ್ರಹ್ಮರ್ಷಿಯ ಪೌರೋಹಿತ್ಯದಲ್ಲಿ ದೊಡ್ಡ ಯಜ್ಞವೊಂದನ್ನು ನಡೆಸಿದ. ಅದು ರಾವಣನ ಕಾಲ. ಅವನಿಗೆ ಹೆದರಿದ ದೇವತೆಗಳು ಒಬ್ಬೊಬ್ಬರು ಒಂದೊಂದು ಪಕ್ಷಿಯ ರೂಪ ತಾಳಿ ಮರುತ್ತನ ಯಜ್ಞಕ್ಕೆ ಬಂದರು. ದೇವೇಂದ್ರ ನವಿಲಿನ ರೂಪದಲ್ಲಿ, ಬ್ರಹ್ಮದೇವರು ಹಂಸ ರೂಪದಲ್ಲಿ, ಯಮದೇವರು ಕಾಗೆಯ ರೂಪದಲ್ಲಿ ಬಂದರು.

ಹೀಗೆ ಯಜ್ಞದಲ್ಲಿ ಭಾಗವಹಿಸಿದ ಅವರು ತಮ್ಮ ಗೌಪ್ಯತೆಗೆ ಕಾರಣವಾದ ಆ ಪಕ್ಷಿ ಪ್ರಾಣಿಗಳಿಗೆ ಒಂದೊಂದು ವರ ನೀಡಿದರು. ಯಮದೇವರು ಕಾಗೆಗಳಿಗೆ ದೀರ್ಘಾಯುಷ್ಯವನ್ನು ನೀಡಿದ. ಯಾವ ರೋಗ ಭಯವೂ ಅವುಗಳಿಗೆ ಇಲ್ಲ. ಮನುಷ್ಯರು ಕೊಂದರಷ್ಟೇ ಅವುಗಳಿಗೆ ಸಾವು ಬರುತ್ತದೆ.

ಶ್ರೀ ಯಮದೇವರು ಇನ್ನೊಂದು ವರ ನೀಡಿದರು-

ಯೇ ಚ ಮದ್ವಿಷಯಸ್ಥಾವೈ ಮಾನವಾ ಕ್ಷುಧಯಾರ್ದಿತಾಃ।
ತ್ವಯಿ ಭುಕ್ತೇ ಸುತೃಪ್ತಾಸ್ತೇ ಭವಿಷ್ಯಂತಿ ಸ ಬಾಂಧವಾಃ॥

ನನ್ನ ಲೋಕದಲ್ಲಿರುವ ಪಿತೃಗಳು, ನೀವು ಅನ್ನವನ್ನು ಸ್ವೀಕರಿಸಿದರೆ ಆ ಮೂಲಕ ಅವರು ಸುತೃಪ್ತರಾಗುತ್ತಾರೆ.

ಈ ಕಾರಣದಿಂದ ''ಕಾಕಬಲಿ'' ಯ ಮೂಲಕ ಪಿತೃಗಳು ತೃಪ್ತರಾಗುವರೆಂಬ ನಂಬಿಕೆ ರೂಢಿಯಲ್ಲಿ ಬಂದಿದೆ.

ದರ್ಭೆಗೆ ಪವಿತ್ರವೆಂಬ ಹೆಸರೇಕೆ?

ದರ್ಭೆಗೆ ಕುಶ, ಬರ್ಹಿ ಇತ್ಯಾದಿ ಹೆಸರುಗಳಿರುವಂತೆ ''ಪವಿತ್ರ''ವೆಂಬ ಹೆಸರೂ ಉಂಟು. ಇದಕ್ಕೆ ಕಾರಣವೇನು? ಎಂಬುದನ್ನು ಶ್ರೀಮನ್ ಮಹಾಭಾರತದಲ್ಲಿ ತಿಳಿಸಿಕೊಟ್ಟಿದ್ದಾರೆ-

ಹಿಂದೆ ಗರುಡನು ತನ್ನ ತಾಯಿಯನ್ನು ದಾಸ್ಯದಿಂದ ವಿಮೋಚನೆಗೊಳಿಸುವುದಕ್ಕಾಗಿ ಅಮೃತವನ್ನು ಇಂದ್ರನಿಂದ ಪಡೆದುಕೊಂಡು ಬಂದು ಸರ್ಪಗಳನ್ನು ಕುರಿತು ಹೇಳುತ್ತಾನೆ-'' ಸರ್ಪಗಳಿರಾ! ನಿಮ್ಮ ಅಭಿಲಾಷೆಯಂತೆ ನಾನು ಅಮೃತವನ್ನು ತಂದಿರುತ್ತೇನೆ, ಅದನ್ನು ದರ್ಭೆಗಳ ಮೇಲೆ ಇಡುತ್ತೇನೆ. ನೀವು ಶುಚಿರ್ಭೂತರಾಗಿ ಬಂದು ಅಮೃತವನ್ನು ಸೇವಿಸಿರಿ. ಇಂದಿಗೆ ನನ್ನ ತಾಯಿಯ ದಾಸ್ಯ ಜೀವನಕ್ಕೆ ವಿಮೋಚನೆಯಾಯಿತು.''

ಅಮೃತ ಸಿಕ್ಕಿದ ಸಂತೋಷದಿಂದ ಸರ್ಪಗಳು ತಥಾಸ್ತು! ನಿನ್ನ ತಾಯಿಯು ಇನ್ನು ಮುಂದೆ ದಾಸಿಯಲ್ಲ, ಎಂಬ ಪ್ರತಿವಚನವಿತ್ತು ಸ್ನಾನಕ್ಕಾಗಿ ಹೊರಟು ಹೋಗುತ್ತವೆ. ಇಷ್ಟರಲ್ಲಿಯೇ ಇಂದ್ರದೇವರು ಬಂದು ಪೂರ್ವಯೋಜನೆಯಂತೆ ಆ ಅಮೃತಕಲಶವನ್ನು ಅಪಹರಿಸಿಕೊಂಡು ಹೋಗಿಬಿಡುತ್ತಾರೆ.

ನಂತರ ಸರ್ಪಗಳು ಸ್ನಾನ ಆಹ್ನೀಕಗಳನ್ನು ಪೂರೈಸಿಕೊಂಡು ಬರುತ್ತಲೇ ಇಂದ್ರದೇವರು ಅಮೃತಕಲಶವನ್ನು ಅಪಹರಿಸಿದ ವಿಷಯ ತಿಳಿದು ಬರುತ್ತದೆ. ತಾವು ಹಿಂದೆ ಮಾಡಿದ ಮೋಸಕಾರ್ಯಕ್ಕೆ ಪ್ರತಿ ಮೋಸ ಕಾರ್ಯನಡೆಯಿತೆಂದು ಭಾವಿಸಿ ಸುಮ್ಮನಾಗುತ್ತವೆ.

ಅಮೃತಕಲಶವಿಟ್ಟಿದ್ದ ದರ್ಭೆಯಾದರೂ ಉಳಿದುಕೊಂಡಿದೆ ಎಂಬುದಾಗಿ ತಿಳಿದು ದರ್ಭೆಗಳನ್ನು ನೆಕ್ಕುತ್ತವೆ. ಆಗ ಅವುಗಳ ನಾಲಿಗೆ ಎರಡು ಭಾಗವಾಗುತ್ತದೆ.

ಅಭಿವಂಶ್ವಾಮೃತ ಸ್ಪರ್ಶಾದ್ದರ್ಭಾಸ್ತೇಽಥ ಪವಿತ್ರಿಣಃ॥

ಶ್ರೀಮನ್ ಮಹಾಭಾರತ

ಉಕ್ತಿಯಂತೆ ಸ್ವಲ್ಪ ಕಾಲವಾದರೂ ಅಮೃತ ಕಲಶದ ಸಂಪರ್ಕ ಹೊಂದಿದ್ದ ದರ್ಭೆಗಳು ಪರಮಪಾವನವಾದವು ಹಾಗೂ ''ಪವಿತ್ರ'' ವೆಂಬ ಹೆಸರನ್ನು ಪಡೆದವು.

ಈ ಘಟನೆಯ ತರುವಾಯ ದರ್ಭೆಗಳು '' ಪವಿತ್ರ'' ವೆಂಬ ಹೆಸರಿನಿಂದ ಕರೆಯಲ್ಪಟ್ಟವು.

★★★

ಶ್ರಾದ್ಧಕರ್ಮದಲ್ಲಿ ಬರುವ ಕೆಲವು ಶಬ್ದಗಳ ಅರ್ಥವಿಶೇಷಗಳು

1. ಸಂಕಲ್ಪ- ''ಸಂಕಲ್ಪಃಕರ್ಮ ಮಾನಸಂ'' ಉಕ್ತಿಯಂತೆ ಇಂತಹಕರ್ಮ ಮಾಡುತ್ತೇನೆಂದು ಮನಸ್ಸಿನಿಂದ ನಿಶ್ಚಯಿಸಿ ಉಚ್ಚಾರ ಮಾಡುವದು.

2. ಕ್ಷಣ- ದೇವ, ಪಿತೃಸ್ಥಾನಗಳಲ್ಲಿರುವ ಬ್ರಾಹ್ಮಣರಿಗೆ ಆಮಂತ್ರಣ ಕೊಡುವುದು ''ಕ್ಷಣ'' ಎನಿಸುತ್ತದೆ.

3. ಮಧುಮತೀ ಜಪ- ''ಮಧುವಾತಾ ಋತಾಯತೇ'' ಮಂತ್ರದ 3 ಋಕ್ಕುಗಳನ್ನು ಜಪಿಸುವುದು.

4. ಕುಶ- ದರ್ಭೆ

5. ಯವ- ಅಕ್ಕಿ ಕಾಳು

6. ತಿಲ- ಎಳ್ಳು (ಕರಿ ಎಳ್ಳು)

7. ಭೃಂಗರಾಜ- ಗರಗದ ಸೊಪ್ಪು (ಕಾಡಿಗ್ಗರಗು)

8. ನಿವೀತಿ- ಜನಿವಾರವನ್ನು ಮಾಲಾಕಾರವಾಗಿ (ಎರಡೂ ಹೆಗಲ ಮೇಲೆ ಹಾಕಿಕೊಳ್ಳುವದು.)

9. ಪ್ರಾಚೀನಾವೀತಿ- ಜನಿವಾರವು ಬಲ ಹೆಗಲ ಮೇಲಿದ್ದು ಎಡಗೈ ಕೆಳಗೆ ಇರುವಂತೆ (ಅಪಸವ್ಯ) ಹಾಕಿಕೊಳ್ಳುವದು. (ಪಿತೃ ಅರ್ಚನೆ ಮಾಡುವಾಗ ಇರಬೇಕಾದುದು)

10. ಸವ್ಯ (ಉಪವೀತಿ)- ಜನಿವಾರವು ಎಡ ಹೆಗಲ ಮೇಲಿಂದ ಬಲಗೈ ಕೆಳಗೆ ಇರುವಂತೆ ಹಾಕಿಕೊಳ್ಳುವದು

11. ದರ್ಭಪತ್ರ- ತುಂಡು ಮಾಡಿದ ದರ್ಭೆಗಳು

12. ಕೂರ್ಚ*- ಏಳು ದರ್ಭೆಗಳಿಂದ ಕೂಡಿ ಮಾಡಿದ ಸಾಧನ (ಪ್ರೋಕ್ಷಣ ಮುಂತಾದ ಕಾರ್ಯಗಳಲ್ಲಿ ಉಪಯುಕ್ತವಾದುದು.)

---

* ದರ್ಶಶ್ರಾದ್ಧದಲ್ಲಿ ಕೂರ್ಚವನ್ನು 5 ದರ್ಭೆಗಳಿಂದ ಮಾಡಿರಬೇಕು.
ಪ್ರತಿಸಾಂವತ್ಸರಿಕ ಶ್ರಾದ್ಧದಲ್ಲಿ ಕೂರ್ಚವನ್ನು 7 ದರ್ಭೆಗಳಿಂದ ಮಾಡಿರಬೇಕು.
ಮಹಾಲಯ ಶ್ರಾದ್ಧದಲ್ಲಿ ಕೂರ್ಚವನ್ನು 9 ದರ್ಭೆಗಳಿಂದ ಮಾಡಿರಬೇಕು.

13.	ಪಾಣಿಹೋಮ-	ಬ್ರಾಹ್ಮಣರ ಕೈಯಲ್ಲಿ ಹೋಮ ಮಾಡುವದು
14.	ವಿಕಿರ-	ದೇವ, ಪಿತೃ ಬ್ರಾಹ್ಮಣರ ಎಲೆಯ ಮುಂಭಾಗದಲ್ಲಿ ನೀರು ಹಾಕಿ - ಅನ್ನವನ್ನು ಉದುರಿಸುವದು.
15.	ಪಾರ್ವಣ-	''ತ್ರಯಾತ್ಮಕಂ ಪಾರ್ವಣಂ'' ಉಕ್ತಿಯಂತೆ ಪಿತೃ, ಪಿತಾಮಹ, ಪ್ರಪಿತಾಮಹ ಈ ಮೂವರಿಗೆ ಕೊಡಲ್ಪಟ್ಟ ಪಿಂಡಗಳಿಗೆ ''ಪಾರ್ವಣ'' ಎಂದು ಹೆಸರು.
16.	ಪಾತ್ರೋಚ್ಚಾಲನ-	ದೇವ ಪಿತೃ ಬ್ರಾಹ್ಮಣ ಭೋಜನಾನಂತರ ಉಚ್ಛಿಷ್ಟದ ಎಲೆಗಳನ್ನು ತೆಗೆದು ಬಿಡುವದು.
17.	ಬ್ರಹ್ಮಾರ್ಪಣ-	ಶ್ರಾದ್ಧದಲ್ಲಿ ದೇವ-ಪಿತೃ-ಬ್ರಾಹ್ಮಣರ ಉದ್ದಿಶ್ಯವಾಗಿ ಕೊಡುವ ಅನ್ನವನ್ನು ಕೃಷ್ಣಾರ್ಪಣಪೂರ್ವಕ ಅರ್ಪಿಸುವದು.
18.	ಅಷ್ಟಾರ್ಘ್ಯ ಪದಾರ್ಥಗಳು-	ಕುಶ, ಪುಷ್ಪ, ತಿಲ, ವ್ರೀಹಿ, ಕ್ಷೀರ, ದಧ್ಯಾಜ್ಯಸರ್ಷಪಾಃ। ದರ್ಭೆ, ತುಳಸಿ (ಹೂ), ಎಳ್ಳು, ಅಕ್ಕಿ, ಹಾಲು, ಮೊಸರು, ತುಪ್ಪ, ಬಿಳಿಸಾಸುವೆ
19.	ಬ್ರಹ್ಮದಂಡ-	ಹಿರಣ್ಯ (ದಕ್ಷಿಣೆ), ಕುಶ (ದರ್ಭೆ), ತಿಲ (ಎಳ್ಳು) ಇವುಗಳನ್ನು ತಟ್ಟೆಯಲ್ಲಿ ಹಾಕಿರುವುದು.
20.	ಶಕಲ-	ಎರಡು ಉದ್ದವಾದ ದರ್ಭೆಗಳು.

★★★

ಶ್ರಾದ್ಧಕಾಲದಲ್ಲಿ ಪಠಿಸಬೇಕಾದ ಔರ್ಧ್ವದೇಹಿಕ ಶ್ರೀರಾಮ ಸ್ತೋತ್ರ

(ಶ್ರೀಪದ್ಮಮಹಾಪುರಾಣಾಂತರ್ಗತ)

ಭಗವಾನ್ ನಾರಾಯಣಃ ಶ್ರೀಮಾನ್ ದೇವಶ್ಚಕ್ರಾಯುಧೋ ಹರಿಃ।
ಶಾರ್ಙ್ಗಧಾರೀ ಹೃಷೀಕೇಶಃ ಪುರಾಣ ಪುರುಷೋತ್ತಮಃ ॥1॥

ಪ್ರಭವಶ್ಚಾವ್ಯಯಸ್ತ್ವಂ ಚ ಉಪೇಂದ್ರೋ ಮಧುಸೂದನಃ।
ಪೃಶ್ನಿಗರ್ಭೋ ಧೃತಾರ್ಚಿಸ್ತ್ವಂ ಪದ್ಮನಾಭೋ ರಣಾಂತಕೃತ್ ॥2॥

ಏಕಶೃಂಗೋ ವರಾಹಸ್ತ್ವಂ ಭೂತಭವ್ಯಂ ಭವಾತ್ಮಕಃ।
ಅಕ್ಷರಂ ಬ್ರಹ್ಮ ಸತ್ಯಂ ತು ಆದೌ ಚಾಂತೇ ಚ ರಾಘವ ॥3॥

ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಃ ಪರಂತಪಃ।
ಶತಧನ್ವಾ ವಸುಃ ಪೂರ್ವ ವಸೂನಾಂ ತ್ವಂ ಪ್ರಜಾಪತಿಃ। ॥4॥

ತ್ರಯಾಣಾಮಪಿ ಲೋಕಾನಾಮಾದಿಕರ್ತಾ ಸ್ವಯಂ ಪ್ರಭುಃ।
ರುದ್ರಾಣಾಮಷ್ಟಮೋ ರುದ್ರಃ ಸಾಧ್ಯಾನಾಮತಿ ಪಂಚಮಃ ॥5॥

ಅಶ್ವಿನೌ ಚಾಪಿ ಕರ್ಣೌ ತೇ ಸೂರ್ಯಚಂದ್ರೌ ಚ ಚಕ್ಷುಷೀ।
ಅಂತೇಚಾದೌ ಚ ಮಧ್ಯೇ ಚ ದೃಶ್ಯಸೇ ತ್ವಂ ಪರಂತಪಃ ॥6॥

ಪ್ರಭವೋ ನಿಧನಂ ಚಾಸ್ಯ ನ ವಿದುಃ ಕೋ ಭವಾನಿತಿ।
ದೃಶ್ಯಸೇ ಸರ್ವಲೋಕೇಷು ಗೋಷುಚ ಬ್ರಾಹ್ಮಣೇಷು ಚ ॥7॥

ತ್ರೀನ್ ಲೋಕಾನ್ ಧಾರಯನ್ನಾಸೇ ದೇವಗಂಧರ್ವ ದಾನವಾನ್।
ಅಹಂ ತೇ ಹೃದಯಂ ರಾಮ ಜಿಹ್ವಾದೇವೀ ಸರಸ್ವತೀ ॥8॥

ದೇವಾ ರೋಮಾಣಿ ಗಾತ್ರೇಷು ನಿರ್ಮಿತಾಸ್ತೇ ಸ್ವಮಾಯಯಾ।
ನಿಮಿಷಸ್ತೇ ಸ್ಮೃತಾ ರಾತ್ರಿರುನ್ಮೇಷೋ ದಿವಾಸ್ತಥಾ ॥9॥

ಸೀತಾಲಕ್ಷ್ಮೀರ್ಭವಾನ್ ವಿಷ್ಣುಃ ದೇವಃ ಕೃಷ್ಣಃ ಪ್ರಜಾಪತಿಃ।
ವಧಾರ್ಥಂ ರಾವಣಸ್ಯ ತ್ವಂ ಪ್ರವಿಷ್ಟೋ ಮಾನುಷೀಂ ತನುಂ ॥10॥

ತದಿದಂ ಚ ತ್ವಯಾ ಕಾರ್ಯಂ ಕೃತಂ ಧರ್ಮಭೃತಾಂವರಃ।
ನಿಹತೋ ರಾವಣೋ ರಾಮ ಪ್ರಹೃಷ್ಟಾ ದೇವತಾಃ ಕೃತಾಃ ॥11॥

ಅಮೋಘಂ ದೇವ ವೀರ್ಯಂ ತೇ ನ ತೇ ಮೋಘಃ ಪರಾಕ್ರಮಃ।
ಅಮೋಘ ದರ್ಶನಂ ರಾಮ ನ ಚ ಮೋಘಸ್ತವ ಸ್ತವಃ ॥12॥

॥ ಶ್ರೀಕೃಷ್ಣಾರ್ಪಣಮಸ್ತು ॥

(ಶ್ರಾದ್ಧಕಾಲದಲ್ಲಿ ಪಿಂಡ ಪೂಜೆಯ ಮೊದಲು ಮತ್ತು ಅನಂತರ ಈ "ಶ್ರೀರಾಮಸ್ತೋತ್ರ" ವನು ಪಠಿಸಿದರೆ ಶ್ರಾದ್ಧವು ಅಕ್ಷಯವಾಗುವದು.)

ತೀರ್ಥಶ್ರಾದ್ಧಾದಿ ವಿಚಾರ

1. ಯಾತ್ರಾರ್ಥಿಗಳಾಗಿ ತೀರ್ಥಕ್ಷೇತ್ರಗಳಿಗೆ ಹೋದಾಗ-

ಅಲ್ಲಿ ತೀರ್ಥಶ್ರಾದ್ಧಾದಿಗಳನ್ನು ತಪ್ಪದೇ ಮಾಡಬೇಕು.

2. ಕೃಷ್ಣಾಕ್ಕೆ ಗಂಗಾ ಸಾನಿಧ್ಯವು 12 ವರ್ಷಗಳಿಗೊಮ್ಮೆ ಬರುತ್ತದೆ. ಇದಕ್ಕೆ ''ಕನ್ಯಾಗತ'' ವೆಂದು ಕರೆಯುತ್ತಾರೆ. ಆಗ-

ಕನ್ಯಾಯಾಂ ಕೃಷ್ಣಾಯಾತ್ರಾಯಾಂ ವಪನಂ ಪಿಂಡದಾನಕಂ।
ಪುತ್ರಃ ಕುರ್ವೀತ ಭಕ್ತ್ಯಾ ಚ ಪಿತ್ರ್ನುದ್ದಿಶ್ಯ ದೇವತಾಃ।
ತೀರ್ಥೇಷು ವಪನಂ ಕಾರ್ಯಂ ಕಕ್ಷೋಪಸ್ಥಂ ಚ ವರ್ಜಯೇತ್॥
ತಿಸ್ರಃ ಕೋಟ್ಯರ್ಧಕೋಟ್ಯಸ್ತು ತೀರ್ಥಾನಿ ಭುವನತ್ರಯೇ।
ಆಯಾಂತು ಕೃಷ್ಣವೇಣ್ಯಾಯಾಂ ಕನ್ಯಾಯುಕ್ತೇ ಬೃಹಸ್ಪತೌ॥

ಉಕ್ತಿಯಂತೆ ಕೃಷ್ಣಾ ನದಿಯಲ್ಲಿ ಗಂಗಾಸಾನ್ನಿಧ್ಯ ಬಂದಾಗ ಪುತ್ರನಾದವನು ಕೃಷ್ಣಾಯಾತ್ರೆಯನ್ನು ಕೈಕೊಂಡು ಪಿತೃಗಳ ಉದ್ದಿಶ್ಯವಾಗಿ ಕ್ಷೌರ ಮಾಡಿಸಿ ಕೊಂಡು ಪಿಂಡ ಪ್ರದಾನ ಪೂರ್ವಕ ಶ್ರಾದ್ಧ ಮಾಡಬೇಕು.

ಈ ಕಾಲದಲ್ಲಿ ಮೂರುವರೆ ಕೋಟಿ ತೀರ್ಥಗಳು (ಗುರುವು ಕನ್ಯಾಯುಕ್ತನಾದ ಪ್ರಯುಕ್ತ) ಕೃಷ್ಣವೇಣಿ ತೀರ್ಥದಲ್ಲಿ ಸನ್ನಿಹಿತವಾಗಿರುತ್ತವೆ.

3. ಹಾಗೆಯೇ ಗೋದಾವರೀ ನದಿಗೆ ಗಂಗಾ ಸಾನಿಧ್ಯವು ಬಂದಾಗ ಕೂಡ ಪುತ್ರನಾದವನು ಗೋದಾವರೀ ತೀರ್ಥ ಯಾತ್ರೆ ಕೈ ಕೊಂಡು, ಕ್ಷೌರ ಮಾಡಿಸಿಕೊಂಡು ಪಿಂಡ ಪ್ರದಾನ ಪೂರ್ವಕ ಶ್ರಾದ್ಧ ಮಾಡಬೇಕು.

ಗುರು ಸಿಂಹ ರಾಶಿಗೆ ಬಂದಾಗ, ಗಂಗಾ ಭಾಗೀರಥಿಯ ಸಾನ್ನಿಧ್ಯವು ಗೋದಾವರಿಗೆ ಬರುತ್ತದೆ. ಆದ್ದರಿಂದ 12 ವರ್ಷಗಳಿಗೊಮ್ಮೆ ಬರುವ ಒಳ್ಳೆಯ ಸಮಯದಲ್ಲಿ ಮಾಡಿದ ಪಿಂಡದಾನಾದಿ ಸತ್ಕರ್ಮಗಳಿಗೆ ವಿಶೇಷ ಪುಣ್ಯ ದೊರೆಯುತ್ತದೆ.

★★★

ಭಾಗ - 2

ವಿದ್ವಾಂಸರ ಲೇಖನಗಳು

ವಿದ್ವಾನ್ ಶ್ರೀರಾಮವಿಟ್ಠಲಾಚಾರ್ಯ
ಡಾ। ಹೆಚ್. ಸತ್ಯನಾರಾಯಣಾಚಾರ್ಯ
ವಿದ್ವಾನ್ ಸಿ.ಹೆಚ್. ಬದರಿನಾಥಾಚಾರ್ಯ
ಡಾ। ಎ.ವಿ. ನಾಗಸಂಪಿಗೆ
ಡಾ। ಎನ್. ವೆಂಕಟೇಶಾಚಾರ್ಯ

ಗಯಾ ಕ್ಷೇತ್ರ ಹಾಗೂ ಬದರಿ ಶ್ರಾದ್ಧ ವಿಚಾರ

-ವಿದ್ವಾನ್ ಶ್ರೀ ಶ್ರೀರಾಮವಿಟ್ಠಲಾಚಾರ್ಯ
ತರ್ಕ, ವೇದಾಂತ ಪ್ರಾಧ್ಯಾಪಕರು,
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು-28

ಸ್ವಗೃಹ ಎಂಬುದನ್ನು ಬಿಟ್ಟ ಮೇಲೆ ಅನೇಕ ತೀರ್ಥಕ್ಷೇತ್ರಗಳಲ್ಲಿ ಶ್ರಾದ್ಧ ಮಾಡಬಹುದು. ಅಂತಹುದರಲ್ಲಿ ಗಯಾ ಕ್ಷೇತ್ರವೂ ಉತ್ತಮ ಗತಿ ಕೊಡುತ್ತದೆ. ಗಯಾ ಕ್ಷೇತ್ರದಲ್ಲಿ ಮಾಡಿದ ಕಾರ್ಯಗಳು ಅಕ್ಷಯ ಫಲವನ್ನು ಕೊಡುತ್ತವೆ. ವಿಶೇಷವಾಗಿ ಪಿತೃಕಾರ್ಯವಂತೂ ಅಕ್ಷಯ ಫಲವನ್ನು ಕೊಡುತ್ತದೆ.

''ಗಯಾಯಾಂ ಅಕ್ಷಯಂ ಶ್ರಾದ್ಧಂ ಜಪಂ ಹೋಮಂ ತಪಾಂಸಿಚ'' *(ಅಗ್ನಿಪುರಾಣ)*

ಗಯಾ ಕ್ಷೇತ್ರದಲ್ಲಿ ಮಾಡಿದ ಜಪ ಹೋಮ ಶ್ರಾದ್ಧಾದಿಗಳು ಅಕ್ಷಯ ಫಲವನ್ನು ಕೊಡುತ್ತವೆ.

''ಕಾಕ್ಷಂತಿ ಪಿತರಃ ಪುತ್ರಾನ್ ನರಕಾದಿಭಿಃ ಭೀರವಃ।
ಗಯಾಂ ಯಾಸ್ಯತಿ ಯಃ ಪುತ್ರಃ ಸ ನಃ ತ್ರಾತಾ ಭವಿಷ್ಯತಿ ॥'' *ಅಗ್ನಿಪುರಾಣ 115-4*

ನರಕಾದಿಗಳಿಂದ ಹೆದರಿದ ಪಿತೃಗಳು ನಮ್ಮ ಮಗನು ಗಯಾಕ್ಕೆ ಹೋಗುತ್ತಾನೆ. ಅವನು ಅಲ್ಲಿ ಶ್ರಾದ್ಧ ಮಾಡಿ ನಮ್ಮ ರಕ್ಷಕನಾಗುತ್ತಾನೆ ಎಂದು ಎದುರು ನೋಡುತ್ತಿರುತ್ತಾರೆ.

ಏಷ್ಟವ್ಯಾ ಬಹವಃ ಪುತ್ರಾಃ ಯದ್ಯೇಕೋಽಪಿ ಗಯಾಂ ವ್ರಜೇತ್।
ಉದ್ಧರೇತ್ ಸಪ್ತಗೋತ್ರಾಣಿ ಕುಲಮೇಕೋತ್ತರಂ ಶತಂ ॥

ವಾಯುಪುರಾಣ 105-20

ವಾಯು ಪುರಾಣದಲ್ಲಿ ಗಯಾ ಮಹಿಮೆ:

ಬಹಳ ಮಕ್ಕಳನ್ನು ಪಡೆಯಬೇಕು. ಒಬ್ಬನಾದರೂ ಗಯಾಕ್ಕೆ ಹೋಗುತ್ತಾನೆ. ಒಬ್ಬನೇ ಹೋದರೂ ಏಳು ಗೋತ್ರಗಳನ್ನು ನೂರೊಂದು ಕುಲವನ್ನು ಉದ್ಧಾರ ಮಾಡುತ್ತಾನೆ. ಮಕ್ಕಳನ್ನು ಪಡೆಯುವುದು ಸದಾಚಾರ ಸನ್ನಡತೆವುಳ್ಳವರಾಗಿ ಗಯಾದಿ ಕ್ಷೇತ್ರಕ್ಕೆ ಹೋಗಿ ಪಿತೃತೃಪ್ತಿಯನ್ನು ಮಾಡುವವನಾಗಲಿ ಎಂಬ ಉದ್ದೇಶದಿಂದಲೇ ಇರಬೇಕು. ಕೇವಲ ಲೌಕಿಕ ಸುಖದ ದೃಷ್ಟಿಯಿಂದಲ್ಲ ಎಂದು.

ಅನೇಕ ವಿಷಯಗಳಿಗೆ ಪ್ರಮಾಣಗಳು ನಮಗೆ ಪುರಾಣಗಳಿಂದ ದೊರೆಯುತ್ತವೆ

ಆದ್ದರಿಂದ ಪುರಾಣಗಳೂ ಆಧಾರ ಗ್ರಂಥಗಳೇ. ಅವುಗಳನ್ನು ಉದಾಸೀನ ಮಾಡ ಬಾರದು. ಪ್ರಕೃತ ವಾಯು ಪುರಾಣದಲ್ಲಿ ಗಯಾ ಮಾಹಾತ್ಮ್ಯೆ ವರ್ಣಿತವಾಗಿರುವುದು ಹೀಗಿದೆ: ಒಂದು ಸಾರಿ ಭಕ್ತ ಶಿರೋಮಣಿಗಳಾದ ನಾರದರು ಶೌನಕಾದಿ ಮುನಿಗಳಿಂದ ಶ್ರೀ ಸನತ್ಕುಮಾರರಲ್ಲಿ ಹೋಗಿ ಅತ್ಯಂತ ನಮ್ರತೆಯಿಂದ ಪ್ರಾರ್ಥಿಸಿದರು.

''ಮಹಾತ್ಮರೇ' ತಾವು ನಮ್ಮ ಮೇಲಿನ ದಯೆಯಿಂದ ತೀರ್ಥ (ಕ್ಷೇತ್ರ) ಮಹಿಮೆ ಹೇಳಿ. ಯಾವ ತೀರ್ಥದಲ್ಲಿ ಕರ್ಮಾನುಷ್ಠಾನ ಮಾಡುವುದರಿಂದ ನಮಗೆ ಪುಣ್ಯ ಪ್ರಾಪ್ತಿಯಾಗಿ ನಮ್ಮ ಪಿತೃಗಳಿಗೆ ಮುಕ್ತಿಯಾಗುತ್ತದೆ ಅಂತಹ ತೀರ್ಥದ ಬಗ್ಗೆ ತಿಳಿಸಿರಿ''. ಆಗ ಸನತ್ಕುಮಾರರು ಹೇಳಿದರು-

ಭೂಮಂಡಲದಲ್ಲಿ ಒಂದು ಅತ್ಯಂತ ಪವಿತ್ರವಾದ ಸ್ಥಾನ ಒಂದಿದೆ. ಅದನ್ನು ''ಗಯಾ ತೀರ್ಥ'' ಎಂದು ಕರೆಯುತ್ತಾರೆ. ಆ ಕ್ಷೇತ್ರದಲ್ಲಿ ಪಿತೃಗಳನ್ನುದ್ದೇಶಿಸಿ ಶ್ರಾದ್ಧ ದಾನಾದಿಗಳನ್ನು ಮಾಡುವುದರಿಂದ ಪಿತೃದೇವತೆಗಳಿಗೆ ಅಕ್ಷಯ ಲೋಕ ಪ್ರಾಪ್ತವಾಗುತ್ತದೆ. ಅವರು ಸಂತುಷ್ಟರಾಗಿ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಡುತ್ತಾರೆ.

ನಾರದರು ಮತ್ತು ಋಷಿಗಳು ಕೇಳಿದರು ಏಕೆ ಆ ಗಯಾ ಕ್ಷೇತ್ರಕ್ಕೆ ಅಷ್ಟು ಮಹಿಮೆ? ಎಂದು, ಸನತ್ಕುಮಾರರು ಹೇಳಿದರು-

ಅತ್ಯಂತ ಪ್ರಾಚೀನ ಕಾಲದಲ್ಲಿ ಗಯಾಸುರನೆಂಬ ಒಬ್ಬ ದೈತ್ಯನಿದ್ದನು. ಇವನು ಕೋಲಾಹಲವೆಂಬ ಪರ್ವತದಲ್ಲಿ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿ ಬ್ರಹ್ಮನಿಂದ ಎರಡು ವರಗಳನ್ನು ಕೇಳಿದನು. ''ನಾನು ಮೂರು ಲೋಕದಲ್ಲಿ ದ್ವಪಂಗೆಲ್ಲರಿಗೂ ಮಹಾಪವಿತ್ರನಾಗಿರಬೇಕು ಮತ್ತು ನಾನು ಸ್ಪರ್ಶ ಮಾಡಿದ ವಸ್ತುಗಳು, ಜೀವಿಗಳು ಮುಕ್ತಿಗೆ ಹೋಗಲು ಯೋಗ್ಯವಾಗಬೇಕು''. ಬ್ರಹ್ಮನು ಈ ಎರಡು ವರಗಳನ್ನು ಕೊಟ್ಟನು. ವರಗಳ ಪ್ರಕಾರ ಇವನನ್ನು ಮುಟ್ಟಿದವರೆಲ್ಲ ಮುಕ್ತಿಯೋಗ್ಯರಾಗುತ್ತಿದ್ದರು. ಇದರ ಪರಿಣಾಮದಿಂದ ಧರ್ಮ, ದಾನ, ಪಿತೃಕಾರ್ಯ ಎಲ್ಲ ಕಮ್ಮಿ ಯಾಗುತ್ತಾ ಬಂತು. ಏಕೆಂದರೆ ಇವನನ್ನೇ ಎಲ್ಲರೂ ಸ್ಪರ್ಶಿಸಿ ಮುಕ್ತಿಪದ ಪಡೆಯುತ್ತಿದ್ದರು. ಯಮಲೋಕ, ಸ್ವರ್ಗ, ನರಕ ಎಲ್ಲವೂ ಬಿಕೋ ಎನಿಸಿದವು. ಇದರಿಂದ ಪ್ರಕೃತಿಯ ನಿಯಮವೂ ಬದಲಾಯಿತು. ನಿತ್ಯ ಆಚರಣೆಯೂ ನಿಂತು ಹೋಯಿತು. ಎಲ್ಲಾ ದೇವತೆಗಳು ಬ್ರಹ್ಮನ ಸಮೀಪ ಹೋಗಿ ಪ್ರಾರ್ಥಿಸಿದರು. ದೇವತೆಗಳ ಸಹಿತ ಬ್ರಹ್ಮ ದೇವರು ಅನಾದಿಯಾದ ವಿಷ್ಣುವಿನ ಸಮೀಪಕ್ಕೆ ಹೋದರು. ವಿಷ್ಣುವನ್ನು ಪ್ರಾರ್ಥಿಸಿದರು ಆ ವಿಷ್ಣುವು ದೇವತೆಗಳ ಹಾಗೂ ಬ್ರಹ್ಮದೇವರ ಪ್ರಾರ್ಥನೆಯನ್ನು ಕೇಳಿ ಹೇಳಿದನು, ನೀವು ಗಯಾಸುರನ ಸಮೀಪಕ್ಕೆ ಹೋಗಿ ಅವನ

ಶರೀರವನ್ನೇ ಯಜ್ಞಕ್ಕಾಗಿ ಬೇಕೆಂದು ಕೇಳಿರಿ. ಹೀಗೆ ಸಮಾಧಾನ ಹೇಳಿ ಉಪಾಯವನ್ನು ತಿಳಿಸಿಕೊಟ್ಟನು.

ಶ್ರೀಭಗವಾನ್ ವಿಷ್ಣುವಿನ ಉಪಾಯವನ್ನು ಕೇಳಿದ ಬ್ರಹ್ಮ ಸಹಿತ ದೇವತೆಗಳೆಲ್ಲರೂ ಗಯಾಸುರನ ಸಮೀಪಕ್ಕೆ ಹೋದರು. ದೇವತೆಗಳಿಂದ ಸಹಿತನಾಗಿ ಬಂದಿರುವ ಬ್ರಹ್ಮನನ್ನು ಗಯಾಸುರನು ನೋಡಿ ಬಲು ಸಂತೋಷಪಟ್ಟ, ಅರ್ಘ್ಯ ಪಾದ್ಯಾದಿ ಗಳನ್ನು ಕೊಟ್ಟು ತಾವು ಬಂದಿರುವ ಕಾರಣವೇನು? ನನಗೆ ಯಾವ ಅನುಗ್ರಹ ಮಾಡಲು ಬಂದಿರುವಿರಿ? ಎಂದು ವಿನಮ್ರತೆಯಿಂದ ಕೇಳಿದನು. ಅದಕ್ಕೆ ಬ್ರಹ್ಮದೇವರು ಹೀಗೆ ಹೇಳಿದರು- ''ಹೇ ಗಯಾಸುರ, ಇಡೀ ಪ್ರಪಂಚದಲ್ಲಿ ನಾನು ಯಜ್ಞಕ್ಕೆ ಪವಿತ್ರವಾದ ಸ್ಥಳವನ್ನು ಹುಡುಕಿದೆ. ಆದರೆ ನಿನ್ನ ಶರೀರದಷ್ಟು ಪವಿತ್ರವಾದ ಸ್ಥಳ ನನಗೆ ಮತ್ತೊಂದಿಲ್ಲವೆಂದು ತಿಳಿದು ಯಜ್ಞಕ್ಕಾಗಿ ನಿನ್ನ ಶರೀರವನ್ನು ಕೇಳಲು ಬಂದಿದ್ದೇನೆ'' ಎಂದರು. ಬ್ರಹ್ಮನು ಈ ಮಾತನ್ನು ಕೇಳುತ್ತಿರುವಾಗಲೇ ಗಯಾಸುರನು ನಾನೇ ಧನ್ಯ ಎಂದುಕೊಂಡು ತನ್ನ ಶರೀರವನ್ನು ಯಜ್ಞಕ್ಕಾಗಿ ಕೊಡಲು ಒಪ್ಪಿ ಉತ್ತರಕ್ಕೆ ತನ್ನ ತಲೆಯನ್ನು ಇಟ್ಟು ದಕ್ಷಿಣಕ್ಕೆ ತನ್ನ ಕಾಲುಗಳನ್ನು ಚಾಚಿ ಮಲಗಿದನು. ಅದು ಎಷ್ಟು ದೂರ ಹೋಯಿತೆಂದರೆ: '' ಪಂಚ ಕ್ರೋಶಂ ಗಯಾ ಕ್ಷೇತ್ರಂ ಕ್ರೋಶಮ್ ಏಕಂ ಗಯಾ ಶಿರಃ'' (ಶ್ರಾದ್ಧ ವಿಧಿ) 5 ಕ್ರೋಶದವರೆಗೆ ಕೈಕಾಲುಗಳು ಹಬ್ಬಿದವು. ಒಂದು ಕ್ರೋಶದವರೆಗೆ ತಲೆ ಮಾತ್ರ ಹಬ್ಬಿತು. ಅಂದರೆ ಸುಮಾರು 20 ಮೈಲಿ ದೂರದವರೆಗೆ ಹಬ್ಬಿತ್ತು. ಆ ಶರೀರದ ಮೇಲೆಯೇ ಬ್ರಹ್ಮದೇವರು ಯಜ್ಞ ಪ್ರಾರಂಭಿಸಿದರು. ದರ್ಭೆಗಳನ್ನು ಅಭಿಮಂತ್ರಿಸಿ ಬ್ರಾಹ್ಮಣರನ್ನು ಸೃಷ್ಟಿಸಿದರು. ಆ ಸೃಷ್ಟಿಸಿದ ಬ್ರಾಹ್ಮಣರಿಗೆ ಯಜ್ಞಾದಿ ಕ್ರಿಯೆಗಳಿಗೆ ಅಧಿಕಾರವನ್ನು ಕೊಟ್ಟರು.

ಯಜ್ಞ ಪ್ರಾರಂಭವಾಯಿತು. ಗಯಾಸುರನ ದೇಹದ ಮೇಲೆ (ಎದೆ ಮೇಲೆ) ಯಜ್ಞ ಪ್ರಾರಂಭವಾದಾಗ ಗಯಾಸುರನು ಬಿಸಿ ತಾಳಲಾರದೆ ಅಲುಗಾಡಲು ಪ್ರಾರಂಭಿಸಿದನು. ಇದರಿಂದ ಯಜ್ಞದ ಪದಾರ್ಥಗಳು ಬೀಳಲಾರಂಭಿಸಿದವು. ಆಗ ಬ್ರಹ್ಮನು ಯಮಧರ್ಮ ರಾಜನಿಗೆ ಹೇಳಿದನು. '' ಹೇ ಧರ್ಮರಾಜ ನಿನ್ನಲ್ಲಿರುವ ದೇವಮಯವಾದ ಶಿಲಾ ಏನಿದೆ ಅದನ್ನು ಈ ದಾನವನ ಶರೀರದ ಮೇಲಿಡು. ಆಗ ಈ ಕಂಪನ ನಿಲ್ಲುತ್ತದೆ''. ಎಂದು. ಧರ್ಮರಾಜ ಹಾಗೆ ಮಾಡಿದ ಮೇಲೂ ಕಂಪನ ನಿಲ್ಲಲಿಲ್ಲ. ಅಲ್ಲಿದ್ದ ಎಲ್ಲಾ ದೇವತೆಗಳೂ ಒಟ್ಟಾಗಿ ತಮ್ಮ ಬಲವನ್ನೆಲ್ಲಾ ಹಾಕಿ ಒತ್ತಿ ಹಿಡಿದರು. ಆದರೂ ನಿಲ್ಲಲಿಲ್ಲ. ಆಗ ಹೇ ವಿಷ್ಣುವೇ ನೀನೇ ಗತಿ. ಯಜ್ಞ ಮುಗಿಯಬೇಕಿದ್ದರೆ ಈ ಕಂಪನ ನಿಲ್ಲಬೇಕು ಎಂದು ಪ್ರಾರ್ಥಿಸಿದರು. ಆಗ ಆ ದೇವತೆಗಳ ಈ ದೀನ ಅವಸ್ಥೆಯನ್ನು ಕಂಡ ಶ್ರೀವಿಷ್ಣುವು ತಾನೇ ಗದಾಧಾರೀರೂಪದಲ್ಲಿ ಧರ್ಮ ಶಿಲಾದ ಮೇಲೆ ಪ್ರಕಟನಾದನು. ಆಗ ಕಂಪನವೂ

ಶಾಂತವಾಯಿತು. ಆಗ ಆ ಗದಾಧರನು ಪ್ರಸನ್ನನಾಗಿ ಗಯಾಸುರನಿಗೆ ವರ ಕೇಳಲು ಹೇಳಿದನು. ಗಯಾಸುರನು ಪ್ರಾರ್ಥಿಸಿದನು '' ಹೇ ದೇವ, ತಮ್ಮ ಕೃಪೆಯಿಂದ ನಾನು ಕೃತಾರ್ಥನಾಗಿದ್ದೇನೆ. ತಾವು ನನ್ನ ಮೇಲೆ ಪ್ರಸನ್ನರಾಗಿದ್ದರೆ ಈ ಗದಾಧರ ರೂಪದಿಂದಲೇ ನನ್ನ ಶರೀರದ ಮೇಲೆ ಯಾವಾಗಲೂ ವಿರಾಜಿಸುತ್ತಿದ್ದು ನನ್ನನ್ನು ಪವಿತ್ರನನ್ನಾಗಿ ಮಾಡುತ್ತಾ ಇರುವುದು. ಅಲ್ಲದೆ ನನ್ನ ಶರೀರದ ಮೇಲೆ ಪಿತೃ ಕಾರ್ಯ ನಡೆಯಲು ನಿನ್ನ ಪಾದವಿಡು. ಪಿತೃಕಾರ್ಯಕ್ಕಾಗಿ ಈ ಸ್ಥಳ ಪ್ರಸಿದ್ಧವಾಗಲಿ. ಪಿತೃಗಳಿಗೆ ಅಕ್ಷಯವಾದ ತೃಪ್ತಿ ದೊರೆಯಲಿ. ಈ ನನ್ನ ಶರೀರದ ಮೇಲಿರುವ ನಿನ್ನ ಪಾದ ಚಿಹ್ನೆ ಇರುವ ಧರ್ಮಶಿಲಾದ ಮೇಲೆ ಯಾರು ಪಿಂಡದಾನ ಮಾಡುತ್ತಾರೋ ಅವರ ಪಿತೃ ದೇವತೆಗಳಿಗೆ ಅಕ್ಷಯ ಲೋಕ ಪ್ರಾಪ್ತವಾಗಲಿ ಮತ್ತು ನಿತ್ಯ ಪಿತೃಕಾರ್ಯ ನಡೆಯುತ್ತಿರಲಿ'' ಎಂದು ವರವನ್ನು ಕೇಳಿದ್ದರಿಂದ ಇವತ್ತಿನವರೆಗೂ ಭಗವಂತ ಗದಾಧರನ ರೂಪದಿಂದ ಗಯಾ ಕ್ಷೇತ್ರದಲ್ಲಿದ್ದು ಆ ಸ್ಥಳ ವಿಷ್ಣು ಪಾದ ಕ್ಷೇತ್ರವಾಗಿದ್ದು ಪಿತೃಗಳಿಗೆ ಮುಕ್ತಿ ಕೊಡುವ ಕೃಪಾ ಮಾಡುತ್ತಿದ್ದಾನೆ.

ಸನತ್ಕುಮಾರರು ಕಥೆಯನ್ನು ಮುಂದುವರೆಸಿ ಹೇಳಿದರು. ಬ್ರಹ್ಮದೇವನು ತಾನು ಮಾಡುತ್ತಿದ್ದ ಯಜ್ಞವನ್ನು ಪೂರ್ಣ ಮುಗಿಸಿದ ಮೇಲೆ ತನ್ನ ಮಾನಸ ಪುತ್ರರೆನಿಸಿದ್ದ ಅರ್ಥಾತ್ ಯಜ್ಞದ ಕಾರ್ಯಕ್ಕಾಗಿ ಸೃಷ್ಟರಾದ ಬ್ರಾಹ್ಮಣರನ್ನುದ್ದೇಶಿಸಿ ಈ ಯಜ್ಞದಲ್ಲಿ ಬಂದಿರುವ ದೇವ ದುರ್ಲಭವಾದ ಧನ, ಧಾನ್ಯದಿಂದ ಈ ಭೂಮಿ ತುಂಬಿ ತುಳುಕುತ್ತಿತ್ತು. ಹಾಲು, ಮೊಸರು, ತುಪ್ಪ ಇವುಗಳ ನದಿಯೇ ಹರಿಯುತ್ತಿತ್ತು. ಬಂಗಾರ, ಬೆಳ್ಳಿಗಳ ಪರ್ವತವೇ ಕಾಣುತ್ತಿತ್ತು. ಅಂತಹ ಅಸದೃಶ ಸಂಪತ್ತು ತಮ್ಮೆದುರು ಇದ್ದರೂ ಸಹ ಯಾವುದೇ ಯಜ್ಞನಿಮಿತ್ತದಿಂದ ದಾನ ತೆಗೆದುಕೊಳ್ಳಬಾರದೆಂದು ತನ್ನಿಂದ ಸೃಷ್ಟರಾದ ಬ್ರಾಹ್ಮಣರಿಗೆ ಆಜ್ಞಾಪಿಸಿ ಅಂತರ್ಧಾನ ಹೊಂದಿದರು.

ಕೆಲವು ಕಾಲದ ನಂತರ ಧರ್ಮರಾಜನು ಒಂದು ಯಜ್ಞವನ್ನು ಪ್ರಾರಂಭಿಸಿದನು. ಯಜ್ಞದ ಪೂರ್ಣಫಲಪ್ರಾಪ್ತಿಗಾಗಿ ಬ್ರಾಹ್ಮಣರಿಗೆ ಬಂಗಾರವನ್ನು ದಾನ ಮಾಡಿದನು. ಬ್ರಹ್ಮ ಸೃಷ್ಟರಾದ ಈ ಬ್ರಾಹ್ಮಣರು ಅಜ್ಞಾನಮೋಹಿತರಾಗಿ ಈ ದಾನವನ್ನು ಸ್ವೀಕರಿಸಿದರು. ಇನ್ನೊಬ್ಬರಲ್ಲಿ ದಾನಕ್ಕಾಗಿ ಕೈಚಾಚಿದ್ದಕ್ಕೆ ಬ್ರಹ್ಮನು ಕೋಪಗೊಂಡು ನೀವೆಲ್ಲ ದರಿದ್ರರಾಗಿರಿ' ಎಂದು ಅವರಿಗೆ ಶಾಪ ಕೊಟ್ಟನು. ಕಾಲಾಂತರದಲ್ಲಿ ಆ ಎಲ್ಲಾ ಬಂಗಾರದ ರಾಶಿಗಳು ಶಿಲಾರೂಪ ಪರ್ವತಗಳಾಗಿ ಬಿದ್ದವು. ಭೂಮಂಡಲವೇ ಐಶ್ವರ್ಯಹೀನವಾಗಿ ಕಾಣುತ್ತಿತ್ತು. ಈ ಬ್ರಾಹ್ಮಣರು ತಮ್ಮ ತಪ್ಪಿಗಾಗಿ ಬಹಳ ಪಶ್ಚಾತ್ತಾಪ ಪಡುತ್ತಾ ಬಹು ದೈನ್ಯದಿಂದ ಬ್ರಹ್ಮನನ್ನು ಪ್ರಾರ್ಥಿಸಿದರು. ಆಗ ಬ್ರಹ್ಮನು ಇವರ ಮೇಲೆ ದಯೆ ತೋರಿ ಈ ತೀರ್ಥದಲ್ಲಿ ನಡೆಯತಕ್ಕ ಪಿತೃ ಯಜ್ಞಾದಿಗಳು ನೀವು ಸಂತುಷ್ಟರಾದ ಮೇಲೆಯೇ

ಪೂರ್ತಿಯಾಗುತ್ತವೆ . ಆದ್ದರಿಂದ ಇಲ್ಲಿ ಪಿತೃಕಾರ್ಯ ಮಾಡುವವರು ನಿಮ್ಮನ್ನು ಗೌರವಿಸಬೇಕು. ಹಾಗೆ ಮಾಡಿದಾಗ ಮಾತ್ರ ಅವರ ಪಿತೃ ದೇವತೆಗಳಿಗೆ ತೃಪ್ತಿಯುಂಟಾಗುತ್ತದೆ ಎಂದು ಹೇಳಿ ಜನಗಳು ಸಂತುಷ್ಟರಾಗಿ ನಿಮಗೆ ದಾನ ಮಾಡುವರು. ನೀವು ಅವರ ಪಿತೃಗಳ ಮುಕ್ತಿಗಾಗಿ ತೃಪ್ತಿಯಾಗುವುದು. ಈ ರೀತಿ ನಿಮಗೆ ಜೀವನ ಸಾಧನವೂ ಆಗಿರುತ್ತದೆಂದು ವರವನ್ನು ಕೊಟ್ಟು ಅಂತರ್ಧಾನ ಹೊಂದಿದರು.

ಯಾವಾಗ ಗಯಾಸುರನ ಮೇಲೆ ಗದಾಧರ ಬಂದು ನಿಂತನೋ ಆಗ ಬ್ರಹ್ಮದೇವರು ದೇವತೆಗಳು ಸ್ತುತಿಸಿ ''ಹೇ ವಿಷ್ಣುವೇ ನೀವು ಇನ್ನು ಮುಂದೆ ಇಲ್ಲೇ ಸನ್ನಿಹಿತರಾಗಿ ರಬೇಕೆಂದು'' ಕೇಳಿಕೊಂಡರು. ಆಗ ಶ್ರೀವಿಷ್ಣುವು ಅವರನ್ನು ಕುರಿತು ಯಾವ ಮನುಷ್ಯನು ತನ್ನ ಪಿತೃಗಳನ್ನುದ್ದೇಶಿಸಿ ಶ್ರಾದ್ಧ ಪಿಂಡದಾನಾದಿಗಳನ್ನು ಇಲ್ಲಿಗೆ ಬಂದು ಮಾಡುತ್ತಾನೋ ಅವನ ಕುಲ ಉದ್ಧಾರವಾಗುತ್ತದೆ. ಏಳು ಕುಲಗಳು ಉದ್ಧಾರವಾಗುತ್ತವೆ.

ಹೇ ನಾರದ, ಈ ಪುಣ್ಯಭೂಮಿ ಮೇಲೆ ಯಾವ ವ್ಯಕ್ತಿ ತಿಲಯುಕ್ತ ಪಿಂಡದಾನ ಮಾಡುವನೋ ಅವನ ಪಿತೃಗಳ ಉದ್ಧಾರವಾಗುತ್ತದೆ. ಕಪ್ಪು ಎಳ್ಳಿನಿಂದ ತರ್ಪಣ ಕೊಡುವುದರಿಂದ ರಾಕ್ಷಸರ ಬಾಧೆಯಾಗುವುದಿಲ್ಲ.

ಗಯಾ ಕ್ಷೇತ್ರದಲ್ಲಿ ಪಿಂಡದಾನ ಮಾಡುವುದರಿಂದ ಅಶ್ವಮೇಧ ಯಜ್ಞದ ಫಲ ಪ್ರಾಪ್ತವಾಗುತ್ತದೆ. ಈ ಕ್ಷೇತ್ರದಲ್ಲಿ ಮಹಾಲಯದಲ್ಲಿ ಪಿಂಡದಾನ ಮಾಡುವುದರಿಂದ ಮಹಾ ಫಲ ಪ್ರಾಪ್ತವಾಗುತ್ತದೆ. ಪಿತೃಗಳಿಗೆ ದೀರ್ಘಕಾಲೀನವಾದ ತೃಪ್ತಿಯಾಗುತ್ತದೆ. ಪಿಂಡದಾನದ ನಿಮಿತ್ತ ಧನ, ಧಾನ್ಯ, ಪುತ್ರ, ಪೌತ್ರ ಸಂಪತ್ ಅಭಿವೃದ್ಧಿ ಯಾಗುತ್ತದೆ.

★ ಆಶ್ವೀಜ ಮಾಸದ ಕೃಷ್ಣಪಕ್ಷದಲ್ಲಿ ಪಿತೃಪಕ್ಷ (ನಮ್ಮ ದಕ್ಷಿಣ ದೇಶದ ಮಾಸಕ್ಕೂ ಉತ್ತರ ದೇಶದ ಮಾಸಕ್ಕೂ ಸ್ವಲ್ಪ ಹೆಚ್ಚು ಕಡಿಮೆ ಇರುವುದರಿಂದ ನಮ್ಮಲ್ಲಿ ಭಾದ್ರಪದ ಕೃಷ್ಣಪಕ್ಷದಲ್ಲಿ ಪಿತೃಪಕ್ಷವಾಗುತ್ತದೆ. ಉತ್ತರ ದೇಶದವರಿಗೆ ಆಶ್ವೀಜ ಮಾಸ ಕೃಷ್ಣಪಕ್ಷದಲ್ಲಿ ಪಿತೃಪಕ್ಷ.) ಬರುತ್ತದೆ. ಈ ಪಕ್ಷದ ಪ್ರತಿಯೊಂದು ತಿಥಿಯಲ್ಲೂ ತರ್ಪಣ ಪಿಂಡ ದಾನಾದಿಗಳು ವಿಹಿತವಾಗಿದೆ.

ಮೊದಮೊದಲು ಉತ್ತರೋತ್ತರ ಪ್ರಕಾರ ಶ್ರಾದ್ಧ ತ್ರೈಪಾಕ್ಷಿಕ ಹೇಳಿದ್ದಾರೆ. ಸಮಯವೇ ಇಲ್ಲದಿದ್ದರೆ ನಾಲ್ಕು ದಿನದ ಶ್ರಾದ್ಧ ಹೇಳಿದೆ. ಅದೂ ಆಗಲಿಲ್ಲವೆಂದರೆ ಮೂರು ದಿನಕ್ಕೆ ಹೇಳಿದ್ದಾರೆ. ಹೀಗೆ ಅಷ್ಟಗಯಾ, ಪಂಚಗಯಾ ಎಂದೆಲ್ಲ ಪ್ರಸಿದ್ಧಿ ಯಾಗಿದೆ. ಕೊನೇ ಪಕ್ಷ ಒಂದೇ ದಿನಿವಿದ್ದು ಶ್ರಾದ್ಧ ಮಾಡಿಕೊಂಡು ಬರಬಹುದು.

ಪ್ರಮುಖ ಸ್ಥಳಗಳಲ್ಲಿ ಕಾರ್ಯವನ್ನು ಮಾಡುವುದು. ಅಷ್ಟರಿಂದಲೇ ಪಿತೃಗಳಿಗೆ

ತೃಪ್ತಿಯಾಗುತ್ತದೆ. ಅಲ್ಲಿಗೆ ಹೋದಾಗ ತಿಥಿ, ವಾರ, ನಕ್ಷತ್ರ, ರಾಹುಕಾಲ, ಗುಳಿಕಾಲ ಒಂದೂ ನೋಡುವುದೇ ಬೇಡ. ಆದರೆ, ಮಾಧ್ವರು ಏಕಾದಶಿ, ಗ್ರಹಣಾದಿಗಳನ್ನು ಒಂದನ್ನು ಬಿಟ್ಟು ಎಲ್ಲರೂ ಮಾಡುವಂತೆಯೇ ಮಾಡುವುದು. ಯಾವುದೇ ಕ್ಷೇತ್ರಕ್ಕೆ ಹೋಗಿದ್ದರೂ ಏಕಾದಶಿ ಶ್ರಾದ್ಧ ಮಾಡಬಾರದು ಅದನ್ನು ಮಾರನೇ ದಿನಕ್ಕೆ ಹಾಕಿಕೊಳ್ಳಿ.

ಪ್ರಮಾಣ: ಗಯಾಯಾಂ ಸರ್ವ ಕಾಲೇಷು ಪಿಂಡಂ ದದ್ಯಾತ್ ವಿಚಕ್ಷಣಃ।

ಫಲ್ಗುಣೀ, ವಿಷ್ಣುಪಾದ, ಅಕ್ಷಯ ವಟದ ವಿಚಾರ

ಗಯಾದಲ್ಲಿದ್ದು ಮೂರು ದಿನ ಶ್ರಾದ್ಧ ಮಾಡಲಾಗಲಿಲ್ಲವೆಂದರೆ ಒಂದೇ ದಿನದಲ್ಲಿ ಶ್ರಾದ್ಧ ಮಾಡುವದು ಅವಶ್ಯಕವಾಗಿದೆ. ಒಟ್ಟು ಪಿತೃಶಾಂತಿಯಾಗಲು ಏನು ಮಾಡಬೇಕೋ ಅದನ್ನು ಮಾಡುವುದು. ಕರ್ತೃವಿಗೂ ಅದರಿಂದ ಒಂದು ಉತ್ಕೃಷ್ಟವಾದ ಆನಂದ ಸಿಗುತ್ತದೆ. ಪ್ರಮುಖವಾದ ಆ ಮೂರು ಕ್ಷೇತ್ರಗಳು 1 ಫಲ್ಗುತಟ, 2 ವಿಷ್ಣುಪಾದ, 3 ಅಕ್ಷಯವಟ ಶ್ರಾದ್ಧ.

ಮೊದಲನೆಯದು ಫಲ್ಗುನೀ ನದಿಯ ದಂಡೆ.

ಈ ನದಿಯ ವಿಶೇಷತೆ ಎಂದರೆ ಮೇಲೆ ನೀರು ಕಾಣಿಸುವಂತೆ ಹರಿಯುವುದಿಲ್ಲ. ಆದರೆ ಅಂತಃ ಪ್ರವಾಹವಿದೆ. ಮೇಲೆ ಸ್ವಲ್ಪ ಮರಳನ್ನು ತೆಗೆದರೆ ನೀರು ಸಿಗುತ್ತದೆ. ಇದು ಬತ್ತಿಹೋದ ನದಿಯಲ್ಲ (ಬತ್ತಿಹೋದ ನದಿಯಲ್ಲಿ ಬಹಳ ಆಳದಲ್ಲಿ ನೀರು ಸಿಗುತ್ತದೆ) ಇಲ್ಲಿ ಹಾಗಲ್ಲ. ಸ್ವಲ್ಪ ತೋಡಿದಾಕ್ಷಣ ನೀರು ಸಿಗುತ್ತದೆ, ಮಳೆಗಾಲದಲ್ಲಿ ತುಂಬಿ ಹರಿಯುತ್ತಿರುತ್ತದೆ. ಇದರ ಇನ್ನೊಂದು ವಿಶೇಷತೆ ಇದು ಉತ್ತರವಾಹಿನೀ ನದಿ. ಇಲ್ಲಿ ಕೃತಯುಗದಿಂದಲೂ ಋಷಿ, ಮುನಿ, ಜನರು, ದೇವತೆಗಳು ರೂಪಾಂತರದಿಂದ ಬಂದಾಗ ಸ್ನಾನ, ದಾನ, ಜಪ, ಶ್ರಾದ್ಧ. ಹೋಮಗಳನ್ನು ಮಾಡಿ ಶರೀರ ತ್ಯಾಗ ಮಾಡಿದ್ದು ಪುರಾಣಗಳಿಂದ ಕೇಳಿ ಬರುತ್ತದೆ. ಆದ್ದರಿಂದ ಪಿತೃಗಳ ತೃಪ್ತ್ಯರ್ಥವಾಗಿ ಇಲ್ಲಿ ಶ್ರಾದ್ಧ ಮಾಡಲೇಬೇಕು.

ಎರಡನೆಯದು ಶ್ರೀ ವಿಷ್ಣುಪಾದ

ಆರಂಭದಲ್ಲಿ ಗಯಾಸುರನ ಕಥೆ ಓದಿರುವಿರಿ. ಎಲ್ಲಾ ದೇವತೆಗಳು ಆ ಗಯಾಸುರನ ಮೇಲೆ ಶಕ್ತಿ ಹಾಕಿ ಒತ್ತಿದಾಗ ತನ್ನ ದೇಹದ ಕಂಪನ ನಿಲ್ಲಿಸಲಿಲ್ಲ. ಆ ಪರಮಾತ್ಮನು ನೀನು ನನ್ನ ಭಕ್ತ ಎಂದು ತಿಳಿಸಲು ತನ್ನ ಬಲ ಪಾದವನ್ನು ಇಟ್ಟನು. ಆ ಪರಮಾತ್ಮನ ಕಾಲಿನಲ್ಲಿದ್ದ ಧ್ವಜ, ಅಂಕುಶ, ಚಕ್ರ, ಶಂಖ, ಕುಲಿಶ ಮುಂತಾದ ಮುದ್ರೆ ಚಿಹ್ನೆಗಳು ಹಾಗೆಯೇ ಮೂಡಿದವು ಅಲ್ಲದೇ, ಗಯಾಸುರನು ಶ್ರೀವಿಷ್ಣುವಿನಿಂದ ಹೇ ದೇವ ಈ ನಿನ್ನ ಪಾದದ ಚಿಹ್ನೆ ಇರುವ ಜಾಗದಲ್ಲಿ ಅರ್ಥಾತ್ ವಿಷ್ಣು ಪಾದದ ಮೇಲೆಯೇ ಪಿತೃ ಪಿಂಡವನ್ನು

ಹಾಕಬೇಕು ಎಂಬ ವರವನ್ನು ಕೇಳಿದನು. ಆದ್ದರಿಂದಲೇ ಆ ಪಾದಕ್ಕೆ ಶ್ರೀವಿಷ್ಣುಪಾದವೆಂದೇ ಹೆಸರು ಬಂದಿರುವುದು. ಶ್ರೀವಿಷ್ಣುಪಾದದ ಸುತ್ತಲೂ ಅಷ್ಟ ಕೋಣಾಕಾರವಾಗಿ (ಅಷ್ಟ ಮೂಲೆ) ಸಣ್ಣಕಟ್ಟೆ ಕಟ್ಟಿರುವರು. ಈ ಮಂದಿರದಲ್ಲಿ ಒಂದು ದೊಡ್ಡ ಸಭಾ ಭವನವೂ ಇರುವುದು. ಈ ಮಂದಿರದ ಶಿಖರವು ಬಹಳ ಉನ್ನತವಾಗಿದೆ. ಯಾತ್ರಿಕರು ಪಿಂಡದಾನ ಮಾಡುವವರು ಸುತ್ತಲೂ ಕುಳಿತು ಪಿಂಡದಾನ ಮಾಡಲು ಸರಿಯಾದ ಜಾಗ ವ್ಯವಸ್ಥೆ ಇರುವುದು. ಮಾಡದೆ ಇರುವ ಹೆಂಗಸರು ಮಕ್ಕಳು ಮುಂತಾದವರಿಗೆ ನೋಡಲೂ ಅವಕಾಶವಿದೆ.

ಮೂರನೆಯದು ಅಕ್ಷಯ ವಟ.

ಅಕ್ಷಯವಾದ (ಆಲದ ಮರ) ವಟವೃಕ್ಷ ಗಯಾದಲ್ಲಿ ಮಾಡುವ ಪಿತೃಕಾರ್ಯ ಕೊನೆಯದು. ಇಲ್ಲಿಯೇ ಈ ವೃಕ್ಷದ ಬುಡದಲ್ಲಿ ನೆರಳಲ್ಲಿ ಮಾಡಿದ ಕಾರ್ಯಗಳು ಅಕ್ಷಯವಾಗುತ್ತವೆ. ಅಕ್ಷಯ ತೃತೀಯದಿನ ಇಲ್ಲಿ ಪಿತೃ ಕಾರ್ಯ ಮಾಡಿದರೆ ಇನ್ನೂ ವಿಶೇಷ. ಕೊನೆಯ ಶ್ರಾದ್ಧ ಮಾಡುವುದು ಇಲ್ಲಿಯೇ. ಆಗ ಅಲ್ಲಿನ ಗಯಾಪಾಲರು ನಿಮ್ಮ ಪಿತೃ ದೇವತೆಗಳು ಸಂತುಷ್ಟರಾಗಿದ್ದಾರೆಂದು ಹೇಳಲು ಬರುತ್ತಾರೆ. ಅವರಿಗೆ ಕರ್ತೃ ಧನ, ಧಾನ್ಯದಿಂದ ಸಂತೃಪ್ತಿ ಪಡಿಸಿದರೆ ಪಿತೃಗಳು ಮುಕ್ತರಾಗುವರೆಂದು ಬ್ರಹ್ಮ ದೇವರ ವರವಿರುವುದು. ಪಿತೃಗಳು ಹಾಗೂ ದೇವತೆಗಳು ಸಂತುಷ್ಟರಾಗುತ್ತಾರೆ.

ವೈದಿಕ ಧರ್ಮ ದೃಷ್ಟಿಕೋನದಲ್ಲೇ ಆಸಕ್ತರಾದ ಜ್ಞಾನಿಜನಗಳು ಶ್ರಾದ್ಧ ಎಂದರೇನು ಏತಕ್ಕಾಗಿ ಎಂದು ಅದರ ಪೂರ್ಣ ಪ್ರಯೋಜನ ತಿಳಿಯುತ್ತಾರೆ. ಶ್ರಾದ್ಧಾದಿ ಕಾರ್ಯ ಮಾಡುವುದರಿಂದಲೇ ಸಾಂಸಾರಿಕ ಬಾಧೆಗಳಿಂದ ಮುಕ್ತಿಯನ್ನು ಪಡೆಯುತ್ತಾರೆ. ಇಹಲೋಕದಲ್ಲಿ ಸುಖಸಂಪತ್ತನ್ನು ಪಡೆಯುತ್ತಾರೆ ಎಂದು ಪುರಾಣಗಳು ತಿಳಿಸುತ್ತವೆ.

ವಿಶೇಷ ಅನುಸಂಧಾನ

1. ವೇದೋಕ್ತ ಕರ್ಮಾನುಷ್ಠಾನದಲ್ಲಿ ಆಸಕ್ತಿವುಳ್ಳವರೇ ಕರ್ಮಗಳ ಫಲದ ಸುಮಧುರ ಆನಂದವನ್ನು ಅನುಭವಿಸುತ್ತಾರೆ.

2. ಭಗವಂತನಲ್ಲಿ ಮಾಡುವ ನಿಷ್ಕಾಮ ಭಕ್ತಿಯೇ ಮುಕ್ತಿಮಾರ್ಗ ತೋರಿಸಲು ಸಮರ್ಥವಾಗುತ್ತದೆ.

3. ನಿರ್ದೋಷವಾದ ವೈದಿಕ ಕರ್ಮಾನುಷ್ಠಾನವೇ ಭಕ್ತಿ ಕೊಡಲು ಸಮರ್ಥವಾಗುತ್ತದೆ.

4. ಆದ್ದರಿಂದ ಮುಂದಿನ ಜನಾಂಗಕ್ಕೆ ಇದು ಅವಶ್ಯವಾಗಿ ತಿಳಿದಿರಬೇಕು. ವೈದಿಕ ಕರ್ಮಾನುಷ್ಠಾನದ ಬಗ್ಗೆ ಉದಾರ ಭಾವನಾ ಇರಬೇಕು.

5. ಕರ್ಮಾನುಷ್ಠಾನ ಮಾಡುವುದೆಂದರೆ ಯಾವುದೋ ಕರ್ಮ ಮಾಡುತ್ತಿರುವುದಲ್ಲ. ತನ್ನ ವರ್ಣ ತನ್ನ ಆಶ್ರಮಕ್ಕೆ ಉಚಿತವಾದ ಕರ್ಮಾನುಷ್ಠಾನದಿಂದಲೇ ಇರಬೇಕೆಂದು ವೇದವು ಉಪದೇಶಿಸುತ್ತದೆ.

ಬದರೀ ಶ್ರಾದ್ಧ ಮಹಿಮೆ

ಬ್ರಹ್ಮಕಪಾಲೇ ಪಿತರಃ ಪ್ರೇಕ್ಷಮಾಣಾ ಸ್ವವಂಶಜಮ್।
ತಿಷ್ಠಂತಿ ತಸ್ಮಾತ್ ಪಿಂಡಾನಾಂ ಪ್ರದಾನಂ ಮುನಯೋಽಬ್ರುವನ್॥

ಬದರಿಯ ಬ್ರಹ್ಮಕಪಾಲದಲ್ಲಿ ಪಿತೃಗಳು ತಮ್ಮ ವಂಶದವರನ್ನು ನಿರೀಕ್ಷೆ ಮಾಡುತ್ತಾ ಇರುತ್ತಾರೆ. ಆದ್ದರಿಂದ ಅಲ್ಲಿ ಪಿಂಡಪ್ರದಾನ ಮಾಡಬೇಕೆಂದು ಮುನಿಗಳು ಹೇಳಿರುವರು.

ಅಜ್ಞಾನಾದ್ ಜ್ಞಾನತೋ ವಾಪಿ ಭಕ್ತ್ಯಾಽಭಕ್ತ್ಯಾಽಥ ವಾಪುನಃ।
ಯೈರತ್ರ ಪಿಂಡವಪನಂ ಕೃತಂ ಜಲಸುತರ್ಪಣಮ್॥
ತಾರಿತಾಃ ಪಿತರಸ್ತೇನ ದುರ್ಗತಾ ಅಪಿ ಪಾಪಿನಃ।

ತಿಳಿಯದೋ ಅಥವಾ ತಿಳಿದೋ ಭಕ್ತಿಯಿಂದಲೋ ಭಕ್ತಿಯಿಲ್ಲದೆಯೋ ಪಿಂಡ ಪ್ರದಾನ ಜಲತರ್ಪಣಗಳನ್ನು ಈ ಬದರಿಯ ಬ್ರಹ್ಮಕಪಾಲದಲ್ಲಿ ಮಾಡಿದರೆ ಅವರ ಪಿತೃಗಳು ಪಾಪಗಳನ್ನು ಮಾಡಿ ದುರ್ಗತಿಯನ್ನು ಹೊಂದಿದ್ದರೂ ಅವರು ಉದ್ಧಾರ ವಾಗುವರು.

ಕಿಂ ಗಯಾಗಮನಾದ್ ದೇವಿ ಕಿಮನ್ಯತ್ ತೀರ್ಥತರ್ಪಣೈಃ।
ಯೈರ್ನರೈಃ ಬ್ರಹ್ಮಕಪಾಲೇ ಪಿತೄನ್ ಉದ್ದಿಶ್ಯ ಭಾಮಿನಿ।
ಕೃತಂ ತತ್ ಸರ್ವಮೇವಾಽಸೌ ಕೋಟಿಕೋಟಿ ಗುಣಂ ಭವೇತ್।
ತಸ್ಮಾತ್ ಸರ್ವಪ್ರಯತ್ನೇನ ಕುರ್ಯಾದ್ ಅತ್ರ ಸುತರ್ಪಣಮ್।
ಪಿಂಡಾನಾಂ ಪಾತನಂ ಚೈವ ಪಿತರೋ ಮುಕ್ತಿ ಮಾಪ್ನುಯುಃ॥

ಗಯಾದಲ್ಲಿ ಹೋಗಿ ಮಾಡಿದ ಶ್ರಾದ್ಧ, ಬೇರೆ ತೀರ್ಥಗಳಲ್ಲಿ ಕೊಟ್ಟ ತರ್ಪಣ ಬ್ರಹ್ಮಕಪಾಲದಲ್ಲಿ ತರ್ಪಣ ಪಿಂಡಪ್ರದಾನಗಳನ್ನು ಮಾಡಿದಾಗ ಪೂರ್ಣತೆಯನ್ನು ಪಡೆಯುತ್ತದೆ. ಇಲ್ಲಿ ತರ್ಪಣ ಪಿಂಡಪ್ರದಾನಗಳನ್ನು ಮಾಡಿದರೆ ಕೋಟಿಕೋಟಿ ಪಾಲು ಮಿಗಿಲು ಪುಣ್ಯ.

ಆದ್ದರಿಂದ ಸರ್ವಪ್ರಯತ್ನ ಮಾಡಿ ಬ್ರಹ್ಮಕಪಾಲದಲ್ಲಿ ತರ್ಪಣ ಪಿಂಡಪ್ರದಾನ ಗಳನ್ನು ಮಾಡಬೇಕು. ಪಿತೃಗಳು ಮುಕ್ತಿ ಸೇರುವರು.

ಮಾತೃವಂಶಾಶ್ಚ ಯೇ ಕೇಚಿತ್ ಪಿತೃವಂಶ್ಯಾಸ್ತಥಾ ಪರೇ।
ಶ್ಯಾಲಾಃ ಸಂಬಂಧಿನೋ ವಾಽಪಿ ಸಖಾಯಶ್ಚಾಪಿ ಭಾಮಿನಿ।
ಪ್ರಿಯಾಃ ವೃಷಾಃ ಪಕ್ಷಿಣಶ್ಚ ತಿರ್ಯಗ್ ಯೋನಿಗತಾ ಅಪಿ।
ಗಚ್ಛಂತಿ ಪರಮಂ ಸ್ಥಾನಂ ತದ್ ವಿಷ್ಣೋಃ ಪರಮಂ ಪದಮ್॥

ತಾಯಿ ವಂಶದವರು ಹಾಗು ಪಿತೃವಂಶದವರು, ಮೈದುನರು, ಬೇರೆ ಸಂಬಂಧಿಗಳು ಅಥವಾ ಗೆಳೆಯರು ಯಾರೇ ಪ್ರಿಯರಿರಲಿ ಅವರು ಮರಣ ಹೊಂದಿ ಮರಗಳೋ, ಪಕ್ಷಿಗಳೋ, ಪ್ರಾಣಿಗಳಾಗಿಯೋ ಹುಟ್ಟಿದ್ದರೂ ಆ ವಿಷ್ಣುವಿನ ಪರಮಪದವನ್ನು ಸೇರುವರು ಈ ಬ್ರಹ್ಮಕಪಾಲದಲ್ಲಿ ಮಾಡಿದ ಪಿಂಡಪ್ರದಾನ ಹಾಗು ತರ್ಪಣದಿಂದ.

ಯಾನ್ ಉದ್ದಿಶ್ಯ ಚ ಸಲಿಲಂ ಪಿಂಡದಾನಂ ತಥೈವ ಚ।
ಕೃತಂ ತೇ ವಿಷ್ಣುಲೋಕಾಯ ಗಚ್ಛಂತಿ ಸ್ಮರಣಾದಪಿ॥

ಯಾರನ್ನು ಉದ್ದೇಶಿಸಿ ಇಲ್ಲಿ ಜಲತರ್ಪಣ, ಪಿಂಡಪ್ರದಾನಗಳನ್ನು ಮಾಡಲಾಗುವುದೋ ಅವರು ವಿಷ್ಣುಲೋಕವನ್ನು ಸೇರುವರು. ಇಲ್ಲಿ ಸ್ಮರಿಸಿಕೊಂಡರೂ ಸಾಕು.

ನಿತ್ಯಂ ಜಲ್ಪಂತಿ ಪಿತರಃ ಮದ್ವಂಶೇ ಕಶ್ಚಿದುತ್ತಮಃ।
ಗಮಿಷ್ಯತಿ ವಿಶಾಲಾಯಾಂ ತಾರಿತಾಸ್ತೇನ ವೈ ವಯಮ್॥

ಪಿತೃಗಳು ನಿತ್ಯವೂ ಹೀಗೆ ಹೇಳುತ್ತಾರೆ- '' ನಮ್ಮ ವಂಶದಲ್ಲಿ ಯಾರಾದರೂ ಉತ್ತಮ ಬದರೀ ವಿಶಾಲ ಕ್ಷೇತ್ರಕ್ಕೆ ಬಂದು ಶ್ರಾದ್ಧ ಮಾಡುವರೋ ಅವರಿಂದ ನಾವು ಉದ್ಧಾರ ವಾಗುತ್ತೇವೆ.''.

ಮಾಹಾತ್ಮ್ಯಂ ಕೇನ ಶಕ್ಯೇತ ವಕ್ತುಂ ವರ್ಷಶತೈರಪಿ।
ಯತ್ರ ಗಂಗಾ ಮಹಾಭಾಗಾ ಬದರೀನಾಥಶೋಭಿತಾ॥

ಯಾವ ಕ್ಷೇತ್ರದಲ್ಲಿ ಬದರೀನಾಥನಿಂದ ಕಂಗೊಳಿಸುವ ಮಹಾಭಾಗ್ಯಶಾಲಿನಿ ಗಂಗೆಯು ಪ್ರವಹಿಸುವುದೋ ಆ ಕ್ಷೇತ್ರಮಾಹಾತ್ಮ್ಯವನ್ನು ನೂರಾರು ವರ್ಷಗಳಷ್ಟು ಕಾಲ ಹೇಳಿದರೂ ಪೂರೈಸಲಾಗುವುದಿಲ್ಲ.

ಶ್ರೀಸ್ಕಾಂದ ಮಹಾಪುರಾಣದಲ್ಲಿ ಕೇದಾರಖಂಡದ ನಾಲ್ಕನೇ ಅಧ್ಯಾಯದ ಬದರೀಕ್ಷೇತ್ರ ಮಾಹಾತ್ಮ್ಯದಲ್ಲಿ ಶ್ರಾದ್ಧ ಮಹಿಮೆಯ ನಿರೂಪಣೆ ಹೀಗಿದೆ.

★★★

ಮಹಾಲಯ ವಿಧಿ

-ವಿದ್ವಾನ್ ಶ್ರೀ ಶ್ರೀರಾಮವಿಟ್ಠಲಾಚಾರ್ಯ

ಆಷಾಢದ ಹುಣ್ಣಿಮೆಯಿಂದ ಐದನೇ ಪಕ್ಷ ಅಂದರೆ ಭಾದ್ರಪದ (ಬಹುಳ) ಕೃಷ್ಣಪಕ್ಷವು ಪಂಚಮ ಅಪರಪಕ್ಷ ಎಂದೂ, ಪಿತೃಪಕ್ಷ ಎಂದೂ, ಮಹಾಲಯದ ಪಕ್ಷವೆಂದೂ ಪ್ರಸಿದ್ಧವೂ ಆಗಿದೆ. ಈ ಅವಧಿಯಲ್ಲಿ ಕನ್ಯಾರಾಶಿಯಲ್ಲಿ ರವಿಯಿದ್ದರೆ ಇನ್ನೂ ವಿಶೇಷ. ಈ ಸಮಯದಲ್ಲಿ ಪಿತೃಗಳು ತಮ್ಮವರಿಂದ ಪಿಂಡ, ತಿಲೋದಕಗಳನ್ನು ನಿರೀಕ್ಷೆ ಮಾಡಿರುತ್ತಾರೆ. ಯಾರು ಶ್ರದ್ಧೆಯಿಂದ ಈ ಅವಧಿಯಲ್ಲಿ ಪಿತೃ ಆರಾಧನೆ ಮಾಡುವರೋ ಅವರಿಗೆ ಸಂತೃಪ್ತರಾದ ಪಿತೃಗಳು ಆಯುಷ್ಯ, ಸಂತಾನ, ಸಂಪತ್ತು, ಜ್ಞಾನ, ಭಕ್ತಿ ವೈರಾಗ್ಯಗಳು ಅಭಿವೃದ್ಧಿ ಆಗಲೆಂದು ಆಶೀರ್ವದಿಸಿರುತ್ತಾರೆ.

ಈ ಮಹಾಲಯದಲ್ಲಿ ಪ್ರತಿನಿತ್ಯವೂ ಪಿತೃದೇವತೆಗಳ ತೃಪ್ತ್ಯರ್ಥ ಶ್ರಾದ್ಧವನ್ನು ಮಾಡಬೇಕು. ಅದಕ್ಕೆ ಶಕ್ಯವಿಲ್ಲದಿದ್ದಲ್ಲಿ ಒಂದು ದಿನವಾದರೂ ಶ್ರಾದ್ಧವನ್ನು ಪಿಂಡಪ್ರದಾನ ಪುರಸ್ಸರ ಮಾಡಲೇಬೇಕು. ಪ್ರತಿನಿತ್ಯ ಶ್ರಾದ್ಧದ ಪ್ರತಿನಿಧಿಯಾಗಿ ತಿಲತರ್ಪಣವನ್ನು ಕೊಡಬೇಕು.

ಯಾರು ಈ ಕಾಲದಲ್ಲಿ ಪಿತೃಗಳಿಗೆ ತಿಲತರ್ಪಣ, ಪಿಂಡಪ್ರದಾನಗಳನ್ನು ಸಮರ್ಪಿಸುವುದಿಲ್ಲವೋ ಅವರಿಗೆ ಪಿತೃಗಳು ನಿರಾಶರಾಗಿ ಶಾಪವನ್ನು ಕೊಟ್ಟು ಹೋಗುವರು. ಪಿತೃಕೋಪವು ನಮ್ಮ ಭವಿಷ್ಯದ ಭಾಗ್ಯವನ್ನು, ವಂಶಾಭಿವೃದ್ಧಿಯನ್ನು ತಡೆಗಟ್ಟುವುದು. ಪಿತೃಪ್ರಸಾದವಿದ್ದರೆ ಮಕ್ಕಳು, ಮೊಮ್ಮಕ್ಕಳು ಎಲ್ಲ ಅವರ ಶುಭ ಹರಕೆಯಿಂದ ಆರೋಗ್ಯ ಆಯುಷ್ಯ ಗಳನ್ನು ಪಡೆದು ಜೀವನದಲ್ಲಿ ಪ್ರಗತಿಯನ್ನು ಹೊಂದುವರು.

ಮಹಾಲಯ ಶ್ರಾದ್ಧದ ಬಗ್ಗೆ ಅವಶ್ಯ ತಿಳಿಯಬೇಕಾದ ಅನೇಕ ಮಾಹಿತಿಗಳನ್ನು, ನಿತ್ಯತರ್ಪಣ ಸಂಕಲ್ಪವಿಧಿಗಳನ್ನು, ಶ್ರಾದ್ಧಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಷಯಗಳನ್ನು, ಅಡಿಗೆ ಮತ್ತು ಬಡಿಸುವ ವಿಧಾನಗಳ ಬಗ್ಗೆಯೂ ತಿಳಿಯಬೇಕಾದ ಸಂಗತಿಗಳನ್ನು, ಶ್ರಾದ್ಧಕ್ಕೆ ಬೇಕಾದ ಸಾಮಗ್ರಿ ಗಳನ್ನು, ಪೂರ್ವ ತಯಾರಿಗಳನ್ನು ವಿದ್ವಾಂಸರಿಂದ ಕೇಳಿ ತಿಳಿದು ಇಲ್ಲಿ (ಸಚಿತ್ರವಾಗಿ) ಸಂಗ್ರಹಿಸಲಾಗಿದೆ. ವಿಶೇಷ ವಿಷಯಗಳನ್ನು, ಸಂದೇಹಗಳು ಬಂದರೆ ಅದರ ನಿವಾರಣೆಯನ್ನು ವಿದ್ವಾಂಸರಲ್ಲಿ ಖುದ್ದಾಗಿ ಕೇಳಿ ಪರಿಹರಿಸಿಕೊಳ್ಳಬೇಕು. ದೇಶಭೇದದಿಂದ ಸಂಪ್ರದಾಯಭೇದಗಳು ಇರಬಹುದು. ಅದಕ್ಕೆ ಇಲ್ಲಿ ಕೊಟ್ಟಿರುವ ವಿಚಾರಗಳು ವಿರೋಧಿಗಳಲ್ಲ.

ಧರ್ಮಸಿಂಧು, ನಿರ್ಣಯಸಿಂಧು, ಕೃಷ್ಣಾಚಾರ್ಯಸ್ಮೃತಿ ಮುಕ್ತಾವಲೀ, ಮುಂತಾದ ಗ್ರಂಥಗಳ ಆಧಾರದ ಮೇಲೆ ಈ ವಿಷಯಗಳನ್ನು ಇಲ್ಲಿ ಕೊಡಲಾಗಿದೆ.

ಶ್ರಾದ್ಧದ ಬಗ್ಗೆ ಕೆಲವು ಪ್ರಮಾಣೋಕ್ತಿಗಳು

ಶ್ರಾದ್ಧ, ಯಜ್ಞ, ವಿವಾಹ. ಮಧುಪರ್ಕ, ಯೋಗದೀಕ್ಷಾ ಕಾಲಗಳಲ್ಲಿ ಪೂಜ್ಯರಾದ ಗುರುಗಳು ಬಂದಲ್ಲಿ ಅವರನ್ನು ಕೂಡಿಸಿಯೇ ಪಾದಪ್ರಕ್ಷಾಲನೆ ಮಾಡಬೇಕು. ನಿಲ್ಲಿಸಿ ಪಾದಪ್ರಕ್ಷಾಲನೆ ಮಾಡಿದರೆ ಪಿತೃಗಳು ನಿರಾಶರಾಗುವರು. -**ಸ್ಮೃತಿ ಮುಕ್ತಾವಲೀ**

ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ಹಾಗೂ ಪಿಂಡಕ್ಕೆ ವಸ್ತ್ರಗಳನ್ನು ಸಮರ್ಪಿಸಲೇಬೇಕು. ಇಲ್ಲವಾದರೆ ಯಜ್ಞೋಪವೀತವನ್ನಾದರೂ ಕೊಡಲೇಬೇಕು. ಅಥವಾ ತತ್ ಪ್ರತಿನಿಧಿಯಾಗಿ ಯಥಾಶಕ್ತಿ ದ್ರವ್ಯವನ್ನಾದರೂ ಕೊಡಬೇಕು. ಯಜ್ಞೋಪವೀತ ದಾನದಿಂದ ವೇದದಾನದ ಫಲ. -**ಮಾರ್ಕಂಡೇಯ ಲಾಗಾಕ್ಷಿಸ್ಮೃತಿ**

ಶ್ರಾದ್ಧ ಮಾಡುವ ಯಜಮಾನನು ಶ್ರಾದ್ಧದ ದಿನದಂದು ದಂತಕಾಷ್ಠದಿಂದ ದಂತಧಾವನ, ತಾಂಬೂಲ ಸೇವನ, ತೈಲಾಭ್ಯಂಗ, ದ್ವಿಭೋಜನ, ಸ್ತ್ರೀಭೋಗ, ಔಷಧಿ ಸೇವನೆ (ಶಕ್ಯವಾಗಿದ್ದಲ್ಲಿ) ಪರಾನ್ನಭಕ್ಷಣ ಈ ಏಳನ್ನು ಬಿಡಬೇಕು. -**ದಾಲ್ಭ್ಯಸ್ಮೃತಿ**

ಶ್ರಾದ್ಧ ಭೋಜನ ಮಾಡುವ ವಿಪ್ರನು ಪುನರ್ಭೋಜನ, ಅಭ್ಯಂಗ, ಪ್ರಯಾಣ, ಅಧ್ಯಯನ, ಸ್ತ್ರೀಸಂಗ, ಬೇರೆ ದಾನ ಸ್ವೀಕಾರ, ಹೋಮ ಇವುಗಳನ್ನು ಬಿಡಬೇಕು.

-**ಶ್ರಾದ್ಧಮಂಜರಿ**

ಶ್ರಾದ್ಧದಲ್ಲಿ ಯೋಗ್ಯ ಬ್ರಾಹ್ಮಣರು ಸಿಗದೆ ಇದ್ದಲ್ಲಿ ತಾನು ಮಂತ್ರಜ್ಞನಾಗಿದ್ದು, ದರ್ಭಮಯವಾದ ಬ್ರಾಹ್ಮಣರನ್ನು ಇಟ್ಟುಕೊಂಡು ಚಟಕ ಶ್ರಾದ್ಧ ಮಾಡಿ ಅನಂತರ ಬ್ರಾಹ್ಮಣರಿಗೆ ಅನ್ನದಾನ ಮಾಡಬೇಕು. ಯಾವುದೂ ಆಗದಿದ್ದಲ್ಲಿ ಗೋಗ್ರಾಸವನ್ನಾದರೂ ಕೊಡಬೇಕು. -**ಶ್ರಾದ್ಧ ಮಂಜರಿ**

ಶ್ರಾದ್ಧ ಭೋಜನವನ್ನು ಮಾಡಿದವನು ಹತ್ತು ಸಲ ಗಾಯತ್ರೀ ಮಂತ್ರದಿಂದ ಅಭಿಮಂತ್ರಿಸಿದ ಜಲವನ್ನು ಪಾನ ಮಾಡಿದರೆ ಸಾಯಂಸಂಧ್ಯಾ, ಜಪ, ಹೋಮ ಮೊದಲಾದವುಗಳಿಗೆ ಅರ್ಹನಾಗುತ್ತಾನೆ. -**ಶ್ರಾದ್ಧ ಮಂಜರಿ**

ಮೃತಳಾದ ಮುತ್ತೈದೆಯ ಪಕ್ಷಶ್ರಾದ್ಧವನ್ನು ಅವಿಧವಾನವಮಿಯಂದೇ ಆಚರಿಸಬೇಕು. ತಂದೆ ಮೃತನಾದ ಮೇಲೆ ತಾಯಿಯ ಅವಿಧವಾ ನವಮೀ ಶ್ರಾದ್ಧವನ್ನು ಮಾಡಬಾರದು. ಶಸ್ತ್ರಾಸ್ತ್ರಗಳಿಂದ ಅಥವಾ ಅಪಘಾತಾದಿಗಳಿಂದ ಮೃತರಾದವರಿಗೆ ಚತುರ್ದಶಿಯಂದೇ

ಪಕ್ಷಶ್ರಾದ್ಧವನ್ನು ಮಾಡಬೇಕು. ಅಮಾವಾಸ್ಯೆಯಂದು ಯಾವ ದೋಷವೂ ಇರದ ಕಾರಣ ಸರ್ವಪಿತೃಗಳಿಗೆ ಶ್ರಾದ್ಧ ಮಾಡಬಹುದು.

ಪಾಣಿಹೋಮದಿಂದ ದೇವಲೋಕ ಹೊಂದಿದ ಪಿತೃಗಳು, ಬ್ರಾಹ್ಮಣಭೋಜನದಿಂದ ಸ್ವರ್ಗಸ್ಥರಾದ ಪಿತೃಗಳು, ಪಿಂಡಪ್ರದಾನದಿಂದ ಯಮ ಲೋಕದಲ್ಲಿರುವ ಪಿತೃಗಳು, ವಿಕಿರಾನ್ನದಿಂದ ನರಕದಲ್ಲಿರುವ ಪಿತೃಗಳು, ತಿಲೋದಕದಿಂದ ತಿರ್ಯಕ್ ಯೋನಿಗಳಲ್ಲಿ ಜನಿಸಿರುವ ಪಿತೃಗಳು, ದಕ್ಷಿಣೆಪ್ರದಾನದಿಂದ ಮನುಷ್ಯ ಜನ್ಮದಲ್ಲಿ ಹುಟ್ಟಿರುವ ಪಿತೃಗಳು, ಭೂರಿ ಭೋಜನದಿಂದ ಅಸುರ ಯೋನಿಯಲ್ಲಿ ಜನಿಸಿದ ಪಿತೃಗಳು ತೃಪ್ತಿಯಾಗುವರು. ಆದ್ದರಿಂದಲೇ ಶ್ರಾದ್ಧದಲ್ಲಿ ಈ ಏಳು ಪ್ರಕಾರಗಳು ಸೇರಿವೆ. **-ಸ್ಮೃತಿ ಮುಕ್ತಾವಲೀ**

ಕರುಕುಡಿದ ಮೇಲೆ ಕರೆದ ಹಾಲು, ಗಂಗಾಜಲ, ಜೇನುತುಪ್ಪ, ರೇಷ್ಮೆವಸ್ತ್ರ, ಮಗಳ ಮಗ (ಯೋಗ್ಯನಾಗಿದ್ದರೆ,) ಶ್ರಾದ್ಧಕಾಲ, ತಿಲ, ಈ ಏಳು ಶ್ರಾದ್ಧದಲ್ಲಿ ಅತ್ಯವಶ್ಯ.

-ನಿರ್ಣಯಸಿಂಧು

ಶ್ರಾದ್ಧದಲ್ಲಿ ಹೆಸರು ಬೇಳೆಯಿಂದ ಸಿದ್ಧವಾದ ಪದಾರ್ಥಗಳಿಂದ ಪಿತೃಗಳು ಒಂದು ತಿಂಗಳವರೆಗೆ, ಉದ್ದಿನ (ವಡೆ) ಪದಾರ್ಥಗಳಿಂದ ಮೂರು ತಿಂಗಳವರೆಗೆ, ಪರಮಾನ್ನದಿಂದ ಆರು ತಿಂಗಳವರೆಗೆ, ರವೆಯಿಂದ (ರವೆ ಉಂಡೆ) ಮಾಡಿದ ಪದಾರ್ಥಗಳಿಂದ ವರ್ಷದವರೆಗೆ ತೃಪ್ತರಾಗುವರು. **- ಸ್ಮೃತಿ ಮುಕ್ತಾವಲೀ**

ನಿತ್ಯದಲ್ಲಿ ಗಾಯತ್ರೀ ಜಪಾನುಷ್ಠಾನವನ್ನು ಮಾಡುವ ಶ್ರೇಷ್ಠ ಬ್ರಾಹ್ಮಣರೇ ಶ್ರಾದ್ಧದಲ್ಲಿ ಅರ್ಹರಾದ ಬ್ರಾಹ್ಮಣರು. **-ವ್ಯಾಸವಚನ**

ಶ್ರಾದ್ಧ ಮಾಡುವವನಿಗೆ ತನ್ನ ಗೋತ್ರ ತಿಳಿಯದಿದ್ದಲ್ಲಿ ಕಾಶ್ಯಪಗೋತ್ರ ಜನೆಂದು ತಿಳಿದು ಶ್ರಾದ್ಧ ಕಾರ್ಯ ಮಾಡಬೇಕು. ಸರ್ವಪ್ರಾಣಿಗಳೂ, ಮಾನವರು ಕಶ್ಯಪರಿಂದಲೇ ಹುಟ್ಟಿದವರೆಂದು ಶ್ರುತಿಯು ಸಾರುತ್ತಿದೆ. **-ಶ್ರಾದ್ಧಕಲ್ಪಲತಾ**

ಶ್ರಾದ್ಧ ಕಾರ್ಯದಲ್ಲಿ ಬ್ರಾಹ್ಮಣರಿಗೆ ಕ್ಷಣ (ಆಮಂತ್ರಣ) ಕೊಟ್ಟು ಸಂಕಲ್ಪ ಮುಗಿದು ಪಾಕ ಪ್ರಾರಂಭವಾಗಿದ್ದಲ್ಲಿ ಅಶೌಚಸೂತಕಾದಿಗಳು ಹತ್ತುವುದಿಲ್ಲ.

ನಮ್ಮ ವಂಶದಲ್ಲಿ ದಾನಿಗಳು ಉದಯಿಸಲಿ, ಅಧ್ಯಯನ, ಅಧ್ಯಾಪನಗಳ ವೇದ ಪರಂಪರೆ ವಂಶದೊಂದಿಗೆ ಬೆಳೆದು ಬರಲಿ, ಅತಿಥಿಗಳ ಉಪಚಾರ ಬಹುವಾಗಿ ಲಭಿಸಲಿ, ವೇದಾರ್ಥ ಅನು ಸಂಧಾನದಲ್ಲಿ ಮನಸ್ಸು ವಿಶೇಷವಾಗಿ ಪ್ರವರ್ತಿಸಲಿ. ಶ್ರದ್ಧೆ, ಆದರ, ಉಪಚಾರ, ಭಕ್ತಿ, ವಿಶ್ವಾಸಗಳು ಹೆಚ್ಚಾಗಲಿ ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸ ಬೇಕು.

-ಮನುಸ್ಮೃತಿ

ಶ್ರಾದ್ಧದಲ್ಲಿ ಗೋಪಿಚಂದನದ ಸಣ್ಣ ತುಂಡು ಅಥವಾ ಸಾಸಿವೆ ಕಾಳಿನಷ್ಟಾದರೂ ಬ್ರಾಹ್ಮಣರಿಗೆ ಕೊಟ್ಟಲ್ಲಿ ಬ್ರಹ್ಮಹತ್ಯಾದಿದೋಷಗಳು ಪರಿಹಾರವಾಗುವವು.

-ಮಾರ್ಕಂಡೇಯ ಸ್ಮೃತಿ

ಪಕ್ಷ ಶ್ರಾದ್ಧ ಎಂದು?

1. ಪಾಡ್ಯ, ಷಷ್ಠೀ, ಶುಕ್ರವಾರ, ಜನ್ಮನಕ್ಷತ್ರದಂದು, ಜನ್ಮನಕ್ಷತ್ರದಿಂದ ಹತ್ತು, ಹತ್ತೊಂಬತ್ತನೇ ದಿನಗಳು, ರೋಹಿಣೀ, ರೇವತೀ, ಮಘಾ ನಕ್ಷತ್ರಗಳಂದು ಪಕ್ಷಶ್ರಾದ್ಧ ಮಾಡಬಾರದು. ಈ ದಿನಗಳಲ್ಲಿ ತಂದೆ ಅಥವಾ ತಾಯಿಯ ಮೃತ ತಿಥಿಯೇ ಇದ್ದರೆ ಈ ನಿಯಮವನ್ನು ಅನುಸರಿಸಬೇಕಿಲ್ಲ. ಮೃತತಿಥಿಯಂದು ಪಕ್ಷಶ್ರಾದ್ಧ ಮಾಡುವುದು ಶ್ರೇಷ್ಠ.

2. ಮಹಾಲಯದ ಮಧ್ಯೆ ಕಾಲಶ್ರಾದ್ಧ ಬಂದರೆ ಕಾಲಶ್ರಾದ್ಧ ಆದ ಮೇಲೆ ಪಕ್ಷ ಶ್ರಾದ್ಧ ಮಾಡಬೇಕು.

3. ಹುಣ್ಣಿಮೆ, ಸಪ್ತಮೀ, ದ್ವಾದಶೀ, ಅಮಾವಾಸ್ಯೆ, ಭರಣಿ ನಕ್ಷತ್ರದಂದು ಅಷ್ಟಮಿಯಂದು ಪಕ್ಷಶ್ರಾದ್ಧ ಮಾಡಬಹುದು.

4. ಪಕ್ಷದ 15 ದಿನಗಳಲ್ಲಿ ಅನಾನುಕೂಲವಾದರೆ ತುಲಾಮಾಸದ ಕೃಷ್ಣಪಕ್ಷದಲ್ಲಿ ಮಹಾಲಯ ಶ್ರಾದ್ಧ ಮಾಡಬಹುದು.

ಪಕ್ಷದ ಮಹಾಲಯ ಶ್ರಾದ್ಧದಲ್ಲಿ ದರ್ಭೆಯ ಬಳಕೆ

1. ಪಿಂಡಪ್ರದಾನದ ಮುಂಚೆ ಅದರ ಬುಡದಲ್ಲಿ ಹಾಸಲು ತುದಿಯಿರುವ 101 ಅಥವಾ 64 ದರ್ಭೆಗಳು. ಇದಕ್ಕೆ ಆಸ್ತರಣ (ಹಾಸು) ಎಂದು ಹೆಸರು.

2. ವಿಶ್ವೇದೇವತೆಗಳು ಹಾಗೂ ಪಿತೃಗಳಿಗಾಗಿ ಇರುವ ಎರಡು ಕಲಶಗಳಲ್ಲಿ ಇಡಬೇಕಾದ ಎರಡು ಕೂರ್ಚಗಳಿಗಾಗಿ ಒಂದೊಂದಕ್ಕೆ ಒಂಬತ್ತು ದರ್ಭೆಗಳು.

3. ಪವಿತ್ರಕ್ಕೆ ಮೂರು ದರ್ಭೆ.

ವಿ.: ತುದಿಯಿರದ ಮೊಂಡು ದರ್ಭೆ ಬಳಸದಿರುವುದೊಳಿತು. ತುಂಡು ದರ್ಭೆಗಳಾದರೂ ತುದಿಯಿರಲೇ ಬೇಕು.

ಎಷ್ಟು ಪವಿತ್ರ? ವಿಸರ್ಜನೆ ಯಾವಾಗ?

ಶ್ರಾದ್ಧದಲ್ಲಿ ಒಟ್ಟು ಐದು ಪವಿತ್ರಗಳ ಧಾರಣೆಯಿದೆ.

1. ಆರಂಭದಲ್ಲಿ ಒಂದು ಪವಿತ್ರದ ಧಾರಣೆ, ಪಾದ ಪ್ರಕ್ಷಾಲನೆಯ ಬಳಿಕ ವಿಸರ್ಜನೆ.

2. ಪಾದಪಕ್ಷಾಲನದ ಬಳಿಕ ಮತ್ತೊಂದು ಪವಿತ್ರದ ಧಾರಣೆ, ಪಿಂಡ ಆಘ್ರಾಣ (ಅನ್ನ ಮೂಸುವುದು) ದ ತರುವಾಯ ಅದರ ವಿಸರ್ಜನೆ.

3. ಆಘ್ರಾಣವಾದ ಮೇಲೆ ಇನ್ನೊಂದು ಪವಿತ್ರದ ಧಾರಣೆ. ಉಚ್ಛಿಷ್ಟ ಪಿಂಡ ಪ್ರದಾನದ ಅನಂತರ ಅದರ ವಿಸರ್ಜನೆ.

4. ಉಚ್ಛಿಷ್ಟಪಿಂಡ ಪ್ರದಾನವಾದ ತರುವಾಯ ಮತ್ತೊಂದು ಪವಿತ್ರದ ಧಾರಣೆ ಶ್ರಾದ್ಧಾಂತ್ಯದಲ್ಲಿ ವಿಸರ್ಜನೆ.

5. ಕೃಷ್ಣಾರ್ಪಣವಾದ ಅನಂತರ ಒಂದು ಪವಿತ್ರದ ಧಾರಣೆ, ತರ್ಪಣದ ಬಳಿಕ ವಿಸರ್ಜನೆ, ಪರೇಽಹನಿ (ಮರುದಿನ) ಕೊಡಬೇಕಾದ ತರ್ಪಣ ಶ್ರಾದ್ಧದ ಬಳಿಕವೇ ಕೊಡುವುದಾದರೆ.

ಆವಾಹನಕ್ಕಾಗಿ ಎರಡು ಪವಿತ್ರ

1. ವಿಶ್ವೇದೇವಸ್ಥಾನದಲ್ಲಿರುವ ಪವಿತ್ರ ತುದಿಯಿರುವ ಎರಡು ದರ್ಭೆಯ ಋಷಿಗಂಟಿನ ಪವಿತ್ರ.

2. ಪಿತೃದೇವತೆಯ ಆವಾಹನಕ್ಕಾಗಿ ಪವಿತ್ರ, ತುದಿಯಿರುವ ಎರಡು ದರ್ಭೆ ನೇರವಾಗಿ, ತಲೆಕೆಳಕಾಗಿ ಒಂದು ದರ್ಭೆ ಹೀಗೆ ಒಟ್ಟು ಮೂರು ದರ್ಭೆಯ ಋಷಿಗಂಟಿನ ಪವಿತ್ರ.

ಪಿಂಡದಲ್ಲಿ ಏನೇನು?

ತಿಲಮನ್ನಂ ಚ ಪಾನೀಯಂ ಪಯೋದಧಿಗುಡಂ ತಥಾ।
ಮಧುಸರ್ಪಿಸ್ಸಮಾಯುಕ್ತಂ ಅಷ್ಟಾಂಗಂ ಪಿಂಡಲಕ್ಷಣಮ್ ॥

ಎಳ್ಳು, ಅನ್ನ, ಕಲಶದ ನೀರು, ಹಾಲು, ಮೊಸರು, ಬೆಲ್ಲ, ಜೇನುತುಪ್ಪ, ತುಪ್ಪ ಈ ಎಂಟು ದ್ರವ್ಯಗಳನ್ನು ಸೇರಿಸಬೇಕು.

ಪಿಂಡ ವಿಸರ್ಜನೆ

1. ಶ್ರಾದ್ಧದ ವಿಸರ್ಜಿತ ಪಿಂಡವನ್ನು ನೆಲದಲ್ಲಿ ಹೂಳಬಹುದು. ನದೀತೀರದಲ್ಲಿ ಮಾಡಿದಾಗ ನದಿಯ ಹರಿಯುವ ಪ್ರವಾಹದಲ್ಲಿ ಬಿಡಬಹುದು. ಗೋವುಗಳಿಗೆ ಕೊಡಬಹುದು.

2. ಚಟಕದ ಬ್ರಾಹ್ಮಣರ ಎಲೆಗೆ ಬಡಿಸಿದ ಅನ್ನವನ್ನು ನೆಲದಲ್ಲಿಯೇ ಹೂಳಬೇಕು. ಹಸುಗಳಿಗೆ ಕೊಡಬಾರದು. ನದಿಯಲ್ಲಿ ಹಾಕಬಾರದು. ಪಿಂಡದೊಂದಿಗೆ ಬೆರೆಸಬಾರದು. ಪಿಂಡದ ಜೊತೆಯಲ್ಲಿ ಭೂಸ್ಥಾಪನೆ ಮಾಡಬಾರದು.

3. ಜಲಚರ ಪ್ರಾಣಿಗಳು ಪಿಂಡವನ್ನು ತಿಂದರೆ ಪರವಾಗಿಲ್ಲ. ನಾಯಿ ಮಾತ್ರ ಮುಟ್ಟಬಾರದು. ಶ್ರಾದ್ಧ ಹಾಳಾಗುತ್ತದೆ.

ವೈಶ್ವದೇವಕ್ಕೆ ಬೇರೆ ಅನ್ನ ಶ್ರಾದ್ಧದಲ್ಲಿ ಚಟಕದ ಅನ್ನವಲ್ಲದೆ ವೈಶ್ವದೇವಕ್ಕೋಸ್ಕರವೇ ಬೇರೆ ಬಟ್ಟಲಲ್ಲಿ ಬೇರೆ ಅನ್ನವನ್ನೇ ಮಾಡಬೇಕು ಎಂಬ ಸಂಪ್ರದಾಯವಿದೆ.

ಚಟಕದ ಅಡಿಗೆಯಲ್ಲಿ

1. ತೊಗರಿಬೇಳೆ, ಮೆಣಸಿನಕಾಯಿ, ಕಡಲೇಬೇಳೆ, ಕಡಲೇಕಾಯಿ ಎಣ್ಣೆ ಬಳಸಬಾರದು.

2. ಹೆಸರುಬೇಳೆ, ಉದ್ದಿನಬೇಳೆ, (ಅವಶ್ಯ) ಎಳ್ಳೆಣ್ಣೆ ಬಳಸಬಹುದು.

3. ಕಡಲೇಬೇಳೆ, ಒಗ್ಗರಣೆಗೆ ಮಾತ್ರ ಬಳಸಬಹುದು.

4. ಬಾಳೆ ಹಣ್ಣು ಪ್ರಶಸ್ತ

5. ಬೆಂಡೆಕಾಯಿ, ಸಿಹಿ- ಬೂದು ಕುಂಬಳಕಾಯಿ, ಹುರುಳಿಕಾಯಿ, ದಂಟಿನ ಸೊಪ್ಪು, ಚಟಕ ಹಾಗೂ ಭೂರಿಭೋಜನಕ್ಕೂ ಬಳಸಬಾರದು.

6. ಸುವರ್ಣಗಡ್ಡೆ, ಶ್ಯಾಮೆ ಗಡ್ಡೆಗಳು, ಹಾಗಲಕಾಯಿ, ಬಾಳೆಕಾಯಿ ದಿಂಡು, ಗೋವರ್ಧನಕಾಯಿ, ಸೌತೆ, ನೆಲ್ಲಿ, ಮುಂಗುರುಳೀ ಇವುಗಳನ್ನು ಬಳಸಬಹುದು. ಚಟಕ ಮತ್ತು ಭೂರಿಭೋಜನದಲ್ಲಿ

ಶ್ರಾದ್ಧದಲ್ಲಿ ಭಕ್ಷ್ಯಗಳು

1. ಗೋದಿಗೆ ಸಂಬಂಧಿಸಿದ ಭಕ್ಷ್ಯಗಳು ಶ್ರೇಷ್ಠ. ಉದ್ದಿಗೆ ಸಂಬಂಧಿಸಿದ ಭಕ್ಷ್ಯಗಳು. ಹೆಸರು ಬೇಳೆಗೆ ಸಂಬಂಧಿಸಿದ ಭಕ್ಷ್ಯಗಳು. ರವೆ ಉಂಡೆ ಅಪೂಪ (ಘಾರಿಗೆ) (ಅಪೂಪಕ್ಕೆ ಗಸಗಸೆ ಬಳಸಬಾರದು) ಶಿರ, ಪೂರಿ ಮುಂತಾದವನ್ನು ಮಾಡಬಹುದು.

2. ಕಡಲೇಬೇಳೆಯಿಂದ ಮಾಡುವ ಮೈಸೂರುಪಾಕ್, ಲಾಡು, ಹೋಳಿಗೆ ಮುಂತಾದವು ಮಾಡಬಾರದು.

3. ಜಿಲೇಬಿ, ಜಹಾಂಗೀರ್ ಮುಂತಾದ ಸುತ್ತಿ ಸುತ್ತಿ ಮಾಡುವ ಭಕ್ಷ್ಯಗಳು ಮಾಡುವುದು ಪ್ರಶಸ್ತವಲ್ಲ. ಮದುವೆ ಮುಂತಾದ ಸಂದರ್ಭದಲ್ಲಿ ಸಂಬಂಧಗಳು ನಮ್ಮಲ್ಲಿ ಸುತ್ತಿಸುತ್ತಿ ಬೆಸೆಯಲಿ ಎಂಬ ಭಾವನೆಯಿಂದ ಮಾಡುವಂಥವು ಅಷ್ಟೆ.

ಶ್ರಾದ್ಧದಂದು ಬಡಿಸುವ ಬಗ್ಗೆ..

1. ಮೊದಲು ಅನ್ನ, ತುಪ್ಪ, ತೊವ್ವೆ, ಪಾಯಸ, ಭಕ್ಷ್ಯ, ವ್ಯಂಜನ ಮುಂತಾದ ರೀತಿಯಲ್ಲಿ ಚಟಕ ಬ್ರಾಹ್ಮಣರ ಎಲೆಯಲ್ಲಿ ಬಡಿಸುವ ಕ್ರಮ.

2. ಭೂರಿಭೋಜನದ ಬ್ರಾಹ್ಮಣರ ಎಲೆಗೆ ಹೀಗೆ ಬಡಿಸಬೇಕಾದ ಅಗತ್ಯವಿಲ್ಲ. ಉಪ್ಪು, ಬಿಟ್ಟು ಚಟ್ನಿ ಕೋಸಂಬರಿ ಕ್ರಮದಲ್ಲಿ ಮಾಮೂಲಿನಂತೆ ಬಡಿಸುವುದು.

ಕೆಲವರು ಭೂರಿಭೋಜನದ ಬ್ರಾಹ್ಮಣರಿಗೆ ಕೂಡ ಮೊದಲು (1) ತಿಳಿಸಿದಂತೆ ಬಡಿಸುವರು.

3. ತುಪ್ಪವನ್ನು ಕರಗಿಸಿ ಬಡಿಸಬಾರದು. ಗಟ್ಟಿ ತುಪ್ಪವನ್ನೇ ಬಡಿಸಬೇಕು.


4. ತುಪ್ಪ, ಉಪ್ಪುಗಳನ್ನು ಕೈಯಿಂದ ಬಡಿಸಲೇಬಾರದು, ಚಮಚ ಮುಂತಾದವನ್ನು ಬಳಸಬೇಕು.

ಶ್ರಾದ್ಧದಲ್ಲಿ ಅರ್ಘ್ಯ, ಪಿಂಡ, ತರ್ಪಣಕ್ರಮ

ಆದೌ ಪಿತಾ, ತಥಾ ಮಾತಾ, ಸಾಪತ್ನ ಜನನೀ ತಥಾ।
ಮಾತಾಮಹಾಸ್ಸಪತ್ನೀಕಾಃ ಆತ್ಮಪತ್ನ್ಯಸ್ತ್ವನಂತರಮ್॥
ಸುತಭ್ರಾತೃಪಿತೃವ್ಯಾಶ್ಚ ಮಾತುಲಾಸ್ಸಹಭಾರ್ಯಕಾಃ।
ದುಹಿತಾ ಭಗಿನೀ ಚೈವ ದೌಹಿತ್ರೋ ಭಾಗಿನೇಯಕಾಃ॥
ಪಿತೃಷ್ವಸಾ ಮಾತೃಷ್ವಸಾ ಜಾಮಾತಾ ಭಾವುಕಸ್ನುಷಾ।
ಶ್ವಶುರಶ್ಯಾಲಕಶ್ಚೈವ ಸ್ವಾಮಿನೋ ಗುರುರಿರ್ಥಿನಃ॥
ಪಿತೃಣಾಂ ಪಶ್ಚಿಮೇ ಭಾಗೇ ಮಾತೃಪಿಂಡಂ ಯಥಾಕ್ರಮಮ್।
ಮಾತಾಮಹಾಶ್ಚ ತತ್ಪೂರ್ವಂ ಆತ್ಮಪತ್ನ್ಯಸ್ತದುತ್ತರಂ॥
ಸುತಭ್ರಾತೃವ್ಯಾಶ್ಚ ಮಾತಾಪಿತ್ರೋಶ್ಚ ಮಧ್ಯಮೇ।
ಮಾತಾಮಹ-ಮಹೀಮಧ್ಯೇ ಮಾತುಲಾಸ್ಸಹಭಾರ್ಯಕಾಃ॥

ಕುತಪಕಾಲ

ಶ್ರಾದ್ಧದಲ್ಲಿ ಕುತಪ ಕಾಲಕ್ಕೆ ಬಹಳ ಮಹತ್ತ್ವ ಇದೆ. ಈ ಕಾಲದಲ್ಲಿಯೇ ಶ್ರಾದ್ಧ ಮಾಡಬೇಕು. 6 ಗಂಟೆಗೆ ಸೂರ್ಯೋದಯವಾದರೆ ಸುಮಾರು 11 ಗಂಟೆ 35 ನಿಮಿಷಕ್ಕೆ ಕುತಪಕಾಲ ಬಂದಿರುತ್ತದೆ. ವೈಶ್ವದೇವಾದಿಗಳು ಮುಗಿದು ಚಟಕ ಬ್ರಾಹ್ಮಣರ ಪಾದ ಪ್ರಕ್ಷಾಲನೆ ಮುಗಿದ ಬಳಿಕ ಶ್ರಾದ್ಧದ ಪ್ರಧಾನಾಂಗ ಆರಂಭ. ಈ ಭಾಗದಿಂದ ಕುತಪಕಾಲದಲ್ಲಿ ಶ್ರಾದ್ಧ ನಡೆಯಬೇಕು. ಸುಮಾರು 10.30 ಕ್ಕೆ ವೈಶ್ವದೇವಾದಿ ಶ್ರಾದ್ಧ



1. ಪಿತೃ(ತಂದೆ
2. ಪಿತಾಮಹ(ತಂದೆಯತಂದೆ)
3. ಪ್ರಪಿತಾಮಹ(ತಾತನತಂದೆ)
4. ಮಾತೃ(ತಾಯಿ)
5. ಪಿತಾಮಹೀ(ತಂದೆಯತಾಯಿ)
6. ಪ್ರಪಿತಾಮಹೀ(ತಾತನತಾಯಿ)
7. ಮಾತಾಮಹ(ತಾಯಿಯತಂದೆ)
8. ಮಾತುಃ ಪಿತಾಮಹ(ತಾಯಿಯತಾತ)
9. ಮಾತುಃಪ್ರಪಿತಾಮಹ(ತಾಯಿಯ ಮುತ್ತಜ್ಜ)
10. ಮಾತಾಮಹೀ, ಸಾಪತ್ನಜನನೀ (ತಾಯಿಯ ತಾಯಿ, ಸವತಿತಾಯಿ)
11. ಮಾತುಃಪಿತಾಮಹೀ(ತಾಯಿಯತಂದೆಯತಾಯಿ)
12. ಮಾತುಃಪ್ರಪಿತಾಮಹೀ(ತಾಯಿಯ ಅಜ್ಜನತಾಯಿ)
13. ಆತ್ಮಪತ್ನೀ(ಕರ್ತೃವಿನಹೆಂಡತಿ)
14. ಆತ್ಮಸುತ(ಕರ್ತೃವಿನಮಗ)
15. ತನ್ನಸಹೋದರ
16. ಆತನಪತ್ನೀ
17. ಪಿತೃವ್ಯ(ಚಿಕ್ಕಪ್ಪ)
18. ಆತನ ಹೆಂಡತಿ, ಮಕ್ಕಳು
19. ಮಾತುಲ(ಸೋದರಮಾವ)
20. ಆತನ ಹೆಂಡತಿ, ಮಕ್ಕಳು
21. ತನ್ನತಂಗಿ, ಅವಳ ಗಂಡ, ಮಕ್ಕಳು
22. ತನ್ನ ಮಗಳು, ಅವಳ ಗಂಡ, ಮಕ್ಕಳು
23. ಸೋದರಳಿಯ, ಸೋದರತ್ತೆ ಅವರಗಂಡ/ ಹೆಂಡತಿ, ಮಕ್ಕಳು
24. ಚಿಕ್ಕಮ್ಮ ಅವಳ ಗಂಡ, ಮಕ್ಕಳು
25. ಮಾವ, ಅತ್ತೆ
26. ಮೈದುನ, ಭಾವ ಅವರಹೆಂಡತಿ, ಮಕ್ಕಳು
27. ಮಂತ್ರೋಪದೇಶಕಗುರು
28. ಶಾಸ್ತ್ರೋಪದೇಶದಆಚಾರ್ಯ
29, 30. ಸ್ನೇಹಿತರು, ಆಪ್ತರು, ಅವರಹೆಂಡತಿ, ಮಕ್ಕಳು

ಪೂರ್ವದಲ್ಲಿ ಧರ್ಮಪಿಂಡದ ಹೊರಭಾಗದಲ್ಲಿ ಪಿತೃಷೋಡಶೀ ಪಿಂಡಗಳನ್ನು, ಪಶ್ಚಿಮದಲ್ಲಿ ಧರ್ಮಪಿಂಡದ ಹೊರಭಾಗದಲ್ಲಿ ಮಾತೃಷೋಡಶೀ ಪಿಂಡಗಳನ್ನು ಇಡಬೇಕು. ಕೆಲವರು ಇದನ್ನು ಇಡದಿರುವ ಸಂದರ್ಭವೂ ಇದೆ.

ವಿ.ಸೂ. : ಇದೇ ಸ್ಥಂಡಿಲದಲ್ಲಿ ಕ್ರಮವಾಗಿ 1 ರಿಂದ 12ರ ವರೆಗೆ ಆಯಾ ಸ್ಥಾನದಲ್ಲಿ ಅರ್ಘ್ಯ ಕೊಟ್ಟು ಉಳಿದವರಿಗೆಲ್ಲ ದಕ್ಷಿಣದಲ್ಲಿ 1 ದೊನ್ನೆಯಲ್ಲಿಯೇ ಅರ್ಘ್ಯ ಕೊಡಬೇಕು.

ಪೂರ್ವಾಂಗ ಶುರು ಮಾಡಿದರೆ 11. 35ಕ್ಕೆ ಕುತಪ ಕಾಲದಲ್ಲಿ ಶ್ರಾದ್ಧದ ಮುಂದುವರಿಕೆಗೆ ಸರಿಯಾಗುತ್ತದೆ. ವೈಶ್ವದೇವ ಮಾಡದೆ ಶ್ರಾದ್ಧ ಮಾಡಲೇ ಬಾರದು. (ಪಕ್ಷದಲ್ಲಿ ಈ ಕುತಪಕಾಲದ ನಿರೀಕ್ಷೆ ಬೇಕಿಲ್ಲ) ಯಾವ ದಿನದಲ್ಲಾದರೂ 3. 15 ರ ಒಳಗೆ ಶ್ರಾದ್ಧ, ಬ್ರಾಹ್ಮಣರ ಭೋಜನ. (ಪರೇ ಹನಿ ಅಪಕರ್ಷ) ತರ್ಪಣ. ಕರ್ತೃವಿನ ಭೋಜನ ಮುಗಿದಿರಬೇಕು.

ಎಲೆ ಅಡಿಕೆ.

ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ನಾಕು ಅಥವಾ ಐದು ವೀಳ್ಯದೆಲೆಗಳನ್ನು ಅಷ್ಟೇ ಸಂಖ್ಯೆಯ ಬಟ್ಟಲಡಿಕೆಯನ್ನೂ ಕೊಡಬೇಕು. ಪುಡಿ ಅಡಿಕೆಯನ್ನು ಕೊಡಬಾರದು. ಎರಡು ಎಲೆಗಳನ್ನು ಕೊಡಬಾರದು. ನಾಕು ಅಥವಾ ಐದಕ್ಕಿಂತ ಕಡಿಮೆ ಎಲೆಗಳನ್ನು ಶ್ರಾದ್ಧದಲ್ಲಿ ಮಾತ್ರವಲ್ಲ, ಯಾವಾಗಲೂ ಬ್ರಾಹ್ಮಣರಿಗೆ ಕೊಡಲೇಬಾರದು.

ಪುರೋಹಿತರಿಗೆ ಸಲ್ಲುವ ದಕ್ಷಿಣೆಗಳು

1. ಕಲಶದಲ್ಲಿ ಹಾಕಿದ ದ್ರವ್ಯ (ಹಣ)
2. ಬ್ರಹ್ಮದಂಡ ದ್ರವ್ಯ
3. ವಿಷ್ಣುಪಾದದ ಮೇಲೆ ಧಾರೆಯೆರೆದ ದ್ರವ್ಯ
4. ಪಿಂಡದ ಮುಂದೆ ನೈವೇದ್ಯದಲ್ಲಿಟ್ಟ ದ್ರವ್ಯ
5. (ಇಲ್ಲಿ ನೈವೇದ್ಯ ಮಾಡಿದ ಹಣ್ಣನ್ನು ಪಿತೃಪ್ರಸಾದರೂಪವಾಗಿ ಕರ್ತೃವಿಗೆ ಪುರೋಹಿತರು ಕೊಡಬೇಕು.
6. ಪಾರ್ವಣ ವಸ್ತ್ರ- (ಇದನ್ನು ಪಿತೃಗಳ ಶೇಷವಸ್ತ್ರವೆಂದು ಪುರೋಹಿತರು ಕರ್ತೃವಿಗೆ ಕೊಡಬೇಕು. ಕರ್ತೃವು ಅದನ್ನು ಹೊದೆಯಬೇಕೆ ಹೊರತು ಉಡಬಾರದು ಎಂದು ಕೆಲವರ ಅಭಿಪ್ರಾಯವಿದೆ). ಹೆಚ್ಚಾಗಿ ಪುರೋಹಿತರಿಗೆ ಕೊಡುವ ಪದ್ಧತಿಯೇ ಜಾರಿಯಲ್ಲಿದೆ.

ವಿಶ್ವೇದೇವ ಸ್ಥಾನದಲ್ಲಿ ಪಿತೃಸ್ಥಾನದಲ್ಲಿಟ್ಟಿರುವ ದಕ್ಷಿಣೆಯನ್ನು ಭೋರಿಭೋಜನ ದಲ್ಲಿ

ಆಹೂತ ಬ್ರಾಹ್ಮಣರಿಗೆ ಸೇರಿಸತಕ್ಕದ್ದು. ಕ್ರಿಯಾದಕ್ಷಿಣೆ ಅಲ್ಲದೆ ಭೋಜನ ದಕ್ಷಿಣೆ ಬೇರೆ ಕೊಡಬೇಕು.

ದಕ್ಷಿಣೆ

ಹಿಂದೊಮ್ಮೆ ದೇವತೆಗಳು ಯಜ್ಞಗಳನ್ನು ಮಾಡಿದರೂ ಫಲ ದೊರೆಯದೆ ಭಗವಂತನಲ್ಲಿ ಮೊರೆಯಿಟ್ಟರಂತೆ. 'ಯಜ್ಞ' ಎಂದರೆ ನಾನು. ನನ್ನನ್ನು ಮಾತ್ರ ಆರಾಧನೆ ಮಾಡಿದರೆ ಸಾಲದು. ಜೊತೆಗೆ ದಕ್ಷಿಣೆ ಸೇರಿಸಬೇಕು. ದಕ್ಷಿಣಾ ಎಂದರೆ ಲಕ್ಷ್ಮೀದೇವಿ. ದಕ್ಷಿಣಾ ಸಹಿತವಾಗಿ ಯಜ್ಞ ಮಾಡಿದಾಗಲೇ ಫಲದೊರೆಯುವುದು ಎಂದು ಭಗವಂತ ನುಡಿದನು. ಈ ಸಂದರ್ಭ ಬ್ರಹ್ಮವೈವರ್ತ ಪುರಾಣದಲ್ಲಿ ಬರುತ್ತದೆ.

ಪುರೋಹಿತರ ದಕ್ಷಿಣೆಯನ್ನು- ಹೋಮ ಇರಲಿ, ವ್ರತ ಇರಲಿ, ಶ್ರಾದ್ಧ ಇರಲಿ ಕಾರ್ಯಕ್ರಮದ ಕೊನೆಯಲ್ಲಿ ಕೊಡಲೇಬೇಕು. ತಡ ಮಾಡಬಾರದು. ತಡ ಮಾಡಿದಷ್ಟು ಎರಡು, ಮೂರು ಪಟ್ಟು ಹೆಚ್ಚಿಗೆ ಕೊಡಬೇಕಾಗುತ್ತದೆಯೆಂದು ತಿಳಿಸಿ ಅದರ ಪಟ್ಟಿಯನ್ನೇ ಪುರಾಣದಲ್ಲಿ ಕೊಡಲಾಗಿದೆ.

ಶ್ರೀವಿಜಯಧ್ವಜರು ಭಾಗವತವ್ಯಾಖ್ಯಾನದಲ್ಲಿ ಒಂದೆಡೆ ದಕ್ಷಿಣಾ ಶಬ್ದದ ಅರ್ಥವನ್ನು ಹೀಗೆ ವಿವರಿಸುವರು. ''ನಾವು ಮಾಡಿದ ಧರ್ಮಾಚರಣೆಗೆ ನಮ್ಮ ಮನೋರಥವನ್ನು ಈಡೇರಿಸುವಲ್ಲಿ ದಕ್ಷತೆಯನ್ನು ಕೊಡುವುದರಿಂದ ''ದಕ್ಷಿಣೆ''.

ತನ್ನ ದಕ್ಷ (ಬಲ) ಭಾಗದಲ್ಲಿ ಇನ- ಸ್ವಾಮಿಯನ್ನು ಹೊಂದಿರುವಳಾದ ಕಾರಣ ಲಕ್ಷ್ಮೀದೇವಿಗೆ 'ದಕ್ಷಿಣಾ' ಎಂದು ಹೆಸರು. ಭಗವಂತನ ಎಡಭಾಗದಲ್ಲಿರುವ ಲಕ್ಷ್ಮಿಗೆ ಭಗವಂತನು ಬಲಬಾಗದಲ್ಲಿರುವುದು ತಾನೆ? ಆದ್ದರಿಂದ ದಕ್ಷಿಣಾ ಸಹಿತವಾಗಿಯೇ ದಾನ, ಯಜ್ಞ, ಶ್ರಾದ್ಧ ಎಲ್ಲವನ್ನೂ ಮಾಡಬೇಕು. ಎಲ್ಲ ಪುರಾಣಗಳೂ ಒಕ್ಕೊರಲಿನಿಂದ ಸಾರುವಂತೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿತ್ತಲೋಭವನ್ನು ತೋರಬಾರದು. ದೇವರು ಕೊಟ್ಟ ಸಂಪತ್ತನ್ನು ದೇವರಿಗೆ ವಂಚನೆಯಿಲ್ಲದೆ ಸಮರ್ಪಿಸಿದರೆ ಸಂಪದಭಿವೃದ್ಧಿ ಯಾಗುವುದು. ಮಧ್ಯಮ ವರ್ಗದವರು ವರ್ಷದ ಆರಂಭದಿಂದಲೇ ಪಿತೃಕ್ರಿಯೆಗೆ ಸ್ವಲ್ಪ ಹಣವನ್ನು ಸಂಗ್ರಹಿಸಿ ಶ್ರಾದ್ಧ ಪಕ್ಷಕಾಲಗಳಲ್ಲಿ ಧಾರಾಳವಾಗಿ ಬಳಸಬಹುದು. ಒಟ್ಟಿನಲ್ಲಿ ನಮಗಾಗಿ ಶ್ರಮ ವಹಿಸಿದ ಬ್ರಾಹ್ಮಣರು ಅತೃಪ್ತಿ ಪಡದಂತೆ ನಿರ್ವಂಚನೆಯಿಂದ ದಾನ-ದಕ್ಷಿಣೆಗಳನ್ನು ಕೊಡಬೇಕೆನ್ನುವುದು ಮುಖ್ಯ. ಕರ್ತೃಗಳು ಶಕ್ತಿಯಿದ್ದು ಲೋಭಿಗಳಾದಾಗ ಪುರೋಹಿತರು ಬಾಯಿ ಬಿಟ್ಟು ಕೇಳುವ ಪ್ರಸಂಗ ಬರಬಹುದು. ಅದಕ್ಕೆ ಅವಕಾಶ ವೀಯಬಾರದು. ಪುರೋಹಿತರೂ ಅತಿ ಆಸೆಗೆ ಒಳಗಾಗದೆ, ಕ್ರಿಯಾಲೋಪ ಮಾಡದೆ ಸಂತೃಪ್ತಿಯಿಂದ ಯಜಮಾನನಿಗೆ ಒಳಿತಾಗಲೆಂದು ಹರಸಬೇಕು. ಧರ್ಮಕಾರ್ಯಗಳಿಗೆ

ಹಣದ ಮೊತ್ತವನ್ನು ನಿಗದಿ ಮಾಡುವ ವ್ಯಾವಹಾರಿಕ ಬುದ್ಧಿಯನ್ನು ಪುರೋಹಿತರು ತೋರಿಸಬಾರದು. ಇಷ್ಟಕ್ಕೆ ಇಷ್ಟು ಯಾಕೆ? ದವಸ- ಧಾನ್ಯಗಳು, ವಸ್ತ್ರಗಳೂ, ಅವರಿಗೇ ಸೇರುತ್ತದಲ್ಲ ಎಂಬ ಆತಂಕಸಹಿತವಾದ ವ್ಯವಹಾರದ ಮಾತುಗಳನ್ನು ಯಜಮಾನನೂ ಆಡಬಾರದು. ನಗರದಲ್ಲಿ ಸಂಚಾರವೆಚ್ಚ, ಅವರು ಶ್ರಮ ವಹಿಸುವ ಸಮಯ, ಶ್ರಮಗಳನ್ನು ಗಮನಿಸಬೇಕಲ್ಲದೆ ಗುರುತ್ವ ಬುದ್ಧಿ ಪೂರ್ವಕವಾಗಿ ಕೊಡಬೇಕು.

ಭೋಜನದಲ್ಲಿ ಯಾವ ಸ್ಥಾನಕ್ಕೆ ಯಾರು?

ಪಿತೃಸ್ಥಾನಕ್ಕೆ ಮೃತರ ಅಳಿಯ, ತಂಗಿ ಗಂಡ, ಮಗಳ ಮಗ, ಭಾವ- ಮೈದುನರು- ಇವರಲ್ಲಿ ಯೋಗ್ಯರಾಗಿದ್ದಲ್ಲಿ (ಸಂಧ್ಯಾ, ದೇವತಾರ್ಚನೆ, ಏಕಾದಶೀ ಅನುಷ್ಠಾನ ಮಾಡುತ್ತಿದ್ದಲ್ಲಿ) ಕೂಡಿಸಬಹುದು. ಶ್ರೋತ್ರಿಯ ಬಂಧುವಾಗಿದ್ದರೆ ಒಳಿತೆನ್ನುವುದು ಭಾವ. ವಿಶ್ವೇದೇವಸ್ಥಾನಕ್ಕೆ ಯಾವ ಶ್ರೋತ್ರಿಯ ವಿದ್ವಾಂಸರು ಪರವಾಗಿಲ್ಲ.

ಅವಿಧವಾ ನವಮಿ

ಇಂದು ಇಬ್ಬರು ಬ್ರಾಹ್ಮಣರನ್ನಲ್ಲದೆ ಮೃತರ ಹೆಣ್ಮಕ್ಕಳಿಗೂ ಅವಶ್ಯ ಭೋಜನ ಮಾಡಿಸಬೇಕು.

ತರ್ಪಣ ವಿಧಿ

ಎರಡು ಬಾರಿ ಆಚಮನ ಮಾಡಿ, ಪವಿತ್ರವನ್ನು ಧರಿಸಿ ಪ್ರಾಣಾಯಾಮ ಮಾಡಿ ಹೀಗೆ ಸಂಕಲ್ಪಿಸಬೇಕು.

ಶುಭೇ ಶೋಭನೇ... ಆಷಾಢ್ಯಾದಿ ಪಂಚಮಾಪರಪಕ್ಷೇ ಭಾದ್ರಪದ ಕೃಷ್ಣಪಕ್ಷೇ... ತಿಥೌ ಪಿತ್ರಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಲಕ್ಷ್ಮೀಜನಾರ್ದನ ಪ್ರೇರಣಯಾ... ಪ್ರೀತ್ಯರ್ಥಂ ಪಿತೃ ಪಿತಾಮಹ ಪ್ರಪಿತಾಮಹಾನಾಂ .. ನಾಮ್ನಾಂ ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಂ ತದಂತರ್ಯಾಮಿ ಪ್ರದ್ಯುಮ್ನ ಸಂಕರ್ಷಣವಾಸುದೇವಾನಾಂ.. ಮಾತೃಪಿತಾಮಹೀ ಪ್ರಪಿತಾಮಹೀನಾಂ.. ಮಾತಾ ಮಹ ಮಾತುಃ ಪಿತಾಮಹ ಮಾತುಃ ಪ್ರಪಿತಾಮಹಾನಾಂ.. ಮಾತಾಮಹೀ ಮಾತುಃ ಪಿತಾಮಹೀ ಪ್ರಪಿತಾಮಹೀನಾಂ..... ನಾಮಕಾನಾಂ.. ಗೋತ್ರಾಣಾಂ ತಥಾ ಜ್ಯೇಷ್ಠಪಿತೃವ್ಯಾದಿ ಸಮಸ್ತ ಕಾರಣ ಪಿತೃಣಾಂ ಅಕ್ಷಯ್ಯತೃಪ್ತ್ಯರ್ಥಂ ಮಹಾಲಯ ಶ್ರಾದ್ಧ ಪ್ರತಿ ನಿಧಿತ್ವೇನ ತಿಲತರ್ಪಣಾಖ್ಯಂ ಕರ್ಮ ಕರಿಷ್ಯೇ॥

ಎಂದು ಸಂಕಲ್ಪಿಸಿ ದೇವತೀರ್ಥದಿಂದ ದರ್ಭೆನಿರ್ಮಾಲ್ಯದೊಡನೆ ತಿಲತರ್ಪಣ ಕೊಡಬೇಕು.

ಎಳ್ಳಿನ ಮಹತ್ತ್ವ

ತಿಲೈಃ ಆಜ್ಯೇನ ಹೋತವ್ಯಂ ಸರ್ವಪಾಪಹರಾಸ್ತಿಲಾಃ।
ತಿಲಾಃ ರಕ್ಷಂತ್ವಸುರಾಣಾಂ ದರ್ಭಾ ರಕ್ಷಂತು ರಕ್ಷಸಾಂ।
ತಿಲಸ್ನಾಯೀ ತಿಲೋದ್ವರ್ತೀ ತಿಲಹೋಮೀ ತಿಲೋದಕೀ।
ತಿಲಭೋಕ್ತಾ ಚ ದಾತಾ ಚ ಷಟ್ ತಿಲಾಃ ಪಾಪನಾಶನಾಃ॥

ಎಳ್ಳಿನಿಂದ ಹೋಮವನ್ನು ಮಾಡಿದರೆ ಎಲ್ಲಾ ಪಾಪಗಳು ನಾಶವಾಗುತ್ತವೆ. ಅಸುರರಿಂದ, ಭೂತಪ್ರೇತಗಳಿಂದ ಬರುವ ಬಾಧಕಗಳನ್ನು ಎಳ್ಳು ದರ್ಭೆಗಳು ನಿವಾರಿಸುತ್ತವೆ. ಎಳ್ಳೆಣ್ಣೆಯಿಂದ ದೀಪ ಹಚ್ಚುವುದು, ಎಳ್ಳುಗಳಿಂದ ಹೋಮ ಮಾಡುವುದು, ಪಿತೃಗಳಿಗೆ ಎಳ್ಳು ನೀರನ್ನು ಬಿಡುವುದು, ಎಳ್ಳನ್ನು ತಿನ್ನುವುದು, ಎಳ್ಳುದಾನ ಕೊಡುವುದು, ಈ ಆರು ವಿಧವಾದ ಎಳ್ಳಿನ ಉಪಯೋಗದಿಂದ ಎಲ್ಲಾ ಪಾಪಗಳು ನಾಶವಾಗುವುವು.

★★★

ಯಾರೆತ್ತ ಪೋದರೇನು ?

ಯಾರೆತ್ತ ಪೋದರೇನು ಊರೆತ್ತ ಬೆಂದರೇನು
ಪೂರ್ವಪ್ರಾಪ್ತಿ ತನಗಲ್ಲದುಂಟೆ ಮನವೆ ॥ಪ॥

ಹಗಲು ತಾರಕೆಗಳು ಹಾರಿ ಆಡಿದರೇನು
ಬೈಗು ಭಾಸ್ಕರ ಮೂಡಿ ಬೆಳಗಾದರೇನು
ಹಗೆಯವರ ಮನೆಯಲ್ಲಿ ಹಗರಣಾದರೆ ಏನು
ನಿಗಮಗೋಚರನಂಘ್ರಿ ನೆನೆ ಕಂಡ್ಯ ಮನವೆ ॥1॥

ಬೆಂಡು ಮುಳುಗಿದರೇನು ಗುಂಡು ತೇಲಿದರೇನು
ಭಂಡ ನಾಲಿಗೆ ಎರಡು ತುಂಡಾದರೇನು
ಉಂಡ ಮನೆಗೆರಡೆಣಿಸನುರಿದು ಬಿದ್ದರೆ ಏನು
ಪುಂಡರೀಕಾಕ್ಷನ್ನ ನೆನೆ ಕಂಡ್ಯ ಮನವೆ ॥2॥

ವೆಚ್ಚಕ್ಕಿಲ್ಲದ ಹಣವು ವ್ಯರ್ಥವಾದರೆ ಏನು
ಮಚ್ಚರಿಸುವರೆಲ್ಲ ಮಡಿದರೇನು
ಅಚ್ಯುತಾನಂತ ಶ್ರೀಪುರಂದರವಿಠಲನ
ನಿಶ್ಚಲ ಭಕುತಿಯಿಂದ ನೆನೆ ಕಂಡ್ಯ ಮನವೆ ॥3॥

-ಶ್ರೀ ಪುರಂದರದಾಸರು

ಶ್ರಾದ್ಧದಿಂದ ಪಿತೃತೃಪ್ತಿ

-ಡಾ|| ಹೆಚ್. ಸತ್ಯನಾರಾಯಣಾಚಾರ್ಯ
ತರ್ಕಶಾಸ್ತ್ರಪ್ರಾಧ್ಯಾಪಕರು,
ಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು-28

ಶ್ರೀ ರಾಮ ತನ್ನ ತಂದೆಗೆ ಶ್ರಾದ್ಧ ಮಾಡುತ್ತಿದ್ದಾನೆ. ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರನ್ನು ಕೂಡಿಸಿ ಸತ್ಕರಿಸಿ ಪೂಜಿಸುತ್ತಿದ್ದಾನೆ. ವಿಪ್ರಭೋಜನ ನಡೆದಿದೆ. ಸಂತೃಪ್ತರಾದ ಆ ವಿಪ್ರರನ್ನು ನೋಡುತ್ತಿರುವ ಸೀತಾಮಾತೆಯ ಕಣ್ಣರಳಿತು. ಆಶ್ಚರ್ಯ, ಭಯ, ಭಕ್ತಿಗಳು ಮೇಳೈಸಿದವು. ಮತ್ತೆ ಮತ್ತೆ ನೋಡುತ್ತಿದ್ದಾಳೆ! ತೃಪ್ತಿಯಿಂದ ಹರಸುತ್ತಿರುವ ಮಾವಯ್ಯ!

ಭೀಷ್ಮರೊಮ್ಮೆ ಪಿಂಡಪ್ರದಾನ ಮಾಡಬೇಕೆನ್ನುವಾಗ ದರ್ಭೆಯ ಸಮೀಪದ ನೆಲ ಸೀಳಿತು. ಪರಿಚಿತ ಕೈಯೊಂದು ಮೇಲೆದ್ದಿತು, ಥೇಟ್ ಅಪ್ಪ ಶಂತನುವಿನದೇ ಕೈ, ಅದೇ ಕಂಕಣ. ಪಿಂಡವನ್ನು ಅದಕ್ಕಾಗಿಯೇ ಚಾಚಿರುವ ಅಪ್ಪನ ಕೈಯಲ್ಲಿಡಲೋ? ಹರಡಿದ ದರ್ಭೆಯಲ್ಲಿಡಲೋ? ಎಂಬ ಗೊಂದಲದಲ್ಲಿ ಭೀಷ್ಮ ಬಿದ್ದರು. ಒಂದೇ ಕ್ಷಣ, ಕಲ್ಪಗ್ರಂಥಗಳಲ್ಲಿ ಕೈಯಲ್ಲಿ ಪಿಂಡವನ್ನಿಡುವ ವಿಧಿಯನ್ನು ಹೇಳಿಲ್ಲವೆಂದು ತೀರ್ಮಾನಿಸಿದ ಭೀಷ್ಮ ಬರ್ಹಿಸ್ಸಿನಲ್ಲಿ ಪಿಂಡವನ್ನು ಇಟ್ಟುಬಿಟ್ಟರು. ಪಿತೃಪ್ರೀತಿಯಾಯಿತು. ಭೀಷ್ಮ ಮತ್ತೊಮ್ಮೆ ಇಚ್ಛಾಮರಣಿಯಾದರು.

ಪುರಾಣ, ಹರಿವಂಶಗಳಲ್ಲಿ ಸಿಗುವ ಮಾಹಿತಿಗಳು ಇವು. ದಶರಥನಾಗಲೀ ಶಂತನುವಾಗಲೀ ದೇಹತ್ಯಾಗ ಮಾಡಿ ಹಲವು ವರ್ಷಗಳು ಕಳೆದಿವೆ. ಅವರ ಶರೀರಗಳು ಚಿತೆಯಲ್ಲಿ ಭಸ್ಮವಾಗಿವೆ. ಅಸ್ಥಿ ಸಂಚಯನ ಮಾಡಿ ಗಂಗೆಯಲ್ಲಿ ಬಿಸುಟದ್ದಾಗಿದೆ. ಹೀಗಿರುವಾಗ ಸ್ವರ್ಗಸ್ಥ ಪಿತೃಗಳು ಅದೇ ಶರೀರ ಹೊತ್ತು ಶ್ರಾದ್ಧದಂದು ಕಾಣಿಸಿ ಕೊಳ್ಳುವುದೆಂದರೇನು? ಉಂಡು ಹೋಗುವುದೆಂದರೇನು? ಇವು ಅಸಂಬದ್ಧ ಪ್ರಲಾಪಕ್ಕೆ ಜ್ವಲಂತ ಉದಾಹರಣೆಗಳೆಂಬ ವಿಮರ್ಶೆಯನ್ನು ಮುಂದಿಡುವವರಿದ್ದಾರೆ.

ಇಂತಹ ವಿಮರ್ಶೆಗಳನ್ನು ಮಾಡುವವರು ಪುರಾಣಗಳ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮೊದಲು ಪ್ರಯತ್ನಿಸಬೇಕು. ಇತಿಹಾಸ-ಪುರಾಣಗಳಲ್ಲಿ ಹಲವು ಸಂದರ್ಭಗಳಲ್ಲಿ ಹೊರ ಮಾತಿನ ಅರ್ಥವೇ ಆ ಪುರಾಣದ ಆಂತರ್ಯವಾಗಿರುವುದಿಲ್ಲ. ಶ್ರದ್ಧೆಯಿಂದ ಶ್ರೀರಾಮನು ಮಾಡಿದ ಪಿತೃಕಾರ್ಯದಿಂದ ಪಿತೃಪ್ರೀತಿಯುಂಟಾಗಿದೆ ಯೆಂದಷ್ಟೇ ತಿಳಿಸುವುದಕ್ಕಾಗಿ ಪುರಾಣವು ಬ್ರಾಹ್ಮಣನಲ್ಲಿ ತೃಪ್ತದಶರಥನನ್ನು ಸೀತೆಯು ಕಂಡಳೆಂದು ವರ್ಣಿಸಬಹುದು. ಹರಿವಂಶವಾದರೂ ಅಷ್ಟೇ 'ಪಿಂಡ'ವೆಂದರೆ ಸಾಕ್ಷಾತ್

ತಂದೆಗೆ ತಿನ್ನುವುದಕ್ಕಾಗಿ ನೀಡುವ ಅನ್ನದ ಉಂಡೆಯಲ್ಲ. ಹಾಗಿದ್ದರೆ ಅಪ್ಪನ ಕೈಯಲ್ಲೇ ನೀಡಬಹುದು. ಅದು ಪಿತೃಪ್ರೀತಿಗಾಗಿ ದೇವರನ್ನು ಆರಾಧಿಸುವುದಕ್ಕೊಂದು ಪ್ರತೀಕ' ಎಂಬ ಮುಖ್ಯ ಪ್ರಮೇಯವೊಂದನ್ನು ನಿರೂಪಿಸುವುದಕ್ಕಾಗಿ ಕಥೆ ಹೇಳಿದ್ದಾರೆ ವ್ಯಾಸರು.

ಇನ್ನೊಂದು ದೃಷ್ಟಿಯಿದೆ. ಮೃತರಾಗಿ ಸ್ವರ್ಗಸ್ಥರಾದ ಪಿತೃಗಳೂ ಕಾಮರೂಪಿಗಳು. ಯಾವ ಶರೀರವನ್ನು ಬೇಕಾದರೂ ಧರಿಸಬಲ್ಲವರು. ಸಾಮಾನ್ಯವಾಗಿ ಕಣ್ಣಿಗೆ ಕಾಣಿಸದ ವಾಯವೀಯ ಶರೀರದಿಂದ ಸಂಚರಿಸುವ ಅವರು ಶ್ರಾದ್ಧದ ದಿನದಂದು ಶಾದ್ಧಾದಿಕಾರಿಯಾದ ಮಗನ ಮನೆಗೆ ಬರುತ್ತಾರೆ. ವಿಪ್ರಭೋಜನ ಸಂದರ್ಭದಲ್ಲಿ ವಿಪ್ರನೊಂದಿಗೆ ಉಂಡು ತೃಪ್ತರಾಗುತ್ತಾರೆ.

'ತೇ ಬ್ರಾಹ್ಮಣೈಃ ಸಹಾಶ್ನಂತಿ ಪಿತರೋ ವಾಯುರೂಪಿಣಃ' (ಧರ್ಮಸಿಂಧು)

ಇನ್ನೊಂದು ಸ್ಮೃತಿ ತಿಳಿಸುವಂತೆ ಮಳೆಗಾಲದ ಕೊನೆಯ ಪಿತೃಪಕ್ಷದ ಕಾಲದಲ್ಲಿ ಯಮದೇವ ತನ್ನ ಪುರದಲ್ಲಿದ್ದ ಪಿತೃಗಳನ್ನೂ ಪ್ರೇತಗಳನ್ನೂ ಹೊರಕಳಿಸುತ್ತಾನೆ. ತನ್ನ ಪುರವನ್ನೊಮ್ಮೆ ಖಾಲಿ ಮಾಡುತ್ತಾನೆ. 'ವಿಸರ್ಜಯತಿ ಭೂಲೋಕಂ ಕೃತ್ವಾ ಶೂನ್ಯಂ ಸ್ವಕಂ ಪುರಮ್' ಹೀಗೆ ಭೂಲೋಕಕ್ಕೆ ಬಂದ ಪಿತೃಗಳು ತಮ್ಮ ಮಕ್ಕಳ ಮನೆ ಬಾಗಿಲಲ್ಲಿ ಬಂದು ನಿಲ್ಲುತ್ತಾರೆ. ಶ್ರಾದ್ಧ ನಡೆಯದೇ ಹೋದರೆ ಶಾಪವಿತ್ತು ಸಾಗುತ್ತಾರೆ. 'ಶ್ರಾದ್ಧಾಭಾವೇ ಸ್ವಭವನಂ ಶಾಪಂ ದತ್ವಾ ವ್ರಜಂತಿ ತೇ' ಆದ್ದರಿಂದ ಕಾಮರೂಪಿಗಳಾದ ಪಿತೃಗಳು ಭಸ್ಮವಾದ ತಮ್ಮ ಶರೀರದಂತಹುದನ್ನೇ ತೋರುವುದು ಅಸಂಭವವೇ? ಎಂಬುದನ್ನು ಮತ್ತೊಮ್ಮೆ ಚಿಂತಿಸಬೇಕಾಗುತ್ತದೆ.

ಪಿತೃತೃಪ್ತಿಯ ಬಗೆ

ಪಿತೃದೇವತೆಗಳು ಎರಡು ಬಗೆ. ಚಿರಪಿತೃಗಳು ಹಾಗೂ ಅಚಿರಪಿತೃಗಳು. ಈ ಚಿರಪಿತೃಗಳೂ ಎರಡು ತೆರ. ಅಮೂರ್ತರು ಮತ್ತು ಸುಮೂರ್ತರು. (ಶರೀರವಿಲ್ಲದವರು ಮತ್ತು ಉಳ್ಳವರು) ಅಮೂರ್ತರು ಮೂರು ವಿಧ. ವೈರಾಜ, ಅಗ್ನಿಷ್ವಾತ್ತ, ಬರ್ಹಿಷದ, ಸುಮೂರ್ತರು ನಾಲ್ಕು ವಿಧ. ಸುಕಾಲ, ಆಂಗಿರಸ, ಸುಸ್ವಧಾ, ಸೋಮಪ ಎಂಬುದಾಗಿ. ಈ ಸಪ್ತಗಣ ಚಿರಪಿತೃಗಳು ದೀಪ್ತತೇಜಸರು, ಯೋಗಚಕ್ಷುಗಳು. ಚಂದ್ರಲೋಕದ ಮೇಲ್ಭಾಗದಲ್ಲಿ ಇವರಿಗೆ ಸನಾತನ ಮೊದಲಾದ ಪ್ರತ್ಯೇಕವಾದ ಏಳು ಲೋಕಗಳಿವೆ.

ನಮ್ಮ ಮೃತಪಿತೃಗಳು ಈ ಪಿತೃದೇವತೆಗಳಲ್ಲಿ ಸೇರುವುದಿಲ್ಲ. ಅವರು ಅವರವರ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಅನುಭವಿಸುತ್ತಿರುತ್ತಾರೆ. ಒಂದೋ ಸ್ವರ್ಗದಲ್ಲಿ ಅಥವಾ

ನರಕದಲ್ಲಿ. ಮನುಷ್ಯನೋ ಪಶುವೋ ಆಗಿ ಇದೇ ಲೋಕದಲ್ಲಿ ಹುಟ್ಟಿರಲೂ ಸಾಕು. ಕೆಲವೊಬ್ಬರು ವೃಕ್ಷವಾಗಿ ಜನಿಸಿರುವುದೂ ಇದೆ. ಇವರು ಅಚಿರ ಪಿತೃಗಳು. ಅಶಾಶ್ವತ ಪಿತೃಗಳು. ಕೆಲವೇ ಸಮಯ ಕೆಲವರಿಂದ ಮಾತ್ರ ಪಿತೃಗಳೆಂದು ಕರೆಸಿಕೊಳ್ಳುವವರು.

ನಾಮಗೋತ್ರಾದಿ ಕೀರ್ತನೆಯೊಂದಿಗೆ ಮಾಡಿದ ಶ್ರಾದ್ಧವೆಂಬ ಆರಾಧನೆಯಿಂದ ಚಿರಪಿತೃಗಳು ಪ್ರೀತರಾಗುತ್ತಾರೆ. ತೃಪ್ತರಾದ ಚಿರಪಿತೃಗಳು ನಮ್ಮ ಮೃತಪಿತೃಗಳನ್ನು ತೃಪ್ತಿಗೊಳಿಸುತ್ತಾರೆ. ಈ ಮಾತನ್ನು ಶಂತನು ಭೀಷ್ಮನಿಗೆಂದ-

ತ್ವಯಾ ಚಾರಾಧ್ಯಮಾನಾಸ್ತೇ ನಾಮಗೋತ್ರಾದಿಕೀರ್ತನೈಃ।
ಅಸ್ಮಾನ್ ಚಾಪ್ಯಾಯಯಿಷ್ಯಂತಿ ಸ್ವರ್ಗಸ್ಥಾನಪಿ ಭಾರತ॥

'ವತ್ಸ, ಭೀಷ್ಮ, ನೀನು ನಾಮಗೋತ್ರಗಳನ್ನು ಕೀರ್ತನ ಮಾಡಿ ಹಾಕಿದ ಶ್ರಾದ್ಧದಿಂದ ಆರಾಧಿತರಾಗುವವರು ಅಗ್ನಿಷ್ವಾತ್ತಾದಿ ಚಿರಪಿತೃಗಳು. ಅವರು ಸ್ವರ್ಗದಲ್ಲಿದ್ದರೂ ನಮ್ಮನ್ನು ತೃಪ್ತಿಗೊಳಿಸುತ್ತಾರೆ. ದೇವತೆಗಳಾಗಿದ್ದರೆ ಅಮೃತರೂಪದಲ್ಲಿ, ಹಸುವಾಗಿದ್ದರೆ ಹುಲ್ಲಿನ ರೂಪದಲ್ಲಿ, ಅಸುರರಾಗಿದ್ದರೆ ಮಾಂಸದ ರೂಪದಲ್ಲಿ ಮನುಜರಾಗಿದ್ದರೆ ಅನ್ನರೂಪದಲ್ಲಿ ಆಯಾ ಯೋನಿಯಲ್ಲಿ ಜನಿಸಿರುವ ಮೃತನಿಗೆ ಶ್ರಾದ್ಧತೃಪ್ತಿ ಸಲ್ಲುವಂತೆ ಮಾಡುವವರು ಚಿರಪಿತೃಗಳು'.

ಒಟ್ಟಿನಲ್ಲಿ ನಮ್ಮ ಪಿತೃಗಳಿಗೂ ಶ್ರಾದ್ಧಕ್ಕೂ ಮಧ್ಯೆ ಮಾಧ್ಯಮವಾಗಿ ಈ ಚಿರಪಿತೃಗಳು ನಿಂತಿದ್ದಾರೆ. ಇವರನ್ನು ನಮಿಸಿಯೇ ಶ್ರಾದ್ಧ ಪ್ರಾರಂಭಿಸಬೇಕು.

ಅಮೂರ್ತಾನಾಂ ಸಮೂರ್ತಾನಾಂ ಪಿತೃಣಾಂ ದೀಪ್ತತೇಜಸಾಮ್।
ನಮಸ್ಯಾಮಿ ಸದಾ ತೇಷಾಂ ಧ್ಯಾಯಿನಾಂ ಯೋಗಚಕ್ಷುಷಾಮ್॥

ಇದು ಒಂದು ರೀತಿಯಲ್ಲಿ ಇಂದಿನ ಟಪಾಲು ವ್ಯವಸ್ಥೆಯಂತೆ, ವಿಳಾಸವನ್ನು ಬರೆದು ಡಬ್ಬಿಯಲ್ಲಿ ಹಾಕುವುದಷ್ಟೇ ನಮ್ಮ ಕೆಲಸ. ಯಾವುದೋ ಮೂಲೆಗೆ ಹೋಗಬೇಕಾದ ಪತ್ರ ಇಲ್ಲಿ ಡಬ್ಬಿಯಲ್ಲಿ ಬಿದ್ದರೆ ಸಾಕು. ವಿತರಣೆಯ ವ್ಯವಸ್ಥೆ ಅಂಚೆ ಇಲಾಖೆಯದು. ಇಲ್ಲಿ ಹಾಕಿದ ಪತ್ರ ಅಲ್ಲಿಗೆ ಹೇಗೆ ಮುಟ್ಟುವುದು ಸಾಧ್ಯ? ಎಂದು ಯಾರೂ ಪ್ರಶ್ನಿಸುವುದಿಲ್ಲ. ಹಾಗೆಯೇ ನಾಮಗೋತ್ರಗಳನ್ನು ಸ್ಪಷ್ಟವಾಗಿ ಉಚ್ಚರಿಸಿ ಶ್ರದ್ಧೆಯಿಂದ ಹಾಕಿದ ಶ್ರಾದ್ಧ ಸರಿಯಾದ ವಿಳಾಸಕ್ಕೆ ಸಲ್ಲುತ್ತದೆ. ಸಲ್ಲಿಸುವ ದೊಡ್ಡ ವ್ಯವಸ್ಥೆ ಚಿರಪಿತೃಗಳದು.

ಈಗ ಹೇಳಿದ ಅಗ್ನಿಷ್ವಾತ್ತಾದಿಗಳು ಬ್ರಹ್ಮಪುತ್ರರು. ಕೆಲವರು ಬ್ರಹ್ಮಪುತ್ರರಾದ ಪ್ರಜಾಪತಿಗಳ ಪುತ್ರರು. ಇವರಲ್ಲದೆ ಇನ್ನೆರಡು ಪಿತೃದೇವತಾ ಗಣವಿದೆ. ದೇವತೆಗಳ

ಪುತ್ರರಾಗಿದ್ದು ಪಿತೃದೇವತೆಗಳೆನಿಸಿಕೊಂಡವರು ಒಬ್ಬರು. ಅಗ್ನಿಯಲ್ಲಿ ಸ್ವಾಹಾಕಾರದೊಂದಿಗೆ ಆಹುತಿಯನ್ನು ಪಡೆಯುವ ದೇವತೆಗಳು.

ವಸು-ರುದ್ರ-ಆದಿತ್ಯರೆಂಬ ಗಣ ಮತ್ತೊಂದು. ವಸುಗಳು 8 ಜನ, ರುದ್ರರು 11, ಆದಿತ್ಯರು 12. ಜೀವನದ ಪೂರ್ಣಾಯುಷ್ಯವನ್ನು ಮೂರಾಗಿ ವಿಭಾಗಿಸಿದಾಗ ಅದರ ಮೂರು ಭಾಗಗಳಿಗೆ ಸಂಬಂಧಿಸಿದ ದೇವತೆಗಳೂ ಇವರೇ. ಜೀವನವೇ ಒಂದು ಯಜ್ಞ. ಆ ಯಜ್ಞದಲ್ಲಿ ಮೊದಲ 24 ವರ್ಷ ಪ್ರಾತಃಸವನ. ನಂತರದ 48 ವರ್ಷ ಮಾಧ್ಯಾಹ್ನಿಕ ಸವನ. ಕೊನೆಯ 44 ವರ್ಷಗಳು ಸಾಯಂ ಸವನ. 116 ವರ್ಷಗಳ ಪೂರ್ಣಾಯುಷ್ಯಕ್ಕೆ ದೇವತೆಗಳೇ ವಸು ರುದ್ರಾದಿತ್ಯರು. ಇವರೇ ಪಿತೃ-ಪಿತಾಮಹ-ಪ್ರಪಿತಾಮಹರಲ್ಲಿ ನಿಲ್ಲುವ ಪಿತೃದೇವತಾಗಣ. ಇವರ ಒಳಗೆ ಭಗವಂತ ಜನಾರ್ದನನೆಂಬ ಹೆಸರಿನಿಂದ ನಿಂತಿದ್ದಾನೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನನೆಂಬ ರೂಪದಿಂದ ವಸ್ವಾದಿಗಳಲ್ಲಿ ಇರುವ ದೇವನೇ ಕರ್ತೃವಿನಲ್ಲಿ ಅನಿರುದ್ಧನೆಂಬ ರೂಪದಿಂದಿದ್ದಾನೆ. ನಾರಾಯಣನೆಂಬ ಮತ್ತೊಂದು ರೂಪ ಶ್ರಾದ್ಧದ ಆರಾಧನೆಯನ್ನು ಸ್ವೀಕರಿಸಿ ಪಿತೃತೃಪ್ತಿಯನ್ನು ಮಾಡುವುದಕ್ಕಾಗಿ. ಹೀಗೆ ಭಗವಂತನ ಪಂಚರೂಪಗಳ ಚಿಂತನೆಯಿದೆ.

ಎಲ್ಲ ಕರ್ಮವೂ ಭಗವತ್ ಪ್ರೀತಿಗಾಗಿ. ಅವನು ಪ್ರೀತನಾದರೆ ಎಲ್ಲವು ತೃಪ್ತ. ವೃಕ್ಷದ ಬುಡಕ್ಕೆ ನೀರು ಹಾಕಿದರೆ ಕೊಂಬೆ, ತೊಗಟೆ, ಎಲೆಗಳೆಲ್ಲವೂ ತೃಪ್ತಿ ಪಡೆಯುವಂತೆ. ಶ್ರಾದ್ಧವೂ ಇದಕ್ಕೆ ಹೊರತಾಗಿಲ್ಲ. ವಾಸುದೇವಾದಿ ರೂಪಿಯಾದ ಭಗವಂತನ ತೃಪ್ತಿಯಾದರೆ ವಸುರುದ್ರಾದಿತ್ಯರು ಸಂಪ್ರೀತರಾಗಿ ನಾನಾ ಯೋನಿಯಲ್ಲಿರುವ ಪಿತೃಗಳಿಗೆ ತೃಪ್ತಿಯುಂಟು ಮಾಡುತ್ತಾರೆ. ತೃಪ್ತರಾದ ಪಿತೃಗಳು ತುಂಬು ಮನಸ್ಸಿನಿಂದ ವಂಶಾಭಿವೃದ್ಧಿಯಾಗುವಂತೆ ಹರಸುತ್ತಾರೆ.

ಕೊನೆಯದಾಗಿ ಧರ್ಮಸಿಂಧುವಿನ ಒಂದು ಮಾತು ನೆನಪಿಡಬೇಕು. ಶ್ರಾದ್ಧವೆಂಬುದು ಕೇವಲ ಪಿತೃತೃಪ್ತಿಗಾಗಿ ಅಲ್ಲ. ಅದೊಂದು ಮನುಜನ ಕರ್ತವ್ಯ ಕರ್ಮ. ಬ್ರಹ್ಮಾದಿಸ್ತಂಬಪರ್ಯಂತ ಸಕಲ ಭೂತತೃಪ್ತಿಯ ಉದ್ದೇಶವಿದೆ. ವಿಕಿರದಿಂದ ಪಿಶಾಚಾದಿಗಳಿಗೆ ತೃಪ್ತಿ. ಸ್ನಾನ ವಸ್ತ್ರೋದಕಾದಿಗಳಿಂದ ವೃಕ್ಷಾದಿರೂಪಿಗಳಿಗೆ ತೃಪ್ತಿ. ಕೆಲವರಿಗೆ (ಅಸುರರೂಪಿಗಳಿಗೆ) ಉಚ್ಛಿಷ್ಟ ಪಿಂಡದಿಂದ ತೃಪ್ತಿ. ಪಕ್ಷಿಗಳಿಗೆ ಪ್ರಿಯವಾಕ್ಯದಾನದಿಂದ ತೃಪ್ತಿ. ಆದ್ದರಿಂದಲೇ ತಂದೆ ಮುಕ್ತನಾಗಿದ್ದರೂ ಶ್ರಾದ್ಧ ಬಿಡಲಾಗದು. 'ಅತಃ ಬ್ರಹ್ಮೀಭೂತ ಪಿತೃಕೇಣಾಪಿ ಶ್ರಾದ್ಧಂ ಕಾರ್ಯಮ್.'

★★★

ಶ್ರಾದ್ಧ ಹಾಗೂ ಗೋವು

-ಡಾ| ಹೆಚ್. ಸತ್ಯನಾರಾಯಣಾಚಾರ್ಯ

''ತಾಯಿಯನ್ನು ಕೂಗಿ ಕರೆಯುವುದಕ್ಕೆ ಅಚ್ಚ ಸಂಸ್ಕೃತದ ಶಬ್ದ 'ಅಂಬಾSS' ಎಂದು. ಈ ಶಬ್ದದಿಂದ ಇಂದು ತಾಯಿಯನ್ನು ಕೂಗಿ ಕರೆಯುತ್ತಾ ಸಂಸ್ಕೃತಿಯನ್ನು ಸಾರುವ ಏಕೈಕ ಪ್ರಾಣಿಯೆಂದರೆ ಅದು ಗೋವು.

''ಗೋವು'' 'ಅಂಬಾ' ಎಂದಾಗ ಅದು ಎಷ್ಟು ದೂರ ಕೇಳಿಸುವುದೋ ಅಷ್ಟು ದೂರಕ್ಕೆ 'ಗವ್ಯೂತಿ' ಎಂದು ಹೆಸರು. ಉದ್ಗಾತೃವು ಯಜ್ಞಗಳಲ್ಲಿ ಸಾಮಮಂತ್ರಗಳನ್ನು ಹಾಡಿದರೆ ಅದು ಗವ್ಯೂತಿ ಪರಿಮಾಣದ ದೂರಕ್ಕೆ ಕೇಳಿಸುವಂತಿರಬೇಕು.

ಹಾಲು, ಮೊಸರು, ತುಪ್ಪಗಳಿಲ್ಲದೇ ದೇವ-ಪಿತೃ-ಕಾರ್ಯಗಳು ನಡೆಯಲಾರವು. ಈ ಗೋರಸಗಳಿಲ್ಲದೇ ಮಾನವ ಶರೀರಕ್ಕೆ ಪುಷ್ಟಿಯೂ ಇಲ್ಲ. 'ಕೋ ರಸೋ ಗೋರಸಂ ವಿನಾ' (ಗೋರಸವಿಲ್ಲದ ಭೋಜನಕ್ಕೆ ರಸವೆಂಥದು?) ಎಂಬ ಸಂಸ್ಕೃತಗಾದೆ ಗವ್ಯದ್ರವ್ಯದ ಮಹತ್ವಕ್ಕೆ ಸಾಕ್ಷಿಯಾಗಿದೆ. ಹಾಲು ಕುಡಿಸಿ ಬೆಳೆಸುವ ಪರೋಪಕಾರಿ ಪ್ರಾಣಿಯಾದುದರಿಂದಲೇ ಗೋವಿಗೆ 'ಧೇನು' (ಧೇಟ್ ಪಾನೇ, ಧಾಞ್ - ಧಾರಣ ಪೋಷಣಯೋಃ) ಎಂದು ಹೆಸರು.

ಋಗ್ವೇದದ ಒಂದು ಮಂತ್ರ ಗೋವನ್ನು ವಸುರುದ್ರಾದಿತ್ಯರ ಸಂಬಂಧಿಯೆಂದಿದೆ.

ಮಾತಾ ರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾಂ ಅಮೃತಸ್ಯ ನಾಭಿಃ।
ಪ್ರ ನು ವೋಚಂ ಚಿಕಿತುಷೇ ಜನಾಯ ಮಾ ಗಾಮನಾಗಾಮ್ ಅದಿತಿಂ ವಧಿಷ್ಠ॥

'ಏಕಾದಶರುದ್ರರ ತಾಯಿ ಗೋಮಾತೆ. ಅಷ್ಟವಸುಗಳ ಮಗಳು. ದ್ವಾದಶಾದಿತ್ಯರ ಒಡಹುಟ್ಟಿದವಳು ಈಕೆ. ದೇವತೆಗಳ ಆರಾಧನೆಗೆ ಸಂಭಾರಗಳನ್ನು ಒದಗಿಸುವುದರ ಮೂಲಕ ದೇವತೆಗಳ ಸಂಬಂಧಿಸಿಯೆನಿಸಿದ ಗೋವು ಅಮೃತದ ಸ್ರೋತಸ್ಸು. ಅದಿತಿ ಸ್ವರೂಪಿಣಿಯಾದ ಈಕೆಯಲ್ಲಿ ಸ್ವಲ್ಪವೂ ಪಾಪದ ಸಂಬಂಧವಿಲ್ಲ. ಜ್ಞಾನಪಿಪಾಸುಗಳೇ, ಅನಾಗಸೆಯಾದ ಈಕೆಯನ್ನು ಹಿಂಸಿಸದಿರಿ?

ಇಲ್ಲಿ ಹೇಳಿದ ವಸು-ರುದ್ರ- ಆದಿತ್ಯರು ಪಿತೃದೇವತೆಗಳಿಗೆ ಬಹಳ ಹತ್ತಿರದವರು. ಶ್ರಾದ್ಧದಲ್ಲಿ ಪಿತೃ ಮೊದಲಾದ ಮೂರು ಗಣದಲ್ಲಿ ಚಿಂತಿಸಬೇಕಾದ ಮೂರು ದೇವತಾಗಣವೇ ವಸುಗಣ, ರುದ್ರಗಣ ಹಾಗೂ ಆದಿತ್ಯಗಣ. ಪ್ರದ್ಯುಮ್ನ. ಸಂಕರ್ಷಣ,

ವಾಸುದೇವ ಎಂಬ ಭಗವಂತನ ಮೂರು ರೂಪಗಳಿಗೆ ಈ ಮೂರುಗಣ ಅಧಿಷ್ಠಾನ. ಶ್ರಾದ್ಧದ ಮೂರು ಪಿಂಡಗಳು ಈ ಮೂರುಗಣಕ್ಕೆ ಪ್ರತೀಕವೆನಿಸಿವೆ.

ವಸುರುದ್ರಾದಿತ್ಯರುಗಳ ಸಂಬಂಧಿನಿಯಾದ ಗೋವಿಗೆ ಗೋಗ್ರಾಸವಿಡುವುದರಿಂದ ಪಿತೃಗಳಿಗೆ ಪ್ರೀತಿಯಾಗುತ್ತದೆ. ಗೋಪೂಜೆ, ಗೋದಾನಗಳೂ ಪಿತೃಪ್ರೀತಿಕರ, ಗೋಗ್ರಾಸವಿಲ್ಲದೇ ಶ್ರಾದ್ಧವೇ ನಡೆಯದು. ದುರಂತವೆಂದರೆ ಶ್ರಾದ್ಧದಲ್ಲಿ ತೆಗೆದಿಟ್ಟ ಗೋಗ್ರಾಸ ಹಲವು ಸಂದರ್ಭಗಳಲ್ಲಿ ಗೋವಿಗೆ ತಲುಪುವುದೇ ಇಲ್ಲ.

ಗಾರ್ಗ್ಯನ ಶಿಷ್ಯರು ಗೋಹತ್ಯೆಯನ್ನೇ ಮಾಡಿದರೂ ಪಿತೃಗಳ ಆರಾಧನೆಯ ಬಲದಿಂದ ದೋಷಮುಕ್ತರಾದರು. ಗೋ ಹತ್ಯೆಯನ್ನು ಮಾಡಿ ಗುರುಗಳಲ್ಲಿ ಸುಳ್ಳು ಹೇಳಿದ್ದರಿಂದಾಗಿ ಹಲವು ಜನ್ಮಗಳನ್ನೆತ್ತಿದ್ದ ಈ ವಿಪ್ರ ಬಾಲಕರು ಕೊನೆಗೆ ಭಗವತ್ತತ್ವವನ್ನು ಅರಿತು ಉದ್ಧೃತರಾದರು. ಅಂದು ಹತ್ಯೆಯಾದ ಗೋಮಾತೆಯೇ ಯಾವ ದ್ವೇಷವನ್ನೂ ಇಟ್ಟುಕೊಳ್ಳದೇ ಕೊನೆಯ ಜನ್ಮದಲ್ಲಿ ಬ್ರಹ್ಮದತ್ತನ ಪತ್ನಿ ಸನ್ನತಿಯಾಗಿ ಬಂದು ಜನ್ಮಾಂತರದಲ್ಲಿ ತನ್ನ ಹಂತಕನಾಗಿದ್ದ ಈತನನ್ನು ಇಂದು ಉದ್ಧರಿಸಿದ್ದಾಳೆ.

ಹರಿವಂಶದ ಈ ಕಥೆ ಗೋವಿನ ಕ್ಷಮಾಮಯಿತೆಗೆ ಕನ್ನಡಿಯಂತಿದೆ.

ಉತ್ಕೃಷ್ಟವಾದುದನ್ನು ದಾನವಿತ್ತರೆ ಉತ್ಕೃಷ್ಟಫಲದ ಪ್ರಾಪ್ತಿಯಿದೆ. ನಿಷ್ಪ್ರಯೋಜಕಗಳಾದ ಹುಲ್ಲು ತರಗೆಲೆಗಳನ್ನು ತಾನು ತಿಂದು ಪೌಷ್ಟಿಕವಾದ ಹಾಲನ್ನಿತ್ತು ಧೇನು ಲೋಕಮಾತೆ ಎನಿಸಿದ್ದಾಳೆ. ಗೋಮೂತ್ರ ಗೋಮಯಗಳ ಮೂಲಕ ಗೊಬ್ಬರವಿತ್ತು ನೇಗಿಲು ಎಳೆದು ದವಸಧಾನ್ಯದ ಮೂಲಕ ಹೊಟ್ಟೆ ತುಂಬಿಸುವ ಎತ್ತು ಅಪ್ಪನಂತೆ. **'ಗಾವೋ ಮೇ ಮಾತರಃ ಸರ್ವಾಃ ಪಿತರಸ್ಚಾಪಿ ಗೋವೃಷಾಃ'** ಎಂಬುದು ಮಹಾಭಾರತದ ಮಾತು. ನಮ್ಮನ್ನು ಹೆತ್ತು ಬೆಳೆಸಿದ ಸ್ವಂತ ಪಿತೃಗಳನ್ನು ದಾನ ಮಾಡುವ ಅಧಿಕಾರ ನಮಗಿಲ್ಲ. ಆದರೆ ಮಾತೃ-ಪಿತೃ ಗಳ ಸ್ಥಾನದಲ್ಲಿರುವ ಗೋವುಗಳ ಸೇವೆ ಮಾಡಿ ದಾನ ಮಾಡಿ ಪಿತೃಪ್ರೀತಿಯನ್ನೂ ತುಷ್ಟಿಯನ್ನೂ ಸಂಪಾದಿಸಿಕೊಳ್ಳುವ ಅವಕಾಶವಿದೆ.

''ಸಾವು ಸನ್ನಿಹಿತವಾಗಿರುವ ಸಾಯ ಬಿದ್ದಿರುವ ವ್ಯಕ್ತಿಗೆ 'ಮುಮೂರ್ಷು' ಎಂದು ಹೆಸರು. ಮುಮೂರ್ಷು ವ್ಯಕ್ತಿಯು ಐದು ಗೋವುಗಳನ್ನೂ ಒಂದು ತಿಲಪಾತ್ರೆಯನ್ನೂ ದಾನವೀಯ ಬೇಕೆಂದು ಧರ್ಮಗ್ರಂಥಗಳು ಆದೇಶಿಸಿವೆ. ಈ ಐದು ಗೋವುಗಳಿಗೆ ಐದು ಹೆಸರುಗಳು. ಋಣಧೇನು, ಮೋಕ್ಷಧೇನು, ಪಾಪಧೇನು, ವೈತರಣೀ ಧೇನು ಹಾಗೂ ಉತ್ಕ್ರಾಂತಿಧೇನು ಎಂಬುದಾಗಿ ಮುಮೂರ್ಷು ವ್ಯಕ್ತಿಯ ಕೈಯಲ್ಲಿ ಮಗ ಈ ಐದು

ದಾನಗಳನ್ನು ಕೊಡಿಸಿದನಾದರೆ ಅದು ಗಯಾ ಶ್ರಾದ್ಧಕ್ಕಿಂತಲೂ ದೊಡ್ಡ ಕೆಲಸ. ಅಷ್ಟೇಕೆ? ಅಶ್ವಮೇಧ ಶತಕ್ಕಿಲ್ಲದ ಫಲ ಅದಕ್ಕಿದೆ.

ಮುಮೂರ್ಷುಂ ಪಿತರಂ ಪುತ್ರೋ ಯದಿ ದಾನಂ ಪ್ರದಾಪಯೇತ್ ।
ತದ್ವಿಶಿಷ್ಟಂ ಗಯಾಶ್ರಾದ್ಧಾದಶ್ವಮೇಧ ಶತಾದಪಿ ॥

ಪುಣ್ಯಕಾಲದಲ್ಲಿ ಕೊಟ್ಟದಾನಕ್ಕೆ ಹೆಚ್ಚು ಫಲ, ಮೃತ್ಯು ಸನ್ನಿಹಿತವಾದ ಕಾಲ ಪರಮಪುಣ್ಯಕಾಲ.

ವ್ಯತೀಪಾತೋಽಥ ಸಂಕ್ರಾಂತಿಸ್ತಥೈವ ಗ್ರಹಣಂ ರವೇಃ।
ಪುಣ್ಯಕಾಲಾಸ್ತಥಾ ಸರ್ವೇ ಯದಾ ಮೃತ್ಯುರುಪಸ್ಥಿತಃ॥

ಸೂರ್ಯಗ್ರಹಣ, ಸಂಕ್ರಾಂತಿ, ವ್ಯತೀಪಾತಗಳಿಗೆ ಸಮಾನವಾಗಿ ಪರ್ವಕಾಲವೆನಿಸಿದ ಮರಣ ಕಾಲದಲ್ಲಿ ಗೋದಾನಗಳನ್ನು ಕೊಡಬೇಕು.

ಆಸನ್ನಮೃತ್ಯುನಾ ದೇಯಾ ಗೌಃ ಸವತ್ಸಾತು ಪೂರ್ವವತ್ ಎಂಬ ಮಾತಿನಂತೆ ಕರುವಿನ ಜೊತೆಗೆ ಹಸುವನ್ನು ದಾನ ಮಾಡಬೇಕು. ಮುಮೂರ್ಷುವು ಅಶಕ್ತನಾಗಿದ್ದರೆ ಅವನ ವತಿಯಿಂದ ಸುತನು ಈ ದಾನಗಳನ್ನು ನೀಡಬೇಕು.

ಮೋಕ್ಷವನ್ನು ಬಯಸುವ ವ್ಯಕ್ತಿ ತನ್ನ ಸಾಲಗಳನ್ನೆಲ್ಲಾ ತೀರಿಸಿಕೊಳ್ಳಬೇಕು. ಸಾಲಗಾರನಾಗಿಯೇ ಸತ್ತರೆ ಸಾಲತೀರಿಸುವುದಕ್ಕಾಗಿ ಮತ್ತೊಂದು ಜನ್ಮ ಅನಿವಾರ್ಯವೆನಿಸುತ್ತದೆ. ಸಾಲ ತೀರುವಿಕೆಯ ಉದ್ದೇಶದಿಂದ (ಋಣಮುಕ್ತಿಗಾಗಿ) ನೀಡುವ ಗೋದಾನಕ್ಕೆ ಋಣಧೇನುದಾನವೆಂದು ಹೆಸರು. ಆಗ ಈ ಮಂತ್ರವಿದೆ.

ಐಹಿಕಾಮುಷ್ಮಿಕಂ ಯಚ್ಚ ಸಪ್ತಜನ್ಮಾರ್ಜಿತಂ ಋಣಂ।
ತತ್ಸರ್ವಂ ಶುದ್ಧಿಮಾಯಾತು ಗಾಮೇಕಾಂ ದದತೋ ಮಮ॥

ಈ ಒಂದು ಗೋವನ್ನು ದಾನ ಕೊಟ್ಟುದರಿಂದ ನನ್ನ ಜನ್ಮ ಜನ್ಮಾಂತರದ ಋಣವೆಲ್ಲವೂ ತೀರಿ ಹೋಗಲಿ ಎಂಬ ಪ್ರಾರ್ಥನೆಯ ಶ್ಲೋಕವಿದು.

ಋಣಾಪಾಕರಣವಾದರೂ ಮುಕುಂದನ ಅನುಗ್ರಹವಿಲ್ಲದೇ ಮುಕ್ತಿಯಿಲ್ಲ. ಮುಕುಂದ ಪ್ರೀತಿಗಾಗಿ ಮೋಕ್ಷಧೇನುದಾನ.

ಮೋಕ್ಷಂ ದೇಹಿ ಹೃಷೀಕೇಶ ಮೋಕ್ಷಂ ದೇಹಿ ಜನಾರ್ದನ।
ಮೋಕ್ಷಧೇನು ಪ್ರದಾನೇನ ಮುಕುಂದಃ ಪ್ರೀಯತಾಂ ಮಮ॥

ಋಣದ ಕಟ್ಟಿನಿಂದ ಕಳಚಿಕೊಂಡು ಮುಕುಂದಪ್ರೀತಿಯನ್ನು ಸಂಪಾದಿಸುವುದಕ್ಕೆ ಹೊರಟವ್ಯಕ್ತಿ ಪಾಪದ ಕಟ್ಟಿನಿಂದಲೂ ಬಿಡಿಸಿಕೊಳ್ಳಬೇಕು. ಅದಕ್ಕಾಗಿ ಮೂರನೆಯ ಪಾಪಧೇನುದಾನ.

ಆ ಜನ್ಮೋಪಾರ್ಜಿತಂ ಪಾಪಂ ಮನೋ ವಾಕ್ಕಾಯಕರ್ಮಭಿಃ।

ತತ್ಸರ್ವಂ ನಾಶಮಾಯಾತು ಗೋಪ್ರದಾನೇನ ಕೇಶವ ॥

'ನನ್ನ ತ್ರಿಕರಣಗಳಿಂದ ಏನೇ ಪಾಪ ಘಟಿಸಿದ್ದರೂ ಅವನ್ನು ದೂರ ಮಾಡು ಕೇಶವ.'

ಮೃತ್ಯುದೇವತೆಯಾದ ಯಮನ ಪ್ರೀತಿಗಾಗಿ ವೈತರಣಿಯೆಂಬ ನದಿಯನ್ನು ದಾಟುವುದಕ್ಕಾಗಿ ವೈತರಣಿಧೇನುದಾನ. ಆ ಧೇನುವನ್ನೇ ವೈತರಣಿಯೆಂದು ಭಾವಿಸಬೇಕು. ವೈತರಣೀನಾಡಿಗೆ (ನದಿಗೆ) ನಿಯಾಮಕ ದೇವಿಯನ್ನು ಗೋವಿನಲ್ಲಿ ಆವಾಹಿಸಿ ಪ್ರಾರ್ಥಿಸಬೇಕು.

ಧೇನುಕೇ ತ್ವಂ ಪ್ರತೀಕ್ಷಸ್ವ ಯಮದ್ವಾರೇ ಮಹಾಪಥೇ।
ಉತ್ತಿತೀರ್ಷುರಹಂ ದೇವಿ ವೈತರಣ್ಯೈ ನಮೋಽಸ್ತುತೇ ॥

ವೈತರಣೀ ಎಂದರೆ ವಿಶಿಷ್ಟವಾದ ನೌಕೆ. ಶರೀರ ಕಳಚಿ ಪ್ರೇತವಾದಾಗ ದಕ್ಷಿಣ ಪಥದಲ್ಲಿ ಸಾಗುವುದಕ್ಕೆ ಬೇಕಾದ ನೌಕೆ. ಆ ನೌಕೆ ನೀನಾಗಿ ನನ್ನನ್ನು ದಾಟಿಸು ಎಂಬ ಪ್ರಾರ್ಥನೆಯೊಂದಿಗೆ ವಿಪ್ರನಲ್ಲೂ ವಿಷ್ಣುವನ್ನು ಧ್ಯಾನಿಸಿ ದಾನ ನೀಡಬೇಕು.

ವಿಷ್ಣುರೂಪ ದ್ವಿಜಶ್ರೇಷ್ಠ ಭೂದೇವ ದ್ವಿಜಪಾವನ।
ತರ್ತುಂ ವೈತರಣೀಮೇತಾಂ ಕೃಷ್ಣಾಂ ಗಾಂ ಪ್ರದದಾಮ್ಯಹಂ॥
ಯಮದ್ವಾರ ಪಥೇ ಘೋರೇ ಘೋರಾ ವೈತರಣೀ ನದೀ।
ತಾಂ ತರ್ತುಕಾಮೋ ಯಚ್ಛಾಮಿ ಕೃಷ್ಣಾಂ ವೈತರಣೀಂ ತು ಗಾಮ್॥

'ಯಮದ್ವಾರ ಪಥದಲ್ಲಿ ಸಿಗುವ ಘೋರ ವೈತರಣೀ ನದಿಯ ತರಣಕ್ಕಾಗಿ ಈ ತಾರಕ ನೌಕೆಯೆನಿಸಿದ ಕೃಷ್ಣವರ್ಣದ ವೈತರಣೀ ಗೋವನ್ನು ದಾನಮಾಡುತ್ತಿದ್ದೇನೆ.' ಕಪ್ಪು ಗೋವು ಅಲಭ್ಯವಾದರೆ ಮಾತ್ರ ಇತರ ಗೋವನ್ನು ಸ್ವೀಕರಿಸಬಹುದು.

ಸುಖಮರಣಕ್ಕಾಗಿ ಅನಾಯಾಸ ಪ್ರಾಣೋತ್ಕ್ರಾಂತಿಗಾಗಿ ಉತ್ಕ್ರಾಂತಿ ಧೇನುದಾನದ ವಿಧಿಯಿದೆ.

ಅಸೂತ್ಕ್ರಾಂತೌ ಪ್ರವೃತ್ತಸ್ಯ ಸುಖೋತ್ಕ್ರಮಣ ಸಿದ್ಧಯೇ।
ತುಭ್ಯಮೇನಾಂ ಸಂಪ್ರದದೇ ಧೇನುಮುತ್ಕ್ರಾಂತಿ ಸಂಜ್ಞಿಕಾಮ್॥
ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ।
ಯಸ್ಮಾತ್ತಸ್ಮಾತ್ ಶುಭಂ ಮೇ ಸ್ಯಾತ್ ಇಹಲೋಕೇ ಪರತ್ರಚ॥

ಪ್ರಾಣೋತ್ಕ್ರಮಣದ ಈ ಸ್ಥಿತಿಯಲ್ಲಿ ಸುಖಮರಣಕ್ಕಾಗಿ ಉತ್ಕ್ರಾಂತಿ ಯೆಂಬ ಹೆಸರಿನ ಈ ಧೇನುವನ್ನು ದಾನ ನೀಡುತ್ತಿದ್ದೇನೆ.

ಗೋಶರೀರದಲ್ಲಿ ಹದಿನಾಕುಲೋಕ ನಿಂತಿದೆ. ಗೋದಾನಕ್ಕೆ ಸಕಲ ಭುವನ ದಾನದ ಫಲವಿದೆ. ಈ ಉತ್ಕ್ರಾಂತಿಧೇನು ದಾನದ ಪುಣ್ಯದಿಂದ ನನಗೆ ಇಹಲೋಕತ್ಯಾಗದ ವೇಳೆಗೂ ಪರಲೋಕದಲ್ಲೂ ಸುಖವೇ ಲಭಿಸುವಂತಾಗಲಿ''.

ಇವು ಮರಣ ಸನ್ನಿಹಿತವಾದಾಗ ಮುಮೂರ್ಷು ಮಾಡಬೇಕಾದ ಪಂಚಗೋದಾನಗಳು. ಇಂದು ಸಾಮಾನ್ಯವಾಗಿ ಮೃತರ ಮಕ್ಕಳು ಮಾಡುತ್ತಾರೆ. ಇದನ್ನೂ ಶಾಸ್ತ್ರ ಅನುಮತಿಸಿದೆ. ಧೇನುದಾನವನ್ನು ಕೊಡಲು ಅಶಕ್ತರಾದಲ್ಲಿ ಆಯಾ ಮಂತ್ರಗಳನ್ನು ಹೇಳಿಕೊಂಡು ಪ್ರತಿನಿಧಿಯಾಗಿ ದಕ್ಷಿಣೆ (ಗೋ ನಿಷ್ಕ್ರಯ) ಯನ್ನು ನೀಡುವುದನ್ನೂ ಧರ್ಮ ಗ್ರಂಥಗಳು ಅನುಮತಿಸಿವೆ. ವೈತರಣೀ ಗೋದಾನವನ್ನೊಂದನ್ನಾದರೂ ಪ್ರತ್ಯಕ್ಷಗೋದಾನವನ್ನೇ ನೀಡುವುದು ಅಸಾಧ್ಯವೇನಲ್ಲ. ಗೋದಾನದ ಮಹತ್ವವನ್ನೂ ಆಂತರ್ಯವನ್ನೂ ಅರಿತು ಈ ದಿಶೆಯಲ್ಲಿ ಪ್ರಯತ್ನಿಸಬೇಕು.

★★★

ಬರಿದೆ ಹೋಯಿತು ಹೋಯಿತು ಹೊತ್ತು

ಬರಿದೆ ಹೋಯಿತು ಹೋಯಿತು ಹೊತ್ತು ॥ಪ॥
ನರಜನ್ಮ ಸ್ಥಿರವೆಂದು ನಾನಿದ್ದೆನೊ ರಂಗ ॥ಅ॥

ಆಸೆ ಎಂಬುದು ಎನ್ನ ಕ್ಲೇಶ ಪಡಿಸುತಿದೆ
ಘಾಸಿಯಾದೆನೊ ಹರಿ ಶೇಷಶಾಯಿ
ವಾಸುದೇವನೆ ನಿನ್ನ ಧ್ಯಾನವ ಮಾಡದೆ
ನಾಶವಾಯಿತು ಜನ್ಮ ಮೋಸ ಹೋದೆನು ಕೃಷ್ಣ ॥1॥

ಸತಿಸುತರೆಂದೆಂಬ ಅತಿ ಭ್ರಾಂತಿಗೊಳಗಾಗಿ
ಮತಿಹೀನನಾದೆನೊ ಚ್ಯುತಿದೂರನೆ
ಸತತ ವಿಷಯದಿಂದ ಹತನಾದೆ ಮನವೆನ್ನ
ಗತಿಗೆಡಿಸುತಿದೆ ಲಕ್ಷ್ಮೀಪತಿ ಸರ್ವೋತ್ತಮನೆ ॥2॥

ಪರರ ಸೇವೆಯು ಮಾಡಿ ಪರರನ್ನೆ ಕೊಂಡಾಡಿ
ಮರುಳುತನದಲಿ ಮತಿಹೀನನಾದೆ
ನೆರೆನಂಬಿದೆನೊ ನಿನ್ನ ಕರುಣದಿಂದಲಿ ಎನ್ನ
ಮರೆಯದೆ ಸಲಹಯ್ಯ ಸಿರಿಪುರಂದರವಿಠಲ ॥3॥

-ಶ್ರೀ ಪುರಂದರದಾಸರು

ಅಪುತ್ರಸ್ಯ ಗತಿರ್ನಾಸ್ತಿ ?

-ವಿದ್ವಾನ್ ಸಿ.ಹೆಚ್. ಬದರಿನಾಥಾಚಾರ್ಯ
ವೇದಾಂತ ಅಧ್ಯಾಪಕರು
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು-28

''ಅಪುತ್ರಸ್ಯ ಗತಿರ್ನಾಸ್ತಿ'' - 'ಮಕ್ಕಳಿಲ್ಲದವನಿಗೆ ಸದ್ಗತಿ ಇಲ್ಲ' ಈ ಮಾತು ಪುರಾಣಗಳಲ್ಲಿ ಪ್ರಸಿದ್ಧ. ''ತ್ರಾತಾ ಯ ಏವ ನರಕಾತ್ ಸ ಹಿ ಪುತ್ರನಾಮಾ'' ಎಂದು ಸುಮಧ್ವವಿಜಯ ಮುಂತಾದ ಗ್ರಂಥಗಳಲ್ಲಿ ಹೇಳಿರುವಂತೆ ಪುತ್ ಎಂಬ ನರಕದಿಂದ ರಕ್ಷಿಸುವವನೇ ಪುತ್ರ. ಪುತ್ರನಿಲ್ಲದವನು ಈ ನರಕದಿಂದ ಪಾರಾಗಲು ಸಾಧ್ಯವಿಲ್ಲ .ಮಕ್ಕಳನ್ನು ಪಡೆದಾಗ ಪಿತೃಋಣದಿಂದ ಮುಕ್ತಿ.

ಸಂತಾನವಿಲ್ಲದ ಪಾಂಡುಚಕ್ರವರ್ತಿಋಷಿಗಳೊಂದಿಗೆ ದೇವಲೋಕವನ್ನು ಪ್ರವೇಶಿಸಲಾಗಲಿಲ್ಲ. ನಿಯೋಗಪದ್ಧತಿಯಿಂದ ಮಕ್ಕಳನ್ನು ಪಡೆಯಬೇಕಾಯಿತು. ದಶರಥ ರಾಜನು ಪುತ್ರಕಾಮೇಷ್ಟಿಯನ್ನು ಆಚರಿಸಿ ಮಕ್ಕಳನ್ನು ಪಡೆದನು.

'ಸಂತಾನಂ ಹಿ ಪರೋ ಧರ್ಮಃ' ಎಂದು ಮಹಾಭಾರತ ಹೇಳುತ್ತಿದೆ. ಜರತ್ಕಾರುವಿನ ಪಿತೃ ಪಿತಾಮಹರು ತಮ್ಮ ವಂಶದ ಸಂತಾನಕ್ಷಯದಿಂದ ಪರಿತಪಿಸುತ್ತಿದ್ದರು ಅವರ ಉದ್ಧಾರಕ್ಕಾಗಿ ಅಖಂಡ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಿದ್ದ ಜರತ್ಕಾರುವು ವಿವಾಹವಾಗಿ ಮಕ್ಕಳನ್ನು ಪಡೆದನು.

ಸಂತಾನವಿಲ್ಲದಿದ್ದಲ್ಲಿ ಸನಾತನವಾದ ಕುಲಧರ್ಮಗಳು ನಾಶವಾಗುವುವು. ವಂಶವಾಹಿನಿಯೇ ಸ್ಥಗಿತವಾಗುವುದು. ಮಕ್ಕಳಿಲ್ಲದಿದ್ದಲ್ಲಿ ಪಿಂಡಪ್ರದಾನಾದಿಗಳು ನಡೆಯದೇ ಕ್ರಿಯಾಲೋಪವುಂಟಾಗುವುದು. ಆದ್ದರಿಂದ ಮಕ್ಕಳನ್ನು ಪಡೆಯುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಸಂತಾನವಿಲ್ಲದವನಿಗೆ ಸದ್‌ಗತಿ ಇಲ್ಲವೆಂದು ಶಾಸ್ತ್ರಗಳ ಅಭಿಪ್ರಾಯವಲ್ಲ. ''ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ'' ಎಂಬ ಕೃಷ್ಣನ ಮಾತಿನಂತೆ ತನ್ನ ವರ್ಣ ಆಶ್ರಮಗಳಿಗೆ ವಿಹಿತವಾದ ಕರ್ತವ್ಯವನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವುದರಿಂದಲೇ ಮನುಷ್ಯನು ಸದ್ಗತಿಯನ್ನು ಹೊಂದುವನು. ಜೀವನು ಮೋಕ್ಷವನ್ನು ಹೊಂದಲು ಮಕ್ಕಳು ಕಾರಣರಲ್ಲ. ''ನಾನ್ಯ ಪಂಥಾ ವಿದ್ಯತೇಽಯನಾಯ'' ಶ್ರುತಿಯು ಇತರ ಮಾರ್ಗಗಳನ್ನು ನಿಷೇಧಿಸಿ ಕೇವಲ ತಾನು ಸಂಪಾದಿಸಿದ ಭಗವಂತನ ಜ್ಞಾನ, ಭಕ್ತಿ, ಪ್ರಸಾದವೇ ಮೋಕ್ಷಕಾರಣವೆಂದು ಸ್ಪಷ್ಟಪಡಿಸಿದೆ.

ಸ ಏವ ಪುತ್ರಸಂಸ್ಥಶ್ಚ ಪುತ್ರನಾಮಾ ಜನಾರ್ದನಃ । ತ್ರಾಣಾತ್ ಪೂತಿತ ಏವಾಸೌ ॥

ಇದು ಐತರೇಯ ಭಾಷ್ಯದ ಮಾತು. ದುರ್ಗಂಧಮಯವಾದ ನರಕದಿಂದ ರಕ್ಷಿಸುವವನು ಜನಾರ್ದನನೇ. ಆದ್ದರಿಂದ ಪುತ್ರರಲ್ಲಿದ್ದು ಪುತ್ರಶಬ್ದದಿಂದ ವಾಚ್ಯನಾಗಿರುವನು. ಇಂತಹ ಪರಮಾತ್ಮನ ಉಪಾಸನೆಯಿಂದಲೇ ನಾವು ಪುತ್ ಎಂಬ ನರಕದಿಂದ ಪಾರಾಗುವುದು ಸಾಧ್ಯ.

ಯಾವ ಉದ್ದೇಶದಿಂದ ಜೀವನು ಜನ್ಮ ತಾಳಿರುವನೊ ಆ ಉದ್ದೇಶ ನೆರವೇರದೇ ಅವನಿಗೆ ಸದ್ಗತಿ ಇಲ್ಲ. ಆದ್ದರಿಂದಲೇ ಪಾಂಡು ಚಕ್ರವರ್ತಿಗೆ ಬ್ರಹ್ಮಲೋಕವನ್ನು ಕುರಿತು ತೆರಳಲು ಸಾಧ್ಯವಾಗಲಿಲ್ಲ. ಭೀಮಸೇನ, ಅರ್ಜುನ, ಧರ್ಮರಾಜರಂತಹ ಉತ್ತಮ ಮಕ್ಕಳನ್ನು ಪಡೆಯುವ ಭಾಗ್ಯ ಪಾಂಡು ಚಕ್ರವರ್ತಿಯದಾಗಿತ್ತು. ಇಂತಹ ಮಕ್ಕಳನ್ನು ಪಡೆಯದೇ ಅವನಿಗೆ ಸದ್ಗತಿ ಇಲ್ಲ. ರುಕ್ಮಾಂಗದನ ಮಗ ಧರ್ಮಾಂಗದನಿಗೆ ಮಕ್ಕಳಿರಲಿಲ್ಲ. ಏಕಾದಶೀ ವ್ರತಾಚರಣೆಯ ಪುಣ್ಯದಿಂದ ಸದ್ಗತಿಯನ್ನು ಪಡೆದ, ತಂದೆ ತಾಯಿಯರನ್ನೂ ಉತ್ತಮ ಲೋಕಕ್ಕೆ ಕರೆದೊಯ್ದ. ಈ ಪ್ರಸಂಗವನ್ನು ಆಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಉದಾಹರಿಸಿ ಮಕ್ಕಳನ್ನು ಪಡೆಯದಿದ್ದರೂ ಸದ್ಗತಿಯನ್ನು ಹೊಂದಲು ಸಾಧ್ಯವಿದೆ ಎಂದು ತಿಳಿಸಿರುವರು.

''ಅನಪತ್ಯೋऽಪಿ ಸದ್ಧರ್ಮಾ ಲೋಕಜಿನ್ನಾತ್ರ ಸಂಶಯಃ''

- ಭಾಗವತ ತಾತ್ಪರ್ಯ

ಮಕ್ಕಳಿಲ್ಲದವನೂ ತನ್ನ ಧರ್ಮದ ಆಚರಣೆಯಿಂದ ಉತ್ತಮಲೋಕವನ್ನು ಹೊಂದುವನು.

ಜರತ್ಕಾರುವು ತನ್ನ ವಂಶದ ಪಿತೃಪಿತಾಮಹರ ತೃಪ್ತಿಗಾಗಿ ಮಕ್ಕಳನ್ನು ಪಡೆದ. ಆ ಋಷಿ ಮದುವೆಯಾಗದಿದ್ದಲ್ಲಿ ಆಸ್ತಿಕನಂತಹ ಉತ್ತಮ ಜ್ಞಾನಿ ಆ ವಂಶದಲ್ಲಿ ಹುಟ್ಟುವ ಅವಕಾಶವೇ ತಪ್ಪುತ್ತಿತ್ತು.

ಪುನ್ನಾಮ್ನೊ ನರಕಾದ್ ಯಸ್ಮಾತ್ ತ್ರಾಯತೇ ಪಿತರಂ ಸುತಃ
ತಸ್ಮಾತ್ಪುತ್ರ ಇತಿ ಪ್ರೋಕ್ತಃ ಸ್ವಯಮೇವ ಸ್ವಯಂಭುವಾ - ಮನುಸ್ಮೃತಿ

ಪರಸ್ತ್ರೀಗಮನ, ಕ್ರೌರ್ಯ, ಫಲವೃಕ್ಷಗಳನ್ನು ತುಂಡರಿಸುವುದು ಇವೇ ಮುಂತಾದ ಹದಿನಾರು ವಿಧ ಪಾಪ ಕಾರ್ಯಗಳಿಂದ ಪುತ್ ಎಂಬ ನರಕದ ಪ್ರಾಪ್ತಿ ಯಾಗುವುದು. ಇಂತಹ ನರಕದಿಂದ ತಂದೆಯನ್ನು ಉದ್ಧಾರ ಮಾಡುವ ಮಗನನ್ನು ಪುತ್ರ ಎನ್ನುವರು.

ಬುದ್ಧಿಮಾನ್ ಜ್ಞಾನ ಸಂಪನ್ನಃ ತಪಸ್ವೀ ವಗ್ವಿದಾಂವರಃ ।
ಸರ್ವ ಕರ್ಮಸು ಸನ್ ಧೀರೋ ವೇದಾಧ್ಯಯನ ತತ್‌ಪರಃ ॥

ವಿಷ್ಣು ಧ್ಯಾನ ಪರೋ ನಿತ್ಯಂ ಶಾಂತೋ ದಾಂತಃ ಸುಹೃದ್ ಸದಾ
ಪಿತೃಮಾತೃಪರೋ ನಿತ್ಯಂ ಸರ್ವ ಸ್ವಜನ ವತ್ಸಲಃ
ಏವಂ ಗುಣೈಃ ಸುಸಂಯುಕ್ತಃ ಸುಪುತ್ರಃ ಸುಖದಾಯಕಃ॥

ನಿರಂತರ ಶಾಸ್ತ್ರಾಧ್ಯಯನದಿಂದ ಜ್ಞಾನವನ್ನು ಸಂಪಾದಿಸಿರುವ, ತಪಸ್ವಿಯಾದ, ವೇದಾಧ್ಯಯನದಲ್ಲಿ ಆಸಕ್ತನಾದ, ಭಗವಂತನಲ್ಲಿ ಸತತ ಧ್ಯಾನಶೀಲನಾದ, ತಂದೆ ತಾಯಿಗಳಲ್ಲಿ ಭಕ್ತಿಸಂಪನ್ನನಾದ, ಇಂದ್ರಿಯ ನಿಗ್ರಹಾದಿಗಳನ್ನು ಹೊಂದಿರುವವನೇ ಸತ್‌ಪುತ್ರನೆನಿಸುವನು ಎಂದು ಪದ್ಮಪುರಾಣದಲ್ಲಿ ಹೇಳಿದೆ. ಇಂತಹ ಮಗನು ಮಾತ್ರ ಪುತ್ ಎಂಬ ನರಕದಿಂದ ತಂದೆ ತಾಯಿಯರನ್ನು ರಕ್ಷಿಸುವನು.

ದಿತಿಯನ್ನು ಕುರಿತು ಕಶ್ಯಪರ ವಚನ ''ನಿನ್ನ ಮಗನಾದ ಹಿರಣ್ಯಕಶಿಪುವಿಗೆ ಸಜ್ಜನರಿಗೆ ಸಮ್ಮತನಾದ ಪರಿಶುದ್ಧ ಕೀರ್ತಿವಂತನಾದ ಮಗನು ಹುಟ್ಟುವನು.'' ಆ ಸಂದರ್ಭದಲ್ಲಿ ಆಚಾರ್ಯರು ಉದಾಹರಿಸಿರುವ ಮಾತು. ''ಸ್ವತಃ ಸದ್ಗತಿಯೋಗ್ಯಸ್ಯ ಪುತ್ರಾದೇರ್ಹೇತುತಾ ಭವೇತ್''

ವಿಷ್ಣು ಭಕ್ತನ ಸದ್ಗತಿಗೆ ಮಾತ್ರ ಮಕ್ಕಳು ಕಾರಣರಾಗಬಲ್ಲರು ವಿಷ್ಣುಭಕ್ತಿರಹಿತನಿಗಲ್ಲ. ಆಚಾರ್ಯರ ವಾಕ್ಯವನ್ನು ವಿವರಿಸುವ ವಿಜಯಧ್ವಜತೀರ್ಥರ ವಾಕ್ಯ ಈ ತೆರನಾಗಿದೆ.

''ಅನಾದಿರ್ಭಕ್ತಿಲಕ್ಷಣ ಯೋಗ್ಯ ತೌಷಧೇನ ದುಃಸಂಗಲಕ್ಷಣ
ದುರ್ವರ್ಣಮಪನೀಯ ಪುತ್ರಾದಿಃ ಸಚ್ಚೇತನಸ್ಯ ಸದ್ಗತಿಹೇತುಃ ಸ್ಯಾತ್''

ಅನಾದಿಯಾದ ಭಕ್ತಿರೂಪವಾದ ಔಷಧದಿಂದ ದುಷ್ಟಸಂಗದಿಂದ ಉಂಟಾದ ದೋಷರೂಪ ದುರ್ಮರಣವನ್ನು ಉಚ್ಚಾಟಿಸುವ ಮೂಲಕ ಸಾತ್ವಿಕಚೇತನದ ಸದ್ಗತಿಗೆ ಮಕ್ಕಳು ಕಾರಣರಾಗುವರು.

ಸನಕಾದ್ಯಾ ನಾರದಶ್ಚ ಋಭುರ್ಹಂಸೋಽರುಣಿರ್ಯತಿಃ ।
ನೈತೇ ಗೃಹಾನ್ ಬ್ರಹ್ಮಸುತಾ ಹ್ಯವಸನ್ನೂರ್ಧ್ವರೇತಸಃ ॥

ನಾರದರು ಸನಕಸನಂದನರೇ ಮೊದಲಾದ ಬ್ರಹ್ಮದೇವರ ಮಕ್ಕಳೂ ಗೃಹಸ್ಥಾಶ್ರಮವನ್ನು ಸ್ವೀಕರಿಸದೇ ಸಂನ್ಯಾಸಿಗಳಾಗಿ ಸದ್ಗತಿಯನ್ನು ಹೊಂದಿರುವರು.

ಅನರ್ಹಾಯಾಸ್ತ್ವಯಾಜ್ಞಪ್ತಾ ಕೈಕೇಯ್ಯಾ ಅಪಿ ಸದ್ಗತಿಃ
ಸೂತ್ವಾತು ಭರತಂ ನೈಷಾ ಗಚ್ಛೇತ ನಿರಯಾನಿತಿ ॥ -ತಾ. ನಿರ್ಣಯ 9/96

ಭರತನಂತಹ ಮಗನನ್ನು ಪಡೆದ ಇವಳು (ಕೈಕೇಯಿ) ನರಕವನ್ನು ಹೊಂದಬಾರದು, ಎಂಬ ನಿನ್ನ ಆದೇಶದಂತೆ ಅನರ್ಹಳಾಗಿದ್ದರೂ ಸದ್ಗತಿಯನ್ನು ನೀಡಿರುವೆನು. ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳಲಾಗಿದೆ. ಈ ವಾಕ್ಯದಿಂದ ಸತ್ ಪುತ್ರನಿಂದ ದುಷ್ಟನಾದ ತಂದೆತಾಯಿಯರೂ ಸದ್ಗತಿಯನ್ನು ಹೊಂದಲು ಸಾಧ್ಯವೆಂದು ಮೇಲ್ನೋಟಕ್ಕೆ ತೋರುವುದು, ನಿಕೃತಿ ಮತ್ತು ಮಂಥರೆಯರ ಪ್ರೇರಣೆಯಿಂದಾಗಿ ಕೈಕೇಯಿಯು ರಾಮರಾಜ್ಯಾಭಿಷೇಕವನ್ನು ತಡೆದಳು. ಭರತನನ್ನು ಮಗನನ್ನಾಗಿ ಪಡೆದ ಪುಣ್ಯದಿಂದ ಅಸ್ಥಿರವಾದ ಸ್ವರ್ಗಲೋಕವು ಮಾತ್ರ ಪ್ರಾಪ್ತವಾಯಿತು. ಅನಂತರ ಸ್ವಾಭಾವಿಕವಾಗಿಯೇ ಉತ್ತಮಜೀವಿಯಾದ ಕೈಕೇಯಿಗೆ ಪಶ್ಚಾತ್ತಾಪವಾಯಿತು. ಪರಮಾತ್ಮನಲ್ಲಿ ಉತ್ತಮವಾದ ಭಕ್ತಿಯನ್ನು ಮಾಡಿ ಪಾಪ ಪರಿಹಾರದ ನಂತರ ಸ್ಥಿರಲೋಕವನ್ನು ಹೊಂದುವಳು.

'ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ' ಶಾಸ್ತ್ರಾಧ್ಯಯನವನ್ನು ಮಾಡಿದ ವ್ಯಕ್ತಿಯು ತನ್ನ ಶಿಷ್ಯಪರಂಪರೆ ನಿಲ್ಲದಂತೆ ನಿರಂತರವಾಗಿ ಅಧ್ಯಾಪನ ಕಾರ್ಯದಲ್ಲಿ ತೊಡಗಿರಬೇಕು. ಎಂದು ಈ ವ್ಯಾಕದ ಅಭಿಪ್ರಾಯ. ಗುರುಕುಲವಾಸದ ನಂತರ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಪ್ರಜಾಸಂತತಿಯನ್ನು ಮುಂದುವರಿಸಬೇಕು ಎಂದೂ ಈ ಮಂತ್ರದ ಮತ್ತೊಂದು ಅಭಿಪ್ರಾಯವಾಗಿದೆ. ಆದರೆ ''ಸತ್ಯಂ ವದ । ಸತ್ಯಾನ್ನ ಪ್ರಮದಿತವ್ಯಮ್'' ಎಂದು ಪುನಃ ಪುನಃ ಹೇಳಿರುವಂತೆ ಇದನ್ನು ಹೇಳಿಲ್ಲ.

ಭೀಷ್ಮಾಚಾರ್ಯರು ಬ್ರಹ್ಮಚರ್ಯವ್ರತದ ಪ್ರತಿಜ್ಞೆಯನ್ನು ಮಾಡಿದಾಗ ದೇವತೆಗಳೂ ಪುಷ್ಪವೃಷ್ಟಿಯನ್ನು ಸುರಿಸಿ ಅದನ್ನು ಸ್ವಾಗತಿಸಿದ್ದಾರೆ. ಜ್ಞಾನ ಭಕ್ತಿಗಳಿಂದಲೇ ಭೀಷ್ಮಾಚಾರ್ಯರು ಸದ್ಗತಿಯನ್ನು ಹೊಂದಿರುವರು.

ಗೃಹಸ್ಥಾಶ್ರಮಿಯು ಸಂತಾನವನ್ನು ಪಡೆಯುವುದು ಕರ್ತವ್ಯವಾಗಿದೆ. ಆದರೆ ಪಡೆಯದಿದ್ದರೂ ಅನರ್ಥವೇನೂ ಸಂಭವಿಸಲಾರದು '' ಅಪುತ್ರಸ್ಯ ಗತಿರ್ನಾಸ್ತಿ'' ಎಂಬ ಶಾಸ್ತ್ರವಾಕ್ಯವು ಕೇವಲ ಪ್ರಾಶಸ್ತ್ಯ ಬೋಧಕವಾಗಿದೆ. ಮಕ್ಕಳನ್ನು ಪಡೆಯದಿದ್ದರೆ ಸದ್ಗತಿಯೇ ಇಲ್ಲವೆಂದು ಆ ವಾಕ್ಯದ ಅಭಿಪ್ರಾಯವಲ್ಲ.

''ಕ್ರಿಯಾಲೋಪೋ ನ ಕರ್ತವ್ಯಃ'' ಗರುಡ ಪುರಾಣದ ವಚನವಿದು. ಮನುಷ್ಯ ಮೃತನಾದ ನಂತರ ಔರ್ಧ್ವದೇಹಿಕಕ್ರಿಯೆ ಶ್ರಾದ್ಧ ಇವುಗಳು ಯಾವ ಕಾರಣದಿಂದಲೂ ನಡೆಯದೇ ಇರಬಾರದು. ಈ ಕ್ರಿಯೆಗಳು ನಡೆಯದಿದ್ದಲ್ಲಿ ಆ ವಂಶದವರಿಗೇ ಬಹಳಷ್ಟು ಅನರ್ಥಗಳಾಗುವುದು. ಮೃತನಿಗೆ ಸದ್ಗತಿಯಾಗದೆ ಪ್ರೇತನಾಗಿಯೇ ಸಂಚರಿಸುವನು.

ಕ್ರಿಯಾ ಕರ್ಮ ವಿಹೀನಾಶ್ಚ ಪ್ರಾಪ್ನುವಂತಿ ಪಿಶಾಚತಾಮ್ ।
ಪ್ರೇತೋದ್ಧಾರಶ್ಚ ಕರ್ತವ್ಯಃ ತೇಷಾಂ ಸುಗತಿಮಿಚ್ಛತಾ॥
ಅಬ್ದದೀಕ್ಷಾದಿ ಲೋಪೇನ ಪ್ರೇತಾ ಯಾತಾ ಪಿಶಾಚತಾಮ್ ।
ಸ್ವಜನಾನ್ ಬಾಧಮಾನಾಸ್ತೇ ಚರಂತೀತಿ ಖಲು ಸ್ಮೃತಿಃ॥
ಅವಮಾನಸ್ತು ಮಂತ್ರಾಣಾಂ ಪ್ರೇತತ್ವೇ ಹೇತುರುಚ್ಯತೇ ।
ಕರ್ಮಲೋಪಂ ಪಿತೃಭ್ಯಶ್ಚ ತದ್ದೋಷೋ ವಂಶಹಾನಿಕೃತ್ ॥

ಯಾವ ಮೃತನಿಗೆ ಔರ್ಧ್ವದೇಹಿಕ ಕ್ರಿಯೆಗಳು ಆಗಿಲ್ಲ ಆ ಜೀವನು ಪಿಶಾಚಿಯಾಗಿ ಜನ್ಮ ತಾಳುವನು. ಇವನಿಗೆ ಸದ್ಗತಿಯನ್ನು ಬಯಸುವವರು ಪಿಶಾಚಾವಸ್ಥೆಯಿಂದ ಬಿಡುಗಡೆಗಾಗಿ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಆಚರಿಸಬೇಕು. ಇಲ್ಲದಿದ್ದಲ್ಲಿ ಆ ಮೃತನು ತನ್ನ ಬಂಧುಗಳನ್ನು ಅನೇಕ ಪ್ರಕಾರವಾಗಿ ಬಾಧಿಸುವನು. ವೇದ ಮಂತ್ರಗಳನ್ನು ಗೌರವಿಸುವುದೂ ಕರ್ತವ್ಯ. ಅದರ ತಿರಸ್ಕಾರದಿಂದಲೂ ಪ್ರೇತತ್ವವನ್ನು ಪಡೆಯುವನು. ಕ್ರಿಯಾಲೋಪದಿಂದ ವಂಶಚ್ಛೇದವೇ ಉಂಟಾಗುವುದು.

ಕ್ರಿಯೆಯನ್ನು ಯಾರು ಮಾಡಬೇಕು ?

ತಂದೆ ತಾಯಿಯರ ಅಂತ್ಯಕ್ರಿಯೆ ಶ್ರಾದ್ಧಾದಿಗಳನ್ನು ಮಾಡುವುದು ಮಕ್ಕಳ ಕರ್ತವ್ಯವಾಗಿದೆ.

ಮಾತುಃ ಪಿತುಃ ಪ್ರಕುರ್ವೀತ ಶ್ರಾದ್ಧಂ ಯಸ್ತ್ವೌರಸಸುತಃ
ಜ್ಯೇಷ್ಠ ಪುತ್ರನಿಗೆ ಶ್ರಾದ್ಧವನ್ನು ಮಾಡುವ ಅಧಿಕಾರ.
ಪುತ್ರೇಷು ವಿದ್ಯಮಾನೇಷು ನಾನ್ಯೋ ವೈ ಕಾರಯೇತ್ ಸ್ವಧಾಮ್'
ಮಕ್ಕಳು ಇರುವಾಗ ಮತ್ತೊಬ್ಬನಿಗೆ ಕ್ರಿಯಾಧಿಕಾರವಿಲ್ಲ.
ಕ್ಷೇತ್ರಜೋ ದತ್ತಕಃ ಕ್ರೀತಃ ಕೃತ್ರಿಮೋ ದತ್ತ ಏವ ಚ
ಅಪವಿದ್ಧಶ್ಚ ಕುರ್ವೀತ ಪೂರ್ವಾಭಾವೇ ಪರಃ ಪರಃ॥

ಸ್ವಂತ ಮಗನು ಇಲ್ಲದಿದ್ದಲ್ಲಿ ದತ್ತಕ ಪುತ್ರನು, (ದಾನವಾಗಿ ಸ್ವೀಕರಿಸಲ್ಪಟ್ಟವನು) ಕ್ರೀತನಾದ ಪುತ್ರನು, ತಾನಾಗಿಯೇ ಮನೆಗೆ ಬಂದು ನೀವೇ ತಂದೆ ತಾಯಿ ಎಂದು ಸೇರಿದ ದತ್ತ ಪುತ್ರನೂ ಮತ್ತು ಅಪವಿದ್ಧ ಪುತ್ರನು (ಸ್ವಂತ ತಂದೆ ತಾಯಿಗಳಿಂದ ಪರಿತ್ಯಕ್ತನಾಗಿ ಅನಾಥನಾಗಿ ಬಂದು ಸೇರಿದವನು) ಕ್ರಮವಾಗಿ ಇವರೆಲ್ಲರೂ ಅಧಿಕಾರಿಗಳಾಗುವರು.

ಪಿತುಃ ಪುತ್ರೇಣ ಕರ್ತವ್ಯಾಃ ಪಿಂಡದಾನೋದಕಕ್ರಿಯಾಃ।
ಪುತ್ರಾಭಾವೇ ತು ಪತ್ನೀ ಸ್ಯಾತ್ ಪತ್ನ್ಯಭಾವೇ ತು ಸೋದರಾಃ॥

ಮೇಲೆ ಹೇಳಿದ ಯಾವ ರೀತಿಯ ಮಕ್ಕಳೂ ಇಲ್ಲದಿದ್ದಲ್ಲಿ ಪತ್ನಿಯು ಪಿಂಡದಾನಾದಿಗಳನ್ನು ಮಾಡಬೇಕು. ಪತ್ನಿಯೂ ಇಲ್ಲದಿದ್ದಲ್ಲಿ ಸೋದರರು ಅಧಿಕಾರಿಗಳಾಗುವರು.

ಪುತ್ರಃ ಪೌತ್ರಶ್ಚ ತತ್ ಪುತ್ರಃ ಪುತ್ರಿಕಾಪುತ್ರ ಏವಚ
ಪತ್ನೀ ಭ್ರಾತಾ ಚ ತಜ್ಜಶ್ಚ ಪಿತಾ ಮಾತಾ ಸ್ನುಷಾ ತಥಾ
ಭಗಿನೀ ಭಾಗಿನೇಯಶ್ಚ ಸಪಿಂಡಃ ಸೋದಕಸ್ತಥಾ
ಅಸನ್ನಿಧಾನೇ ಪೂರ್ವೇಷಾಮುತ್ತರೇ ಪಿಂಡದಾಸ್ಮೃತಾಃ॥

ಮಗ, ಮೊಮ್ಮಗ, ಮರಿಮಗ, ಹೆಂಡತಿ, ಸಹೋದರ, ಸಹೋದರರ ಮಗ, ತಂದೆ, ತಾಯಿ, ಸೊಸೆ, ತಂಗಿ, ತಂಗಿಯ ಮಗ ಸಪಿಂಡರು ಇವರೆಲ್ಲರೂ ಕ್ರಮವಾಗಿ ಶಾದ್ಧಾಧಿಕಾರಿಗಳು.

ಸರ್ವೇಷಾಂ ಪುತ್ರಹೀನಾನಾಂ ಮಿತ್ರಃ ಪಿಂಡಂ ಪ್ರದಾಪಯೇತ್।
ಕ್ರಿಯಾ ಲೋಪೋ ನ ಕರ್ತವ್ಯಃ ಸರ್ವಾಭಾವೇ ಪುರೋಹಿತಃ

ಸ್ನೇಹಿತನೂ ಪಿಂಡದಾನಾಧಿಕಾರಿಯಾಗುವನು. ಶಿಷ್ಯರೂ ಗುರುಗಳಿಗೆ ಅಂತ್ಯಕ್ರಿಯೆ ಶ್ರಾದ್ಧಾದಿಗಳನ್ನು ಮಾಡಬಹುದು. ಯಾರೂ ಇಲ್ಲದಿದ್ದಾಗ ಪುರೋಹಿತರೂ ಅಧಿಕಾರಿಗಳಾಗುವರು.

''ಅನಾಥ ಪ್ರೇತ ಸಂಸ್ಕಾರಾತ್ ಕೋಟಿ ಯಜ್ಞಫಲಂ ಲಭೇತ್ ॥

ಅನಾಥವಾದ ಪ್ರೇತ ಸಂಸ್ಕಾರದಿಂದ ಕೋಟಿಯಜ್ಞದ ಫಲವು ಪ್ರಾಪ್ತವಾಗುವುದು.

★★★

ಮಗನಿಂದ ಗತಿಯುಂಟೇ ಜಗದೊಳಗೆ

ಮಗನಿಂದ ಗತಿಯುಂಟೆ ಜಗದೊಳಗೆ ॥ಪ॥
ನಿಗಮಾರ್ಥಸಾರವಿಚಾರದಿಂದಲ್ಲದೆ । ।ಅ॥

ಸುತರಿಲ್ಲದವರಿಗೆ ಗತಿಯಿಲ್ಲವೆಂಬುದು
ಕೃತಕಶಾಸ್ತ್ರವು ಲೌಕಿಕಭಾವಕೆ
ಕ್ಷಿತಿಯೊಳು ಬಾಡದ ಆದಿಕೇಶವ ಜಗ-
ತ್ಪತಿಯ ಧ್ಯಾನಿಪಗೆ ಸದ್ಗತಿಯಿರದೆ ಹೋಹುದೆ ॥

-ಶ್ರೀ ಕನಕದಾಸರು

ಮೃತ್ಯುವಿನ ಘಂಟೆ ಬಾರಿಸುತಿದೆ ಎಚ್ಚರದಿ ಕೇಳಿ !

ಡಾ। ಎ.ವಿ. ನಾಗಸಂಪಿಗೆ
ನಿರ್ದೇಶಕರು,
ಪೂರ್ಣಪ್ರಜ್ಞಸಂಶೋಧನ ಮಂದಿರ,
ಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು-28

ಮೃತ್ಯುವಿನ ಘಂಟೆ ಆಗಾಗ ಬಾರಿಸುತ್ತದೆ. ನಾವು ಕಿವಿಗೊಟ್ಟು ಎಚ್ಚರದಿ ಆಲಿಸಬೇಕಿದೆ. 'ಮಲಗಿದವರನ್ನು ಎಬ್ಬಿಸಬಹುದು. ಮಲಗಿದಂತೆ ನಟಿಸುವವರನ್ನು ಎಬ್ಬಿಸಲಾಗದು' ಎಂಬ ಗಾದೆಯಂತೆ ಕೇಳಲೇಬೇಕಾದ ಧ್ವನಿಗೆ ಹುಟ್ಟು ಕಿವುಡರಂತೆ ವರ್ತಿಸುವ ನಮಗೆ ಜ್ಞಾನದ ಬೆಳಕು ಹರಿದುಬರುವುದು ಕಲ್ಪನಾತೀತ. ಆದರೂ ನಿದ್ದೆಯ ನಡುವೆ ಎಚ್ಚೆತ್ತು ಒಳ್ಳೆಯದನ್ನು ಆಲಿಸುವ ಮನಃಪ್ರವೃತ್ತಿಯನ್ನು ತೋರಿಸುವವರಿಗೆ ಇಲ್ಲಿದೆ ಹೊಸ ಬೆಳಕು. ಇದರಿಂದ ಎಚ್ಚೆತ್ತವರು ಕಟ್ಟಬಹುದು ಪರಲೋಕಕ್ಕೆ ಬುತ್ತಿ.

ಅಂತ್ಯಕಾಲ ಒದಗಿದಾಗ ಹೆಂಡತಿ ಮಕ್ಕಳು ಐಶ್ವರ್ಯ ದೇಹಮೊದಲಾದವುಗಳ ಮೇಲೆ ಅಭಿಮಾನ ತೊರೆದು ಪುಣ್ಯತೀರ್ಥಗಳಿಗೆ ಸಾಧನೆಗೆ ತೆರಳಬೇಕು ಎನ್ನುತ್ತಾರೆ ಶುಕಮುನಿಗಳು-

ಅಂತಕಾಲೇತು ಪುರುಷಃ ಆಗತೇ ಗತಸಾಧ್ವಸಃ ।
ಛಿಂದ್ಯಾದಸಂಗ ಶಸ್ತ್ರೇಣ ಸ್ಪೃಹಾಂ ದೇಹೇಽನು ಯೇ ಚ ತಮ್ ॥

ಅಂತ್ಯಕಾಲವನ್ನು ಗುರುತಿಸಿದ ಸಾಧಕನು ಮನೆಯಲ್ಲಿ ಮರಣವನ್ನು ಸ್ವಾಗತಿಸದೆಯೇ ಬೇರೊಂದು ಪವಿತ್ರಕ್ಷೇತ್ರದಲ್ಲಿ ಭಗವದಾರಾಧನೆಯೊಂದಿಗೆ ದೇಹವನ್ನು ತೊರೆಯಬೇಕೆನ್ನುತ್ತಾರೆ ಜಗದ್ಗುರು ಶ್ರೀಮಧ್ವಾಚಾರ್ಯರು-

ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತ್ವತಿಧರ್ಮದಾ ।
ಗತ್ವೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹತ್ಫಲಮಿತ್ಯಜಃ ॥ *(ಮ.ತ.ನಿ. 32.15)*

ಮರಣದ ಸೂಚನೆಗಳನ್ನು ದೇವತೆಗಳು ನೀಡುತ್ತಾರೆ. ಪುರಾಣಗ್ರಂಥಗಳು ಈ ಅಪೂರ್ವ ಪ್ರಮೇಯದ ಬಗ್ಗೆ ಬೆಳಕು ನೀಡಿವೆ. ಶ್ರೀಮದ್ಭಾಗವತ, ಲಿಂಗಪುರಾಣ ಮಾರ್ಕಂಡೇಯ ಪುರಾಣ, ವಾಯುಪುರಾಣ, ಸುಶ್ರುತಸಂಹಿತಾ, ರಾಮಾಯಣ ಮೊದಲಾದ ಗ್ರಂಥಗಳಲ್ಲಿ ಈ ಬಗ್ಗೆ ಸಂದರ್ಭೋಚಿತ ವಿವರಣೆ ಇದೆ. ಐತರೇಯ, ಆರಣ್ಯಕವೂ ಈ ಬಗ್ಗೆ ಸ್ಪುಟವಾದ ಮಾರ್ಗದರ್ಶನ ನೀಡಿದೆ. ಇದೆಲ್ಲವನ್ನು ಒಂದಿಲ್ಲ ಒಂದು ದಿನ ಮರಣವನ್ನು ಸ್ವಾಗತಿಸಲೇ ಬೇಕಾದ ಸಾಧಕನು ಅರಿಯುವುದು ಅನಿವಾರ್ಯವಾಗಿದೆ.

ಐತರೇಯದ ಬೆಳಕು –

ಸೂರ್ಯಮಂಡಲದಲ್ಲಿರುವ ಪ್ರದ್ಯುಮ್ನನು ದೇಹದಲ್ಲಿ ಬಲಗಣ್ಣಿನಲ್ಲಿರುವನು. ಈ ಪ್ರದ್ಯುಮ್ನನು ಹೃದಯದಲ್ಲಿರುವ ಅನಿರುದ್ಧನಿಂದ ಅಭಿನ್ನನಾಗಿರುವನು. ಜೀವನನ್ನು ಧರಿಸುವ ಪ್ರಮುಖ ಕಾರ್ಯವನ್ನು ಈ ಎರಡು ರೂಪಗಳು ಮಾಡುವುದರಿಂದ ಈ ಎರಡೂ ರೂಪಗಳು ಅಭಿನ್ನವೆಂದು ವ್ಯವಹರಿಸಲಾಗಿದೆ. ಈ ಎರಡು ರೂಪಗಳು ಯಾವಾಗ ದೇಹವನ್ನು ತೂರೆಯುವವೋ ಆಗ ಮರಣದ ಸೂಚನೆಗಳು ಕಾಣಿಸುತ್ತವೆ.

ಎಚ್ಚರದಲ್ಲಿ ಕಾಣುವ ಮೃತ್ಯುವಿನ ಸೂಚನೆಗಳು –

1. ಸೂರ್ಯನು ಚಂದ್ರನಂತೆ ಕಾಣುವನು, ಅವನಲ್ಲಿರುವ ಕಿರಣಗಳು ಅನುಭವಗೋಚರವಾಗದಿರುವುದು.
2. ಆಗಸವು (ಅಂತರಿಕ್ಷವು) ಕೆಂಬಣ್ಣವುಳ್ಳದ್ದಾಗಿ ಕಾಣಿಸುವುದು.
3. ಗುದದ್ವಾರವು ತೆರೆದುಕೊಳ್ಳುವುದು.
4. ಕಾಗೆಯ ಗೂಡಿನಂತೆ ನೆತ್ತಿಯು ದುರ್ಗಂಧ ಉಳ್ಳದ್ದಾಗಿ ಅನುಭವ ಬರುವುದು.
5. ಸೂರ್ಯನು ಛಿದ್ರ ಉಳ್ಳವನಂತೆ ಕಾಣಿಸುವುದು.
6. ತನ್ನ ನೆರಳು ತುಂಡಾದಂತೆ ಕಾಣಿಸುವುದು.
7. ಕನ್ನಡಿ ಮೊದಲಾದವುಗಳಲ್ಲಿ ತನ್ನ ತಲೆಯನ್ನು ಕಾಣದಿರುವುದು ಅಥವಾ ವಿಕೃತಾಂಗ ಉಳ್ಳವನಾಗಿ ನೋಡುವುದು.
8. ಕಣ್ಣುಗುಡ್ಡೆಗಳು ವಕ್ರ ಹಾಗು ವಿರೂಪವಾಗಿ ಕಾಣುವುದು.
9. ಎರಡು ಕಣ್ಣುಗಳನ್ನು ಮುಚ್ಚಿ ಬೆರಳಿನಿಂದ ಮೇಲೆ ಒತ್ತಿದಾಗ ಬೆಳಕಿನ ಉಂಡೆಗಳು ಬಿದ್ದಂತೆ ಅನುಭವ ಬರುವುದು. ಇಂತಹ ಅನುಭವ ಬಾರದಿರುವುದು.
10. ಎರಡು ಕಿವಿಗಳನ್ನು ಮುಚ್ಚಿದಾಗ ಅಗ್ನಿಯು ಪ್ರಜ್ವಲಿಸುವಂತೆ ಅಥವಾ ರಥವು ಚಲಿಸುವಂತೆ ಶಬ್ದವನ್ನು ಕೇಳದಿರುವುದು.
11. ನವಿಲಿನ ಕುತ್ತಿಗೆಯಂತೆ ಬೆಂಕಿಯು ನೀಲ ಬಣ್ಣವುಳ್ಳದ್ದಾಗಿ ಕಾಣಿಸುವುದು.
12. ಮೋಡಗಳ ಸಮೂಹದಲ್ಲಿ ಇತರರು ಮಿಂಚನ್ನು ಕಾಣುವಾಗ ತಾನು ಕಾಣದಿರುವುದು.
13. ಇತರರಿಗೆ ಮಿಂಚು ಕಾಣದಿರುವಾಗ ತನಗೆ ಮಾತ್ರವೇ ಕಾಣಿಸುವುದು. ಅಥವಾ ಮೋಡವಿಲ್ಲದ ಸಮಯದಲ್ಲಿ ಮಿಂಚನ್ನು ಕಾಣುವುದು.

14. ಮೋಡದಿಂದ ಕವಿದ ಆಗಸದಲ್ಲಿ ಇತರರಿಗೆ ಗೋಚರವಾಗದ ಬಿಸಿಲಿನ ಬೇಗೆಯನ್ನು ಕಾಣುವುದು.
15. ಭೂಮಿಯು ಸುಡುವಂತೆ ಕಾಣಿಸುವುದು.

ಸ್ವಪ್ನದಲ್ಲಿ ಕಾಣುವ ಮರಣಸೂಚನೆಗಳು -

1. ಕಪ್ಪುಬಣ್ಣದ ಕಪ್ಪುದಂತವುಳ್ಳ ವ್ಯಕ್ತಿಯನ್ನು ಕನಸಿನಲ್ಲಿ ನೋಡುವುದು.
2. ಹಂದಿ ಅಥವಾ ಕೋತಿಯು ಆಕ್ರಮಣ ಮಾಡುವುದು.
3. ಗಾಳಿಯು ಹಾರಿಸಿಕೊಂಡುಹೋಗುವುದು.
4. ಚಿನ್ನವನ್ನು ತಿಂದು ಕಾರುವುದು, (ವಮನ ಮಾಡುವುದು)
5. ಜೇನುತುಪ್ಪವನ್ನು ತಿನ್ನುವುದು.
6. ಕಮಲದನಾಳಗಳನ್ನು ಭಕ್ಷಿಸುವುದು.
7. ಕೆಂದಾವರೆಯನ್ನು ತಲೆಯಲ್ಲಿ ಧರಿಸುವುದು.
8. ಕತ್ತೆಹಂದಿ ಮೊದಲಾದ ಪ್ರಾಣಿಗಳು ಎಳೆಯುವ ರಥದಲ್ಲಿ ಪ್ರಯಾಣಮಾಡುವುದು.
9. ಕಪ್ಪುಕರುವಿನಿಂದ ಕೂಡಿದ ಕಪ್ಪುಹಸುವನ್ನು ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಹೊಡೆದುಕೊಂಡು ಹೋಗುವುದು.

ಐತರೇಯ ಆರಣ್ಯಕವು ನಿರೂಪಿಸಿದ ಮರಣಸೂಚನೆಗಳು ಸ್ಥೂಲವಾಗಿವೆ. ಆದರೆ ಮಾರ್ಕಂಡೇಯ, ಸ್ಕಾಂದ, ಲಿಂಗ ಮೊದಲಾದ ಪುರಾಣಗಳು ಮಾನವನು ಮೃತ್ಯುವಶನಾಗುವ ಸೂಚನೆಗಳನ್ನು ಒಂದು ವರ್ಷದಿಂದ ಆರಂಭಿಸಿ ಹಿಂದಿನ ದಿನದವರೆಗೆ ಅತ್ಯಂತ ಸ್ಪಷ್ಟವಾಗಿ ನೀಡಿದ್ದಾವೆ. ಸಾಧಕರ ದೃಷ್ಟಿಯಿಂದ ಈ ಅಂಶಗಳು ಸದಾ ಅನುಸಂಧೇಯವಾಗಿವೆ.

ಒಂದು ವರ್ಷದ ಮೊದಲು

ಒಂದು ವರ್ಷದನಂತರ ಜೀವಿಯು ಮೃತನಾಗುವುದಾದರೆ, ಅದಕ್ಕೆ ಮೊದಲು ದೊರಕುವ ಸೂಚನೆಗಳು ಹೀಗಿವೆ:-

1. ಧ್ರುವ- ವಿಷ್ಣುಪದತ್ರಯ- ಮಾತೃಮಂಡಲ- ಅರುಂಧತೀ ಯಾರಿಗೆ ಕಾಣಿಸುವುದಿಲ್ಲವೋ ಅವನು ಒಂದು ವರ್ಷದ ನಂತರ ಮೃತನಾಗುವನು. ನಾಲಿಗೆಯು ಅರುಂಧತಿ ಎಂದು ಮೂಗಿನ ಕೊನೆ ಧ್ರುವಮಂಡಲವೆಂದೂ, ಹುಬ್ಬಿನ ನಡು ಭಾಗ ವಿಷ್ಣುಪದವೆಂದು, ಕಣ್ಣುಗಳು ಮಾತೃ ಮಂಡಲವೆಂದು ಕರೆಸಿಕೊಳ್ಳುತ್ತವೆ.

2. ಎರಡು ಸಂಧ್ಯಾಕಾಲಗಳ ನಂತರ ತನ್ನ ತಲೆಯಲ್ಲಿ ಇತರರಿಗೆ ಕಾಣದ ಬೆವರು ಕಾಣಿಸಿಕೊಳ್ಳುತ್ತಿದ್ದರೆ ಅವನು ಒಂದು ವರ್ಷದ ನಂತರ ಮೃತನಾಗುವನು.
3. ಎರಡು ಕಿವಿಗಳನ್ನು ಮುಚ್ಚಿದಾಗ ಬೆಂಕಿಯು ಪ್ರಜ್ವಲಿಸುವಂತೆ ಧ್ವನಿಯು ಕೇಳದಿರುವಲ್ಲಿ ಅವನು ಒಂದು ವರ್ಷದ ನಂತರ ಮೃತನಾಗುವನು.
4. ದೇಹದಲ್ಲಿ ಅನಿರೀಕ್ಷಿತ ಸ್ಥೌಲ್ಯ ಹಾಗೆಯೇ ಅನಿರೀಕ್ಷಿತ ಕೃಶತೆಗಳು ಕಂಡು ಬಂದರೆ ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತನಾಗುವನು.
5. ಮಲ-ಮೂತ್ರವಿಸರ್ಜನೆ, ಹಸಿವು-ನೀರಡಿಕೆಗಳು ಒಟ್ಟಿಗೆ ಉಂಟಾದರೆ ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತನಾಗುವನು.
6. ಮರದ ಮೇಲೆ ವಿಚಿತ್ರಲೋಕ (ಗಂಧರ್ವನಗರ) ವು ಕಂಡರೆ ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತನಾಗುವನು.
7. ತನ್ನ ದೇಹದ ಬಣ್ಣ ವಿಕಾರಗೊಳ್ಳುತ್ತಿರುವುದು ಕಂಡರೆ ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತನಾಗುವನು.
8. ಹದ್ದು-ಕಾಗೆ-ನರಿ-ಒಂಟೆ-ಕತ್ತೆಗಳು ವ್ಯಕ್ತಿಯಮೇಲೆ ಸ್ವಪ್ನದಲ್ಲಾಗಲೀ, ಜಾಗೃತ್ಕಾಲದಲ್ಲಾಗಲಿ ಆಕ್ರಮಣಗೈದರೆ, ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತನಾಗುವನು.
9. ಒಂದು ಮೂಗಿನ ಹೊಳ್ಳೆಯಿಂದ ಉಸಿರಾಡುತ್ತಿದ್ದಂತೆ ಅನುಭವ ಬಂದರೆ ಆ ವ್ಯಕ್ತಿಯು ಒಂದು ವರ್ಷದ ನಂತರ ಮೃತರಾಗುವನು.

ಹತ್ತು ತಿಂಗಳ ಮೊದಲು

ಮೃತನಾಗಲಿರುವ ವ್ಯಕ್ತಿಗೆ ಹತ್ತು ತಿಂಗಳು ಮುಂಚೆ ಕಾಣಿಸಿಕೊಳ್ಳುವ ಅನಿಷ್ಟಗಳು ಇಂತಿವೆ-

1. ಸೂರ್ಯನು ಕಿರಣರಹಿತನಂತೆ ಮತ್ತು ಅಗ್ನಿಯು ರಶ್ಮಿಸಂಪನ್ನವಾಗಿ ಕಂಡರೆ ಹತ್ತು ತಿಂಗಳಿಗೆ ಆ ವ್ಯಕ್ತಿ ಮೃತನಾಗುವನು.
2. ಹದಿನೇಳುದಿನ ಪಿಂಗಲಾನಾಡಿಯಲ್ಲಿ ಪ್ರಾಣಸಂಚಾರ ಕಂಡರೆ ಹತ್ತು ತಿಂಗಳಿಗೆ ಆ ವ್ಯಕ್ತಿಮೃತನಾಗುವನು.
3. ಅಜೀರ್ಣ ಪ್ರಸಂಗವನ್ನು ಹರತುಪಡಿಸಿ, (ಮಲ, ಮೂತ್ರಗಳಂತೆ) ಅತಿ ದುರ್ಗಂಧ ಯುಕ್ತವಾದ ವಸ್ತುವನ್ನು ಕಾರಿದರೆ, ಔಷಧಿ ತೆಗೆದುಕೊಂಡದ್ದನ್ನು ಕಾರಿದರೆ, ಹತ್ತು ತಿಂಗಳಿಗೆ ಆ ವ್ಯಕ್ತಿ ಮೃತನಾಗುವನು.

4. ಚಂದ್ರಮಂಡಲ ಬಿದ್ದಂತೆ ಯಾರು ಕನಸುಕಾಣುವನೋ, ಅಥವಾ ಸೂರ್ಯನು ರಾಹುಗ್ರಸ್ತನಂತೆ ಕಂಡರೆ ಹತ್ತುತಿಂಗಳಿಗೆ ಆ ವ್ಯಕ್ತಿಮೃತನಾಗುವನು.

ಒಂಬತ್ತು ತಿಂಗಳ ಮೊದಲು -

ಪ್ರೇತ-ಪಿಶಾಚಗಳನ್ನು ಕಂಡರೆ, ಗಂಧರ್ವನಗರ ದರ್ಶನವಾದರೆ, ಹಸಿರಾದ ಗಿಡಮರಗಳು ಚಿನ್ನದ ಬಣ್ಣದಂತೆ ಹಳದಿಯಾಗಿ ಕಂಡರೆ ಇಂತಹ ಅನುಭವ ಪಡೆದವನು ಒಂಬತ್ತು ತಿಂಗಳು ಬದುಕಲಾರನು. ಅದರಂತೆ ಕೊಂಕಳಲ್ಲಿ ಚಲನೆ ಕಂಡರೆ ಒಂಬತ್ತು ತಿಂಗಳಿಗಿಂತ ಹೆಚ್ಚು ಜೀವಿಸಲಾರನು.

ಏಳುತಿಂಗಳ ಮೊದಲು

1. ಇತರ ವ್ಯಕ್ತಿಗಳ ಕಾಲುಗಳು ಮರಳಿನಲ್ಲಿ ಅಥವಾ ಕೆಸರಿನಲ್ಲಿ ಮುಚ್ಚಿಹೋಗದಿರುವಾಗ ಯಾವ ವ್ಯಕ್ತಿಯ ಕಾಲುಗಳು ಮರಳಲ್ಲಿ ಅಥವಾ ಕೆಸರಿನಲ್ಲಿ ಮುಚ್ಚಿಹೋಗುವವೋ ಅವನು ಏಳು ತಿಂಗಳಿಗೆ ಮರಣವನ್ನಪ್ಪುವನು.
2. ಕಾರ್ಯಮಾಡುವಾಗ ಅನಿರೀಕ್ಷಿತ ವಿಸ್ಮರಣೆ ಅಥವಾ ಅಸ್ಫೂರ್ತಿಯಾಗುವುದು ಮೃತಿಸೂಚಕ.

ಆರು ತಿಂಗಳ ಮೊದಲು -

1. ಪಾರಿವಾಳ-ಹದ್ದು-ಗೂಬೆ-ಕಾಗೆ ಮೊದಲಾದ ಪಕ್ಷಿಗಳು ನೆತ್ತಿಯನ್ನು ಮುಟ್ಟಿದರೆ, ಆ ವ್ಯಕ್ತಿಯು ಆರು ತಿಂಗಳವರೆಗೆ ಜೀವಿಸುವನೆಂದು ತಿಳಿಯಬೇಕು.
2. ಕಿವಿಗಳೆರಡನ್ನು ಮುಚ್ಚಿಕೊಂಡಾಗ ರಥವು ಸಂಚರಿಸಿದಂತೆ ಅಥವಾ ಬೆಂಕಿಯು ಪ್ರಜ್ವಲಿಸಿದಂತೆ ಶಬ್ದವು ಕೇಳಿಸದಿರುವಲ್ಲಿ ಅವನು ಆರು ತಿಂಗಳಿಗೆ ಮೃತನಾಗುವನು.
3. ಯಾರ ರಕ್ತವು ದುರ್ಗಂಧಯುಕ್ತವೂ, ಕಪ್ಪು ಬಣ್ಣದ್ದು ಆಗುವುದೋ ಅವನು ಆರು ತಿಂಗಳಿಗೆ ಮೃತನಾಗುವನು.
4. ಯಾರಿಗೆ ಅಂಗೈಯಲ್ಲಿ ನೋವುಕಾಣಿಸುವುದೋ ಅವನು ಆರು ತಿಂಗಳಿಗೆ ಮೃತನಾಗುವನು.
5. ಯಾರಿಗೆ ನಾಲಿಗೆಯ ಮೂಲದಲ್ಲಿ ನೋವುಕಾಣಿಸುವುದೋ ಅವನು ಆರು ತಿಂಗಳಿಗೆ ಮೃತನಾಗುವನು.
6. ಯಾರಿಗೆ ಸೂರ್ಯ-ಚಂದ್ರರು ಕಾಣಿಸುವುದಿಲ್ಲವೋ, ದೇಹದಲ್ಲಿ ರೋಮಗಳು ಬೆಳೆಯುವುದಿಲ್ಲವೋ ಅವನು ಆರು ತಿಂಗಳಿಗೆ ಮೃತನಾಗುವನು.

7. ಯಾರಿಗೆ ಸೂರ್ಯ- ಚಂದ್ರರು ಆಗಸದಿಂದ ಕಕ್ಷೆಕಳಚಿ ಬಿದ್ದಂತೆ ಕಂಡರೆ ಮತ್ತು ಅವರಲ್ಲಿ ಪ್ರಭೆ ಕಾಣದ್ದಿರೆ ಅವನು ಆರು ತಿಂಗಳಿಗೆ ಮೃತನಾಗುವನು.
8 ಯಾರ ಕುತ್ತಿಗೆ- ತುಟಿ- ನಾಲಿಗೆ- ಹಲ್ಲುಗಳು ಒಣಗುವುವೋ ಹಾಗು ಕೆನ್ನೆಗಳು ಕಳೆಗುಂದುವವೋ ಅವನು ಆರು ತಿಂಗಳಿಗೆ ಮೃತನಾಗುವನು.
9. ಎರಡು ಅಂಗುಲಿಗಳ (ಬೆರಳುಗಳ) ನಡುವಿನ ಛಿದ್ರದಲ್ಲಿ ಚಂದ್ರನು ಕಾಣಿಸಿದರೆ ಅವನು ಆರು ತಿಂಗಳಿಗೆ ಮೃತನಾಗುವನು.
10. ಕತ್ತೆಯನ್ನೇರಿದಂತೆ ಕನಸುಕಂಡರೆ, ಆರುತಿಂಗಳಿಗೆ ಮರಣ ನಿಶ್ಚಿತ. ಅಥವಾ ತೈಲಾಭ್ಯಂಜನ ಮಾಡಿಕೊಂಡಂತೆ ಅಥವಾ ಕನಸಿನಲ್ಲಿ ಕ್ಷೌರ ಮಾಡಿಸಿಕೊಂಡಂತೆ, ಹಿಂದೆ ತೀರಿಕೊಂಡ ಕುಟುಂಬದವರನ್ನು ಕನಸಿನಲ್ಲಿ ಕಂಡರೆ, ತನ್ನಶರೀರದ ಮೇಲೆ ಹುಲ್ಲು, ಒಣಗಿದ ಕಟ್ಟಿಗೆ ಇವುಗಳನ್ನು ಕನಸಿನಲ್ಲಿ ಕಂಡರೆ ಅವನು ಆರು ತಿಂಗಳಿಗೆ ಮೃತನಾಗುವನು.
11. ಯಾರ ರೇತಸ್ಸು- ಉಗುರು- ಕಣ್ಣಿನಕೂನೆ ಇವುಗಳು ನೀಲವಾಗಿದ್ದರೆ ಅವನು ಆರು ತಿಂಗಳಿಗೆ ಮೃತನಾಗುವನು.
12. ಸಂಭೋಗಕಾಲದಲ್ಲಿ ಅಥವಾ ಮಧ್ಯದಲ್ಲಿ ಸೀನಿದರೆ ಅವನು ಆರು ತಿಂಗಳಿಗೆ ಮೃತನಾಗುವನು.
13. ಯಾವನ ತಲೆಯಲ್ಲಿ ಓತಿಕೇತವು ಹತ್ತಿಹೋಗುವುದೋ ಅವನು ಆರು ತಿಂಗಳಿಗೆ ಮೃತನಾಗುವನು.
14. ಸ್ವಪ್ನದಲ್ಲಿ ಧೂಳಿನ ಬೆಟ್ಟ- ಹುತ್ತ- ಯೂಪಸ್ತಂಭ ಇತ್ಯಾದಿಗಳನ್ನು ಎರಿದಂತೆ ಕಂಡರೆ, ಅವನು ಆರು ತಿಂಗಳಿಗೆ ಮೃತನಾಗುವನು.

ಮೂರು ತಿಂಗಳ ಮೊದಲು

1. ತನ್ನೆರಡು ಕಣ್ಣುಗಳ ಕೆಳಭಾಗವನ್ನು ಬೆರಳಿನಿಂದ ಮೀಟಿದಾಗ ಬೆಳಕಿನ ಉಂಡೆಗಳು ಬಿದ್ದಂತೆ ಕಾಣುವುದು. ಆದರೆ ಯಾರಿಗೆ ಈ ಅನುಭವವಾಗುವು- ದಿಲ್ಲವೋ ಅವನು ಮೂರು ತಿಂಗಳು ಬದುಕುವನು.
2. ಕಬ್ಬಿಣದ ದಂಡಧಾರಿಯೂ, ಕಪ್ಪುಬಣ್ಣದವನು, ಕಪ್ಪುಬಟ್ಟೆ ತೊಟ್ಟವನೂ ಆದ ವ್ಯಕ್ತಿಯನ್ನು ಸ್ವಪ್ನದಲ್ಲಿ ಕಂಡವನಿಗೆ ಮೂರು ತಿಂಗಳಿಗೆ ಮರಣವಾಗುವುದು.
3. ಚೆನ್ನಾಗಿ ಮಿಂದನಂತರ ಯಾವನ ಹೃದಯ- ಕೈಕಾಲುಗಳ ಕೂಡಲೇ ಒಣಗಿದಂತೆ ಅನುಭವವಾಗುವುದೋ ಅವನು ಮೂರು ತಿಂಗಳು ಬದುಕುವನು.

4. ಯಾವನ ದೇಹವು ನಿಶ್ಚಲವಾಗಿದ್ದರೂ ನೆರಳು ಚಂಚಲವಿದ್ದಂತೆ ಕಾಣುವುದೋ ಅವನು ಮೂರು ತಿಂಗಳು ಬದುಕುವನು.

5. ಆಗಸದಲ್ಲಿ ಯಾರೂ ಮಿಂಚನ್ನು ಕಾಣದಿರುವಾಗ ಯಾವನು ದಕ್ಷಿಣದಿಕ್ಕಿನಲ್ಲಿ ಮಿಂಚನ್ನು ಕಾಣುವನೋ ಅವನು ಮೂರು ತಿಂಗಳು ಬದುಕುವನು

6. ಯಾರ ವೃಷಣಗಳು ಗಟ್ಟಿಯಾದಂತೆ ಅನುಭವಬರುವುದೋ ಅವನು ಮೂರು ತಿಂಗಳು ಬದುಕುವನು.

ಒಂದು ತಿಂಗಳ ಮೊದಲು -

1. ಕನ್ನಡಿ-ನೀರು-ಇನ್ನೊಬ್ಬರ ಅಕ್ಷಿಪಟಲ-ತುಪ್ಪ-ತೈಲಗಳಲ್ಲಿ ಯಾರು ತನ್ನ ಪ್ರತಿಬಿಂಬವನ್ನು ಅಥವಾ ತಲೆಯನ್ನು ಕಾಣುವುದಿಲ್ಲವೋ ಅವನು ಒಂದು ತಿಂಗಳಿಗೆ ಮೃತನಾಗುವನು.

2. ನಾಲಿಗೆ-ಕಣ್ಣು-ಮೂಗು- ಮೊದಲಾದ ಜ್ಞಾನೇಂದ್ರಿಯಗಳು ಅವುಗಳಿಂದ ಗ್ರಾಹ್ಯವಾದ ರಸ-ರೂಪ-ಗಂಧಗಳನ್ನು ಗ್ರಹಿಸದಿದ್ದರೆ ಅವನು ಒಂದು ತಿಂಗಳಿಗೆ ಮೃತನಾಗುವನು.

3. ತಲೆಯು ಸೀಳಿದಂತೆ ಯಾರಿಗೆ ಅನಿಸುವುದೋ ಅವನು ಒಂದು ತಿಂಗಳಿಗೆ ಮೃತನಾಗುವನು.

4. ಹಗಲು ಉಲ್ಕೆಯು ಕಂಡರೆ ಅವನು ಒಂದು ತಿಂಗಳಿಗೆ ಮೃತನಾಗುವನು.

5. ಯಾರು ಗಿಡದಿಂದ ಬಿದ್ದಂತೆ, ಉಪ್ಪರಿಗೆ-ಬೆಟ್ಟ ಬಾವಿಯಲ್ಲಿ ಬಿದ್ದಂತೆ ಕನಸುಕಾಣುವನೋ ಅವನು ಒಂದು ತಿಂಗಳ ಮೊದಲು ಮೃತನಾಗುತ್ತಾನೆ.

6. ಬುದ್ಧಿಯು ಮಲಿನವಾಗುವುದು (ಸಾರಾಸಾರವಿವೇಕವನ್ನು ಕಳೆದು ಕೊಳ್ಳುವುದು), ನಾಲಿಗೆ ತೊದಲುವುದು, ಅಕಾಲದಲ್ಲಿ ಕಾಮನಬಿಲ್ಲಿನ ದರ್ಶನ, ಹಗಲು ಇಬ್ಬರು ಸೂರ್ಯರದರ್ಶನ, ರಾತ್ರಿ ಇಬ್ಬರು ಚಂದ್ರರದರ್ಶನ ಹಗಲು ನಕ್ಷತ್ರಗಳದರ್ಶನ, ರಾತ್ರಿ ಇತರರಿಗೆ ನಕ್ಷತ್ರಗಳು ಕಾಣಿಸಿದಾಗ ಕಾಣಿಸದಿರುವುದು, ಒಂದೇ ಬಾರಿಗೆ ನಾಲ್ಕು ದಿಕ್ಕುಗಳಲ್ಲಿ ಕಾಮನಬಿಲ್ಲಿನ ದರ್ಶನ, ಮರ ಅಥವಾ ಪರ್ವತದ ತುದಿಯಲ್ಲಿ 'ಗಂಧರ್ವನಗರ' ಕಂಡರೆ (ಇಲ್ಲದ ವಿಸ್ಮಯಕಾರಿ ವಸ್ತುಗಳ ದರ್ಶನ) ಹಗಲು ಪಿಶಾಚಿಗಳ ದರ್ಶನ ಮೊದಲಾದ ಚಿನ್ಹೆಗಳಲ್ಲಿ ಯಾವುದೇ ಒಂದು ಚಿನ್ಹೆಕಂಡರೂ ವ್ಯಕ್ತಿಯು ಒಂದು ತಿಂಗಳಲ್ಲಿ ಮೃತನಾಗುವನು.

ಹದಿನೈದುದಿನಗಳ ಮೊದಲು -

1. ಯಾರ ದೇಹದಲ್ಲಿ ಶವದಂತೆ ವಾಸನೆ ಕಾಣಿಸುವುದೋ ಅಥವಾ ಬೇವಿನವಾಸನೆ ಕಾಣಬರುವುದೋ ಅವನು ಹದಿನೈದು ದಿನಗಳಲ್ಲಿ ಮರಣ ಹೊಂದುವನು.
2. ಹೊಕ್ಕಳು- ಪೃಷ್ಠ(ಗುದ) ದಲ್ಲಿಕಂಪನ ಕಾಣಿಸಿದರೆ ಅವನು ಹದಿನೈದುದಿನಗಳಲ್ಲಿ ಮರಣ ಹೊಂದುತ್ತಾನೆ.
3. ಯಾರು ತೈಲಪಾನಮಾಡಿದಂತೆ ಅಥವಾ ತೈಲಭ್ಯಂಜನ ಮಾಡಿಕೊಂಡಂತೆ ಕನಸು ಕಾಣುವನೋ ಅವನು ಹದಿನೈದುದಿನಗಳಲ್ಲಿ ಮರಣ ಹೊಂದುತ್ತಾನೆ.
4. ಭೂಮಿಯಲ್ಲಿ ಯಾರಿಗೂ ಕಾಣದಿರುವ ಛಿದ್ರವು ಕಾಣಿಸಿದರೆ, ಅಥವಾ ತನ್ನ ನೆರಳು ಛಿದ್ರವಾದಂತೆ ಕಂಡರೆ ಅವನು ಹದಿನೈದುದಿನಗಳಲ್ಲಿ ಮರಣಹೊಂದುತ್ತಾನೆ.
5. ಸೂರ್ಯನಲ್ಲಿ ಛಿದ್ರವನ್ನಾಗಲೀ, ಸೂರ್ಯನಲ್ಲಿ ಪ್ರಕಾಶ ಹೀನತೆಯನ್ನಾಗಲೀ ಕಂಡರೆ ಅವನು ಹದಿನೈದುದಿನಗಳಲ್ಲಿ ಮರಣ ಹೊಂದುತ್ತಾನೆ.
6. ಯಾವನಿಗೆ ಸೂರ್ಯನು ಶೀತಕಿರಣನೂ ಚಂದ್ರನು ಉಷ್ಣಕಿರಣನೂ ಆಗಿ ಕಾಣಿಸುವನೋ ಅವನು ಹದಿನೈದುದಿನಗಳಲ್ಲಿ ಮರಣ ಹೊಂದುತ್ತಾನೆ.

ಹತ್ತುದಿನ ಮೊದಲು -

1. ಸ್ನಾನಮಾಡಿದಾಗ ಯಾರು ತಲೆಯು ಕೂಡಲೆ ಒಣಗಿದಂತೆ ಅನುಭವವಾಗುವುದೋ ಅವನು ಹತ್ತು ದಿನಗಳಲ್ಲಿ ಮೃತನಾಗುವನು.
2. ಭೋಜನಾನಂತರ ಧೈರ್ಯನಾಶವಾದರೆ, ಅಥವಾ ಯಾವಾಗಲೂ ನಡುಗುವ ಅನುಭವವಾದರೆ ಅವನು ಹತ್ತು ದಿನಗಳಲ್ಲಿ ಮೃತನಾಗುವನು.
3. ಪಿಂಗಲಾನಾಡಿಯಲ್ಲಿ ಮಾತ್ರವೇ ವಾಯುಸಂಚಾರ ಕಂಡರೆ, ಅವನು ಹತ್ತು ದಿನಗಳಲ್ಲಿ ಮರಣ ಹೊಂದುತ್ತಾನೆ.
4. ನಿಷ್ಕಾರಣವಾಗಿ ಕಿವುಡುತನ, ಕಣ್ಣುಗಳ ಅಸ್ಪಷ್ಟತೆ, ನಿದ್ರೆ ಅತಿಯಾಗುವಿಕೆ ಇವುಗಳು ಮೃತಿಸೂಚಕ.

ಮೂರು- ನಾಲ್ಕುದಿನ ಮೊದಲು -

1. ಚಂದ್ರನಲ್ಲಿ ಚಕ್ರದ ಅರೆಗಳಂತೆ ಛಿದ್ರಗಳು ಕಂಡರೆ ಅವನು ಮೂರು- ನಾಲ್ಕುದಿನ ಜೀವಿಸುವನು.

2. ಮೂಗಿನ ತುದಿ- ನಾಲಗೆಯತುದಿ- ಹುಬ್ಬಿನ ನಡುಭಾಗ ಮತ್ತು ತುಟಿಗಳನ್ನು ಕಾಣದವನು ಎಳುರಾತ್ರಿ ಜೀವಿಸುವನು.
3. ಸುಗಂಧ ಉಳ್ಳವಸ್ತುಗಳು ದುರ್ಗಂಧಯುಕ್ತವಾದ ವಸ್ತುಗಳಂತೆ ಅನುಭವಕ್ಕೆ ಗೋಚರವಾದರೆ ಅವನು ಎಳುರಾತ್ರಿ ಜೀವಿಸುವನು.
4. ದಕ್ಷಿಣದಿಕ್ಕಿನಲ್ಲಿ ಬಿದ್ದಿರುವ ತನ್ನನೆರಳನ್ನುಕಂಡವ ಐದು ದಿನ ಮಾತ್ರ ಬದುಕುವನು.
5. ನಾಲಿಗೆಯು ಉಷ್ಣವೆನಿಸಿ, ಮುಖವು ಕೆಂಪಾಗಿ, ಮಾನಸಿಕ ಭ್ರಮೆಗೆ ವ್ಯಕ್ತಿಯು ಒಳಪಟ್ಟರೆ ಮತ್ತು ಸ್ವರವು ತುಂಬ ಶ್ರಮದಿಂದ ಹೊರ ಬರುತ್ತಿದ್ದರೆ ಆ ವ್ಯಕ್ತಿಯು ಮೂರುದಿನಗಳಲ್ಲಿ ಮೃತನಾಗುವನು.
6. ಯಾರ ಹುಬ್ಬುಗಳು ಜಾರಿಕೆಳಗೆ ಬೀಳುವಂತೆ ತೋರುತ್ತದೆಯೋ ಮತ್ತು ರೆಪ್ಪೆಯ ಕೂದಲು ಉದುರಿಹೋಗುವವೋ ಆ ವ್ಯಕ್ತಿಯು ಮೂರು ದಿನಗಳಲ್ಲಿ ಮೃತನಾಗುವನು.
7. ಮೂಗು- ಕಿವಿಗಳು ಜೋತುಬಿದ್ದಂತೆ ಅಥವಾ ವಕ್ರಾಕೃತಿ ತಳೆದರೆ ಅಥವಾ ಮಡಚಿಕೊಂಡರೆ ಒಂದೆರಡು ದಿನಗಳಲ್ಲಿ ಮರಣಸಂಭವಿಸುವುದು.
8. ಮೂಗಿನ ಮೇಲೆ ಬೊಕ್ಕೆ ಏಳುವುದು, ಬೆಳಗ್ಗೆಹಣೆ ಬೆವರುವುದು, ಹೊಟ್ಟೆದಪ್ಪವಾಗಿ ಕೈಕಾಲು ಕೃಶವಾಗುವುದು ಮರಣಸೂಚಕ,
9. ಬಿಗಿಯಾದ ಮಾಂಸಖಂಡ ಉಳ್ಳ ಭಾಗಗಳು ಜೋತುಬಿದ್ದರೆ ಆ ವ್ಯಕ್ತಿಯು ಮೃತಿಗೆ ಹತ್ತಿರನೆಂದು ತಿಳಿಯಬೇಕು.
10. ನಾಲಿಗೆ ಕಪ್ಪಾಗುವುದು, ಎಡಗಣ್ಣುಗಳು ಬಿದ್ದಂತೆ ಕಾಣುವುದು, ಬಾಯಿಯಿಂದ ದುರ್ವಾಸನೆ ಬರುವುದು ವ್ಯಕ್ತಿಯಮರಣಸೂಚಕ.
11. ಮಲಗುವ ಮನೆ ಬಿದ್ದುಹೋದಂತೆ ಕನಸುಕಂಡರೆ ವ್ಯಕ್ತಿಯ ಪತ್ನಿಯು ಮೊದಲು ಮೃತಳಾಗುವಳೆಂದು ತಿಳಿಯಬೇಕು.
12. ಕನಸಿನಲ್ಲಿ ಹೆಂಡತಿಯ ಅಪಹರಣ, ಅಥವಾ ಹಾಸಿಗೆಯ ಅಪಹರಣವಾದರೆ ಆ ವ್ಯಕ್ತಿಯ ಪತ್ನಿಯು ಮೃತಳಾಗುವಳು.
13. ತನ್ನಕೈಕಾಲುಗಳು ತುಂಡಾದಂತೆ ಸ್ವಪ್ನಕಂಡರೆ ತಂದೆ- ತಾಯಿಗಳಲ್ಲಿ ಯಾರಿಗಾದರೂ ಮರಣ ಸಂಭವಿಸುವುದು.

ಪರಿಹಾರೋಪಾಯಗಳು -

'ಜಾತಸ್ಯ ಹಿ ಧ್ರುವೋ ಮೃತ್ಯುಃ' ಎಂಬ ಗೀತೋಕ್ತಿಯಂತೆ ಹುಟ್ಟಿನಂತೆ ಮರಣವು

ಮಾನವನಿಗೆ ಒದಗುವ ಸಹಜ ಸ್ಥಿತಿಯಾಗಿದೆ. ಮೃತ್ಯುವು, ಕಾಲಮೃತ್ಯು ಅಕಾಲಮೃತ್ಯು ಎಂಬುದಾಗಿ ಎರಡು ಬಗೆಯಾಗಿದೆ. ಭಗವಂತನ ಆದೇಶದಂತೆ ವ್ಯಕ್ತಿಯು ಮೃತನಾಗಲೇ ಬೇಕಾದ ಕಾಲದಲ್ಲಿ ಒದಗುವ ಮೃತ್ಯುವನ್ನು ಯಾರೂ ತಪ್ಪಿಸಿಕೊಳ್ಳಲಾಗದು. ಆದರೆ ಅಪಘಾತ ಅಪವಾದ, ಭಯಂಕರ ದುಃಖರೂಪವಾದ ಅಕಾಲಮೃತ್ಯುವನ್ನು ಪ್ರಾಯಶ್ಚಿತ್ತೋಪಾಯಗಳ ಮೂಲಕ ತಡೆಗಟ್ಟಬಹುದು. ಈ ಹಿನ್ನೆಲೆಯಲ್ಲಿ ಮೃತ್ಯುವಿನ ಸೂಚನೆ ದೊರಕಿದಾಗ ಅದರ ಪರಿಹಾರೋಪಾಯವನ್ನು ಅವಶ್ಯವಾಗಿ ಮಾಡಬೇಕು.

'ಅದಿತ್ ಪ್ರತ್ನಸ್ಯ ರೇತಸಃ' ಎಂಬ ಒಂದು ಮಂತ್ರ, 'ಯತ್ರ ಬ್ರಹ್ಮಾ ಪವಮಾನ' ಎಂಬ ಆರು ಮಂತ್ರಗಳು 'ಉದ್ವಯಂ' ಎಂಬ ಒಂದು ಮಂತ್ರ ಪಠಿಸಬೇಕು. 'ಯದಂತಿ ಯಚ್ಚ ದೂರಕೇ' ಎಂಬುದಾಗಿ ಏಳು ಮಂತ್ರಗಳನ್ನು ಜಪಿಸಬೇಕು. ಈ ಮಂತ್ರಗಳು ಹಾಗು ಅದರ ವಿವರ ಹೀಗಿದೆ.

1. **ಯದಂತಿ ಯಚ್ಚ ದೂರಕೇ ಭಯಂ ವಿಂದತಿ ಮಾಮಿಹ ।
   ಪವಮಾನ ವಿ ತಜ್ಜಹಿ ॥**

ಭಕ್ತರನ್ನು ಪುನೀತರನ್ನಾಗಿಸುವ ಓ ವಾಯುದೇವನೆ ! ನನಗೆ ಸದ್ಯದಲ್ಲೇ ಆಗಲಿ ಬಹುಕಾಲಾನಂತರದಲ್ಲಿಯಾಗಲಿ ಒದಗಲಿರುವ ಅಪಾಯಗಳನ್ನು ಪರಿಹರಿಸು.

2. **ಪವಮಾನಃ ಸೋ ಅದ್ಯ ನಃ ಪವಿತ್ರೇಣ ವಿಚರ್ಷಣಿಃ ।
   ಯಃ ಪೋತಾ ಸ ಪುನಾತು ನಃ ।**

ವಿಶ್ವದ ಒಡೆಯನಾದ ಮತ್ತು ವಿಶ್ವವನ್ನು ಪಾವನಗೊಳಿಸುವ ವಾಯುದೇವನು ನಮ್ಮ ಒಡೆಯನಾಗಿರುವನು. ಇಂತಹ ವಾಯುದೇವನು ಶ್ರೀಹರಿಯ ಅರಿವಿನ ಮಹಾಪೂರವನ್ನು ನಮ್ಮ ಮೇಲೆ ಹರಿಸುವ ಮೂಲಕ ನಮ್ಮನ್ನು ಪಾವನಗೊಳಿಸಲಿ

3. **ಯತ್ ತೇ ಪವಿತ್ರಮರ್ಚಿಷ್ಯಗ್ನೇ ವಿತತಮಂತರಾ ।
   ಬ್ರಹ್ಮ ತೇನ ಪುನೀಹಿ ನಃ ॥**

ಎಲ್ಲರ ಶರೀರದ ಒಳಗಿದ್ದು ನಿಯಮಿಸುವ ಓ ವಾಯುದೇವನೇ! ಈ ಶರೀರದೊಳಗೆ ವ್ಯಾಪ್ತವಾದ ನಿನ್ನ ತೇಜಸ್ಸಿನಲ್ಲಿ ಶ್ರೀಹರಿಯು ವ್ಯಾಪ್ತನಾಗಿ ನಿಂದಿರುವನು. ಅವನ ಮಹಿಮೆಯನ್ನು ಉಪದೇಶಿಸಿ ನಮ್ಮನು ಪಾವನಗೊಳಿಸು.

4. **ಯತ್ ತೇ ಪವಿತ್ರಮರ್ಚಿಷ್ಯಗ್ನೇ ತೇನ ಪುನೀಹಿ ನಃ ।
   ಬ್ರಹ್ಮ ಸ ವೈ ಪುನೀಹಿ ನಃ ॥**

ಸರ್ವಕಾಲದಲ್ಲಿ ಸರ್ವ ಶರೀರಗಳ ನಿಯಾಮಕನಾದ ಓ ವಾಯುದೇವನೆ ನೀನು ಹರಿಯ ಪ್ರಸನ್ನತೆಯನ್ನು ಸಂಪೂರ್ಣವಾಗಿ ಸೂರೆಗೊಂಡಿರುವಿ. ಆ ಪರಬ್ರಹ್ಮನು ನಮ್ಮ ಮೇಲೆ ಪ್ರಸನ್ನನಾಗುವಂತೆ ಕೃಪೆತೋರಿ ಜ್ಞಾನವನ್ನು ಕರುಣಿಸಿ ನಮ್ಮನ್ನು ಪಾವನಗೊಳಿಸು.

5. **ಉಭಾಭ್ಯಾಂ ದೇವ ಸವಿತಃ ಪವಿತ್ರೇಣ ಸವೇನ ಚ ।**
ಮಾಂ ಪುನೀಹಿ ವಿಶ್ವತಃ ॥

ಓ ವಾಯುದೇವನೇ! ನಿನ್ನ ಕೃಪೆಯಿಂದ ಜ್ಞಾನವು ಪುಟ್ಟುವುದು. ನೀನು ಶ್ರೀಹರಿಯ ಜ್ಞಾನವನ್ನು ಕರುಣಿಸಿ ಅವನ ಅನುಗ್ರಹ ಪಾತ್ರನನ್ನಾಗಿಸಿ ನನ್ನನ್ನು ಎಲ್ಲರೀತಿಯಿಂದಲೂ ಪಾವನಗೊಳಿಸು.

6. **ತ್ರಿಭಿಷ್ಟ್ವಂ ದೇವ ಸವಿತರ್ವರ್ಷಿಷ್ಠೈಃ ಸೋಮ ಧಾಮಭಿಃ ।**
ಅಗ್ನೇ ದಕ್ಷೈಃ ಪುನೀಹಿ ನಃ ॥

ಸರ್ವಕಾರಣನೂ, ಸೌಮ್ಯಸ್ವರೂಪನೂ ಆದ ಓ ವಾಯುದೇವನೆ! ನೀನು ಭಕ್ತರ ಇಷ್ಟಾರ್ಥಗಳನ್ನು ಪೂರೈಸುವವನು. ಮುಕ್ತರು ವಿಹರಿಸುವ ಶ್ವೇತದ್ವೀಪ ಅನಂತಾಸನ ವೈಕುಂಠಗಳಲ್ಲಿರುವ ಶ್ರೀಹರಿಯ ವಿಶೇಷಾನುಗ್ರಹ ಪಾತ್ರನು. ನಮ್ಮನ್ನು ಪುನೀತರನ್ನಾಗಿಸು.

7. **ಪುನಂತು ಮಾಂ ದೇವಜನಾಃ ಪುನಂತು ವಸವೋ ಧಿಯಾ ।**
ವಿಶ್ವೇ ದೇವಾಃ ಪುನೀತ ಮಾ ಜಾತವೇದಃ ಪುನೀಹಿ ಮಾ ॥

ಸರ್ವಜ್ಞನಾದ ಓ ವಾಯುದೇವನೆ! ನಿನ್ನಿಂದ ಪ್ರೇರಿತರಾದ ದೇವತೆಗಳು ನಮಗೆ ತತ್ತ್ವಜ್ಞಾನವನ್ನು ಕರುಣಿಸಿ ಪಾವನಗೊಳಿಸಲಿ. ವಸುಗಳು ಮತ್ತು ವಿಶ್ವೇದೇವತೆಗಳು ನಮಗೆ ತತ್ತ್ವಜ್ಞಾನ ಕರುಣಿಸಲಿ, ನೀನು ಸ್ವತಃ ನಮ್ಮನ್ನು ಪಾವನಗೊಳಿಸು.

ಇಲ್ಲಿ ಮೊದಲ ಎರಡು ಋಚೆಗಳು ಪವಮಾನನನ್ನು, ಮುಂದಿನ ಎರಡು ಋಚಗಳು ಅಗ್ನಿಯನ್ನು, ಐದನೆಯ ಋಚೆ ಸವಿತೃವನ್ನು, ಆರನೆಯ ಋಚೆ ಸವಿತೃ, ಸೋಮ, ಅಗ್ನಿಗಳನ್ನು, ಏಳನೆಯ ಋಚೆ ದೇವಜನ, ವಸು, ವಿಶ್ವೇದೇವ, ಜಾತವೇದನನ್ನು ನುತಿಸುವಂತೆ ಕಾಣುತ್ತದೆ. ಆದರೆ ಪ್ರಕೃತ ಈ ಎಲ್ಲ ಶಬ್ದಗಳಿಂದಲೂ ಪ್ರತಿಪಾದ್ಯನಾದವನು ಮುಖ್ಯಪ್ರಾಣನೇ ಆಗಿರುವನು.

ಮರಣ ಸೂಚನೆಗಳು ದೊರಕಿದಾಗ ಜಪಿಸಬೇಕಾದ ಇನ್ನೆರಡು ಮಂತ್ರಗಳು ಹೀಗಿವೆ-

ಅದಿತ್ ಪ್ರತ್ನಸ್ಯ ರೇತಸೋ ಜ್ಯೋತಿಷ್ಪಶ್ಯಂತಿ ವಾಸರಮ್ ।
ಪರೋ ಯದಿಧ್ಯತೇ ದಿವಾ ॥

ಸ್ವರ್ಗಕ್ಕಿಂತಲೂ ಮೇಲೆ ಬೆಳಗುತ್ತಿರುವ ಸುಖರೂಪನಾದ ವಿಷ್ಣುವಿನ ಜ್ಯೋತಿಯನ್ನು ಆ ಹರಿಯ ಅನುಗ್ರದಿಂದಲೇ ಉಪಾಸಕರು ಕಾಣಬಲ್ಲರು.

ಉದ್ ವಯಂ ತಮಸಸ್ಪರಿ ಜ್ಯೋತಿಃ ಪಶ್ಯಂತ ಉತ್ತರಮ್ ।
ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್ ॥

ಅಜ್ಞಾನದ ಕತ್ತಲೆಯನ್ನು ದಾಟಿಬಂದ ಸಾಧಕರು ಸರ್ವೋತ್ತಮನಾದ ವಿಷ್ಣುವೆಂಬ ಜ್ಯೋತಿಯನ್ನು ಸಂದರ್ಶಿಸುತ್ತಾ, ಜ್ಞಾನಿ ಪ್ರಾಪ್ಯನೂ, ಜ್ಯೋತೀರೂಪನೂ ಸರ್ವೋತ್ತಮನೂ ಆದ ಅವನನ್ನು ಹೊಂದುವೆವು.

'ಯತ್ರ ಬಹ್ಮಾ ಪವಮಾನಃ' ಆರು ಋಚೆಗಳ ಪಠನ
ಯತ್ರ ಬ್ರಹ್ಮಾ ಪವಮಾನ ಛಂದಸ್ಯಾಂ 3 ವಾಚಂ ವದನ್ ।
ಗ್ರಾವ್ಣಾ ಸೋಮೇ ಮಹೀಯತೇ ಸೋಮೇನಾನಂದಂ
ಜನಯನ್ನಿಂದ್ರಾಯೇಂದೋ ಪರಿ ಸ್ರವ ॥

ಓ ವಾಯುದೇವನೇ, ಮುಕ್ತನಾದ ಚತುರ್ಮುಖನು ಮುಕ್ತ ಲೋಕದಲ್ಲಿ ವೇದವ್ಯಾಖ್ಯಾನಗೈಯುತ್ತ, ಸೋಮರಸದಿಂದ ಶ್ರೀಹರಿಯನ್ನು ಆರಾಧಿಸುತ್ತ ಮುಕ್ತರಿಗೆ ಮುದ ನೀಡುವನು. ಭಕ್ತಾಭೀಷ್ಟ ಪ್ರದನಾದ ವಾಯುದೇವನೇ ನನಗೆ ವಿಷ್ಣುವಿನ ಮಹಿಮೆಯನ್ನು ತಿಳಿಸು.

ಯತ್ರ ಜ್ಯೋತಿರಜಸ್ರಂ ಯಸ್ಮಿನ್ ಲೋಕೇ ಸ್ವರ್ಹಿತಮ್ ।
ತಸ್ಮಿನ್ ಮಾಂ ಧೇಹಿ ಪವಮಾನಾಮೃತೇ ಲೋಕೇ ಅಕ್ಷಿತ
ಇಂದ್ರಾಯೇಂದೋ ಪರಿ ಸ್ರವ ॥

ಓ ವಾಯುದೇವನೇ ! ಎಲ್ಲಿ ನಿತ್ಯನಿರಂತರ ಬೆಳಕಿದೆಯೋ ಮತ್ತು ಆನಂದರೂಪಿಯಾದ ಶ್ರೀಹರಿ ಇರುವನೋ ಅಂತಹ ಮುಕ್ತಲೋಕದಲ್ಲಿ ನನ್ನನ್ನು ಇರಿಸು.

ಯತ್ರಾನುಕಾಮಂ ಚರಣಂ ತ್ರಿನಾಕೇ ತ್ರಿದಿವೇ ದಿವಃ ।
ಲೋಕಾ ಯತ್ರ ಜ್ಯೋತಿಷ್ಮಂತಸ್ತತ್ರ ಮಾಮಮೃತಂ
ಕೃಧೀಂದ್ರಾಯೇಂದೋ ಪರಿ ಸ್ರವ ॥

ಓ ವಾಯುದೇವನೆ ! ಸರಸ್ವತ್ಯಾದಿ ದೇವಿಯರ ಇಚ್ಛೆಗೆ ಅನುಗುಣವಾಗಿ ಯಾವ ಲೋಕದಲ್ಲಿ ದಿವ್ಯವಾದ ಜ್ಯೋತಿರ್ಮಯವಾದ ಮಂದಿರಗಳಿವೆಯೋ ಅಂತಹ ಲೋಕದಲ್ಲಿ ನನ್ನನ್ನಿರಿಸು.

ಯತ್ರ ಕಾಮಾ ನಿಕಾಮಶ್ಚ ಯತ್ರ ಬ್ರಧ್ನಸ್ಯ ವಿಷ್ಟಪಮ್ ।
ಸ್ವಧಾ ಚ ಯತ್ರ ತೃಪ್ತಿಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ
ಪರಿ ಸ್ರವ ॥

ಓ ವಾಯುದೇವನೇ! ಎಲ್ಲಿನಮ್ಮ ಕಾಮನೆಗಳು ಸಂಪೂರ್ಣವಾಗಿ ಪೂರೈಸಲ್ಪಡುವವೋ, ಎಲ್ಲಿ ಸೂರ್ಯನೇ ಮೊದಲಾದ ದೇವತೆಗಳಿರುವರೋ, ಎಲ್ಲಿಸುಖ-ತೃಪ್ತಿಗಳು ಸದಾಕಾಲ ಇರುವವೋ ಅಂತಹ ಲೋಕಕ್ಕೆ ನನ್ನನ್ನು ತಲುಪಿಸು.

ಯತ್ರ ರಾಜಾ ವೈವಸ್ವತೋ ಯತ್ರಾವರೋಧನಂ ದಿವಃ ।
ಯತ್ರಾಮೂರ್ಯಹ್ವತೀರಾಪಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೊ
ಪರಿಸ್ರವ ॥

ಓ ವಾಯುದೇವನೇ ! ಎಲ್ಲಿ ಮುಕ್ತ ಯಮಧರ್ಮ ರಾಜನು ಮತ್ತು ಸರಸ್ವತಿಯ ಸೇವಕರಾದ ಪರಿವಾರದೇವತೆಗಳು, ವಾಯುದೇವನು, ಹರಿಯುವ ಗಂಗಾದಿ ನದೀ ದೇವತೆಗಳು ಇರುವರೋ ಅಂತಹ ಮುಕ್ತ ಲೋಕದಲ್ಲಿನನ್ನನ್ನು ಇರಿಸು.

ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ।
ಕಾಮಸ್ಯ ಯತ್ರಾಪ್ತಾಃ ಕಾಮಾಸ್ತತ್ರ ಮಾಮಮೃತಂ
ಕೃಧೀಂದ್ರಾಯೇಂದೋ ಪರಿಸ್ರವ ।

ಓ ವಾಯುದೇವನೆ! ಎಲ್ಲಿ ಶ್ರೀಹರಿಯ ಭಜನೆಯಿಂದ ನಮ್ಮ ಸ್ವರೂಪ ಭೂತವಾದ ಆನಂದವು ವ್ಯಕ್ತವಾಗುವುದೋ ಮತ್ತು ನಾನಾವಿಧ ಭೋಗಭಾಗ್ಯಗಳು ಇಚ್ಛಾಮಾತ್ರದಿಂದ ದೊರಕುವವೋ ಅಂತಹ ಕಾಮಪೂರಕವಾದ ಮುಕ್ತ ಲೋಕದಲ್ಲಿನನ್ನನ್ನಿರಿಸು.

ರಾತ್ರಿ ಸೂಕ್ತ ಪಠನ

ಸಾಧನಮಾರ್ಗದಲ್ಲಿ ಬರುವ ಅಡೆ-ತಡೆ-ದುಃಖ-ವಿಪತ್ತುಗಳ ನಿವಾರಣೆಗಾಗಿ ಯತಿಗಳೂ ಕೂಡ ರಾತ್ರಿಸೂಕ್ತ ಪಠಿಸಬೇಕು. ಅವರೂ ಪಠಿಸಬೇಕೆಂದಾಗ ಬ್ರಹ್ಮಚಾರಿ-ಗೃಹಸ್ಥರು ಪಠಿಸಬೇಕೆಂದು ಒತ್ತಿಹೇಳಬೇಕಿಲ್ಲ.

1. **ರಾತ್ರೀ ವ್ಯಖ್ಯದಾಯತೀ ಪುರುತ್ರಾ ದೇವ್ಯಕ್ಷಭಿಃ ।**
   ವಿಶ್ವಾ ಅಧಿ ಶ್ರಿಯೋಽಧಿತ ॥

ರಾತ್ರಿದೇವಿ ಎನಿಸಿದ ದುರ್ಗಾಂತರ್ಯಾಮಿ ಸ್ತ್ರೀರೂಪೀ ವಿಷ್ಣುವು ಸರ್ವ ಲೋಕಗಳಲ್ಲಿಯೂ ಸಂಚರಿಸುವನು. ತನ್ನ ಎಣಿಕೆಗೆ ಸಿಗದ ಕಂಗಳಿಂದ ಬಹುಪ್ರಕಾರವಾಗಿ

ಈ ಜಗತ್ತನ್ನು ನೋಡಿದನು. ಅವನೇ ಸರ್ವಲೋಕಗಳಲ್ಲಿಯೂ ಇರುವ ಸಂಪತ್ತುಗಳನ್ನು ಧರಿಸಿದ್ದಾನೆ.

2. **ಓರ್ವಪ್ರಾ ಅಮರ್ತ್ಯಾ ನಿವತೋ ದೇವ್ಯುದ್ವತಃ ।**
ಜ್ಯೋತೀಷಾ ಬಾಧತೇ ತಮಃ ॥

ಅವನು ಕಿರಿಯ ಹಾಗೂ ಹಿರಿಯರಾದ ಎಲ್ಲ ಬ್ರಹ್ಮಾದಿ ಜೀವರನ್ನು ಬಹುಪ್ರಕಾರವಾಗಿ ಜ್ಞಾನದಿಂದ ಅನುಗ್ರಹಿಸಿರುವನು. ಅವನೆ ಜ್ಞಾನದಿಂದ ಜೀವರ ಅಜ್ಞಾನವನ್ನು ಪರಿಹರಿಸುತ್ತಾನೆ.

3. **ನಿರು ಸ್ವಸಾರಮಸ್ಕೃತೋಷಸಂ ದೇವ್ಯಾಯತೀ ।**
ಅಪೇದು ಹಾಸತೇ ತಮಃ ॥

ಅವನು ಬರುತ್ತ ತನ್ನದೆ ಆದ ಉಷಸ್ ಎಂಬ ಹೆಸರಿನ ಶುಭ್ರವರ್ಣದ ಉತ್ತಮ ಸ್ತ್ರೀರೂಪವನ್ನು ತನ್ನ ತಂಗಿಯನ್ನಾಗಿ ಮಾಡಿಕೊಂಡನು. ಸೂರ್ಯಾದಿ ದೇವತೆಗಳಲ್ಲಿ ಇದ್ದು ಅವನೆ ಸದಾ ಕತ್ತಲೆಯನ್ನು ಹೊಡೆದೋಡಿಸುತ್ತಾನೆ.

4. **ಸಾ ನೋ ಅದ್ಯ ಯಸ್ಯಾ ವಯಂ ನಿತೇ ಯಾಮನ್ನವಿಕ್ಷ್ಮಹಿ ।**
ವೃಕ್ಷೇ ನ ವಸತಿಂ ವಯಃ ॥

ಅನ್ನಾದಿಗಳನ್ನು ಕರುಣಿಸುವುದರಿಂದ ಶ್ರೀಹರಿಯು 'ಯಾಮ' ನಾಮಕನು. ಅವನ ಉದರದಲ್ಲಿ ನಾವೆಲ್ಲರೂ ಸದಾ ಮರದಲ್ಲಿ ಹಕ್ಕಿಗಳಂತೆ ಹೊಕ್ಕು ನೆಲೆಸಿರುವೆವು ಅವನೆ ನಮಗೆ ಒಡೆಯ. ಅವನ ದಾಸರು ನಾವು.

5. **ನಿ ಗ್ರಾಮಾಸೋ ಅವಿಕ್ಷತ ನಿ ಪದ್ವಂತೋ ನಿ ಪಕ್ಷಿಣಃ ।**
ನಿಶ್ಯೇನಾಸಶ್ಚಿದರ್ಥಿನಃ ।

ಎಲ್ಲೆಡೆ ಸುಖಿಯಾದ ಹರಿಯನ್ನೆ ಒಡೆಯನೆಂದು ನಂಬಿದುದರಿಂದ 'ಶ್ಯೇನ'ರೆನಿಸಿದ ದೇವೋತ್ತಮರೂ, ಕಾಲಿನಿಂದ ಮಾತ್ರ ಸಂಚರಿಸಬಲ್ಲವರಾದ್ದರಿಂದ 'ಪದ್ವಂತ'ರೆನಿಸಿದ ಮನುಷ್ಯರೂ, ಪಕ್ಷಿಗಳೂ, ಬಹುಸಂಖ್ಯೆಯಲ್ಲಿರುವುದರಿಂದ 'ಗ್ರಾಮರೆ'ನಿಸಿದ ದೈತ್ಯರೂ, ಮೋಕ್ಷಸುಖ ಪಡೆದು ಕೃತಾರ್ಥರಾದ್ದರಿಂದ ಅರ್ಥಿಗಳೆಂದು ಶ್ರುತಿಯಲ್ಲಿ ಕರೆಯಲ್ಪಟ್ಟ ಮುಕ್ತರೂ ಹರಿಯ ಉದರವನ್ನೇ ಪ್ರವೇಶಿಸಿರುವರು.

6. **ಯಾವಯಾ ವೃಕ್ಯಂ ವೃಕಂ ಯವಯ ಸ್ತೇನಮೋರ್ಮ್ಯೇ ।**
ಅಥಾ ನಃ ಸುತರಾ ಭವ ।

ತನ್ನ ಸ್ವರೂಪದ ಬಗ್ಗೆ ವೇದಾದಿಗಳು ಪ್ರಮಾಣವೆನಿಸಲಿ ಎಂದು ಸಂಕಲ್ಪಿಸಿದುದರಿಂದ ಆ ಸ್ತ್ರೀರೂಪಿ ಭಗವಾನ್ ಹರಿ 'ಊರ್ಮ್ಯ' ಎನಿಸಿದ್ದಾನೆ. ವೃಕಗಳನ್ನು ಅವನೇ ದೂರಮಾಡಬೇಕು. ವೃಕ (ತೋಳ) ಗಳಂತೆ ಕ್ರೂರವಾದ ಪ್ರಯುಕ್ತ ಅಸುರರೇ ಇಲ್ಲಿ ವೃಕಗಳು. ವೃಕಸ್ವಭಾವದ ಜನರು ವೃಕ್ಯರು. ಅವರನ್ನೂ ಅವನು ದೂರ ಮಾಡಬೇಕು. ಮಹಾ ಅಸುರರು ಸ್ತೇನ(ಕಳ್ಳ)ರು. ಏಕೆಂದರೆ ಅನಾದಿಕಾಲದಿಂದಲೂ ಜೀವರಿಗೆ ಬ್ರಹ್ಮನಿಂದ (ಇಲ್ಲದ) ಐಕ್ಯವನ್ನು ಚಿಂತಿಸುವ 'ಬ್ರಹ್ಮಸ್ತೇನ'ರು ಅವರು. ಅವರನ್ನು ದೂರಮಾಡುತ್ತ ಪ್ರಭು ವಿಷ್ಣುವು, ಭಕ್ತರಿಗೆ ಸುಖದಾಯಕನಾಗುತ್ತಾನೆ.

7. **ಉಪ ಮಾ ಪೇಪಿಶತ್ ತಮಃ ಕೃಷ್ಣಂ ವ್ಯಕ್ತಮಸ್ಥಿತ ।**
ಉಷ ಋಣೇವ ಯಾತಯ ॥

ಅಜ್ಞಾನಿಗಳಿಗೆ ರೋಚಕವಾದ ಕಪ್ಪಾದ ಅಜ್ಞಾನವೆಂಬ ತಮಸ್ಸು ನನ್ನ ಬಳಿ ವ್ಯಕ್ತವಾಗಿ ನಿಂತಿದೆ. ಸಾಲಗಾರನು ಸಾಲವನ್ನು ತೀರಿಸುವಂತೆ ಭಗವಾನ್ ಪುರುಷೋತ್ತಮನು ಆ ಅಜ್ಞಾನವನ್ನು ಕಳೆಯುವನು. ಆ ಜನಾರ್ದನನೆ ಪ್ರಕಾಶಿಸುವುದರಿಂದ 'ಉಷಸ್' ಎನಿಸಿದ್ದಾನೆ.

8. **ಉಪ ತೇ ಗಾ ಇವಾಕರಂ ವೃಣೀಷ್ವ ದುಹಿತರ್ದಿವಃ ।**
ರಾತ್ರಿ ಸ್ತೋಮಂ ನ ಜಿಗ್ಯುಷೇ ॥

ಜಯಶಾಲಿಯಾದ ರಾಜನಿಗೆ ಪ್ರಜೆಗಳು ಸ್ತೋತ್ರ ಮಾಡುವಂತೆ, ಬ್ರಾಹ್ಮಣನಿಗೆ ಗೋವುಗಳನ್ನು ದಾನಮಾಡುವಂತೆ ನಿನಗೆ ನಾನೀ ಸ್ತೋತ್ರವನ್ನು ಅರ್ಪಿಸಿರುವೆ. ಅದನ್ನು ಸ್ವೀಕರಿಸು. 'ದ್ಯು' ಎಂದರೆ ಜ್ಞಾನ. ಅದರಿಂದ ವ್ಯಕ್ತನಾಗುವುದರಿಂದ ಸ್ತ್ರೀರೂಪಿ ಜನಾರ್ದನನು ದ್ಯುದೇವಿಯ ಮಗಳೆಂದು ಕರೆಯಲ್ಪಡುತ್ತಾನೆ.

ಇದಲ್ಲದೇ ದುಃಸ್ವಪ್ನ ಮತ್ತು ದುರಿತ ಪರಿಹಾರಕ್ಕಾಗಿ 'ಗಜೇಂದ್ರ ಮೋಕ್ಷ' ವನ್ನು ಪಠಿಸಬೇಕು. ಸಾಧಕರು ಮೃತ್ಯುವಿನ ಸೂಚನೆಗಳನ್ನು ಗಮನಿಸಿದರೆ ಪರಲೋಕ ಪಯಣದ ಅಂತಿಮ ದಿನಗಳಲ್ಲಿ ಹೆಚ್ಚು ಕಾಲ ಶ್ರೀಹರಿಯ ಸ್ಮರಣೆ ನಡೆಸಬಹುದು. ಆಧ್ಯಾತ್ಮಿಕ ಚಿಂತನೆ ಜೀವನದುದ್ದಕ್ಕೂ ಮಾಡಿದವರು ಅಂತ್ಯಕಾಲದಲ್ಲಿ ಅದನ್ನು ಹೆಚ್ಚಿಸಬಹುದು. ಆದರೆ ಕೊನೆಯ ಕಾಲದಲ್ಲಿ ಹರಿಸ್ಮೃತಿಯ ಅಕ್ಷರಾಭ್ಯಾಸ ಸಾಧ್ಯವಾಗದು. ಶ್ರೀಮದ್ವಲ್ಲಭ ಕೃಷ್ಣನು ನಿತ್ಯ ನಮಗೆ ಅವನ ಮಂಗಳಸ್ಮೃತಿ - ಚಿಂತನೆಗಳನ್ನು ಕರುಣಿಸಲೆಂದು ಬಿನ್ನವಿಸೋಣ. ಇದೊಂದೇ ನಮಗಿರುವ ದಾರಿ.

★★★

ಮಾತೃಗಯಾ

-ಡಾ॥ ಎನ್.ವೆಂಕಟೇಶಾಚಾರ್ಯ
ಸಂಸ್ಕೃತ ಪ್ರಾಧ್ಯಾಪಕರು ಮತ್ತು ನಿರ್ದೇಶಕರು
ಹಯಗ್ರೀವ ಪ್ರಕಾಶನ, ಬೆಂಗಳೂರು-40

1. ಮಾತೃಗಯಾ- ಮಾಯವಾಗುವುದು ಮಾತೃ ಋಣದ ಭಯ

ಅಹ್ಮದಾಬಾದ್ ನಿಂದ ದಿಲ್ಲಿಗೆ ಹೋಗುವ ಮಾರ್ಗದಲ್ಲಿ ಸುಮಾರು 64 ಮೈಲುಗಳ ದೂರದಲ್ಲಿ ಸಿದ್ಧಪುರ ರೈಲ್ವೆ ನಿಲ್ದಾಣ ಸಿಗುತ್ತದೆ. ನಿಲ್ದಾಣದಿಂದ 1 ಮೈಲು ದೂರದಲ್ಲಿ ಸಿದ್ಧಪುರ ನಗರವಿದೆ. ಇದರ ಮತ್ತೊಂದು ನಾಮವೇ ಮಾತೃಗಯಾ. ಈ ನಗರದ ಬಳಿಯಲ್ಲಿಯೇ ಸರಸ್ವತೀ ನದಿ ಹರಿಯುತ್ತದೆ. ಉಳಿದೆಲ್ಲೆಡೆಯೂ ಗುಪ್ತಗಾಮಿನಿಯಾದ ಈ ನದಿ ಇಲ್ಲಿ ಸುಳಿವು ತೋರುವುದು ಜ್ಞಾನಕ್ಕೆ ಇರುವ ಪ್ರಾಶಸ್ತ್ಯವನ್ನು ಪ್ರಕಟಿಸುತ್ತದೆ. ಇದು ಸಮುದ್ರವನ್ನು ಸೇರದೆ ಕಚ್ಛ ಮರುಭೂಮಿಯಲ್ಲಿಯೇ ಹಿಂಗಿ ಹೋಗುತ್ತದೆ. ಕೊನೆಗೆ ಉಪ್ಪಾಗದೆ ಹಾಗೆಯೇ ಉಳಿದುಕೊಂಡ ಇದು ಬದಲಾಗದ ಜ್ಞಾನದ ಸಂಕೇತ. ಕೇವಲ ಜ್ಞಾನದ ಧಾರೆ ಏನು? ಆನಂದದ ಧಾರೆಯೇ ಹರಿಯಬಲ್ಲ ಅಗಾಧ ಇತಿಹಾಸ ಇದಕ್ಕಿದೆ. ಇಲ್ಲಿಯೇ ಸುಮಾರು 40 ಗಜ ವಿಸ್ತೀರ್ಣದ ಬಿಂದು ಸರೋವರವಿದೆ. ಅದು ಬಿಂದು ಸರೋವರವಾದರೂ ಅದರ ಇತಿಹಾಸ ಸಿಂಧುವನ್ನೂ ಮೀರಿದ್ದಾಗಿದೆ. ಕರ್ದಮನು ನಾರಾಯಣನಿಗಾಗಿ ಸರಸ್ವತಿಯ ದಡದಲ್ಲಿ ತಪಸ್ಸು ಮಾಡಿದ್ದಂತೂ ಸುಪ್ರಸಿದ್ಧ. ಆಗ ಅವನನ್ನು ಅನುಗ್ರಹಿಸಲು ನಾರಾಯಣ ಅವನಿಗೆ ಪ್ರತ್ಯಕ್ಷನಾದ. ಕರ್ದಮನ ಕಠಿಣ ತಪ, ಅಗಾಧ ನಿಷ್ಠೆ- ನಿಸ್ಸೀಮ ಭಕ್ತಿಯನ್ನು ಕಂಡು ಕಪಿಲರೂಪೀ ಭಗವಂತನ ಮನ ತುಂಬಿ ಬಂದಿತು. ಉಕ್ಕಿ ಹರಿದ ಆ ಆನಂದದ ಧಾರೆ ಕಣ್ಣಿನ ಮೂಲಕ ಬಿಂದು ಬಿಂದುಗಳಾಗಿ ಭೂಮಿಯ ಮೇಲೆ ಬಿದ್ದವು. ಬಿದ್ದ ನೀರಿನ ಹನಿಗಳ ಸಮೂಹವೇ ಸರೋವರವಾಗಿ ಸಾಕಾರಗೊಂಡಿತು. ಭಗವಂತನ ಆನಂದದ ಅಶ್ರುಧಾರೆಯೇ ಸರೋವರವಾಗಿದೆ ಎಂದ ಮೇಲೆ ಜ್ಞಾನದ ಸರಸ್ವತಿಯೊಂದಿಗೆ ಆನಂದವೂ ಇಲ್ಲಿ ಹೆಪ್ಪುಗಟ್ಟಿದೆ ಎಂದು ಪುನಃ ಹೇಳಬೇಕೆ? ಭಕ್ತನನ್ನು ಮೆಚ್ಚಿ ಬಂದ ಆ ಜಲಧಾರೆ ಭಕ್ತಿಯಿಂದ ಬಂದ ಎಲ್ಲರಿಗೂ ಪುಳಕ ತರುವುದು. ಅಷ್ಟೇ ಏಕೆ? ಜ್ಞಾನ ಆನಂದಗಳು ಒತ್ತಟ್ಟಿಗಿರಲಿ. ಅದಕ್ಕೆ ಕಾರಣವಾದ ಮುಕ್ತಿಯೂ ಸಹ ಇಲ್ಲಿ ಸಿಕ್ಕೇ ಸಿಗುವುದು. ಹಿರಿಯರಿಂದ ಕಿರಿಯವರಿಗೆ ಕೀರ್ತಿ ಬರುವುದು ಒಂದು ವಿಧಾನ. ಕಿರಿಯರಿಂದಲೇ ಹಿರಿಯರು ಸಂಸಾರ ದಾಟುವುದು ಮಗದೊಂದು ಬಗೆ. ಇಲ್ಲಿಯೇ ಕಪಿಲ ನಾಮಕ ಭಗವಂತನು ಅವತರಿಸಿ ತಾಯಿಗೇ ತತ್ತ್ವೋಪದೇಶ ನೀಡಿ ತಾಯಿಯನ್ನೇ ಮುಕ್ತಿಗೆ ಮುಟ್ಟಿಸುವವನಾದ. ಅಂತಹ ಭಗವಂತನ

ಜ್ಞಾನೋಪದೇಶದ ನೆಲೆವೀಡು. ಅಷ್ಟೇ ಏಕೆ? ತಾಯಿಯು ತತ್ತ್ವೋಪದೇಶ ಪಡೆದು ಮುಕ್ತಿಯ ದಾರಿ ನಡೆದಳು. ಮಗನಿಂದ ತಾಯಿಯೇ ಸದ್ಗತಿ ಪಡೆದಳು ಎಂದ ಮೇಲೆ ಮುಕ್ತಿಯನ್ನೇ ನೀಡಿದ ಮಗನಿಗೆ ತಾಯಿಯ ಋಣ ತಕರಾರು ಹೂಡಿತೆ? ಹೀಗಾಗಿ ಮಾತೃ ಋಣ ತೀರಿಸುವ ಮಹಾಭೂಮಿ ಈ ಕ್ಷೇತ್ರವಾಗಿದ್ದು ಮಾತೃಗಯಾ ಎಂದು ಪ್ರಸಿದ್ಧ ವಾಗಿದೆ. ಯೋಗ ಶಾಸ್ತ್ರವನ್ನೇ ಪ್ರಚುರ ಪಡಿಸಿದ ಕಪಿಲನ ಆವಿರ್ಭಾವತಾಣ ಒಂದೆಡೆಯಾದರೆ, ದೇವಹೂತಿಗೂ ಮಂಗಳವಾದ ಸ್ಥಳದ ಪಾವಿತ್ರ್ಯ ಮಗದೊಂದೆಡೆ. ಇಷ್ಟೆ ಅಲ್ಲದೆ ಪರಶುರಾಮನು ಮಾತೃಹತ್ಯೆಯ ಪಾಪವನ್ನು ತೊಳೆದುಕೊಂಡಿದ್ದರಿಂದ ಮಾತೃಶ್ರಾದ್ಧಕ್ಕೆ ಉಪಯುಕ್ತವೆನಿಸಿದೆ. ಇಲ್ಲಿ ಶುದ್ಧವಾದ ಮನಸ್ಸಿನಿಂದ ಯಾವ ಕಾರ್ಯವನ್ನು ಮಾಡಿದರೂ ಸಿದ್ಧಿಸುವುದರಿಂದ ಇದಕ್ಕೆ ಸಿದ್ಧಪುರೀ ಎಂಬ ಹೆಸರು ಪ್ರಸಿದ್ಧವಾಗಿದೆ. ಇಲ್ಲಿಯ ನದಿಯಲ್ಲಿ ಒಂದೇ ಗೇಣು ನೀರಿದ್ದರೂ ಸಹ ಎಷ್ಟು ಜನರು ಸ್ನಾನ ಮಾಡಿದರೂ ನೀರು ಕೆಡುವುದಿಲ್ಲ.

2. ಸಂಕಲ್ಪಃ

ಶುಭೇ ಶೋಭನೇ ಮುಹೂರ್ತೇ ವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಪ್ರಥಮ ಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಬಿಂದುಸರೋವರೇ ಆರ್ಯಾವರ್ತಾಂತರ್ಗತ ಅರ್ಬುದಾರಾಣ್ಯೇ ಕಪಿಲಕರ್ದಮಾಶ್ರಮೇ ರೇವಾಯಾಃ ಉತ್ತರೇ ತೀರೇ ಸರಸ್ವತ್ಯಾಃ ಪಶ್ಚಿಮೇ ತೀರೇ ಕನ್ಯಕಾ ನಾಮ ಕ್ಷೇತ್ರೇ ವ್ಯಾವಹಾರಿಕ ಸಂವತ್ಸರೇ........... ಅಯನೇ............ ಋತೌ......... ಮಾಸೇ......... ಪಕ್ಷೇ....... ತಿಥೌ............. ವಾಸರೇ ಶುಭ ನಕ್ಷತ್ರ ಶುಭ ಯೋಗ ಶುಭ ಕರಣ ವಿಶಿಷ್ಟಾಯಾಂ ಅಸ್ಮದ್ ಗುರೂಣಾಂ ಹೃತ್ಕಮಲನಿವಾಸಿ ವಾಸುದೇವ ಸಂಕರ್ಷಣ ಪ್ರದ್ಯುಮ್ನಾನಿರುದ್ಧ ಚತುರ್ಮೂರ್ತ್ಯಾದ್ಯನಂತಾವತಾರಾತ್ಮಕ ಕ್ಷೀರಾಬ್ಧಿಶಾಯಿ ಪಾಂಡುರಂಗವಿಠ್ಠಲಾತ್ಮಕ ಮಾಸನಿಯಾಮಕ.......... ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಕಪಿಲ ರೂಪಿ ಪರಮಾತ್ಮನಃ ಪ್ರೇರಣಯಾ ಕಪಿಲ ರೂಪಿ ಪರಮಾತ್ಮನಃ ಪ್ರೀತ್ಯರ್ಥಂ ಹರಿಸರ್ವೋತ್ತಮತ್ವ ಜ್ಞಾನ ಭಕ್ತಿ ವೈರಾಗ್ಯಾದಿ ಸಿದ್ಧ್ಯರ್ಥಂ ವಿಷ್ಣುವೈಷ್ಣವ ಪರಿಚರಣ ಯೋಗ್ಯತಾ ಸಿದ್ಧ್ಯರ್ಥಂ ಜ್ಞಾತಾಜ್ಞಾತ ದೋಷಪರಿಹಾರಾರ್ಥಂ ತುಳಸೀ ವೃಂದಾವನ ಅಶ್ವತ್ಥ ಗೋಬ್ರಾಹ್ಮಣ ವಿಷ್ಣು ವೈಷ್ಣವ ಸಾಲಿಗ್ರಾಮ ಚಕ್ರಾಂಕಿತ ಸನ್ನಿಧೌ ಭಾಗೀರಥ್ಯಾದಿ ತ್ರಿಕೋಟಿ ತೀರ್ಥಾಭಿಮಾನಿ ದೇವತಾ ಸನ್ನಿಹಿತೇ ಅಸ್ಮಿನ್ ಜಲಸರಸಿ ಪ್ರಾತಃ ಸ್ನಾನಂ ಅಹಂ ಕರಿಷ್ಯೇ॥

3. ಮಾತೃಗಯಾ ಸ್ತುತಿ

ಭಾತಿ ಸಿದ್ಧಪುರೀ ಯತ್ರ ಸಿದ್ಧಾ ಮುಕ್ತಿಪುರೀ ನೃಣಾಂ।
ಪುಣ್ಯಂ ಬಿಂದುಸರೋ ಯತ್ರ ಬಿಂದು ಮಾತ್ರಂ ಸರಸ್ಸಮಂ ॥ *-ತೀರ್ಥಪ್ರಬಂಧ*

ಸಿದ್ಧಪುರಿಯಲ್ಲಿ ಮುಕ್ತಿಯು ಮನುಜರಿಗೆ ಶತಸಿದ್ಧವಾಗಿರುವುದರಿಂದಲೇ ಅದು ಸಿದ್ಧಪುರಿ ಎನಿಸಿದೆ. ಇಲ್ಲಿ ಸಂಪಾದಿಸಿದ ಬಿಂದುವಿನಷ್ಟು ಪುಣ್ಯವೂ ಕೂಡ ಸರೋವರದಷ್ಟು ಹೆಚ್ಚಾಗುವುದರಿಂದ ಇದಕ್ಕೆ ಬಿಂದು ಸರೋವರ ಎಂಬ ಹೆಸರು ಸಾರ್ಥಕ ಎನ್ನುತ್ತಾರೆ. ನೀರು ಅಲ್ಪವಾದರೇನಂತೆ? ಪುಣ್ಯವನ್ನೇ ಗುಣಾಕಾರ ಮಾಡಿಕೊಡುವ ಇದರ ಗುಣಕ್ಕೆ ನಾವು ಶರಣಾಗಲೇ ಬೇಕು. ಅನಂತನೆನಿಸಿದ ಹರಿಯ ಮಹಿಮೆಗೆ ಅಲ್ಪ ಪುಣ್ಯ ಅಗಾಧ ಮಾಡುವುದು ಅದೇನು ಕಷ್ಟ?

4. ದೇವಹೂತಿಕೃತ ಕಪಿಲ ಸ್ತುತಿ (ಇದನ್ನು ಹೇಳಿರಿ)

ಅಥಾಪ್ಯಯಂ ತೇ ಸಲಿಲೇ ಶಯಾನಂ
ಭೂತೇಂದ್ರಿಯಾರ್ಥಮಯಂ ವಪುಸ್ತೇ।
ಗುಣಪ್ರವಾಹಂ ಸದಶೇಷಬೀಜಂ
ದಧ್ಯೌಸ್ವಯಂ ಯಜ್ಜಠರಾಜ್ಜಜಾತಃ॥
ಸ ಏವ ವಿಶ್ವಸ್ಯ ಭವಾನ್ ವಿಧತ್ತೇ
ಗುಣಪ್ರವಾಹೇಷು ವಿಭಕ್ತವೀರ್ಯಃ
ಸರ್ಗಾದ್ಯನೀಹೋ ವಿತಥಾಭಿಸಂಧಿಃ
ಆತ್ಮೇಶ್ವರೋಽ ತರ್ಕ್ಯಸಹಸ್ರಶಕ್ತಿಃ॥
ಸ ತ್ವಂ ಭೃತೋ ಮೇ ಜಠರೇಣ ನಾಥ
ಕಥಂ ನು ಯಸ್ಯೋದರ ಏತದಾಸೀತ್ ।
ವಿಶ್ವಂ ಯುಗಾಂತೇ ವಟಪತ್ರ ಏಕಃ
ಶೇತೇ ಸ್ಮ ಮಾಯಾಶಿಶುರಂಘ್ರಿಪಾನಃ॥
ತ್ವಂ ದೇಹತಂತ್ರಃ ಪ್ರಶಮಾಯ ಪಾಪ್ಮನಾಂ
ನಿದೇಶಭಾಜಾಂ ಚ ವಿಭೋ ವಿಭೂತಯೇ।
ಯಥಾವತಾರಾಸ್ತವ ಸೂಕರಾದಯ
ಸ್ತಥಾಽಯಮಪ್ಯಾತ್ಮ ಪಥೋಪಲಬ್ಧಯೇ ॥
ಯನ್ನಾಮಧೇಯಶ್ರವಣಾನುಕೀರ್ತನಾತ್
ಯತ್ಪ್ರಹ್ವಣಾತ್ ಯತ್ಸ್ಮರಣಾದಪಿ ಕ್ವಚಿತ್।

ಶ್ವಾದೋಽಪಿ ಸದ್ಯಃ ಸವನಾಯ ಕಲ್ಪತೇ
ಕುತಃ ಪುನಸ್ತೇ ಭಗವನ್ನು ದರ್ಶನಾತ್ ॥
ಅಹೋ ಬತ ಶ್ವಪಚೋಽತೋ ಗರೀಯಾನ್
ಯಜ್ಜಿಹ್ವಾಗ್ರೇ ವರ್ತತೇ ನಾಮ ತುಭ್ಯಂ ।
ತೇಪುಸ್ತಪಸ್ತೇ ಜಹುವುಃ ಸುರಾದೀಕಾನ್
ಬ್ರಹ್ಮಾನೂಚುಃ ನಾಮ ಗೃಣಂತಿ ಯೇ ತೇ॥
ತಂ ತ್ವಾದ್ಧಾಽಹಂ ಬ್ರಹ್ಮ ಪರಂ ಪುಮಾಂಸಂ
ಪ್ರತ್ಯಕ್ ಸ್ರೋತಸ್ಯಾತ್ಮನಿ ಸಂವಿಭಾವ್ಯಂ ।
ಸ್ವತೇಜಸಾ ಧ್ವಸ್ತಗುಣಪ್ರವಾಹಂ
ವಂದೇ ವಿಷ್ಣುಂ ಕಪಿಲಂ ವೇದಗರ್ಭಮ್ ॥ -ಭಾಗವತ ತೃತೀಯಸ್ಕಂಧ

ಜಗತ್ತನ್ನೇ ಜಠರದಲ್ಲಿ ಧರಿಸಿರುವ ಜಗನ್ನಾಥನಾದ ನೀನು ಪ್ರಳಯದಲ್ಲಿ ವಟಪತ್ರದಲ್ಲಿ ಮಗುವಾಗಿ ಮಲಗಿ, ನಿನ್ನ ಆ ಪಾದಗಳನ್ನೇ ಸವಿಯುತ್ತಾ ಮಹದಾನಂದದಲ್ಲಿ ಮಗ್ನನಾಗಿರುವ ಮಹಾದೇವನು ನೀನು! ಇಂಥ ನೀನು ನನ್ನ ಜಠರದಲ್ಲಿ ಬಂದೇ ಎಂದರೆ ನಗು ಬಾರದೇ? ಇಂತಹ ನೀನು ನನ್ನಲ್ಲಿ ಅವತರಿಸುವುದು ಕರುಣೆಯ ಕಥೆಯಲ್ಲದೆ ಮತ್ತೇನು ಕಪಿಲ? ನೀನು ದೇಹ ಧರಿಸಿ ಬಂದದ್ದು ಪಾಪಿಗಳಾದ ನಮ್ಮ ಪಾಪ ಪರಿಹರಿಸಲು- ದೇವತೆಗಳ ವೈಭವ ವಿಸ್ತರಿಸಿ ನಿರೂಪಿಸಲು! ನಿನ್ನ ಆ ವರಾಹ ಅವತಾರ ಜಗತ್ಕಲ್ಯಾಣದ ಮಾರ್ಗ ತೋರಲಿಕ್ಕಾಗಿ ಆದಂತೆ, ಇದೂ ಸಹ ಮುಮುಕ್ಷುಗಳ ಮಾರ್ಗದ ಮುಂಬೆಳಕು ತೋರಲಿಕ್ಕಾಗಿಯೇ ಇದೆ! ಯಾವನ ನಾಮ ಕೇಳಿದರೂ ಸಾಕು, ಒಮ್ಮೆ ಬಾಗಿ ನಮಿಸಿದರೂ ಸರಿ, ಅಥವಾ ಸರಿಯಾಗಿ ಸ್ಮರಣೆ ಮಾಡಿದರೂ ಸಾಕು- ನಾಯಿಗಿಂತ ನೀಚನಾದ ಚಂಡಾಲನೂ ಸಹ ಉದ್ಧಾರ ಹೊಂದುತ್ತಾನೆ. ಹೀಗಿರುವಾಗ ನಿನ್ನನ್ನು ಕಂಡ ಸಾಧಕರ ಹಿರಿಮೆ ಹೇಳುವುದೇನಿದೆ? ನಿನ್ನ ನಾಮ ನಾಲಿಗೆಯ ತುದಿಯಲ್ಲಿದ್ದರೂ ಸರಿ ಚಂಡಾಲನೂ ಸಹ ಸನ್ಮಾನಕ್ಕೆ ಸಹಭಾಗಿ ಆಗುವನು. ನಾಮ ಉಚ್ಚರಿಸಿದರೆ ತಪಸ್ಸು ಮಾಡಿದಂತಾಯಿತು. ದೇವತೆಗಳ ಹೋಮ ಮಾಡಿದ್ದಕ್ಕಿಂತಲೂ ಹೆಚ್ಚಾಯಿತು. ವೇದ ಓದಿದ್ದಕ್ಕೂ ಮಿಗಿಲಾಯಿತು. ನಿನ್ನ ನಾಮಕ್ಕೆ ಸರಿಸಮ ಎಲ್ಲಿದೆ? ನಿನ್ನ ಉಪದೇಶದಿಂದ ದೇಹಾಭಿಮಾನ ಧೂಳಿಪಟವಾಗಿದೆ. ಹೊರಗಿನ ಹಂಬಲ ತೊರೆದವರಿಗೆ ನೀನು ಗೋಚರಿಸುವೆ. ನೀನು ಸರ್ವತ್ರ ವ್ಯಾಪ್ತ ಬಲ ಆನಂದಗಳ ಸ್ವರೂಪ. ಸಕಲವೇದಗಳೂ ನಿನ್ನನ್ನೇ ಗಾನಮಾಡುವುದು. ವೇದಗಳನ್ನು ಕಾಲ- ಕಾಲಕ್ಕೆ ಕಾಪಾಡಿ, ಪ್ರಚಾರಮಾಡಿ, ವಿಭಾಗಿಸಿ, ವಿವರಿಸುವವನೂ ನೀನೆ. ನಿನಗೆ ಸಾಷ್ಟಾಂಗ ನಮಸ್ಕಾರಗಳು.

5. ತಾಯಿಯ ಋಣ ತೀರದು

(16 ಪಿಂಡವಿಟ್ಟದ್ದು ಆಗಲಿಲ್ಲ ದಂಡ, ಅದರೆ ಅರಿಯದ ನಾನು ಮಾತ್ರ ಮೊಂಡ)

ಎಲ್ಲಿ ತಾಯಿಯ ಋಣದ ಪರಿಹಾರ ನೆನೆಸಿ 16 ಪಿಂಡಗಳನ್ನು ಇಡಲಾಗುತ್ತದೋ, ಅದನ್ನು ನೆನೆಸಿಕೊಂಡಾಗ ಕರುಳು ಕಿವಿಚಿದಂತಾಗುತ್ತದೆ. ಕಲ್ಲೆದೆಯವನ ಮನಸ್ಸು ಸಹ ಕರಗುತ್ತದೆ. ಒಂದು ನೆನಪಿಟ್ಟುಕೊಳ್ಳಿರಿ. ನಿಮ್ಮ ತಂದೆ-ತಾಯಿಯರು ನಿಮ್ಮನ್ನು ನೋಡಿಕೊಂಡಂತೆ ನೀವು ನಿಮ್ಮ ಮಕ್ಕಳನ್ನು ನೋಡಿಕೊಳ್ಳಲಾರಿರಿ. ನೀವು (Parents for rents) ಅವರು ತಮ್ಮ ಸುಖ Pay ಮಾಡಿ ನಿಮಗೆ ಸುಖ ಕೊಟ್ಟರು. ಹೀಗಾಗಿ ಅರ್ಥ ತಿಳಿದು ಪಿಂಡ ಪ್ರದಾನ ಮಾಡಿರಿ,

ಗರ್ಭಸ್ಥೇ ಗಮನೇ ದುಃಖೇ ವಿಷಮೇ ಭೂರಿವರ್ತ್ಮನಿ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥1॥

ನಾನು ಗರ್ಭದಲ್ಲಿರುವುದರಿಂದ ನಿನಗೆಷ್ಟು ಕಷ್ಟವಾಯಿತು? ಅತಿಥಿಗಳು ಮನೆಗೆ ಬಂದರೇನೇ ಮನೆಯವರ ಸ್ವಾತಂತ್ರ್ಯ ಹೋಗುವುದು-ಹೀಗಿರುವಾಗ 9 ತಿಂಗಳು ನಿನ್ನೊಳಗೆ ಬಂದುದರಿಂದ ನಿನ್ನ ದೇಹಕ್ಕೆ ಎಷ್ಟೊಂದು ವಿಕಾರವಾಯಿತು. ದುಃಖವಾಯಿತು. ಊಟವಾದಾಗ ತಿಂದದ್ದೆಲ್ಲ ವಾಂತಿ, ಹೊಟ್ಟೆ ಹೊತ್ತು ಸಮಾರಂಭದಲ್ಲಿ ಭಾಗವಹಿಸಲೂ ಆಗಲಿಲ್ಲ. ಮನೆ ಸಮಾರಂಭ ಸಮಾಜದಲ್ಲಿ ಮುಜುಗರವಾದರೂ ನನಗಾಗಿ ಅದನ್ನು ಸಹಿಸಿಕೊಂಡಿರುವ ನಿನಗೆ ನಮನ. ಅಮ್ಮಾ ಆ ಋಣ ಪರಿಹಾರಕ್ಕಾಗಿ ನಿನಗೆ ಪಿಂಡಪ್ರದಾನ ಮಾಡುತ್ತಿರುವೆ.

ಯಾವತ್ಪುತ್ರೋ ನ ಭವತಿ ತಾವನ್ಮಾತುಶ್ಚ ಶೋಚನಮ್ ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥2॥

ಗರ್ಭದಲ್ಲಿದ್ದ ನಾನು ಹೊರಗೆ ಬರುವ ತನಕ ನಿನಗಾದ ಶೋಕಕ್ಕೆ ಕೊನೆಯಿಲ್ಲ. ಸಿಕ್ಕಾಪಟ್ಟೆ ತಿರುಗಾಡಲಾಗದು ಮಗುವಿಗೆ ಏನಾದೀತೋ ಎಂಬ ಗಾಬರಿ-ದಿಗಿಲು ಅಡ್ಡಾದಿಡ್ಡಿಯಾಗಿ ಬಂದರಂತೂ ತನ್ನ ಪ್ರಾಣವೇ ಹೋದರೆ ಎಂಬ ಭಯ ಬೇರೆ. ಅಮ್ಮಾ..

ಶೈಥಿಲ್ಯೇ ಪ್ರಸವೈಃ ಪ್ರಾಪ್ತೇ ಮಾತಾ ನಿಂದತಿ ತತ್ಕೃತಮ್ ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥3॥

ತಾಯಿಯಾದ್ದರಿಂದ ನಿನ್ನ ದೇಹಸೌಷ್ಠವ ಹಾಳಾಗುವುದು. ಹಾಳಾದರಾಗಲಿ ಮಗು ಮುದ್ದಾಗಿದ್ದರೆ ಸಾಕು ಎಂದು ನನಗಾಗಿ ನಿನ್ನ ತ್ಯಾಗ ಎಷ್ಟು ದೊಡ್ಡದು. ನಾನು ಇದ್ದದ್ದು 9

ತಿಂಗಳು. ನೀನು ಒದ್ದಾಡಿದ್ದು ಆದಕ್ಕಾಗಿ ಜೀವನಪರ್ಯಂತ! ಪ್ರೇಮಮಯಿಯೇ, ಆದರೂ ನನ್ನನ್ನು ನೀನು ನಲಿವಿನಿಂದ ಕಾಪಾಡಿದೆ. ಅಮ್ಮಾ.....

ಸಂಪೂರ್ಣೇ ದಶಮೇ ಮಾಸಿ ಮಾತಾ ಕ್ರಂದತಿ ದುಷ್ಕೃತಮ್ ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥4॥

ತಿಂಗಳು ತುಂಬಿದಂತೆ ನಾನಂತೂ ಗರ್ಭದಲ್ಲಿ ಬೆಳೆಯುತ್ತಿದ್ದೆ. ನಿನ್ನ ಚಿಂತೆ - ಯೋಚನೆ ದುಪ್ಪಟ್ಟು ಬೆಳೆಯುತ್ತಿತ್ತು. ನೀನು ಆಗ ಯಾರ ಬಳಿ ಹೇಳಿಕೊಳ್ಳದೆ ಒಳಗೊಳಗೆ ಅತ್ತೆ. ನಾನು ಸತ್ತರೂ ಸರಿ ಮಗು ಬದುಕಿದರೆ ಸಾಕು ಎಂದುಕೊಂಡಿ! ಅಮ್ಮಾ ನಿನ್ನ ತ್ಯಾಗಕ್ಕೆ ನಾನೇನು ನೀಡಲಿ? ಅಮ್ಮಾ......

ದಿವಾರಾತ್ರೌ ಚ ಯಾ ಮಾತಾ ಸ್ತನಂ ದತ್ವಾ ಚ ಪಾಲಿತಾ ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥5॥

ಹಗಲು ರಾತ್ರಿ ಹಾಲಿಗಾಗಿ ಅತ್ತೆ. ನಿನ್ನ ಸವಿನಿದ್ದೆ ಧ್ವಂಸವಾಯಿತು, ಆದರೂ ನನಗೆ ಹಾಲು ನೀಡಿ ನನ್ನ ಬೆಳೆಸಿದೆ! ನಿನ್ನ ನಿದ್ದೆ ಹಾಳಾದರೂ ನಾನು ಮತ್ತೆ ಮಲಗಿದ್ದ ಕಂಡು ಒಳಗೊಳಗೆ ಖುಷಿಪಟ್ಟೆ. ಅಮ್ಮಾ! ನಿನ್ನ ಋಣಕ್ಕೆ ಸರಿಸಾಟಿ ಏನಿದೆ? ಅಮ್ಮಾ......

ಅಗ್ನಿನಾ ಶೋಚಿತೇ ದೇಹೇ ತ್ರಿರಾತ್ರೋ ಪೋಷಣೇನ ಚ ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥6॥

ನಾನು ಹಾಲು ಕುಡಿದಾಗ ಶೀತಹೋಗಿ ನಿನ್ನ ದೇಹವೇ ಉಷ್ಣವಾಗುತ್ತಿತ್ತು. ಅದರೂ ನೀನು ಹಾಲು ಕುಡಿಸುವುದು ನಿಲ್ಲಿಸಲಿಲ್ಲ. ದೇಹ ಬಿಸಿ ಕಾಪಾಡಿ ಬಿಸಿ ಬಿಸಿ ಹಾಲು ಕೊಟ್ಟೇ. ಆದರೆ ಈಗ ನಾನು ಅದನ್ನು ನೆನಪಿಸಿ ಋಣ ಪರಿಹಾರಕ್ಕಾಗಿ ಪಿಂಡ ಪ್ರದಾನ ಮಾಡುತ್ತಿರುವೆ. ಅಮ್ಮಾ......

ರಾತ್ರೌ ಮೂತ್ರಪುರೀಷಾಭ್ಯಾಂ ವರ್ಧತೇ ಮಾತೃಕರ್ಪಟೇ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥7॥

ರಾತ್ರಿ ಮಲಮೂತ್ರ ವಿಸರ್ಜಿಸಿ ಅತ್ತೇ! ಅಗ ನಿನ್ನ ನಿದ್ದೆ ಹಾಳಾಯಿತು. ಹಾಸಿಗೆಯಲ್ಲಾ ಒದ್ದೆ! ಒದ್ದೆ! ದುರ್ಗಂಧ ಮುಜುಗರ ಎಲ್ಲಾ ನಿನಗೆ ತಂದೆ! ಕಸ ಮಾಡಿದ ನನ್ನನ್ನ ನೀನು ತಳ್ಳದೇ ಎತ್ತಿಕೊಂಡೆ. ಅಸಹ್ಯ ಮಾಡಿದ ನನ್ನನ್ನ ಅಪ್ಪಿಕೊಂಡೆ. ತೊಡೆ ಏರಿದ ನಾನು ನಿನ್ನ ಸೀರೆಯನ್ನೆಲ್ಲಾ ತೋಯಿಸಿದೆ. ಆದರೆ ನೀನು ಬೇಸರ ಮಾಡಿಕೊಳ್ಳದೇ ನನ್ನ ಬೆಚ್ಚಗಿಟ್ಟೆ ಇದು ದಿನಗಟ್ಟಲೆಯಲ್ಲಾ! ವರ್ಷಗಟ್ಟಲೆ! ನನಗೆ ಹರ್ಷ ಕೊಟ್ಟೆ. ಅಮ್ಮಾ......

ಮಾಸಿ ಮಾಸಿ ನಿದಾಘೇ ಚ ಶರೀರಾತಪದುಃಖಿತಾ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥8॥

ಚಳಿ - ಬಿಸಿಲು, ಮಳೆ-ಗಾಳಿಯಿಂದ ಋತು ಬದಲಾದಂತೆ ನನ್ನ ಆರೋಗ್ಯ ಏರುಪೇರಾಯಿತು. ಆದರೂ ನನ್ನನ್ನು ಹೆಗಲಿಗೇರಿಸಿಕೊಳ್ಳುವುದನ್ನು ನೀನು ಬಿಡಲಿಲ್ಲ. ನಿನಗೆ ಜ್ವರ ಬಂದರೂ ನನ್ನನ್ನು ಜೋಪಾನ ಮಾಡಿದೆ. ಚಳಿ ಆದರೂ ನೀನು ನನ್ನ ಬಳಿಯೇ ಇದ್ದೆ ಅಮ್ಮಾ! ನನಗಾಗಿ ನೀನು ನರಳಿದೆ. ಅಮ್ಮಾ......

ಗಾತ್ರಭಂಗೋ ಭವೇನ್ಮಾತುಃ ಘೋರಬಾಧೇ ಪ್ರಪೀಡಿತೇ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್॥9॥

ನಾನು ನಿನಗೆ ಎಷ್ಟು ಬಾರಿ ತುಂಟತನ ಮಾಡಿಲ್ಲ. ನಾನೇನೋ ನಿನ್ನ ದೇಹದ ಮೇಲೆ ಕಾಲಿನಿಂದ ನಲಿದೆ. ನನಗೆ ನಲಿವು. ನಿನಗೆ ನೋವು, ಆದರೂ ನೀನು ನನ್ನನ್ನು ಕೆಳಗಿಳಿಸಲಿಲ್ಲ ಬದಿಗಿಡಲಿಲ್ಲ. ಬಾಧೆ ಬಂದರೂ ಸಹ ಪೀಡೆಯಾದರೂ ಪ್ರೀತಿಸಿದೆ. ಅಮ್ಮಾ......

ಪಾದಾಭ್ಯಾಂ ಜನಯೇತ್ ಪುತ್ರೋ ಜನನೀ ಪರಿವೇದನಮ್।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥10॥

ಗರ್ಭದಲ್ಲಿದ್ದಾಗ ನಿನಗೆ ಒದ್ದೆ. ಮಗುವಾಗ ಕಾಲಿಂದ ಜಾಡಿಸಿದೆ. ಬೆಳೆದ ನಂತರವೂ ನಿನಗೆ ಕಾಲು ತೋರಿದ್ದುಂಟು . ನೀ ಮಾಡಿದ್ದೆಲ್ಲಾ ಕಾಲು ಕಸ ಎಂದು ಕಡೆಗಾಣಿಸಿದೆ. ಕಾಲಿಂದ ನಿನಗೆ ಕೊನೆಗಾಣದ ಕಂಬನಿ ನೀಡಿದೆ. ಅಮ್ಮಾ ನನ್ನ ತುಂಟತನದಿಂದ ನಿನ್ನನ್ನು ಗೋಳಾಡಿಸಿಲ್ಲವೇ? ಅಮ್ಮಾ......

ಅಲ್ಪಾಹಾರಗತಾ ಮಾತಾ ಯಾವತ್ ಪುತ್ರೋಽಸ್ತಿ ಬಾಲಕಃ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥11॥

ಅಂದು ನಾನು ಮಲಗಿದ್ದಾಗ ನನಗಾಗಿ ನಿನ್ನ ಊಟದ ಸಮಯ ಎಷ್ಟು ಬಾರೀ ಮುಂದೆ ಹೋಗಿಲ್ಲವೆ? ತೊಡೆಯ ಮೇಲೆ ಮಲಗಿಕೊಂಡಾಗ ನಿನ್ನ ಊಟಕ್ಕೆ ಅಡ್ಡಿಯಾಗಿಲ್ಲವೇ? ಊಟದ ವೇಳೆಯಲ್ಲಿ ಮಲವಿಸರ್ಜನೆ ಮಾಡಿ ನಿನಗೆ ಮುಜುಗರ ಮಾಡಿಲ್ಲವೇ ? ಬಡತನದಲ್ಲಿ ನನಗಾಗಿ ಊಟ ಮಾಡಿಸಿ ನೀನು ಉಪವಾಸ ಮಲಗಿರಬಹುದು. ಮತ್ತಾರು ಅಡಿಗೆ ಮಾಡುವವರು ಎಂದು ಹಾಗೇ ಮಲಗಿರಬಹುದು. ಊಟದ ವೇಳೆ ರಂಪ ಮಾಡಿ ಎಷ್ಟು ಬಾರಿ ನಿನ್ನ ಊಟ ತಪ್ಪಿಸಿಲ್ಲ? ಅಂತೂ ಅಲ್ಪನಾದ ನನ್ನಿಂದ ನಿನ್ನ ಆಹಾರ ಸ್ವಲ್ಪವಾಯಿತು. ನೆನಿಸಿಕೊಂಡಾಗ ಮನಸ್ಸು ಸಂಕೋಚದ ಮುದ್ದೆ

ಯಾಗುವುದು. ಅದರ ಮುಂದೆ ಪಿಂಡರೂಪವಾದ ಅನ್ನದ ಮುದ್ದೆ ಕೇವಲ ಸಾಂಕೇತಿಕ ಅಲ್ಲವೇ. ಅಮ್ಮಾ.....

ಪಿಬಂತೀ ಕಟುಕದ್ರವ್ಯಂ ಮಾತಾ ಯಸ್ಯ ಹಿತಾಯ ಚ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್॥12॥

ಬೇಗ ಪ್ರಸವವಾಗಲೀ ಎಂದು ಕಹಿಯ ಜೀರಿಗೆ ಕಷಾಯ ಕುಡಿದೆ. ಮಗುವಿಗೆ ನೆಗಡಿಯಾಗದಿರಲಿ ಎಂದು ಮೆಣಸಿನ ಸಾರು ನೀ ಕುಡಿದೆ. ಮಗುವಿಗೆ ಆರೋಗ್ಯ ವಿರಲಿ ಎಂದು ತಲೆಗೆಲ್ಲಾ ಸುತ್ತಿಕೊಂಡು ಒದ್ದಾಡಿದೆ. ನಾನು ಬರುವ ತನಕ ನಿನಗೆ ಬಂಧನ, ಬಂದ ಮೇಲೆ ಆಹಾರ ನಿಬಂಧನ, ಆದರೂ ತಪ್ಪಲಿಲ್ಲ ನಿನ್ನ ಪ್ರೀತಿಯ ಬಾಹುಬಂಧನ! ಎರಡೂ ಕೈಯಿಂದ ಎರಡು ಮಾತಾಡದೆ ಮಾಡಿರುವ ಸೇವೆಗೆ ಒಂದೇ ಕೈಯಿಂದ ಪಿಂಡಪ್ರದಾನ ಮಾಡುವುದು ನಿಜವಾಗಿ ಋಣ ತೀರಿಸಲು ಅಲ್ಲ. ಕರ್ತವ್ಯದ ಸಂಕೇತಕ್ಕಾಗಿ. ನನಗಾಗಿ ನೀ ಔಷಧ ಕುಡಿದೆ, ನಿದ್ದೆಗೆಟ್ಟು ನೀನು ಒದ್ದಾಡಿದೆ. ಅಮ್ಮಾ....

ಪುತ್ರೋ ವ್ಯಾಧಿಸಮಾಯುಕ್ತೋ ಮಾತಾ ಕ್ರಂದನಕಾರಣೇ।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್॥13॥

ನನಗೆ ರೋಗಬಂದಾಗ ಅತ್ತು ಅಲವತ್ತು ದೇವರಲ್ಲಿ ಬೇಡಿ ಔಷಧಿಗಾಗಿ ಅಲೆದಾಡಿ ರಾತ್ರಿ ನಿದ್ದೆಗೆಟ್ಟಿದ್ದು ನೀನು. ನಾನು ಅಳುವುದಕ್ಕೆ ಮೊದಲು ನೀನು ಅತ್ತೆ. ತಿಳಿವಳಿಕೆಯಿಲ್ಲದ ನನಗಾಗಿ ನೀನು ಅಷ್ಟು ಮಾಡಿರುವಾಗ ಈಗ ನಾನು ನಿನಗೆ ಏನ ಕೊಡಲಿ? ಅಮ್ಮಾ...

ಮಾಸೇ ಮಾಸೇ ಕೃತಂ ಕಷ್ಟಂ ವೇದನಾಪ್ರಸವೇಸು ಚ।
ತಸ್ಯಾಃ ನಿಷ್ಕ್ರಮಾಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್॥14॥

ತಿಂಗಳು ಉರುಳುತ್ತಿದ್ದಂತೆ ನಿನ್ನ ಮುಜುಗರ ಹೆಚ್ಚಾಯಿತು. ಮಗು ಬರುವ ತನಕ ಹೆಜ್ಜೆ ಹೆಜ್ಜೆಗೂ ಗಾಬರಿ. ಬರುವ ದಿನ ಬದುಕುವುದೇ ಕಷ್ಟ. ತಾಯಿಯಾದ ನೀನು ಸತ್ತರೂ ಪರವಾಗಿಲ್ಲ, ಮಗುವು ಬದುಕಿದರೆ ಸಾಕು ಎಂದು ಒದ್ದಾಡಿದವಳು ನೀನು. ನಾನು ಬಂದಮೇಲೆ ನಿನಗೆ ಎತ್ತಿಕೊಳ್ಳುವ ಭಾರ. ನನಗಾಗಿ ಮೆಲ್ಲಗೆ ನಡೆಯುವ ದಾಕ್ಷಿಣ್ಯ, ಬೆಳೆಯುವಾಗ ನನ್ನನ್ನು ಬೆಳೆಸಲು ನೀನು ಒಳಗೊಳಗೆ ಒದ್ದಾಡಿದ್ದು. ಅಮ್ಮಾ......

ಯಮದ್ವಾರೇ ಪಥೇ ಘೋರೇ ಪಥಿ ಮಾತುಶ್ಚ ಶೋಚನಮ್।
ತಸ್ಯಾಃ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್॥15॥

ನನಗಾಗಿ ನೀನು ಎಷ್ಟು ಕಷ್ಟ ಅನುಭವಿಸಿಲ್ಲ? ಸಾಯುವಾಗ ನಿನಗೆ ಎಂಥ ವೇದನೆ

ಆಗಿರಬಹುದು? ಆಗ ನಾನು ಬಳಿಯಲ್ಲಿರಲಿಲ್ಲ. ಇದ್ದರೂ ಏನೂ ಮಾಡಬೇಕೆಂದು ತೋಚಲಿಲ್ಲ. ಬದುಕಿನಲ್ಲಿ, ಸಾವಿನಲ್ಲೂ ನೋವನ್ನುಂಡು ನಲಿವು ತಂದ ನಲ್ಮೆಯ ತಾಯಿ ನೀನು. ನೀನು ದೂರವಾಗಿ ಯಮಲೋಕದ ದಾರಿಯಲ್ಲಿ ಮಕ್ಕಳೇನಾದರೂ ಮಾಡಿಯಾರೆಂದು ಮೂಟೆಯಷ್ಟು ಆಸೆ ಹೊತ್ತಿರಬಹುದು. ಮುತ್ಥಾಳರಾದ ನಾವು ಈಗ ನೆನಪಿಸಿಕೊಳ್ಳುತ್ತಿದ್ದೇವೆ. ತಾಯಿ ಆಗ ಆದ ನಿರಾಸೆ ದುಃಖಗಳಿಗೆ ದುಡ್ಡು- ಮಾತು ಯಾವುದೂ ಸರಿ ಪರಿಹಾರವಲ್ಲ. ನಾಚಿಕೆಯಿಂದ ಮನಸ್ಸು ಸಂಕೋಚದ ಮುದ್ದೆಯಾಗಿದೆ. ಕೈಹಿಸುಕಿಕೊಳ್ಳುವಷ್ಟು ಇಡೀ ಜೀವ ಹಿಡಿಯಾಗಿದೆ. ಹೀಗಾಗಿ ನಾನು ಕೈಯಿಂದ ಈ ಪಿಂಡವನ್ನು ಸಾಂಕೇತಿಕವಾಗಿ ನೀಡುತ್ತಿರುವೆ. ನನ್ನನ್ನು ಕ್ಷಮಿಸು. ಮಾತೃ ಋಣದಿಂದ ಮೋಚನೆಗೊಳಿಸು ಅಮ್ಮಾ ದೇವರ ಸ್ಮರಣೆಯಿಂದ, ನನ್ನ ಮಾನವ ಜನ್ಮ ಸಾರ್ಥಕವೆನಿಸು. ಹತ್ತಾರು ಅಪರಾಧಗಳು ಅಳಿಸಲೆಂದು 16 ಪಿಂಡಗಳನ್ನು ನಾ ನೀಡಿರುವೆ.

ಯಾವತ್ಪುತ್ರೋ ಗಯಾಂ ಗತ್ವಾ ಶ್ರಾದ್ಧಂ ಕುರ್ಯಾತ್ ವಿಧಾನತಃ ।
ತಸ್ಯ ನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಮ್ ॥16॥

ತಾಯಿಯಾದ ನಿನ್ನ ಮರಣದ ನಂತರ ಮಗನು ಗಯೆಗೆ ಹೋಗಿ ವಿಧಾನಪೂರ್ವಕವಾಗಿ ಶ್ರಾದ್ಧ ಮಾಡುತ್ತಾನೆ ಎಂದು ಭಾರಿ ಆಸೆ ಹೊತ್ತುಕೊಂಡಿದ್ದಿ. ನಾನು ವಿಳಂಬವಾಗಿ ಈಗ ಅದನ್ನು ಪೂರೈಸುತ್ತಿರುವೆ. ಅಮ್ಮಾ ದೇವರ ಸ್ಮರಣೆಯಿಂದ ಹತ್ತಾರು ಅಪರಾಧಗಳು ಅಳಿಸಲೆಂದು ಪಿಂಡಗಳನ್ನು ನಾ ನೀಡಿರುವೆ.

★★★

ಎಲ್ಲಿಂದ ಬಂದೆ ಮುಂದೆತ್ತ ಪಯಣ

ಎಲ್ಲಿಂದ ಬಂದೆ ಮುಂದೆತ್ತ ಪಯಣ
ಇಲ್ಲಿ ನಿನಗೆಷ್ಟು ದಿನವಾಲಸ್ಯ ಮರುಳೆ? ॥ಪ॥

ಬರವಿದೇತಕೆ ನಿನ್ನ ಸ್ಥಳವೆಲ್ಲಿ ನೆಲೆಯಾಗಿ
ಇರುವ ಮಂದಿರವಾವುದದನೆನಗೆ ಪೇಳೊ
ಧರೆಯೊಳಗೆ ವರ ಕಾಗಿನೆಲೆಯಾದಿಕೇಶವನ
ಸಿರಿ ಚರಣಕಮಲವನು ನೆರೆನಂಬಿ ಸುಖಿಸೊ ॥

-ಶ್ರೀ ಕನಕದಾಸರು

ದಾನ -ವರದಾನ

-ಡಾ|| ಎನ್. ವೆಂಕಟೇಶಾಚಾರ್ಯ

ನಮ್ಮ ಬಳಿ ದೊರೆತಿರುವ ಎಲ್ಲಾ ವಸ್ತುಗಳೂ ಸಹ ಭಗವಂತನ ಆಡಳಿತಕ್ಕೆ ಒಳಪಟ್ಟಿರುವವು. ''ಈಶಾವಾಸ್ಯಂ ಇದಂ ಸರ್ವಂ'' ಪ್ರತಿಯೊಂದರಲ್ಲೂ ಭಗವಂತನ ಸಾನ್ನಿಧ್ಯ ತುಂಬಿ ತುಳುಕುತ್ತಿದೆ. ಹೀಗಾಗಿ ಹರಿಪ್ರೀತಿಗಾಗಿ ಯೋಗ್ಯರಿಗೆ ವಸ್ತುವನ್ನು ನೀಡುವ ಕ್ರಿಯೆಯೇ ದಾನ ಎನ್ನಿಸಿದೆ. ತನಗಾಗಿಯೇ ಅನ್ನ ಬೇಯಿಸಿಕೊಳ್ಳುವವನನ್ನು ಕೇವಲ ಪಾಪವನ್ನೇ ತಿನ್ನುವವನು ಎಂದು ಶಾಸ್ತ್ರ ಹೀಯಾಳಿಸಿದೆ. ''ಅಘಾಯುರಿಂದ್ರಿ-ಯಾರಾಮಃ ಮೋಘಂ ಪಾರ್ಥ ಸ ಜೀವತಿ'' ಅವನ ಆಯುಸ್ಸು ಪಾಪಸಂಪಾದನೆಗಾಗಿ ಇಂದ್ರಿಯ ಸುಖಕ್ಕಾಗಿ -ಅವನ ಬದುಕು ವ್ಯರ್ಥ ಎಂದು ಕೃಷ್ಣ ಹೇಳಿದ್ದಾನೆ. ದಾನ ನೀಡಿದಾಗ ಅವನಿಗೆ ಭೋಗಿಸುವ ಹಕ್ಕು ಬರುತ್ತದೆ. ವೃದ್ಧರಿಗೆ ಸೇವೆ ಮಾಡಿದಾಗ ಬುದ್ಧಿ ಬರುತ್ತದೆ. ''ದಾನೇನ ಭೋಗೀ ಭವತಿ ಮೇಧಾವೀ ವೃದ್ಧಸೇವಯಾ'' ಎಂದಿದೆ ಮನುಸ್ಮೃತಿ.

ಮಧ್ವಾವತಾರವಾದಾಗ ಮಗು ವಾಸುದೇವನಿಗೆ ಹಾಲು ಕುಡಿಯಲು ಅನುವಾಗಲೆಂದು ಮೂಡಿಲ್ಲಾಯರು ಗೋವನ್ನು ದಾನ ಮಾಡಿದರಂತೆ, ಅದರ ಫಲವಾಗಿ ಸಂಸಾರ ಕಳೆಯುವ ಸಾರಭೂತವಾದ ತತ್ವಜ್ಞಾನವನ್ನೇ ಪಡೆದರಂತೆ. ವಾಸುದೇವನಿಗೆ ಉಪದೇಶಮಾಡಿದ ವಿದ್ಯಾದಾನಮಾಡಿದ ಗುರುವಿಗೆ ಮುಕ್ತಿಯೇ ಕರಗತವಾಯಿತು. ದ್ರೌಪದಿಯಿಂದ ಅನ್ನದಾನ ಸ್ವೀಕರಿಸಿದ ಭಿಕ್ಷುವು ಕರಾಳ ಕಲಿಯುಗದಲ್ಲೂ ಜಿಜ್ಞಾಸುವಾಗಿ ಮೆರೆದು ಅಚ್ಯುತಪ್ರೇಕ್ಷರೆಂಬ ಕೀರ್ತಿ ಪಡೆದರು. ಶ್ರೀನಿವಾಸನೂ ಸಹ ಶುಕಾಚಾರ್ಯರ ಆಶ್ರಮದಲ್ಲಿ ಭೋಜನಮಾಡಿ ಅನ್ನದಾನ ಸ್ವೀಕರಿಸಿ ಹರಸಿದನಂತೆ. ತಪಸ್ವಿಗಳ ಮನೆಯಲ್ಲಿ ನೀರನ್ನಾದರೂ ಕೇಳಿ ಕುಡಿ - ನಿನ್ನ ಬದುಕು ಪಾವನವಾದೀತು ಎಂದು ಶ್ರೀನಿವಾಸನೇ ಸೂಚಿಸಿದ್ದಾನೆ. ದಾನ ಕೊಡುವುದು -ಸ್ವೀಕರಿಸುವುದು ಎರಡೂ ಪವಿತ್ರಕಾರ್ಯಗಳೇ ಆಗಿವೆ.

ರಾಮ ವನವಾಸದಲ್ಲಿ ಕಾಡು- ಮೇಡು ಅಲೆಯುತ್ತಿರುವಾಗ ಎಷ್ಟು ತಿರುಗಿದರೂ ಹಣ್ಣು- ಹಂಪಲು ಸಿಗಲಿಲ್ಲವಂತೆ . ಆಗ ರಾಮನು ಲಕ್ಷ್ಮಣನಿಗೆ ಹೇಳಿದನು. ಪ್ರಾಯಶಃ ನಾವು ಹೋದ ಜನ್ಮದಲ್ಲಿ ಏನೂ ದಾನಮಾಡಿಲ್ಲ ಎಂದು ತೋರುತ್ತಿದೆ, ಇಲ್ಲವಾದರೆ ಈ ಹಸಿರು ಕಾಡಿನಲ್ಲಿ ನನ್ನ ಹಸಿವೆ ಹಿಂಗಿಸುವ ಹಣ್ಣು ಸಿಗಬಾರದೇ ಎಂದು ನುಡಿದಿದ್ದಾನೆ. ರಾಮನಿಗೆ ಕರ್ಮಬಂಧವಿಲ್ಲವಾದರೂ ನಮಗೆ ಇದು ನೀತಿ ಪಾಠ.

ಶ್ವೇತಮಹಾರಾಜನು ಭಾರೀ ಯಜ್ಞಗಳನ್ನು ಮಾಡಿದ್ದರೂ ಸಹ ಅನ್ನದಾನಕ್ಕೆ ಅಸ್ತು ಎಂದಿರಲಿಲ್ಲ. ಅನ್ನ ನೀಡಲಿಲ್ಲ. ಮುಂದೆ ಅವನು ಸ್ವರ್ಗಕ್ಕೆ ಹೋದರೂ ಸಹ ಹಸಿವೆಯಿಂದ ಕಂಗಾಲಾಗಿ ಹಲುಬುತ್ತಿದ್ದನು. ತನ್ನ ದೇಹದ ಮಾಂಸವನ್ನೇ ತಿಂದು ಬದುಕುತ್ತಿದ್ದ ಎಂದು ರಾಮಾಯಣ ತಿಳಿಸಿದೆ. ಹೇಮಾಂಗ ರಾಜನು ಬಂಗಾರವನ್ನೇ ದಾನ ನೀಡುತ್ತಿದ್ದನು. ನೀರು ಎಂದರೆ ನೀರಸ ಪ್ರತಿಕ್ರಿಯೆ ತೋರುತ್ತಿದ್ದನು. ನೀರನ್ನು ನೀಡಲಿಲ್ಲ. ಕಡೆಗೆ ಅವನಿಗೆ ಹಲ್ಲಿಯ ಜನ್ಮವೇ ಬಂದಿತು ಎಂದು ಶ್ರೀನಿವಾಸ ಕಲ್ಯಾಣ ತಿಳಿಸಿದೆ. ದಾನ ನೀಡಿದ್ದನ್ನೇ ತಿರುಗಿ ಮತ್ತೊಬ್ಬನಿಗೆ ದಾನ ನೀಡಿದ ತಾತ್ಸಾರಕ್ಕಾಗಿ ತಕ್ಕಂತೆ ನೃಗಮಹಾರಾಜನು ಹೆಂಟೆಗೊದ್ದದ ಜನ್ಮವನ್ನು ತಾಳಬೇಕಾಯಿತು ಎಂದು ಭಾಗವತ ಬಣ್ಣಿಸಿದೆ.

ದಾನವನ್ನು ಹರಿಪ್ರೀತಿಗಾಗಿ ಸತ್ಪಾತ್ರರಿಗೆ ನೀಡಬೇಕಾಗಿದೆ, ಅದರ ಫಲ ಹಿಂದೆ ತಿಳಿಸಿದೆ ಕುಚೇಲನು ಕೃಷ್ಣನಿಗೆ ನೀಡಿದ ಹಿಡಿ ಅವಲಕ್ಕಿ ಅವನಿಗೆ ಹಿಡಿದಿಡಲಾಗದಷ್ಟು ಭಾರೀ ಸಂಪತ್ತು ತಂದಿತು. ಬೇಡನು ಒಬ್ಬ ಬ್ರಾಹ್ಮಣನಿಗೆ ನೀಡಿದ ಪಾದರಕ್ಷೆಯ ದಾನ ಬೇಡನ ಪಾದಚಾರಿಮಾರ್ಗವನ್ನೇ ಬದಲಾಯಿಸಿ ಬೇಡನನ್ನು ವಾಲ್ಮೀಕಿ ಮಾಡಿತು. ಬಲಿಯು ಭಗವಂತನಿಗೆ ನೀಡಿದ ಮೂರು ಹೆಜ್ಜೆಯ ದಾನ ಬಲಿಯನ್ನು ಮುಂದಿನ ಕಲ್ಪದಲ್ಲಿ ಇಂದ್ರಪದವಿಗೆ ಏರಿಸುತ್ತಿದೆ. ''ದಾನಕ್ಕಿಂತ ದೊಡ್ಡದಿಲ್ಲ ದಾನಮಾಡಿ ಕೆಟ್ಟವರಿಲ್ಲ'' ಎಂಬ ಗಾದೆಯ ಮಾತೇ ಇದೆ. ಹರಿಪ್ರೀತಿಗಾಗಿ ಮಾಡಿದ ದಾನ ಅನಂತ ಫಲದಾಯಕವಾಗಿದೆ. ಆದ್ದರಿಂದ ಕೃತಯುಗದಲ್ಲಿ ಧ್ಯಾನ-ತ್ರೇತಾಯುಗದಲ್ಲಿ ಯಜ್ಞ-ದ್ವಾಪರಯುಗದಲ್ಲಿ ಪರಿಚರಣೆ-ಸೇವೆ ಪ್ರಮುಖವಾದರೆ ಕಲಿಯುಗದಲ್ಲಿ ದಾನವೇ ಪ್ರಮುಖ. '' ಕಲೌ ತದ್ದಾನತಃ ಸ್ಮೃತಮ್ '' ಆ ದಾನದಿಂದ ಬ್ರಾಹ್ಮಣರ ಬಾಯಿಂದ ಬಂದ ಹಾರೈಕೆಯ ಮಾತು ವರದಾನವಾಗಿ ಕಷ್ಟಗಳನ್ನು ಕಳೆಯುವುದರಲ್ಲಿ ಸಂದೇಹವಿಲ್ಲ! ದಾನ ಸ್ವೀಕರಿಸುವವರು ತಪಶ್ಶಕ್ತಿಯುಳ್ಳವರಾಗಿರಬೇಕು-ಇಲ್ಲವಾದರೆ ತೆಗೆದುಕೊಂಡವನು ಪುಣ್ಯ ಕಳೆದುಕೊಂಡು ಬೀದಿಪಾಲಾಗುವನು ಎಂಬ ಎಚ್ಚರಿಕೆ ಇರಬೇಕೆಂದು ಶಾಸ್ತ್ರ ತಿಳಿಸಿದೆ.

ಮಾಡಿರಿ ಕೈತುಂಬಾ ದಾನ-ಇಲ್ಲವೆ ಕಣ್ತುಂಬ ರೋದನ

(1) ಹಿಂದಿನ ಜನ್ಮದಲ್ಲಿ ಮಾಡಿದ ದಾನದಿಂದ ಈ ಜನ್ಮದಲ್ಲಿ ತುಂಬಾ ಧನ ನಿಮ್ಮ ಬಳಿಯಲ್ಲಿದೆ. ಆದ್ದರಿಂದ ಹೀಗೆ ತಿಳಿದು ನಿಮ್ಮ ಸಂರಕ್ಷಣೆಗಾಗಿ ಧಾರ್ಮಿಕರಿಗೆ ದಾನ ನೀಡಿರಿ.

(2) ದಾನ ನೀಡುವ ಮಕ್ಕಳನ್ನು ದೇವತೆಗಳೂ ಪೂಜಿಸುತ್ತಾರೆ. ಯಾವನು ಹಾಸಿಗೆ ಹಿಡಿದ ತಂದೆಗಾಗಿ ಒಳ್ಳೆದಾಗಲೀ ಎಂದು ದಾನವನ್ನು ತಂದೆಯ ಕೈಯಿಂದ ಕೊಡಿಸುವವನೇ ಸುಪುತ್ರನು.

(3) ಹಣ ತಂದೆಯದ್ದಾದರೂ ಸರಿ, ಸತ್ಪಾತ್ರರನ್ನು ಹುಡುಕಿ ತಂದು ಕೊಡಿಸಿದ್ದು ಮಗನಲ್ಲವೇ? ಹೀಗಾಗಿ ಅವನ ಮಕ್ಕಳು ಮೊಮ್ಮಕ್ಕಳು ಕುಟುಂಬ ತಾನೂ ಸಹ ಪುನೀತನೇ ಆದನು.

(4) ಮಕ್ಕಳು ಮೊಮ್ಮಕ್ಕಳು ಸಹೋದರರು ಮಿತ್ರರು ಸಗೋತ್ರದ ಸಂಬಂಧಿಗಳು ಸಾಯುವವನಿಗಾಗಿ ಅಥವಾ ಸತ್ತವನಿಗಾಗಿ ದಾನಮಾಡಿಸದಿದ್ದರೆ ಅವರೆಲ್ಲರೂ ಬ್ರಹ್ಮ ಹತ್ಯೆಯ ಭಾಗಿಗಳು.

(5) ತಂದೆಗಾಗಿ ದಾನಮಾಡಿದರೆ ನೂರುಪಟ್ಟು ಪುಣ್ಯ. ತಾಯಿಗಾಗಿ ಸಾವಿರಪಟ್ಟು, ತಂಗಿಗಾಗಿ ದಾನಮಾಡಿದರೆ ಹತ್ತುಸಾವಿರಪಟ್ಟು . ಪುಣ್ಯ ಸೋದರನ ಸದ್ಗತಿಗಾಗಿ ದಾನಮಾಡಿದರೆ ಅನಂತ ಪುಣ್ಯ.

(6) ದಾನಮಾಡಿದವರಿಗೆ ಆರ್ಥಿಕ - ಆರೋಗ್ಯ - ಆಹಾರ - ಮಾನಸಿಕ ಯಾವುದೇ ಉಪದ್ರವ ಇರಲಾರದು . ನರಕವಂತೂ ಇಲ್ಲವೇ ಇಲ್ಲ.

ಅಷ್ಟೇ ಏಕೆ? ಮರಣದ ಸಮಯದಲ್ಲಿ ಸುಖವಾದ ಮರಣ- ಯಮದೂತರ ಭಯವೂ ಬಳಿ ಸುಳಿಯುವುದಿಲ್ಲ.

ಮಾಡಿರಿ ಕೈ ತುಂಬಾ ದಾನ - ಇಲ್ಲವೇ ಕಣ್ತುಂಬ ರೋದನ

ಸಂಸಾರದಲ್ಲಿ ಸಂತತಿ ಬಂಧುಗಳು ಯಾರದ್ದೂ ಅಲ್ಲ. ಈಗ ತಂದೆಯವನು ಮುಂದೆ ಮಗನಾಗಬಹುದು, ಶತ್ರುವೂ ಆಗಬಹುದು. ಆದ್ದರಿಂದ ಸ್ವಾಭಾವಿಕವಲ್ಲ. ಆದ್ದರಿಂದ ತನ್ನ ಸೊತ್ತನ್ನು ತನಗೆ ಸ್ಮರಣೆ ಇರುವಾಗ ಯೋಗ್ಯರಿಗೆ ದಾನಮಾಡಬೇಕು. ಆ ಸೊತ್ತು ಪರಾಧೀನವಾದಾಗ ಮುಂದೆ ತನ್ನದೆಂದು ಹೇಳಲೇ ಸಾಧ್ಯವಿಲ್ಲ! ಇನ್ನು ಕೊಡುವುದು ಬಹುದೂರದ ಮಾತು!

1. ಪೂರ್ವಜನ್ಮಕೃತಾದ್ದಾನಾತ್ ಅತ್ರ ಲಬ್ಧಂ ಧನಂ ಬಹು ।
   ತಸ್ಮಾದೇವಂ ಪರಿಜ್ಞಾಯ ಧರ್ಮಾರ್ಥಂ ದೀಯತಾಂ ಧನಮ್ ॥
2. ಧರ್ಮಾತ್ಮಾ ಚ ಸಪುತ್ರೋ ವೈ ದೈವತೈರಪಿ ಪೂಜ್ಯತೇ ।
   ದಾಪಯೇತ್ ಯಸ್ತು ದಾನಾನಿ ಪಿತರಂ ಹ್ಯಾತುರಂ ಭುವಿ ॥
3. ಪಿತ್ರೋರ್ನಿರ್ಮಿತಂ ಯದ್ವಿತ್ತಂ ಪುತ್ರೈಃ ಪಾತ್ರೇ ಸಮರ್ಪಿತಮ್ ।
   ಆತ್ಮಾಪಿ ಪಾವಿತಸ್ತೇನ ಪುತ್ರಪೌತ್ರ ಪ್ರಪೌತ್ರ ಕೈಃ ॥
4. ಪುತ್ರಾಃ ಪೌತ್ರಾಃ ಸಹ ಭ್ರಾತ್ರಾ ಸಗೋತ್ರಾಃ ಸುಹೃದಸ್ತು ತೇ ।
   ದದಾತಿ ನಾತುರೇ ದಾನಂ ಬ್ರಹ್ಮಘ್ನಾಸ್ತೇ ನ ಸಂಶಯಃ ॥

5. ಪಿತುಃ ಶತಗುಣಂ ಪುಣ್ಯಂ ಸಹಸ್ರಂ ಮಾತುರೇವ ಚ ।
ಭಗಿನೀ ದಶಸಾಹಸ್ರಂ ಸೋದರೇ ದತ್ತಮಕ್ಷಯಮ್ ॥
6. ನ ಚೈವೋಪದ್ರವಾ ದಾತುರ್ನವಾ ನರಕಯಾತನಾಃ ।
ಮೃತ್ಯುಕಾಲೇ ನ ಚ ಭಯಂ ಯಮದೂತ ಸಮುದ್ಭವಮ್ ॥

ದಾನ ಕೊಟ್ಟರೆ ಏನು ಪುಣ್ಯ-ಕೊಡದಿದ್ದರೆ ಏನು ನಷ್ಟ?

ದಾನ - ಧರ್ಮ ಇವು ಅಣ್ಣ ತಮ್ಮ ಎಂಬಂತೆ ಅವಳಿ ಶಬ್ದಗಳು. ಧರ್ಮ ಎಂದರೆ ರಕ್ಷಿಸುವುದು. ಯಾವನು ದಾನ ಮಾಡಿರುತ್ತಾನೋ ಅವನನ್ನೇ ಪುಣ್ಯ ರಕ್ಷಿಸುವುದರಿಂದ ಅದನ್ನು ಧರ್ಮ ಎಂದು ಕರೆಯುತ್ತಾರೆ. ದಾನ ಕೊಟ್ಟಿದ್ದರೆ ಅದನ್ನು ಈಗ ಈ ಜನ್ಮದಲ್ಲಿ ಅನುಭವಿಸುವ ಅಧಿಕಾರ ಇರುತ್ತದೆ. ಇಲ್ಲವಾದರೆ ಇಲ್ಲ! ನೀರನ್ನು ನೀಡಿದ್ದರೆ ಈ ಜನ್ಮದಲ್ಲಿ ತೃಪ್ತಿ ಇರುತ್ತದೆ. ಅನ್ನದಾನ ಮಾಡಿದ್ದರೆ ಅಕ್ಷಯ ಸುಖ. ಭೂಮಿ ನೀಡಿದ್ದರೆ ಈ ಜನ್ಮದಲ್ಲಿ ಸುಖವಾಸ. ಚಿನ್ನದ ದಾನ ಮಾಡಿದ್ದರೆ ದೀರ್ಘವಾದ ಆಯುಸ್ಸು. ಎಳ್ಳು ದಾನ ನೀಡಿದ್ದರೆ ಸಂತತಿಗಳು. ದೀಪದಾನ ಮಾಡಿದ್ದರೆ ಉತ್ತಮ ನೇತ್ರದೃಷ್ಟಿ ಎಂದು ಮನುಸ್ಮೃತಿ ಹೇಳುತ್ತದೆ.

ವಾರಿದಃ ತೃಪ್ತಿಮಾಯಾತಿ ಸುಖಮಕ್ಷಯಮನ್ನದಃ
ಭೂಮಿದಃ ಭೂಮಿಮಾಪ್ನೋತಿ ದೀರ್ಘಮಾಯುರ್ಹಿರಣ್ಯದಃ
ತಿಲಪ್ರದಃ ಪ್ರಜಾಮಿಷ್ಟಾಂ ದೀಪದಃ ಚಕ್ಷುರುತ್ತಮಮ್

ಸತ್ಯಭಾಮೆಯು ತನ್ನ ಮನೆಯಲ್ಲಿ ತುಂಬಾ ಸಾಮಗ್ರಿಗಳು - ಮೈಯಲ್ಲಿ ಆಕರ್ಷಕ ಕಾಂತಿ ತುಂಬಿ ತುಳುಕುತ್ತಿರಲು ಏನು ಕಾರಣ ಎಂದು ಕೇಳಿದಾಗ ನಾರದರು ನೀನು ಹೋದಜನ್ಮದಲ್ಲಿ ಕಾರ್ತೀಕ ದೀಪಾರಾಧನೆ ಮಾಡಿದ್ದೇ ಕಾರಣ ಎಂದು ತಿಳಿಸಿದ್ದಾರೆ.

ಕೇವಲ ಕುಬ್ಜಳಾಗಿ ಕುಸಿದು ಬೀಳುತ್ತಿದ್ದವಳು ಹರಿಗೆ ಕೃಷ್ಣನಿಗೆ ಗಂಧ ಸಮರ್ಪಣೆಮಾಡಿದ್ದೇ ತಡ, ಅಂಗವಿಕಲತೆ ಹೋಗಿ ಸುಂದರಾಂಗಳಾಗಿ ಕಂಗೊಳಿಸಿದಳು. ಸೌಂದರ್ಯದ ಪುಣ್ಯ ಗಂಧಸಮರ್ಪಣೆಯಲ್ಲಿ ಅಡಗಿದೆ. ಇನ್ನು ಮಹಾಭಾರತಮಾತು ಮನನೀಯ. ಭೂದಾನ ಮಾಡಿದರೆ ಅಶ್ವಮೇಧಯಾಗದ ಪುಣ್ಯ ಬರುತ್ತದೆ ಎಂದು ತಿಳಿಸಿದೆ. ಅಷ್ಟೇ ಅಲ್ಲದೆ ಹಿಂದಿನ ಐದು ತಲೆಮಾರಿನವರು ಮುಂದಿನ ಆರು ತಲೆಮಾರಿನವರು ಉದ್ಧಾರ ಹೊಂದುತ್ತಾರೆ.

ಅಷ್ಟೆ ಏಕೆ? ಕೇಳಿದ್ದೆಲ್ಲಾ ಮರೆತುಹೋಗುತ್ತದೆ ಎಂಬ ಅಂಜಿಕೆಯೇ? ಸಾಧನಕ್ಷೇತ್ರದಲ್ಲಿ ಸ್ಮರಣೆಯೇ ದೊಡ್ಡ ಸಂಪತ್ತು. ಇದು ಸಿದ್ಧಿಸಲು ನಿಮಗೆ ತುಂಬಾ ಇಷ್ಟವಾದುದನ್ನು ದಾನಮಾಡಿದರೆ ತೆಗೆದುಕೊಂಡವರು ಅದನ್ನು ಉಪಯೋಗಿಸುತ್ತಾ ಎಂದೆಂದು ಮರೆಯುವುದಿಲ್ಲ. ಆಗ ನಿಮ್ಮ ಸ್ಮರಣ ಶಕ್ತಿ ಹೆಚ್ಚುತ್ತದೆ ಎಂದಿದೆ ಮಹಾಭಾರತ.

ಅಷ್ಟೇ ಏಕೆ? ಕೈ ನೀಡಿ ಮಾಡಿದ ದಾನ ಯಜ್ಞಮಾಡಿದಂತೆಯೇ ಆಗುತ್ತದೆ. ಯಾಜ್ಞಿಕರನ್ನು ಆರಾಧಿಸಿದರೆ ಯಜ್ಞದ ಪುಣ್ಯ ನಮಗೂ ಸಿಗುತ್ತದೆ.

ಇಷ್ಟಂ ದತ್ತಂ ಚ ಮನ್ಯೇಥಾಃ ಆತ್ಮಾನಂ ದಾನಕರ್ಮಣಾ।
ಪೂಜಯೇಥಾ ಯಾಯಜೂಕಾಃ ತವಾಪ್ಯಂಶೋ ಭವೇಧ್ಯಥಾ॥

ಅಷ್ಟೇ ಏಕೆ? ಆರೋಗ್ಯವಾಗಿರುವಷ್ಟು ಪುಣ್ಯ ಇದ್ದರೆ ಸಾಕೆಂಬ ಅಸೆಯೇ? ಹಾಗಿದ್ದರೆ ಆರೋಗ್ಯ ಇರುವುದು ಜೀರ್ಣಶಕ್ತಿಯಿಂದ. ಜೀರ್ಣಶಕ್ತಿ ಹೋದರೆ ಆರೋಗ್ಯ ಹೋದಂತೆಯೇ ಸರಿ, ಹೀಗಾಗಿ ತಾಂಬೂಲವನ್ನು ದಾನಮಾಡಿದರೆ ಆರೋಗ್ಯ ಹೆಚ್ಚುತ್ತದೆ, ಇದ್ದ ಸ್ಥಿತಿಯಾದರೂ ಯಥಾಸ್ಥಿತಿ ಇರುತ್ತದೆ ಎನ್ನುತ್ತಾರೆ ವೇದವ್ಯಾಸರು.

ಶಾರೀರೈಃ ಸಕಲೈರ್ಪಾಪೈಃ ಮುಚ್ಯತೇ ನಾತ್ರ ಸಂಶಯಃ
ತಾಂಬೂಲದೋ ಯಶೋ ಧೈರ್ಯಂ ಶ್ರಿಯಂ ಚಾಪ್ನೋತಿ ನಿಶ್ಚಿತಂ
ರೋಗೀ ದತ್ವಾ ವಿರೋಗೀ ಸ್ಯಾತ್ ಅರೋಗೀ ಮೋಕ್ಷಮಾಪ್ನುಯಾತ್ ॥

ಸ್ಕಂದಪುರಾಣ ವೈ/ಮಾ

ರೋಗ ಪರಿಹಾರ ಆಗುತ್ತದೆ ಅಷ್ಟೆ ಅಲ್ಲ ಆರೋಗ್ಯವಂತನಿಗೆ ಮೋಕ್ಷವೇ ಸಿಗುತ್ತದೆ. ತುಪ್ಪದ ದಾನ ಮಾಡಿದರೆ ಅಶ್ವಮೇಧಯಾಗದ ಪುಣ್ಯ ಬರುತ್ತದೆ ಎನ್ನುತ್ತಾರೆ. ಕೇವಲ ವೈಶಾಖ ಮಾಸದ (ಚೈತ್ರ ಅಮಾವಾಸ್ಯೆ) ಪೂರ್ಣಕುಂಭ ದಾನದಿಂದ ನೂರುಗಯಾ ಶ್ರಾದ್ಧಮಾಡಿದ ಪುಣ್ಯ ಲಭಿಸುತ್ತದೆ. (ನಾರದಾಂಬರೀಷಸಂವಾದೇ ತೃತೀಯಾಧ್ಯಾಯಃ) ಗಯಾಶ್ರಾದ್ಧಶತಂ ತೇನ ಕೃತಮೇವ ನ ಸಂಶಯಃ

ಅಷ್ಟೆ ಏಕೆ? ಏನೂ ಇಲ್ಲ ಎಂದಾದಲ್ಲಿ ಕೈ ಮೈ ಬಗ್ಗಿಸಿ ಹಿರಿಯರಿಗೆ ಭಕ್ತಿಪೂರ್ವಕ ನಮಸ್ಕಾರ ಮಾಡಿದರೂ ಸಹ ದೇಹದಾನ ಮಾಡಿದಂತೆಯೇ! ಆದ್ದರಿಂದ ಆಯುಸ್ಸು ವಿದ್ಯೆ, ಯಶಸ್ಸು, ದೇಹಬಲ ಸಿದ್ಧಿಸುವುದರಿಂದ ಹಿರಿಯರಿಗೆ ನಮಸ್ಕಾರ ಮಾಡುವುದೂ ಸಹ ಪುಣ್ಯದ ಕೆಲಸವೇ ಆಗಿದೆ. ಸುವರ್ಣದಾನ, ಭೂದಾನ, ಗೋದಾನವನ್ನು ಒಂದೇ ದಿನ ಮಾಡಿದರೆ ಸಮಸ್ತಪಾಪಪರಿಹಾರ ಆಗುವುದು.

ಸುವರ್ಣದಾನಂ ಗೋದಾನಂ ಭೂಮಿದಾನಂ ಚ ವೃತ್ರಹನ್
ದದದೇತಾನ್ಮಹಾಪ್ರಜ್ಞಃ ಸರ್ವ ಪಾಪೈಃ ಪ್ರಮುಚ್ಯತೇ

ಒಟ್ಟನಲ್ಲಿ ಮಹಾಭಾರತ ತಿಳಿಸುವಂತೆ ತಪಸ್ಸು - ಕಷ್ಟಪಟ್ಟರೆ ಧನ ಸಿಗುವುದು. ಹೆಚ್ಚು ಮಾತಾಡದಿದ್ದಷ್ಟು ಮಾತಿಗೆ ತೂಕ ಹೆಚ್ಚು. ದಾನಮಾಡಿದಷ್ಟು ತಿಂದು ಅನುಭವಿಸುವ ಭಾಗ್ಯ ಬ್ರಹ್ಮಚರ್ಯ ಇದ್ದಷ್ಟು ದೀರ್ಘ ಆಯುಸ್ಸು ಎನ್ನಬಹುದು.

ಧನಂ ಪ್ರಾಪ್ನೋತಿ ತಪಸಾ ಮೌನೇನಾಜ್ಞಾಂ ಪ್ರಯಚ್ಛತಿ ।
ಉಪಭೋಗಸ್ತು ದಾನೇನ ಬ್ರಹ್ಮಚರ್ಯೇಣ ಜೀವಿತಮ್ ॥

ಮಧ್ಯಗೇಹರಿಗೆ ಮಾಡಿದ ಗೋದಾನದಿಂದ ತತ್ವಜ್ಞಾನವೇ ಸಿಕ್ಕಿಮೋಕ್ಷವೇ ಮುಂದೆ ದಾನಿಗೆ ದೊರಕಿತೆಂದ ಮೇಲೆ ಪುಣ್ಯಕ್ಕೆ ಕೊನೆಯುಂಟೆ.

ದಾನ ಮಾಡದಿದ್ದರೆ ಏನು ನಷ್ಟ?

ದಾನ ಧರ್ಮಗಳು ಸ್ವರ್ಗನರಕಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಕಪಿಲನಾಮಕ ಪರಮಾತ್ಮನು '' ಇಹೈವ ನರಕಃ ಸ್ವರ್ಗಂ ಇತಿ ಮಾತಃ ಪ್ರಚಕ್ಷತೇ'' ಎನ್ನುತ್ತಾ ಇಲ್ಲಿಯೇ ಸ್ವರ್ಗದಂತಹ ಸುಖ, ನರಕದಂತಹ ಕಷ್ಟಗಳು ಲಭಿಸುವವು ಎಂದಿದ್ದಾನೆ. ಹೀಗಾಗಿ ದಾನಮಾಡಿದರೆ ಇಲ್ಲಿಯೇ ಅನುಭವಿಸುವ ಯೋಗ . ಇಲ್ಲವಾದರೆ ಇಲ್ಲಿಯೇ ಆತ ಅನುಕಂಪಶಾಲಿಯಾಗುತ್ತಾನೆ. ದಾನಿಯಾಗು ಇಲ್ಲವೇ ದೀನನಾಗು ಎನ್ನುತ್ತದೆ ಶಾಸ್ತ್ರ.

ಹೋದ ಜನ್ಮದಲ್ಲಿ ದಾನ ಮಾಡದವ, ಅನುಭವಿಸುವ ಸುಖ ಇಲ್ಲದೆ ದರಿದ್ರನಾಗುತ್ತಾನೆ. ದಾರಿದ್ರ್ಯದಿಂದಾಗಿ ಹೊಟ್ಟೆಪಾಡಿಗಾಗಿ ಸುಳ್ಳು ಹೇಳುತ್ತಾನೆ. ಕನ್ನ ಹಾಕುತ್ತಾನೆ ಆ ಪಾಪದಿಂದಾಗಿ ರೋಗಿಯಾಗುತ್ತಾನೆ, ಒಟ್ಟಿನಲ್ಲಿ ಮತ್ತೆ ಮತ್ತೆ ದರಿದ್ರ ಮತ್ತೆ ಮತ್ತೆ ಪಾಪಿ.

ಅದಾನ ದೋಷಾಚ್ಚ ಭವೇತ್ ದರಿದ್ರಃ ।
ದಾರಿದ್ರ್ಯ ದೋಷಾಚ್ಚ ಕರೋತಿ ಪಾಪಂ ॥
ಪಾಪಾಖ್ಯ ದೋಷಾದ್ಧಿ ಭವೇದ್ಧಿ ರೋಗೀ ।
ಪುನ ರ್ದರಿದ್ರಃ ಪುನರೇವ ಪಾಪೀ ॥

ಶ್ವೇತಮಹಾರಾಜ

ಶ್ವೇತಮಹಾರಾಜನು ಯಜ್ಞಯಾಗಾದಿಗಳನ್ನು ಮಾಡಿದವನು. ಮೂರುಸಾವಿರ ವರ್ಷಗಳಷ್ಟು ತಪಸ್ಸು ಮಾಡಿದವನು. ಇದರ ಫಲವಾಗಿ ಉತ್ತಮ ಲೋಕಗಳಿಗೆ ತೆರಳಿದನು. ಅಲ್ಲಿ ಸೇವಿಸುವ ಕಿಂಕರರು ಉಪಚಾರದ ವೈಭವಗಳಿಗೆ ಲೆಕ್ಕವಿಲ್ಲ. ಆದರೆ ಆ ಲೋಕಗಳಲ್ಲಿ ಇವನಿಗೆ ಎಲ್ಲಾ ಇದ್ದರೂ ಸಹ ಕಿತ್ತು ತಿನ್ನುವ ಭಾರೀ ಹಸಿವು . ಕಡೆಗೆ ಬ್ರಹ್ಮನ ಬಳಿ ಭಿನ್ನವಿಸಿದಾಗ ಬ್ರಹ್ಮ ನಸುನಕ್ಕು ನುಡಿದನು. ಭೂಮಿಯಲ್ಲಿ ನೀನು ಅನ್ನದಾನ ಮಾಡಿಲ್ಲ. ಹೀಗಿರುವಾಗ ಇಲ್ಲಿ ಹೇಗೆ ಹಸಿವು ಹೋಗುತ್ತದೆ? ದಾನ ಮಾಡದೆ ಯಾವುದೂ ಎಲ್ಲೂ ಸಿಗದು ಎಂದು ನುಡಿದನು.

ಕೊನೆಗೆ ಅವನ ಕಷ್ಟ ನೋಡಲಾಗದೆ ಬ್ರಹ್ಮ ನುಡಿದನು . ನಿನ್ನ ದೇಹ ಕೊಳೆಯದಂತೆ

ವರ ನೀಡುವೆ. ನಿನ್ನ ಶವ ಕೊಳೆಯದೆ ಹಾಗೆ ಇದೆ. ನೀನು ಅಲ್ಲಿಗೇ ಹೋಗಿ ನಿನ್ನ ದೇಹದ ಮಾಂಸವನ್ನೇ ತಿಂದು ಪುನಃ ಸ್ವರ್ಗಕ್ಕೆ ಬಾ ಎಂದು ಹೇಳಿದನು. ಹೀಗಾಗಿ ಸ್ವರ್ಗ ಸೇರಿಯೂ ಸಹ ದೇಹದ ಮಾಂಸ ತಿಂದೇ ಕಾಲಕಳೆಯುತ್ತಿದ್ದ. ಮುಂದೆ ಅಗಸ್ತ್ಯರ ಮೂಲಕ ದೇವರಿಗೆ ಹಾರ ಅರ್ಪಿಸಿ ಪಾಪ ಪರಿಹಾರ ಮಾಡಿಕೊಂಡ. ಅನ್ನದಾನ ಮಾಡದಿದ್ದರೇ ಆಹಾರದ ಭಾಗ್ಯ ಲಭಿಸದು.

ಹೇಮಾಂಗ ಎಂಬ ಮತ್ತೊಬ್ಬ ರಾಜನು ದಾನಶೂರ. ಅವನು ಯಜ್ಞ ಆಚರಿಸಿದ್ದು ಬಹಳ. ನೀಡಿದ ದಾನವಂತೂ ಲೆಕ್ಕಕ್ಕೇ ಇಲ್ಲ. ಸುವರ್ಣ ದಾನ ಎಂದರೆ ಸಂಭ್ರಮ. ನೀರಿನ ದಾನ ಎಂದರೆ ನಿರುತ್ಸಾಹ. ಸುಲಭವಾಗಿ ಸಿಗುವ ಅದರ ದಾನ ಯಾಕೆ ಮಾಡಬೇಕು ಎಂದು ಮಾಡಲಿಲ್ಲ. ಕಡೆಗೆ ಆ ರಾಜ ಮರಣಾನಂತರ ಅಂತಿಮವಾಗಿ ಹಲ್ಲಿಯ ಜನ್ಮ ಪಡೆದು ಹೆಜ್ಜೆ ಹೆಜ್ಜೆಗೂ ಹಲುಬುತ್ತಿದ್ದ.

ಪಶ್ಚಾನ್ನೃಪಗೃಹೇ ಜಾತೋ ಭೂಪೋऽಯಂ ಗೃಹಸೋಧಿಕಾ ॥ ವೈ. ಮಾ. ಮ *6- 13*

ಕೆಲವರಂತೂ ಲೌಕಿಕ ಮಾರ್ಗದಲ್ಲೇ ಮುಳುಗಿ ದಾನದ ಸೊಂಕು ಇಲ್ಲದೆ ಲಾಭ- ಲೋಭಗಳ ಸುಳಿಯಲ್ಲಿಯೇ ಮುಳುಗಿರುತ್ತಾರೆ. ಅವರು ನರಕಕ್ಕೆ ಸೇರಿದಾಗ ಶಿಕ್ಷೆಗಳನ್ನು ಅನುಭವಿಸಿ ನರಳುವವರು. ಅವರಿಗೆ ಶಿಕ್ಷೆಯ ನಂತರ ಆಹಾರವನ್ನೂ ನೀಡಲಾಗದು. ಆಗ ಅವರು ಸಿಟ್ಟಿಗೆದ್ದು ಆಹಾರ ಕೇಳುವರಂತೆ! ಆಗ ಯಮದೂತರು ಈ ಲೋಭಿಗಳ ದೇಹದ ಮಾಂಸವನ್ನೇ ಕಿತ್ತು ಅವರಿಗೆ ನೀಡುವರು. ಏಕೆಂದರೆ ಅನ್ನದಾನ ಮಾಡದ ನೀನು ನರಕದಲ್ಲೂ ಬೇರೆ ಆಹಾರ ಪಡೆಯಲಾರೆ ಎಂದು ಗದರಿಸುತ್ತಾರೆ.

ಆತ್ಮಮಾಂಸಾದನಂ ಚಾಪಿ ಸ್ವಕೃತ್ತಂ ಪರತೋऽಪಿ ವಾ ॥ -ಭಾಗವತ

ಅಷ್ಟೆ ಅಲ್ಲದೇ ಪ್ರಪಂಚದ ಪ್ರತಿಯೊಂದು ವಸ್ತುವೂ ಈಶನ ಆಡಳಿತಕ್ಕೆ ಒಳಪಟ್ಟಿರುವುದು. ಹೀಗಾಗಿ ದಾನ ನೀಡುವುದು ಇದರ ಮೇಲಿನ ಒಡೆತನ ನಮ್ಮದಲ್ಲ ಎಂಬುದನ್ನು ಸಾರಿ ಹೇಳುವುದಾಗಿದೆ. ತನಗಾಗಿಯೇ ಬದುಕಿರುವವನನ್ನು ಕೃಷ್ಣ ಪರಮಾತ್ಮನು ''ಅಘಾಯುರಿಂದ್ರಿಯಾರಾಮಃ ಮೋಘಂ ಪಾರ್ಥ ಸ ಜೀವತಿ''

ಅವನ ಆಯುಸ್ಸು ಪಾಪಕ್ಕಾಗಿ. ಅವನ ಇಡೀ ಬದುಕು ವ್ಯರ್ಥ ಎಂದು ನಿಂದಿಸಿದ್ದಾನೆ.

ಯದ್ದದಾತಿ ವಿಶಿಷ್ಟೇಭ್ಯೋ ಯಚ್ಚ ಶ್ನಾಸಿ ದಿನೇ ದಿನೇ ।
ತತ್ತೇ ವಿತ್ತಮಹಂ ಮನ್ಯೇ ಶೇಷಮನ್ಯಸ್ಯ ರಕ್ಷತಿ ॥

ಜ್ಞಾನಿಗಳಿಗೆ ನೀಡಿದ್ದು, ನೀನು ಅನುಭವಿಸಿದ್ದು ಇಷ್ಟೇ ನಿನ್ನ ದುಡ್ಡು. ಉಳಿದದ್ದು

ಬೇರೆ ಯಾರದ್ದೋ ದುಡ್ಡನ್ನು ನೀನು ರಕ್ಷಿಸುತ್ತಿರುವುದು ಎಂದೇ ಅರ್ಥ ಎಂದು ಗ್ರಂಥಗಳು ಸೂಚಿಸಿವೆ.

ದಾನಂ ಭೋಗೋ ನಾಶಸ್ತ್ರಿಸ್ರೋ ಗತಯೋ ಭವಂತಿ ವಿತ್ತಸ್ಯ ।
ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾಗತಿರ್ಭವತಿ ॥

ಧನಕ್ಕೇ ಇರುವ ದಾರಿ ಮೂರು. ದಾನ-ಭೋಗ-ನಾಶ, ಯಾರು ದಾನ ಮಾಡುವುದಿಲ್ಲವೋ ಅವನಿಗೆ ಭೋಗ ಇನ್ನೊಂದು ದಾರಿ. ಆ ಭೋಗವು ಒದಗಿ ಬಾರದಿದ್ದರೇ ನಾಶವೇ ಆ ಧನಕ್ಕೆ ನಿಶ್ಚಿತವಾದ ದಾರಿ.

ದೇವರನ್ನು ಪ್ರಾರ್ಥಿಸಿದರೂ ಸಹ ಹಿಂದಿನ ಜನ್ಮದಲ್ಲಿ ಕೊಟ್ಟಿದ್ದರೆ ಸಿಕ್ಕೀತು! ಇಲ್ಲವಾದರೆ ಸಿಗದು! ಸಿಗದಿದ್ದಾಗ ಸಿಟ್ಟು ಮಾಡಿದರೂ ಪ್ರಯೋಜನವಿಲ್ಲ.

ಸಿಟ್ಟು ಮಾಡಿದರುಂಟೆ ಶ್ರೀ ಕೃಷ್ಣನಲ್ಲಿ
ಕೊಟ್ಟು ಹುಟ್ಟದೆ ಮುನ್ನ ಈ ಸೃಷ್ಟಿಯಲ್ಲಿ
ಎಷ್ಟಾದರೂ ಮುನ್ನ ಕೊಟ್ಟಿಲ್ಲದಿಲ್ಲ
ಪಡೆದಷ್ಟೇ ಅಲ್ಲದೆ ಬೇಡಿ ಬಯಸಿದರಿಲ್ಲ

ಎಂದಿದ್ದಾರೆ ಪುರಂದರದಾಸರು!

ಸುದಾಮನು ಒಮ್ಮೆ ಬಡತನದಲ್ಲಿದ್ದಾಗ ತಂದೆಯ ಶ್ರಾದ್ಧದ ದಿನ ಬಂದಿತು. ಕಿತ್ತು ತಿನ್ನುವ ಬಡತನ. ಬಗೆ ಬಗೆ ಮಾಡಲು ಸಾಮಗ್ರಿಗಳಿಲ್ಲ. ಮನ ಸೋತಿತು. ಕಡೆಗೆ ಸಾಸುವೆಯಿಂದಲೇ ಪಿಂಡಪ್ರದಾನಮಾಡಿ ಬ್ರಾಹ್ಮಣರಿಗೂ ಸಾಸುವೆಯ ಮುದ್ದೆಯನ್ನೇ ಬಡಿಸಿದ. ಬಂದ ಬ್ರಾಹ್ಮಣರು ಅವನ ಪ್ರಾಮಾಣಿಕತೆ ಸಂಕೋಚ ಸ್ವಭಾವ ಕಂಡು ಹರಸಿದರು. ಒಳ್ಳೆಯದಾಗಲಿ ಎಂದರು. ಆಗ ಅವನು ಶ್ರೀಮಂತನಾದನಂತೆ!

ಶ್ರೀಮಂತನಾದಾಗಲೂ ಬಗೆ ಬಗೆಯ ಭಕ್ಷ್ಯ ಮಾಡಿಸದೆ ಸಾಸುವೆಯದೇ ಪಿಂಡಪ್ರದಾನಮಾಡಿ, ಬ್ರಾಹ್ಮಣರಿಗೂ ಬಡಿಸಿ ಸಾಗ ಹಾಕಿದನಂತೆ! ಸಂಪತ್ತಿದ್ದರೂ ಸರಿಯಾಗಿ ಖರ್ಚು ಮಾಡದ ಅವನ ಲೋಭಕ್ಕೆ ಸಿಟ್ಟಾಗಿ ದಾನ ನೀಡದ ಸಂಪತ್ತು ನಾಶವಾಗಲೀ ಎಂದರಂತೆ. ಹೀಗಾಗಿ ಅವನು ಕಡುಬಡತನದಲ್ಲಿ ಕಾಲ ತಳ್ಳಬೇಕಾಯಿತು. ಮುಂದೆ ಕೃಷ್ಣಭಕ್ತಿಯಿಂದ ಅವಲಕ್ಕಿ ನೀಡಿ ಕಷ್ಟದಲ್ಲೂ ಅವಲಕ್ಕಿ ನೀಡಿದ ಅವನ ಔದಾರ್ಯಕ್ಕೆ ಮೆಚ್ಚಿ ಹರಿ ಹರಸಿದ.

(ಹೋಗಿರುವವರು ದಾನ ನೀಡಬೇಕಾದ್ದು ನಾಲ್ಕು ಭಾಗಗಳಲ್ಲಿ)

ದಾನನೀಡಬೇಕಾದ ವಸ್ತುಗಳ ಪಟ್ಟಿ (ಮೃತವ್ಯಕ್ತಿಗಾಗಿ) ದಶದಾನಗಳು

1. ಗೋದಾನ
2. ಎಳ್ಳು
3. ಸುವರ್ಣ (ಚಿನ್ನ)
4. ಭೂಮಿ
5. ತುಪ್ಪ
6. ವಸ್ತ್ರ
7. ಧಾನ್ಯದಾನ (ಸಪ್ತಧಾನ್ಯಗಳು)
8. ಬೆಲ್ಲ
9 ಬೆಳ್ಳಿ
10. ಉಪ್ಪು

ಮರಣ ಕಾಲದಲ್ಲಿರುವವರು ನೀಡಬೇಕಾದ್ದು (ಅಷ್ಟದಾನಗಳು)

1. ಎಳ್ಳು
2. ಲೋಹ- (ಕಬ್ಬಿಣದ ಪಾತ್ರೆ- ಆಯುಧ- ಬಾಣಲೆ, ಕತ್ತಿ ಇತ್ಯಾದಿ)
3. ಚಿನ್ನ
4. ಹತ್ತಿಯ ಸಾಮಾನು
5. ಉಪ್ಪು
6. ಸಪ್ತಧಾನ್ಯಗಳು
(ಭತ್ತ- ಜವೆಗೋಧಿ- ಗೋಧಿ- ಹೆಸರುಕಾಳು- ಉದ್ದು -ನವಣೆ- ಕಡಲೆ)
7. ಭೂಮಿ
8. ಗೋವು

ಇವೂ ಸಹ ಯಮಲೋಕ ತಾರಕ (ಮೃತವ್ಯಕ್ತಿಗಾಗಿ)

1. ಅನ್ನದಾನ
2. ಜಲದಾನ
3. ಗೋದಾನ
4. ಭೂದಾನ
5. ಶಯ್ಯಾದಾನ
6. ಪಾದರಕ್ಷೆ ದಾನ

7. ಛತ್ರಿ
8. ಆಸನ

ಚತುರ್ದಶ ದಾನಗಳು

1) ಆಸನದಾನ
2) ಪಾದರಕ್ಷೆ
3) ಉಂಗುರ
4) ಕಮಂಡಲು
5) ಯಜ್ಞೋಪವೀತ
6) ಅನ್ನ ಬೇಯಿಸುವ ಪಾತ್ರೆ(ಕಂಚು ಅಥವಾ ಹಿತ್ತಾಳೆ)
7) ಅಕ್ಕಿ ಹರಡಿದ ತಟ್ಟೆಯಲ್ಲಿ ದೀಪದ ಜೊತೆಯ ದಾನ
8) ಹತ್ತಿ
9) ತಾಂಬೂಲ
10) ಗೋಪೀಚಂದನ
11) ಗ್ರಂಥದಾನ
12) ಬೀಸಣಿಗೆಯ ದಾನ

ಐಶ್ವರ್ಯವಂತರಾದರೆ

13) ರಥದಾನ
14) ಕುದುರೆಯ ದಾನ ಕೂಡ

ಸುಮಾರು 30 ದಾನಗಳು ನೀಡಬೇಕಾಗಿದ್ದು ಗೋದಾನ ಭೂಮಿದಾನ ಹಿರಣ್ಯದಾನಗಳು ಪುನರಾವರ್ತಿತವಾದರೂ ಮಹತ್ಫಲದಾಯಕವಾದುದರಿಂದ ವಿಭಾಗಗಳಲ್ಲಿ ಸೇರಿಸಲಾಗಿದೆ.

ಬದುಕಿರುವವರು ನೀಡಬೇಕಾದ್ದು

1) ಗೋದಾನ*

---

* ಇಂದಿನ ದಿನಗಳಲ್ಲಿ ಗೋದಾನ ಸ್ವೀಕರಿಸುವವರು, ಸ್ವೀಕರಿಸಿ ನಿರ್ವಹಣೆ ಮಾಡುವುದೂ ಸಹ ತುಂಬ ಕಷ್ಟಕರ ಆದ್ದರಿಂದ ದಾನಿಗಳು ಗೋದಾನದ ಅನುಸಂಧಾನದಿಂದ, ಅದಕ್ಕೆ ಬದಲಾಗಿ, ಗೋರಕ್ಷಣೆಗಾಗಿ ಧನ ದಾನ ಮಾಡುತ್ತಿರುವುದಾಗಿ ಸಂಕಲ್ಪಮಾಡಿ, ಧನ ದಾನಮಾಡಬಹುದು ಎಲ್ಲಿ ಗೋರಕ್ಷಣೆ ಆಗುತ್ತಿದೆಯೆಂಬುದನ್ನು ಖಚಿತ ಮಾಡಿಕೊಂಡು ದೇಣಿಗೆ ನೀಡುವುದು ಸತ್ಯವೂ ಸಾರ್ಥಕವೂ ಆಗುವುದು.

2) ತಿಲದಾನ
3) ಭೂಮಿದಾನ
4) ಸ್ವರ್ಣ ದಾನ
5) ತುಪ್ಪದಾನ
6) ವಸ್ತ್ರಗಳ ದಾನ
7) ಧಾನ್ಯದಾನ
8) ಬೆಳ್ಳಿದಾನ
9) ಬೆಲ್ಲದಾನ
10) ಧನ ದಾನ
11) ಅನ್ನದಾನ
12) ಜಲದಾನ (ಬಾವಿ ತೋಡಿಸುವುದು ಇತ್ಯಾದಿ)
13) ಗ್ರಂಥ ದಾನ
14) ಕಲಶದಾನ
15) ಬೀಸಣಿಗೆಯ ದಾನ
16) ತಾಂಬೂಲ ದಾನ
17) ಗೋಪಿ ಚಂದನ ದಾನ
18) ಅಭಯದಾನ - ಇತ್ಯಾದಿ

ದಾನಗಳು - ಫಲಗಳು

ನಕ್ಷತ್ರ	ವಸ್ತು	ಫಲ
ಕೃತ್ತಿಕಾ	ತುಪ್ಪ ಬೆರೆಸಿದ ಪಾಯಸ ದಾನ	ಶ್ರೇಷ್ಠ ಲೋಕಪ್ರಾಪ್ತಿ
ರೋಹಿಣೀ	ಪಾನೀಯ- ಅಪೂಪ- ಉದ್ದಿನ ಭಕ್ಷ	ಈ ಜನ್ಮದಲ್ಲಿಯೇ ಋಣಮುಕ್ತ
ಮೃಗಶಿರಾ	ವತ್ಸಸಹಿತ ಗೋದಾನ	ನಂತರ ಉತ್ತಮಲೋಕಪ್ರಾಪ್ತಿ
ಆರ್ದ್ರಾ	ಎಳ್ಳಿನ ಚಿತ್ರಾನ್ನ	ಭಾರಿ ವಿಪತ್ತು ಪರಿಹಾರ (ಆಸ್ಪತ್ರೆಗಳಿಗೆ ಚಿಕಿತ್ಸೆಗಳಿಗಾಗಿ ತೆರಳುವಾಗ)
ಪುನರ್ವಸು	ಅಪೂಪ- ಅನ್ನ (ಒಬ್ಬಟ್ಟು)	ಈ ಜನ್ಮದಲ್ಲಿ ಕೀರ್ತಿ, ಮುಂದೆ ಮುಖದಲ್ಲಿ ಸೌಂದರ್ಯ
ಪುಷ್ಯ	ಚಿನ್ನ	ಮುಖದಲ್ಲಿ ಮಿನುಗುವ ಭಾರೀ ಕಾಂತಿ

ನಕ್ಷತ್ರ	ವಸ್ತು	ಫಲ
ಆಶ್ಲೇಷಾ	ಬೆಳ್ಳಿ	ಹೆಜ್ಜೆ ಹೆಜ್ಜೆಗೂ ಭಯ ಪರಿಹಾರ ಮುಂದೆ ಸತ್ಕುಲಜನ್ಮ
ಮಖಾ	ಎಳ್ಳು ತುಂಬಿದ ನೀರಿನ ಪಾತ್ರೆ	ಈಗ ಪುತ್ರಪ್ರಾಪ್ತಿ, ವಾಹನ ಪ್ರಾಪ್ತಿ, ಮುಂದೆ ಪರಲೋಕ ಸುಖ
ಪೂರ್ವಫಲ್ಗುನೀ	ಉಪವಾಸವಿದ್ದು ಬ್ರಾಹ್ಮಣರಿಗೆ ಬೆಲ್ಲದಿಂದಾದ ಭಕ್ಷ್ಯ	ಸೌಭಾಗ್ಯ ಪ್ರಾಪ್ತಿ
ಉತ್ತರಫಲ್ಗುನೀ	ತುಪ್ಪದಿಂದಾದ ಹೊಸ ಅಕ್ಕಿ ಅನ್ನ (ಹಾಲಿನಲ್ಲಿ ಬೇಯಿಸಿದ್ದು)=ಪಾಯಸ	ಸ್ವರ್ಗಲೋಕಸನ್ಮಾನ
ಉತ್ತರಾ	ಏನಾದರೂ ಸರಿ	ಮಹಾಫಲ+ ಅನಂತ ಫಲ
ಹಸ್ತಾ	ರಥಸಮರ್ಪಣೆ	ಶ್ರೇಷ್ಠ ಲೋಕಗಳು
ಚಿತ್ತಾ	ಗಂಧ-ಹೂ	ಸ್ವರ್ಗ ಭೋಗ
ಸ್ವಾತಿ	ನಿಮಗೆ ಅತಿ ಇಷ್ಟವಾದದ್ದು+ಧನ	ಮಹಾಕೀರ್ತಿ, ಪುಣ್ಯಲೋಕ
ವಿಶಾಖಾ	ಗಾಡಿಯ ದಾನ	ಸಮಸ್ತ ಕಷ್ಟ ಪರಿಹಾರ, ಅಕ್ಷಯಲೋಕ
ಅನುರಾಧ	ಉಪವಾಸವಿದ್ದು ವಸ್ತ್ರ ಹಾಗೂ ಅನ್ನದಾನ	ಶತಯುಗ ಪರ್ಯಂತ ಸ್ವರ್ಗವಾಸ
ಜ್ಯೇಷ್ಠ	ತರಕಾರಿ-ಗೆಡ್ಡೆ ಗೆಣಸು	ಇಷ್ಟ ಸಮೃದ್ಧಿ ಅನಂತರ ಸದ್ಗತಿ
ಮೂಲಾನಕ್ಷತ್ರ	ಕಂದ-ಮೂಲ-ಫಲ	ಪಿತೃಗಳ ಪ್ರೀತಿ ಸದ್ಗತಿ
ಪೂರ್ವಾಷಾಢ	ಉಪವಾಸವಿದ್ದು ಮೊಸರು ತುಂಬಿದ ಪಾತ್ರೆ	ಪ್ರದಾನ ಗೋಧನ ಸಮೃದ್ಧಿ ವಂಶಜನನ.
ಉತ್ತರಾಷಾಢ	ಜಲಕುಂಭ, ತುಪ್ಪ ಹಾಗೂ ಅಧಿಕವಾಗಿ ಬೆಲ್ಲ(ಮೂರರ ದಾನ)	ಇಷ್ಟಪ್ರಾಪ್ತಿ
ಅಭಿಜಿತ್	ತುಪ್ಪ, ಹಾಲು, ಜೇನುತುಪ್ಪ	ಸ್ವರ್ಗಲೋಕ ಪೂಜಿತ
ಶ್ರವಣ	ಒಳವಸ್ತ್ರ ಸೇರಿದ ಕಂಬಳಿಯ ದಾನ	ಸ್ವರ್ಗಸುಖ
ಧನಿಷ್ಠಾ	ವಸ್ತ್ರರಾಶಿ, ಧನ	ರಾಜಭೋಗ
ಶತಭಿಷಾ	ಚಂದನ, ಸುಗಂಧ ದಾನ	ಸೌಗಂಧ್ಯ ಹಾಗೂ ಸ್ವರ್ಗಸುಖ

ನಕ್ಷತ್ರ	ವಸ್ತು	ಫಲ
ಪೂರ್ವಭಾದ್ರ	ಉದ್ದು	ಸಕಲ ವಿಧ ಖಾದ್ಯ ಭೋಗ ಅನಂತರದಲ್ಲಿ
ಉತ್ತರಾಭಾದ್ರ	ಉಣ್ಣೆಯ ವಸ್ತ್ರ	ಅಕ್ಷಯ ಫಲ
ರೇವತೀ	ಕಂಚಿನ ಪಾತ್ರೆ ಸಹಿತ ಗೋದಾನ	ಗೋವಿನಿಂದಲೇ ಸ್ವರ್ಗ ಸುಖಪ್ರಾಪ್ತಿ
ಅಶ್ವಿನೀ	ರಥದಾನ	ಪಶು-ವಾಹನ ಭೋಗ, ಪರಲೋಕಕೀರ್ತಿ
ಭರಣಿ	ಎಳ್ಳು-ಹಸು-ಗೋರಸ	ಭೋಗ ಪರಲೋಕಕೀರ್ತಿ

ವಸ್ತುವಿನ ಹೆಸರು	ಐಹಿಕಫಲ	ಪಾರತ್ರಿಕ ಫಲ
1. ಎಳ್ಳಿನ ದಾನ	ಮೈಕಾಂತಿ, ಚರ್ಮದ ಆರೋಗ್ಯ	ಸಕಲ ವಾಚಿಕ, ಕಾಯಿಕ, ಮಾನಸಿಕ ಪಾಪ ಪರಿಹಾರ
2. ಆಯುಧ ದಾನ (ಕೊಡಲು-ಚೂರಿ, ಇತ್ಯಾದಿ)	ಗಟ್ಟಿಮುಟ್ಟಾದ ಶರೀರ	ಯಮನ ಭಟರಿಂದ ಆಯುಧ ತಾಡನ ಭಯ ನಿವಾರಣ
3. ಸ್ವರ್ಣದಾನ	ಸೌಂದರ್ಯ, ವಾಕ್ಪಟುತ್ವ ರಾಜಭೋಗ,	ಯಮಲೋಕಸಭಾಸದರು ಸಂತುಷ್ಟರಾಗಿ ಮಂಗಳಾಶಂಸನೆ ಮಾಡುವರು
4. ಹತ್ತಿಯ ದಾನ	ಮನಸ್ಸು ಅರಳುತ್ತಾ ಉತ್ಸಾಹ ಪೂರ್ಣವಾಗಿರುತ್ತದೆ. ಮುಜುಗರ, ಸಂಕೋಚ ಹೋಗುತ್ತದೆ	ಯಮದೂತರ ಭಯ ಇಲ್ಲ
5. ಲವಣ ದಾನ	ನಾಲಿಗೆಯ ರುಚಿ-ಸವಿ ಚುರುಕುಗೊಳ್ಳುತ್ತದೆ	ಋಣದ ಜ್ಞಾಪಕ ಇರುವುದರಿಂದ ಯಮನೇ ಗದರಿಸುವುದಿಲ್ಲ
6. ಸಪ್ತಧಾನ್ಯದಾನ	ಬತ್ತ, ಗೋದಿ, ಜವೆಗೋದಿ, ಹೆಸರು-ಉದ್ದು-ನವಣೆ, ಕಡಲೆ ಅವುಗಳನ್ನು ಅನುಭವಿಸುವ ಭಾಗ್ಯ	ಧರ್ಮಧ್ವಜನಾದ ಯಮನು ಪ್ರೀತನಾಗಿ ಹರಸುವನು ದ್ವಾರಪಾಲಕರೂ ಹರಸುವರು.

ವಸ್ತುವಿನ ಹೆಸರು	ಐಹಿಕಫಲ	ಪಾರತ್ರಿಕ ಫಲ
7. ಭೂಮಿದಾನ	ಗೃಹಾವಾಸ ಭಾಗ್ಯ, ರಾಜ್ಯಭೋಗ	ಬ್ರಹ್ಮಹತ್ಯಾ ಪಾಪನಾಶ
8. ಗೋದಾನ	ಪುಷ್ಟಿಯುತವಾದ ದೇಹ, ಸುಖ ಮರಣ, ಋಣ ಪರಿಹಾರ	ವೈತರಣಿ ದಾಟುವ ಫಲ
9. ಕೊಡೆಯ ದಾನ	ಸಂತಾನ ಪಡೆವ ಮನೋಬಲ	ಮೃತನಿಗೆ ಯಮಲೋಕದಲ್ಲಿ ಬಿಸಿಲಿನ ತಾಪ ತಟ್ಟದೆ ತಲೆಗೆ ತಂಪಾಗುವುದು
10. ಪಾದರಕ್ಷಾದಾನ	ಸನ್ಮಾರ್ಗಾಚರಣೆಯ ಅವಕಾಶ, ವೃತ್ತಿಯಲ್ಲಿ ಸ್ಪರ್ಧಿಗಳ ಕಂಟಕ ಪರಿಹಾರ	ಯಮಲೋಕದ ದಾರಿಯಲ್ಲಿ ಕಲ್ಲು ಮುಳ್ಳು ಕೆಸರಿನ ದಾರಿ ಯಲ್ಲಿ ನಡೆವ ಮುಜುಗರ ತಪ್ಪಿ ಕುದುರೆಯ ಮೇಲೆ ಕೂಡುವ ಭಾಗ್ಯ
11. ವಸ್ತ್ರಗಳು	ಪೂರ್ಣಾಯುಸ್ಸು ಪ್ರಾಪ್ತಿಗಾಗಿ ಅಕಾಲಮೃತ್ಯು - ಕಂಟಕಗಳ ಪರಿಹಾರ (ವಸ್ತ್ರ ಕೊಡದ ಅಗಸನನ್ನು ಆಗಲೇ ತಲೆ ಕತ್ತರಿಸಿದ ಕೃಷ್ಣಚಾರಿತ್ರ್ಯ)	ಪರಲೋಕದಲ್ಲಿ ಚಳಿ- ಮಳೆ- ಬಿಸಿಲುಗಳ ಆಕ್ರಮಣಕ್ಕೆ ಕಡಿವಾಣ
12. ಉಂಗುರ ದಾನ	ರಾಜ ಭೋಗ - ಮೈಕಾಂತಿ ಸಂಪತ್ಪ್ರಾಪ್ತಿ	ಯಮಭಟರ ಪೀಡೆ ಇಲ್ಲ
13. ಕಮಂಡಲು (ನೀರು ತುಂಬಿದ ಪಾತ್ರೆಯ ದಾನ)	ಬಾಯಾರಿಕೆ ಹೋಗಿ ಸತ್ಕರ್ಮಾಚರಣೆಯಲ್ಲಿ ಸ್ಥೈರ್ಯ	ಭಾರೀ ಸೆಖೆ ಬರಡು ಭೂಮಿಯಲ್ಲಿ ನಡೆವಾಗ ಪಿತೃಗಳಿಗೆ ಬಾಯಾರಿಕೆ ಪರಿಹಾರ
14. ಪೀಠ ದಾನ (ಕೂರಲು ಮಣೆ)	ಮಂಡಿನೋವಿಲ್ಲದೆ ಸರಿ ಯಾಗಿ ಕೂರುವ ಮಹಾಭಾಗ್ಯ	ಪರಲೋಕದಲ್ಲಿ ಸಂಚರಿಸುವವನಿಗೆ ತಾಪ- ಆಯಾಸಗಳ ನಡುವೆಯೂ ವಿಶ್ರಾಂತಿ ಲಾಭ

ವಸ್ತುವಿನ ಹೆಸರು	ಐಹಿಕಫಲ	ಪಾರತ್ರಿಕ ಫಲ
15. ಕೌಳಿಗೆ (ಪಂಚ ಪಾತ್ರೆ)	ಸತ್ಕಾರ್ಯಕ್ಕೆ ಸಂಕಲ್ಪಿಸುವ ಒಳ್ಳೆ ಮನಸ್ಸು	ಪರಲೋಕದಲ್ಲಿ ಧರ್ಮಾಚರಣೆಯ ಸ್ಮರಣೆ-ಪ್ರೇರಣೆ
16. ತಾಮ್ರ ಪಾತ್ರ (ಅರ್ಘ್ಯ ನೀಡ ಲಾಗುವ ಅಗಲದ ತಾಮ್ರ, ಹಿತ್ತಾಳೆತಟ್ಟೆ- ಪಾತ್ರೆ)	ಧರ್ಮಾಚರಣೆಗೆ ಬೆಂಬಲ ನೀಡುವ ಜೊತೆಗಾರರು ಸಿಗುವರು	ಧರ್ಮಾಚರಣೆಯಲ್ಲಿ ಸ್ವಯಂ ಪ್ರವೃತ್ತಿ, ಸಹಸ್ರ ಜಲಕಲಶ ದಾನ ಫಲ
17. ಕೋಲು	ಮಧ್ಯೆ ಮಧ್ಯೆ ಗಾಬರಿ ಪರಿಹಾರ	ಆಯಾಸ- ಆಂತಕಗಳ ನಡುವೆಯೂ ಮಕ್ಕಳು ಸತ್ಕರ್ಮ ಮಾಡಿ ದಾಟಿಸುವರೆಂಬ ನೆಮ್ಮದಿ
18. ಅಕ್ಕಿಯ ದಾನ	ಭೋಜನದ ಭಾಗ್ಯ	ಆಹಾರ ಲಾಭದ ಮುನ್ಸೂಚನೆ ಯಿಂದಯಮಲೋಕದಲ್ಲಿ ಧಾವಂತ- ಆತಂಕಗಳ ಪರಿಹಾರ
19. ದ್ರವ್ಯ ದಾನ ದಕ್ಷಿಣೆಯ ದಾನ	ಸಂತೃಪ್ತಿ- ಬ್ರಾಹ್ಮಣರ ಆಶೀರ್ವಾದ	ಯಮ ಲೋಕದಲ್ಲಿ ಕಷ್ಟ ಪರಿಹಾರ ಕಾಮಿತ ಫಲಲಾಭ
20 ಯಜ್ಞೋಪವೀತ ದಾನ	ಇತರರ ಸತ್ಕರ್ಮಾಚರಣೆ ಯಲ್ಲಿ ತನಗೂ ಪಾಲು	ಸತ್ಕರ್ಮಾನುಷ್ಠಾನದ ಯೋಗ್ಯತೆ, ಹರಿ ಸ್ಮರಣೆಯ ಲಾಭ ವಿಧಿವತ್ತಾಗಿ
21. ದೀಪದಾನ	ನೇತ್ರದೃಷ್ಟಿ ಪರಿಪೂರ್ಣ	ಅಜ್ಞಾನ ಪರಿಹಾರ ಅಂಧಕಾರನಾಶ
22. ಅನ್ನದಾನ	ತೃಪ್ತಿ-ಸಂತೃಪ್ತಿ	ಹಸಿವಿನ ಭಾಧೆ ನಾಶ
23. ಶಯ್ಯಾದಾನ	ದಾಂಪತ್ಯ ಸುಖ ವಿಮಾನದಲ್ಲಿ ತಿರುಗುವ ಯೋಗ	1. ತಂದೆಗೆ ಸ್ವರ್ಗಸುಖ, 2. ಸರ್ವತೀರ್ಥ ಸ್ನಾನ ಪರ್ವ ಕಾಲ ದಾನಫಲ
24. ಗೃಹದಾನ	ಸಂತತ ಸುಖವಾಸ ಸೌಭಾಗ್ಯ	ಯಮಲೋಕದಲ್ಲಿ ವಿಸ್ತೃತ ವಿಶ್ರಾಂತಿ ತಾಣ ಲಾಭ
25. ಛತ್ರಿಯ ದಾನ	ಪುತ್ರ ಪ್ರಾಪ್ತಿ- ನೇತ್ರರೋಗ ಇರುವುದಿಲ್ಲ,	ಧನಪ್ರಾಪ್ತಿ.
26. ತುಪ್ಪದ ದಾನ	ಸುಂದರ ರೂಪಪ್ರಾಪ್ತಿ	

ಆದಾಯದ ಎಷ್ಟು ಭಾಗ ದಾನ ನೀಡಬೇಕು

ವ್ಯವಸಾಯದಿಂದ ಬಂದ ಉತ್ಪನ್ನದಲ್ಲಿ ಕಡಿಮೆ ಪಕ್ಷ ಎಂದರೆ $^1/_5$ ಭಾಗದಷ್ಟನ್ನಾದರೂ ದಾನ ನೀಡಬೇಕು. ಮೊದಲ ಶೇಕಡ ಹತ್ತು 10% ಭಾಗ ಕೃಷಿಯಲ್ಲಿ ಉಳುವಾಗ ಸಂಭವಿಸಿದ ಕೀಟನಾಶದ ಪಾಪ ಪರಿಹಾರಕ್ಕೇ ಆದರೆ ಮತ್ತೆ 10% ದಾನವು ಪುಣ್ಯ ಪ್ರಾಪ್ತಿಗಾಗಿ ಎಂದು ತಿಳಿಯಿರಿ.

ಕೃಷ್ಯರ್ಜಿತೇ ದಶಾಂಶಂ ಹಿ ದೇಯಂ ಪಾಪಸ್ಯ ಶುದ್ಧಯೇ।
ಶೇಷೇಣ ಕುರ್ಯಾತ್ ಧರ್ಮಾದೀನ್ ಅನ್ಯಥಾ ನರಕಂ ವ್ರಜೇತ್॥

ವ್ಯಾಪಾರದ ವ್ಯವಹಾರ-ಕಛೇರಿ ವ್ಯವಹಾರಗಳಲ್ಲೂ ಸುಳ್ಳು ಆಲಸ್ಯ-ವಿಳಂಬ ದ್ರೋಹದಿಂದ ಬಂದ ಸಂಬಳದ ಹಣ ಪಾಪ ಪರಿಹಾರಕ್ಕಾಗಿ 20% ದಾನನೀಡಬೇಕೆಂದು ತಿಳಿಸಲಾಗಿದೆ (17%-20%)

ವೃದ್ಧಿವಾಣಿಜ್ಯಕೇ ದೇಯಂ ಷಡಂಶಂ ಚ ವಿಚಕ್ಷಣೈಃ ।

ಭಾಗವತವಂತೂ ಬಲಿಯ ದಾನದ ಸಂದರ್ಭದಲ್ಲಿ ಇನ್ನೊಂದು ನೀತಿಯನ್ನು ನಿರೂಪಿಸಿದೆ

ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯ ಚ
ಪಂಚಧಾ ವಿಭಜನ್ ವಿತ್ತಂ ಇಹಾಮುತ್ರ ಚ ಮೋದತೇ

ಮೊದಲ $^1/_5$ ಭಾಗ ದಾನ ಧರ್ಮಗಳಿಗೆ, ಎರಡನೆಯ ಭಾಗ ಕೀರ್ತಿ ಪ್ರತಿಷ್ಠೆಗಳಿಗೆ, ಮತ್ತೊಂದು ಭಾಗ ವೃದ್ಧಾಪ್ಯ- ಸಂಕಟದ ಸಂದರ್ಭಗಳಿಗೆ, ಇನ್ನೊಂದು ಈಗ ಸುಖ ಸಂತೋಷಗಳಿಗೆ, ಕೊನೆಯ ಭಾಗ ಸಂಬಂಧಿಕರಿಗೆ-ನಂಬಿದ ಕುಟುಂಬದವರಿಗೆ ಹೀಗೆ 5 ಭಾಗ ಮಾಡಿದವನಿಗೆ ಇಲ್ಲಿಯಾಗಲೀ ಪರಲೋಕದಲ್ಲಿ ಯಾಗಲೀ ಪರದಾಟವಿಲ್ಲ.

ಆದ್ದರಿಂದ ಆದಾಯದ 20% ದಾನ ನೀಡಬೇಕೆಂದು ತೀರ್ಮಾನಿಸಬಹುದು. ದಾನಮಯೂಖ ಎಂಬ ಗ್ರಂಥವು 10% ಅನ್ನಾದರೂ ದಾನನೀಡಲೇಬೇಕೆಂದು ತಿಳಿಸಿದೆ.

ಶತಂ ಸಹಸ್ರಗುರ್ದದ್ಯಾತ್ ಸರ್ವೇ ಸಮ ಫಲಾಃ ಸ್ಮೃತಾಃ ।

(ಧರ್ಮಮಯೂಖ)

ಸಾವಿರ ಗೋವಿರುವವನು ನೂರನ್ನಾದರೂ ದಾನ ಮಾಡಬೇಕು. ಜೀವನದ ನಿರ್ವಹಣೆ ಸುಖಕರವಾಗಿರುವಾಗ 25% ದಾನನೀಡಬೇಕೆಂದು ತಿಳಿಸಲಾಗಿದೆ.

ಪಾದೇನ ಕಾರ್ಯಂ ಪಾರಕ್ಯಂ ಪಾದಂ ಕುರ್ಯಾಚ್ಚಸಂಶಯೇ।
ಅರ್ಧೇನಾಹಾರಚರಣಂ ನಿತ್ಯನೈಮಿತ್ತಿಕಂ ತತಃ॥

ಮೊದಲ ಕಾಲು ಭಾಗ (25%) ಪರಲೋಕಕ್ಕಾಗಿ ಅನಂತರದ ಕಾಲುಭಾಗ ಆಪತ್ಕಾಲಕ್ಕಾಗಿ . ಉಳಿದ ಅರ್ಧ ಭಾಗ ನಿತ್ಯ ನೈಮಿತ್ತಿಕಕರ್ಮ ಹಾಗೂ ಜೀವನ ನಿರ್ವಹಣೆಗಾಗಿ!

ಧಿಡೀರನೇ ಭಾರೀ ಹಣ ಬಂದರೆ (ಲಾಟರಿ- ಹಿರಿಯರ ಆಸ್ತಿಮಾರಿ ಬಂದ ಹಣ- ಎಂದೋ ತೆಗೆದುಕೊಂಡ ಆಸ್ತಿ 4 ಪಟ್ಟಾಗಿ ದುಡ್ಡು ಬಂದಿರುವುದು) ಇಡೀ ಹಣದ ಅರ್ಧಭಾಗವನ್ನು ದಾನ ಮಾಡಬೇಕು.!

ಆದ್ದರಿಂದ ಸಾಧಾರಣವಾಗಿ ಆದಾಯದ 20% ಹಣವನ್ನು ದಾನ ನೀಡಬೇಕೆಂದು ತಿಳಿಸಲಾಗಿದೆ. ಅನಿರೀಕ್ಷಿತ ಭಾರೀ ಹಣ ಬಂದಾಗ ಇಡೀ ಕುಟುಂಬಕ್ಕೆ ಒಳ್ಳೆಯದಾಗಲು 50% ದಾನ ನೀಡಬೇಕು.

ದಾನದ ಬಗ್ಗೆ ಶಾಸ್ತ್ರದ ಮಾತು

1) ಕೃತಯುಗದಲ್ಲಿ ತಪಸ್ಸು ತಾರಕ . ತ್ರೇತಾಯುಗದಲ್ಲಿ ಜ್ಞಾನವೇ ತಾರಕ. ದ್ವಾಪರಯುಗದಲ್ಲಿ ಯಜ್ಞ. ಕಲಿಯುಗದಲ್ಲಿ ದಾನವೊಂದೇ ಸಾಧ್ಯ, ಸುಲಭ ಸಾಧ್ಯ ಎನ್ನುತ್ತಿದೆ ಕೆಳಗಿನ ಶ್ಲೋಕ

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ
ದ್ವಾಪರೇ ಯಜ್ಞಮೇವಾಹುರ್ದಾನಮೇಕಂ ಕಲೌ ಯುಗೇ (ಮನುಸ್ಮೃತಿ 1-68)

2) ನಮ್ಮೆಲ್ಲಾ ಪಾಪಗಳಿಗೂ ಪರಿಹಾರದ ಮಾರ್ಗ ದಾನವಾಗಿದ್ದು ಪುಣ್ಯಪ್ರದವಾಗಿದೆ ಆದ್ದರಿಂದ ದಾನವನ್ನೇ ನೀಡು ಎಂದು ವಿಷ್ಣುವು ನಾರದರಿಗೆ ಪದ್ಮ ಪುರಾಣದಲ್ಲಿ ತಿಳಿಸಿದ್ದಾನೆ.

ತಸ್ಮಾದ್ದಾನಂ ದದಸ್ವ ತ್ವಂ ದಾನಾತ್ಪುಣ್ಯಂ ಪ್ರವರ್ತತೇ
ದಾನೇನ ನಶ್ಯತೇ ಪಾಪಂ ತಸ್ಮಾದ್ದಾನಂ ದದಸ್ವ ಹ ॥ *(ಭೂಮಿಖಂಡ - ಅ- 38)*

3) ರಾಮಾಯಣದಲ್ಲಂತೂ ರಾಮನು ರಾಜ್ಯ ಕಳೆದುಕೊಂಡು ಕಾಡಿಗೆ ತೆರಳುವ ಸಂದರ್ಭದಲ್ಲಿಯೂ ಸಹ ತ್ರಿಜಟ ಬ್ರಾಹ್ಮಣನಿಗೆ ದೃಷ್ಟಿಗೆ ಬೀಳುವಷ್ಟು ಧೇನುಗಳನ್ನು ದಾನಮಾಡಿದನು. ಯಜ್ಞ ಮಾಡುವ ಅವನಿಗೆ ಮತ್ತೂ ಧನ- ಧಾನ್ಯಗಳನ್ನು ದಾನಮಾಡಿದನು.

"ಧನರಾಶಿಮಿಮಂ ಪಶ್ಯ ಲಕ್ಷಣೋತ್ತಮ ಲಕ್ಷ್ಮಣ
ದ್ವಿಜಾಗ್ರೇಭ್ಯೋ ತಥಾನ್ಯೇಭ್ಯೋ ಸುಹದ್ಭ್ಯಶ್ಚ ಪ್ರದೀಯತಾಮ್"

ಸಂ. ರಾ. 2-6/23

ಸಂಪತ್ತು ಬರಲೀ, ಹೋಗಿಬಿಡಲೀ- ದಾನ ಮಾಡುವುದು ನಿಲ್ಲದಿರಲಿ.

4) ಅದ್ಭೂರಿಯ ಯಾಗದಲ್ಲೂ ರಾಮನ ದಾನ ನಿಲ್ಲಲಿಲ್ಲ.

ಸರ್ವೇಶೋ ತರ್ಪಯತ್ಸರ್ವಾನ್ ವಾಸೋ ಮಾಲ್ಯಾಸು ಲೇಪನೈಃ ।
ರಮ್ಯೈರಪ್ಯನ್ನ ಪಾನಾದ್ಯೈರಾಕಲ್ಪ ಮಣಿ ಕಾಂಚನೈಃ ॥
ಸರ್ವೇಭ್ಯೋ ಸರ್ವಶಃ ಸರ್ವೇ ಸರ್ವೇಶ್ವರ ನಿಯೋಗತಃ ।
ನಿಶಾಚರಾ ವಾನರಾಶ್ಚ ದಿಶಂತಿ ಸ್ಮ ದಿನೇ ದಿನೇ ॥

(ಸರ್ವಪ್ರಭುವು ಸಮಸ್ತರಿಗೂ ಬಟ್ಟೆ- ಹೂವು- ಗಂಧ- ಅನ್ನ- ಪಾನ- ಮಣಿ- ಬಂಗಾರ- ಧನ ಎಲ್ಲವನ್ನೂ ಎಲ್ಲರ ಕೈಯಿಂದಲೂ ಕೊಡಿಸಿದ. ಅಲ್ಲಿಗೆ ಬಂದ ಕಪಿಗಳೂ ರಾಕ್ಷಸರೂ ಪ್ರತಿದಿನವೂ ದಾನ ಮಾಡುತ್ತಿದ್ದರು. ದಿನ ದಿನ ಆಗುತ್ತಿರಬೇಕು ದಾನ.

5) ರಾಮನ ದಾನಕ್ಕೆ ವಿರಾಮವೂ ಇಲ್ಲ. ಸೀಮೆಯೂ ಇಲ್ಲ. ಹೋತೃವಿಗೆ ಪೂರ್ವ ದಿಕ್ಕನ್ನೇ ನೀಡಿದನು. ಬ್ರಹ್ಮಸ್ಥಾನಿಗೆ ದಕ್ಷಿಣ ದಿಕ್ಕು - ಅಧ್ವರ್ಯುವಿಗೆ ಪಶ್ಚಿಮ ದಿಕ್ಕು, ಸಾಮಗಾನ ಮಾಡಿದವನಿಗೆ ಉತ್ತರ ದಿಕ್ಕು- ಉಳಿದಿರುವುದನ್ನು ಆಚಾರ್ಯರಿಗೆ ನೀಡಿದನು. ಆಸೆಯಿರದ ಬ್ರಾಹ್ಮಣನಿಗೆ ಎಷ್ಟು ಕೊಟ್ಟರೂ ಸರಿ ಎಂಬುದು ರಾಮನ ನೀತಿ. ತನಗೆ ಸಂಬಂಧಿಸಿದ ಆಭರಣಾದಿಗಳನ್ನೂ ನೀಡಿದನು. ಸೀತೆಗೂ ಸಹ ಸರಿಸಾಟಿ ಯಾರೂ ಇಲ್ಲ. ಸೀತೆಯೂ ಅಖಿಲ ಭುವನಮಾತೆಯೂ ಕೊರಳಲ್ಲಿನ ಮಾಂಗಲ್ಯ ವೊಂದನ್ನಿಟ್ಟುಕೊಂಡು ಉಳಿದೆಲ್ಲವನ್ನೂ ದಾನ ಮಾಡಿದಳು.

ಹೋತ್ರೇ ದದಾದ್ದಿಶಂ ಪ್ರಾಚೀಂ ಬ್ರಹ್ಮಣೇ ದಕ್ಷಿಣಃ ಪ್ರಭುಃ
ಅಧ್ವರ್ಯವೇ ಪ್ರತೀಚೀ ಚ ಉದೀಚೀಂ ಸಾಮಗಾಯ ಯಃ
ಆಚಾರ್ಯಾಯ ದದೌ ಶೇಷಾಂ ಯಾವತೀ ಭೂಸ್ತದಂತರಾ
ಮನ್ಯಮಾನ ಇದಂ ಕೃತ್ಸ್ನಂ ಬ್ರಾಹ್ಮಣೋಽರ್ಹತಿ ನಿಸ್ಪೃಹಃ
ಇತ್ಯಯಂ ತದಲಂಕಾರ ವಾಸೋಭೋಽವಶೇಷಿತಾಃ
ತಥಾ ರಾಜ್ಞಾಪಿ ವೈದೇಹೀ ಸೌಮಂಗಲ್ಯಾ ವಶೇಷಿತಾ

6) ಮಹಾಭಾರತದಲ್ಲಿ ವೇದವ್ಯಾಸರ ಸನ್ನಿಧಿಯಲ್ಲಿ ಪಾಂಡವರೂ ಸಹ ಸಮಸ್ತ ಭೂಮಂಡಲವನ್ನು ಆಭರಣಗಳನ್ನು ಸಮರ್ಪಿಸಿದುದಲ್ಲದೇ ದ್ರೌಪದಿಯು ಸಹ ಮಾಂಗಲ್ಯ ಮಾತ್ರ ಮೀಸಲಾಗಿಟ್ಟುಕೊಂಡು ಉಳಿದುದೆಲ್ಲವನ್ನೂ ಸಮರ್ಪಿಸಿದ್ದಾರೆ.

7) ನಮಗೆ ಮನೆಯಲ್ಲಿ ಅತಿಪ್ರೀತಿಯಾಗಿರುವುದನ್ನೇ ಜ್ಞಾನಿಗಳಿಗೆ ನೀಡಬೇಕು, ಆಗ ಅದು ದಾನಿಗೆ ಅಕ್ಷಯವಾಗುವುದು.

ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ತಿ ದಯಿತಂ ಗೃಹೇ।
ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ॥

ಮ. ಭಾ. ಅನುಶಾಸನಪರ್ವ 109-7

8) ಭಗವದ್ಗೀತೆಯಲ್ಲಂತೂ ಜ್ಞಾನಿಗಳಿಗೂ ಸಹ ಪಾವನವಾದುದು ಎಂದರೆ ದಾನ ಎಂದು ಕೃಷ್ಣನೇ ಕೊಂಡಾಡಿದ್ದಾನೆ!

ಯಜ್ಞ ದಾನ ತಪಃ ಕರ್ಮ ನ ತ್ಯಾಜ್ಯಮಿತಿ ಚಾಪರೇ ।
ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥ *- ಭ. ಗೀ 18-15*

ಜ್ಞಾನಿಗಳಂತೂ ಯಜ್ಞ-ದಾನ-ತಪಸ್ಸನ್ನು ಬಿಡಬಾರದು ಮಾಡಲೇಬೇಕೆಂದು ಹೇಳುತ್ತಾರೆ. ಜ್ಞಾನಿಗಳಿಗೂ ಕೂಡ ಯಜ್ಞ-ದಾನ -ತಪಸ್ಸು ಚಿತ್ತಶುದ್ಧಿಗೆ ಮತ್ತೂ ಕಾರಣವಾಗುವುದು.

9) ಭಾಗವತದಲ್ಲಂತೂ ಸ್ವಯಂ ಕೃಷ್ಣನೇ ಕುರುಕ್ಷೇತ್ರ ಪ್ರಭಾಸ ಕ್ಷೇತ್ರಗಳಲ್ಲಿ ದಾನ ನೀಡಿರುವುದೇ ಅಲ್ಲದೇ ತನ್ನ ಸಹಸ್ರಾರು ಸಂಬಂಧಿಕರಿಂದ ಶ್ರದ್ಧಾ ಪೂರ್ವಕವಾಗಿ ದಾನ ಮಾಡಿಸಿದ್ದಾನೆ.

''ವೃಜಿನಾನಿ ತರಿಷ್ಯಾಮಃ ದಾನೈಸ್ಸಾಭಿರಿವಾರ್ಣವಮ್''

ಹಡಗಿನಿಂದ ಸಮುದ್ರವನ್ನು ದಾಟುವಂತೆ ದಾನ ನೀಡಿ ಪಾಪಗಳನ್ನು ದಾಟೋಣ ಎಂದು ಕೃಷ್ಣನು ಯಾದವರಿಗೆ ನುಡಿದಿದ್ದಾನೆ.

10) ಬ್ರಹ್ಮ ದೇವನಂತೂ ತನ್ನ ಕುರಿತು ತಪಗೈದ ಮನುಜರಿಗೆ ದುರಿತಗಳನ್ನೆಲ್ಲಾ ದಾಟಲು ಹಂಬಲಿಸುತ್ತಿರುವ ಅವರಿಗೆ ''ದ'' ಕಾರದ ಉಪದೇಶ ನೀಡಿದ್ದಾನೆ. ದ ಕಾರ ಎಂದರೆ ''ದಾನ'' ದಾನ ನೀಡಿರಿ. (ಲೋಭ ಬಿಡಿರಿ) ಆಗ ಮಾನವನಿಗೆ ಸಲ್ಲೋಕಗಳು ಸಿಗುವವು ಎಂದಿದೆ ಉಪನಿಷತ್ತು.

11) ''ಅನ್ನದಾನಕ್ಕಿಂತ ಅನ್ಯದಾನವು ಇಲ್ಲ'' ಎಂದಿದ್ದಾರೆ ದಾಸರು. ಮನುಸ್ಮೃತಿಯಂತೂ ತನಗಾಗಿ ಅನ್ನ ಮಾಡಿಕೊಂಡವನು ಪಾಪವನ್ನು ತಿಂದಂತೆ ಆದೀತೆ ವಿನಃ ಮತ್ತೇನೂ ಅಲ್ಲ ಎಂದು ಹೀಯಾಳಿಸಿದೆ.

'' ಅಘಂ ಸ ಕೇವಲಂ ಭುಂಕ್ತೇ ಯೋ ಪಚತ್ಯಾತ್ಮಕಾರಣಾತ್'' *- ಮ. ಸ್ಮೃತಿ 3-118*

12) ಅತಿಥಿಸತ್ಕಾರ - ಬ್ರಾಹ್ಮಣ ಪೂಜನಕ್ಕಂತೂ ಭಾರೀ ಪ್ರಾಶಸ್ತ್ಯವಿದೆ. ಅತಿಥಿ ಸತ್ಕಾರವಾಗದಿದ್ದಲ್ಲಿ ಜ್ಞಾನಿಗಳು ಯಜಮಾನನ ಪುಣ್ಯವನ್ನೇ ನಾಶಮಾಡುತ್ತಾರೆ. ಹೀಗಾಗಿ ಯಮಧರ್ಮರಾಜನು ಸಹ ನಚಿಕೇತನಿಗೆ ಮೂರು ವರ ನೀಡಿ ಅತಿಥಿ ಪೂಜನ ನಡೆಸಿದ್ದಾನೆ.

ಆಶಾ ಪ್ರತೀಕ್ಷೇ ಸಂಗತಂ ಸೂನೃತಾಂ ಚೇಷ್ಟಾಪೂರ್ತೇ ಪುತ್ರಪಶೂಂಶ್ಚ ಸರ್ವಾನ್ ।
ಏತದ್ವೃಂಕ್ತೆ ಪುರುಷಸ್ಯಾಲ್ಪ ಮೇಧಸಃ ಯಸ್ಯಾನಶ್ನನ್ ವಸತಿ ಬ್ರಾಹ್ಮಣೋ ಗೃಹೇ ॥
- ಕಾಠಕ 1- 1-6

ವಸ್ತುಗಳ ನಿರೀಕ್ಷೆ, ಬಯಕೆ, ಸಜ್ಜನ ಸಂಗತಿ, ಸವಿಮಾತು, ಊರಿಗೆ ಮಾಡಿದ ಉಪಕಾರ, ಮಕ್ಕಳು, ಪಶುಸಂಪತ್ತು ಎಲ್ಲ ಪುಣ್ಯವೂ ಸಹ ಬ್ರಹ್ಮಜ್ಞಾನಿ ಅತಿಥಿಯು ಉಪವಾಸವಿದ್ದರೆ ಸಾಕು- ಯಜಮಾನನ ಮೇಲಿನ ಪುಣ್ಯವೆಲ್ಲ ನಾಶವಾಗುವುದು ನಿಶ್ಚಿತ ಎಂದಿದ್ದಾನೆ ಯಮ.

13) ಮಹಾನಾರಾಯಣ ಉಪನಿಷತ್ತು ಯಾಜ್ಞಿಕರಿಗೆ - ಜ್ಞಾನಿಗಳಿಗೆ ನೀಡುವ ದಕ್ಷಿಣೆಯನ್ನು ಹಾಡಿ ಹೊಗಳಿದೆ. ಅದರಿಂದ ವೇದ ಪರಂಪರೆ ಉಳಿಯಿತು- ಶತ್ರುಗಳೂ ಮಿತ್ರರಾಗುವರು. ಎಲ್ಲವೂ ದಾನದಲ್ಲಿ ನೆಲೆಸಿದೆ. ಅದು ಮೋಕ್ಷ ಸಹಾಯಕ ಎಂದು ಹೇಳಿದೆ.

ತಸ್ಮಾತ್ ದಾನಂ ಪರಮಂ ವದಂತಿ *- 79- 6*

14) ಹಿಂದಿನ ಜನ್ಮದಲ್ಲಿ ದಾನಮಾಡದವರು ಈಗ ದರಿದ್ರರಾಗಿ, ವ್ಯಾಧಿ ಪೀಡಿತರಾಗಿ ಮೂರ್ಖರಾಗಿ ಹೀನಸೇವಕರಾಗಿ ನಮಗೆ ಎಚ್ಚರಿಸುತ್ತಿದ್ದಾರೆ. ಆವರಿಗೆ ದುಃಖವೇ ಕಟ್ಟಿಟ್ಟ ಬುತ್ತಿ

ದರಿದ್ರಾ ವ್ಯಾಧಿತಾ ಮೂರ್ಖಾ ಪರಪ್ರೇಷ್ಯಕರಾಃ ಸದಾ ।
ಅದತ್ತದಾನಾ ಜ್ಞಾಯಂತೇ ದುಃಖಸ್ಯೈವ ಹಿ ಭಾಜನಾಃ ॥ *- ಸ್ಕಂದ 2-68-69*

15) ಪದ್ಮ ಪುರಾಣದ ಕೊನೆ ಮಾತು

ದಿನಂ ಶೂನ್ಯಂ ನ ಕುರ್ವೀತ, ಯತ್ಕಿಂಚಿತ್ ದಾನಮಾಚರೇತ್
ಪದ್ಮ, ಉತ್ತರ 241-29

16) ಕನ್ನಡದ ಕೊನೆಯ ಕೊಂಡಿ!

ದಾನ ಧರ್ಮವ ಮಾಡಿ ಸುಖಿಯಾಗು ಮನವೇ।
ಹೀನವೃತ್ತಿಲಿ ನೀ ಕೆಡಬೇಡ ಮನವೇ। - ಪುರಂದರರು

ದಾನದ ಬಗ್ಗೆ ಇರಬೇಕಾದ ಅನುಸಂಧಾನ ಮತ್ತು ಎಚ್ಚರ

1) ದಾನವನ್ನು ನಾವು ನೀಡುವಾಗ ನಾವು ಭಗವಂತ ಪ್ರೀತನಾಗಲೀ ಎಂಬ ಎಚ್ಚರ ಇರಬೇಕು. 2) ಎರಡನೆಯದಾಗಿ ಅವರಿಂದ ದಾನ ಪಡೆದವರಿಂದ ನಾವು ಪ್ರತ್ಯುಪಕಾರ ನಿರೀಕ್ಷಿಸಬಾರದು. 3) ಭಗವಂತ ನಮಗೆ ದಾನನೀಡುವ ಭಾಗ್ಯ ಕೊಟ್ಟಿದ್ದಾನೆ - ಇದು ಭಗವಂತನ ಆದೇಶ ಎಂಬ ವಿನಯ ಇರಬೇಕೇ ವಿನಃ ನಾನು ದೊಡ್ಡ ಕೆಲಸ ಮಾಡುತ್ತಿರುವೆ ಎಂಬ ಅಹಂಕಾರ ಇರಬಾರದು. 4) ದಾನ ಸ್ವೀಕರಿಸುವವನಲ್ಲಿ ನಿಂತು ಭಗವಂತನೇ ನನ್ನ ಪಾಪ ಪರಿಹರಿಸುತ್ತಿರುವವನು ಎಂಬ ಭಾವ ಇರಬೇಕು. 5) ದಾನ ಸ್ವೀಕರಿಸುವವನು ಇರುವ ಸ್ಥಳಕ್ಕೆ ಹೋಗಿ ದಾನ ನೀಡುವುದು ಶ್ರೇಷ್ಠ. 6) ಮಾಡಿದ ದಾನವನ್ನು ಇನೊಬ್ಬರಿಗೆ ಪ್ರೇರಣೆಯಾಗಲೀ ಎಂದು ಹೇಳಿಕೊಳ್ಳಬಹುದಾದರೂ ಅಹಂಕಾರ ಬರುವ ಸಂಭವ ಇದ್ದಾಗ ಅದನ್ನು ಗುಟ್ಟಾಗಿ ಇಡುವುದೇ ಒಳ್ಳೆಯದು 7) ಗುಪ್ತ ಎಂದರೆ ರಕ್ಷಿಸುವುದು - ಗುಟ್ಟಾಗಿ ಮುಚ್ಚಿ ಕೊಟ್ಟದ್ದು ನಮ್ಮನ್ನು ಮುಚ್ಚಟೆಮಾಡುತ್ತಾ ಕಾಪಾಡುವುದು- ಧರ್ಮಃಕ್ಷರತಿ ಕೀರ್ತನಾತ್- ದಾನದ ಬಗ್ಗೆ ಹೇಳಿಕೊಂಡಷ್ಟು ಪುಣ್ಯ ಕ್ಷೀಣಿಸುತ್ತದೆ. 8) ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯದಂತೆ ಇರಬೇಕು ಎನ್ನುತ್ತಾರೆ ಹಿರಿಯರು 9) ದಾನನೀಡುವಾಗ ಜೊತೆಗೆ ದಕ್ಷಿಣೆ-ನೀರು-ತುಳಸಿಯನ್ನು ಸೇರಿಸಿ ಬಿಡುವುದು ಶಾಸ್ತ್ರಸಮ್ಮತ. ದಕ್ಷಿಣೆಯು ದಾನದ ವಸ್ತುವಿನ ಬಗ್ಗೆ ಬೆಲೆಬಾಳುವ ವಸ್ತು ಎಂಬ ಗೌರವ ಮೂಡಿಸಿದರೆ ನೀರು- ನಮ್ಮ ಸ್ವಂತಿಕೆಯನ್ನು ತೊಳೆದು ಕೊಂಡ ಕ್ರಮ. ಮಮಕಾರದ ಮಲ ತೊಳೆಯುವ ಜಲ. ಕರ್ಮದ ಸಂಕೇತವಾಗಿದ್ದು ಇದು ಶ್ರೇಷ್ಠ ಕರ್ಮ ಎಂದು ತಿಳಿಸುತ್ತದೆ. ತುಳಸಿಯಂತೂ ಈ ದಾನದ ಹಿಂದೆ ಹರಿಪ್ರೀತಿಯ ಹಂಬಲ ಬಿಟ್ಟು ಮತ್ತೇನೂ ಇಲ್ಲ ಎಂಬ ಪ್ರಾಂಜಲತೆಯ ಸೂಚಕವಾಗಿದೆ. 10) ಅದು ನಮ್ಮ ನ್ಯಾಯದ ಸಂಪಾದನೆಯಾಗಿದ್ದಾಗ ಪಾಪದಿಂದ ದಾಟಿಸಬಲ್ಲದೇ ವಿನಃ ಅನ್ಯಾಯದ ಸಂಪಾದನೆ ಅಷ್ಟಕ್ಕಷ್ಟೇ ಎನಿಸೀತು 11) ದಾನವನ್ನು ಸ್ಪರ್ಧೆ- ಅಸೂಯೆಗಳನ್ನು ಬಿಟ್ಟು ಶ್ರದ್ಧೆಯಿಂದಲೇ ನೀಡಬೇಕು ''ಶ್ರದ್ಧಯಾ ದೇಯಮ್'' ಎಂದೇ ಶಾಸ್ತ್ರಾದೇಶ 12) ದಾನವನ್ನು ಪವಿತ್ರ ಕ್ಷೇತ್ರಗಳಲ್ಲಿ - ಪವಿತ್ರಕಾಲಗಳಲ್ಲಿ- ಯೋಗ್ಯತಪಸ್ವಿಗಳಿಗೆ ನೀಡಬೇಕು.

ದಾತವ್ಯಮಿತಿ ಯದ್ದಾನಂ ದೀಯತೇऽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ - ಭಗವದ್ಗೀತೆ

13) ದಾನದ ಕ್ರಿಯೆಯಲ್ಲಿ ಅಹಂಕಾರ - ಅವಹೇಳನ ಸಲ್ಲದು

ಒಮ್ಮೆ ವಿಶ್ವಾಮಿತ್ರನ ಪುತ್ರನಾದ ಅಷ್ಟಕ ಅಶ್ವಮೇಧಯಾಗ ಮಾಡಿ ಮುಗಿಸಿದ್ದ. ಅನಂತರ ಪ್ರತರ್ದನ- ವಸುಮಂತ - ಶಿಬಿ ಮೂವರೂ ಜೊತೆಯಲ್ಲಿ ರಥಸಂಚಾರ

ಮಾಡುತ್ತಿದ್ದರು. ದಾರಿಯಲ್ಲಿ ನಾರದರ ಸಂದರ್ಶನವಾಯಿತು. ಆಗ ನಾರದರಿಗೆ ಮೂವರೂ ಸೇರಿ ಒಂದು ಪ್ರಶ್ನೆ ಹಾಕಿದರು- ನಮ್ಮಲ್ಲಿ ಯಾರು ಮೊದಲು ಸ್ವರ್ಗದಿಂದ ಕೆಳಗೆ ಬೀಳುವವರು? ಎಂದು ನಾರದರು ನಕ್ಕರು. ಅಷ್ಟಕನ ದಾನ ಅಷ್ಟಕ್ಕಷ್ಟೇ ಎಂದರು ಉಳಿದವರಿಗೆ ಕುತೂಹಲ . ನಾರದು ನುಡಿದರು. ಒಮ್ಮೆ ನಾನು ಅಷ್ಟಕನೊಂದಿಗೆ ತೀವ್ರವೇಗದಲ್ಲಿ ಸಂಚರಿಸುತ್ತಿದ್ದೆ. ದಾರಿಯಲ್ಲಿ ಸಾವಿರಾರು ಗೋವುಗಳನ್ನು ಕಂಡೆ. ಇದು ಯಾರದು ಎಂದು ಪ್ರಶ್ನೆ ಮಾಡಿದ. ಆಗ ಅಷ್ಟಕನು ಇವೆಲ್ಲವನ್ನೂ ನಾನೇ ದಾನಮಾಡಿದ್ದು ಎಂದು ನುಡಿದನು. ಉತ್ತರಕ್ಕಿಂತ ಅಹಂಕಾರದ ಎತ್ತರ, ದಾನಮಾಡಿ ಆಗಿದ್ದರೂ ಮನೆಮಾಡಿಕೊಂಡಿದ್ದ ಮಮಕಾರ ಪ್ರತಿಫಲಿಸಿತು. ಹೀಗಾಗಿ ಅಷ್ಟಕನೇ ಮೊದಲು ಸ್ವರ್ಗದಿಂದ ಕೆಳಗೆ ಬೀಳುವನು ಎಂದರು ನಾರದರು. ದಾನ ಮಾಡುವಷ್ಟೇ ಅಹಂಕಾರ -ಮಮಕಾರಗಳಿಂದ ದೂರ ಇರುವುದು ಅವಶ್ಯ.

ಒಮ್ಮೆ ನಾರದರು ಪ್ರತರ್ದನನೊಂದಿಗೆ ರಥಸಂಚಾರ ಮಾಡುತ್ತಿದ್ದರು. ಆಗ ಬ್ರಾಹ್ಮಣನೊಬ್ಬ ಬಂದು ರಥಕ್ಕೆ ಕಟ್ಟಿದ ಕುದುರೆಯನ್ನೇ ಕೇಳಿದನು. ಕೂಡಲೇ ಕೊಡಬೇಕೆಂದನು. ಪ್ರತರ್ದನ ಕೊಟ್ಟನು . ಮತ್ತೊಬ್ಬನೂ ಕೇಳಿದನು. ಪ್ರತರ್ದನ ಕೊಟ್ಟನು. ಕೊನೆಗೆ ರಥದಲ್ಲಿ ಉಳಿದ ಕುದುರೆ ಎರಡೇ ಎರಡು. ಇದನ್ನು ಕೇಳಿದರೆ ಏನು ಮಾಡುವುದು ಎಂದು ಆತಂಕದಿಂದ ಕಂಗಾಲಾಗಿ ನನ್ನನ್ನು ಕೇಳುತ್ತಿದ್ದ. ಹೀಗಾಗಿ ದಾನ ಮಾಡಿದ್ದರೂ ಮುಂದೇನಾದೀತೋ ಎಂಬ ಆತಂಕದಿಂದ ಕೂಡಿದ್ದರಿಂದ ಅದೂ ಸಹ ಅಧಮ ಎನ್ನಬಹುದು. ಹೀಗಾಗಿ ಅಷ್ಟಕನ ಅನಂತರ ಪತನದ ಸರದಿ ಪ್ರತರ್ದನನದು.

ಇನ್ನೊಮ್ಮೆ ವಸುಮಂತ ಪುಷ್ಪರಥದಲ್ಲಿ ಮೆರವಣಿಗೆ ಆಗುತ್ತಿರುವಾಗ ಸ್ವಸ್ತಿವಾಚನದ ಸಂದರ್ಭ. ಸ್ವಸ್ತಿವಾಚನದಿಂದ ಸಂತುಷ್ಟರಾಗಿ ವಸುಮಂತ ನನಗೆ ರಥ ನೀಡಿದ. ಎರಡು ಬಾರೀ ಹೀಗೆ ರಥ ನೀಡಿದ್ದ. ಮೂರನೆಯ ಭಾರಿಯೂ ರಥ ನೀಡುವ ಸಂದರ್ಭ. ಆಗ ವಸುಮಂತ ನಾರದರೇ, ಹೀಗೆ ನೀವು ಮಂಗಳಾಸನ ಮಾಡಿ ಎಷ್ಟು ರಥ ಸಂಪಾದಿಸಿರಬಹುದು ಎಂದು ವಂಗ್ಯ ಆಡಿದ. ಅಲ್ಲಿ ಮುಗುಳ್ನಗುತ್ತಾ ನೀಡಿದ ದಾನಕ್ಕಿಂತ ಮೂದಲಿಕೆಯ ಮಾತೇ ಸಾಕಾಯಿತು. ಆ ದಾನವು ಕನಿಷ್ಠ ಎನಿಸಿಬಿಟ್ಟಿತು.

ಆದರೆ ಶಿಬಿಯ ದಾನ ಅಂತಿತಹುದಲ್ಲ. ಒಬ್ಬ ಬ್ರಾಹ್ಮಣ ಬಂದು ಶಿಬಿಯ ಮಗನಾದ ಬೃಹದ್ಗರ್ಭನನ್ನೇ ಸಾಯಿಸಿ ಅವನ ಮಾಂಸದಿಂದಲೇ ಅಡಿಗೆ ಮಾಡಬೇಕೆಂದು ಕೇಳಿದನು. ಶಿಬಿಯು ಆಯಿತೆಂದು ವ್ಯವಸ್ಥೆಮಾಡಿದನು . ಅಷ್ಟರೊಳಗೆ ಬಂದ ಬ್ರಾಹ್ಮಣ ಸಿಟ್ಟಿಗೆದ್ದು ನಗರ ಪ್ರವೇಶಿಸಿ ಅರಮನೆ - ಅಶ್ವಶಾಲೆ - ಗಜಶಾಲೆಗಳಿಗೆ ಬೆಂಕಿ ಬೀಳಿಸಿರುವುದಾಗಿ ತಿಳಿಸಿದನು. ಶಿಬಿ ಆದರೂ ಸಿಟ್ಟಗೇಳಲಿಲ್ಲ. ಬ್ರಾಹ್ಮಣನನ್ನು ಊಟ ಮಾಡಿರಿ ಎಂದೇ

ಆಹ್ವಾನಿಸಿದ. ಬ್ರಾಹ್ಮಣನು ಅಸಡ್ಡೆಯಿಂದ - ನೀನೇ ಊಟ ಮಾಡು ಎಂದು ಆದೇಶಿಸಿದ. ಶಿಬಿಯೂ ಹಾಗೇ ಆಗಲೀ ಎಂದ. ಬ್ರಾಹ್ಮಣನೇ ಬೆರಗಾದ, ನೀನು ಕೋಪವನ್ನು ಗೆದ್ದಿರುವೆ ಎಂದನು. ಶಿಬಿ ತಲೆ ಎತ್ತಿ ನೋಡಿದ ! ಸತ್ತ ಮಗ ಜೀವಂತವಾಗಿದ್ದಾನೆ ! ಶಿಬಿಗೆ ಸಂತೋಷವಾಯಿತು. ಬ್ರಾಹ್ಮಣನು ತಂದೆ-ಮಕ್ಕಳಿಬ್ಬರನ್ನೂ ಆಶೀರ್ವದಿಸಿದನು.

ಅನ್ನದಾಃ ಪ್ರಥಮಂ ಯಾಂತಿ ಸತ್ಯವಾಕ್ ತದನಂತರಮ್।
ಅಯಾಚಿತ ಪ್ರದಾತಾ ಚ ಸಮಂ ಯಾಂತಿ ತ್ರಯೋಜನಾಃ ॥

ಅನ್ನ ನೀಡುವವನೂ ಮೊದಲೇ ಸದ್ಗತಿಗೆ ಹೋಗುತ್ತಾನೆ. ಅನಂತರ ಸತ್ಯವಚನ. ಆನಂತರ ಕೇಳದಿರುವವರಿಗೂ ನೀಡುವವರು. (ಮಾನದಾನಿ) ಸ್ವರ್ಗಗಾಮಿ. ಒಟ್ಟಿಗೆ ಮೂವರು ಸ್ವರ್ಗಲೋಕದ ಸ್ಥಾನ ಪಡೆವವರು ಎಂದಿದೆ ಮಹಾಭಾರತ

ದಾನದಲ್ಲಿ ಆತಂಕ ಬೇಡ. ಅಹಂಕಾರ ಖಂಡಿತವಾಗಿಯೂ ಬೇಡ. ಅದರೊಂದಿಗೆ ಅವಹೇಳನವೂ ಬೇಡ. ಆದಕ್ಕಿಂತ ಮಿಗಿಲಾಗಿ ಕೋಪವಂತೂ ಇರಲೇಬಾರದು. ದಾನ ನೀಡಿ ಕೋಪಕ್ಕೆ ಬಲಿಯಾಗುವುದಕ್ಕಿಂತ ದಾನ ನೀಡದೆ ಕೋಪ ಗೆಲ್ಲುವುದೇ ಶ್ರೇಷ್ಠ.

14) ದಾನ ನೀಡಿದ ಅನಂತರ ಅದೇ ವಸ್ತುವನ್ನು ಮತ್ತೊಬ್ಬರಿಗೆ ನೀಡದಂತೆ ಎಚ್ಚರಿಕೆ ವಹಿಸಬೇಕು.

ಒಮ್ಮೆ ನೃಗ ಮಹಾರಾಜನು ತಾನು ದಾನನೀಡಿದ ಹಸುವನ್ನೇ ಮತ್ತೊಬ್ಬನಿಗೂ ದಾನನೀಡಿ ಬಿಟ್ಟನು. ಅದು ಸಹ ರಾಜನಿಗೆ ತಿಳಿಯದೇ ಆಗಿತ್ತು. ಬ್ರಾಹ್ಮಣನಿಗೆ ನೂರಾರು ಹಸುಗಳನ್ನು ದಾನನೀಡಿದ್ದಾಗ ಯಾವುದೋ ಒಂದು ಹಸು ಗುಂಪಿನಿಂದ ಬಿಡಿಸಿಕೊಂಡು ಬಂದು ರಾಜನ ಅರಮನೆಯ ಹಸುವಿನ ಗುಂಪಿಗೇ ಬಂದು ಸೇರಿಕೊಂಡಿತು. ರಾಜ ತಿಳಿಯದೇ ಅನೇಕ ಹಸುಗಳೊಡನೆ ಇದನ್ನು ಸೇರಿಸಿ ದಾನ ನೀಡಿದ. ಕಡೆಗೆ ಬ್ರಾಹ್ಮಣರಲ್ಲಿ ವಿವಾದ. ಇಬ್ಬರಿಗೂ ಅದೇ ಹಸು ಬೇಕೆಂಬ ಹಠ. ಕೊನೆಗೆ ರಾಜ ತೀರ್ಮಾನಿಸಲಾಗದೆಯೇ ಮರಣ ಹೊಂದಿದ. ಒಟ್ಟಿನಲ್ಲಿ ದತ್ತಾಪಹಾರ ದೋಷಕ್ಕೆ ಒಳಗಾಗಿ ಓತಿಕ್ಯಾತದ ಜನ್ಮ ಬಂದಿತು. ಆದ್ದರಿಂದ ಎಚ್ಚರದಿಂದಿರಿ.

ಬ್ರಹ್ಮಸ್ವಂ ಹಿ ವಿಷಂ ಪ್ರೋಕ್ತಂ ನಾಸ್ಯಪ್ರತಿನಿಧಿರ್ಭುವಿ
ಹಿನಸ್ತಿ ವಿಷಮತ್ತಾರಂ ವಹ್ನಿರದ್ಭಿಃ ಪ್ರಶಾಮ್ಯತಿ
ಕುಲಂ ಸಮೂಲಂ ದಹತಿ ಬ್ರಹಸ್ವಾರಣಿಪಾವಕಃ ॥ - *ಭಾಗವತ 10-65-33*

ನಿಜವಾದ ವಿಷ ಎಂದರೆ ಬ್ರಹ್ಮಸ್ವ - ಬ್ರಾಹ್ಮಣರ ಸಂಪತ್ತು ಇದಕ್ಕೆ ಸರಿಸಮನಾದ ವಿಷ ಭೂಮಿಯಲ್ಲಿಲ್ಲ. ಬೇರೆ ವಿಷ ತಿಂದವವನ್ನು ಕೊಲ್ಲುತ್ತದೆ. ಬೆಂಕಿಯೂ ನೀರಿಗೆ

ಆರುತ್ತದೆ ಆದರೆ ಬ್ರಾಹ್ಮಣರ ವಸ್ತು ಅಪಹಾರ ಅಥವಾ ದತ್ತಾಪಹಾರ ಇಡೀ ಕುಲವನ್ನೆ ನಾಶಮಾಡುತ್ತದೆ ಎಂದಿದ್ದಾನೆ ಶ್ರೀಕಷ್ಣನು.

15) ದಾನವನ್ನು ಸದಾಚಾರವಂತರಿಗೆ ನೀಡಬೇಕು, ಆಗ ದಾನ ನೀಡಿದ ಯಜಮಾನನ ಪಾಪ ಬೂದಿಯಾಗುತ್ತದೆ. ಬ್ರಾಹ್ಮಣರ ಕೈಯ ಮಧ್ಯದ ಭಾಗದಲ್ಲಿ (ರೇಖೆಗಳಿರುವ ಸ್ಥಳ) ವಸ್ತುವನ್ನು ಕೊಟ್ಟು ಮಾಡಿದ ದಾನ ಯಜಮಾನ ಪಾಪನಾಶಕ. ಆ ಕೈಯ ಮಧ್ಯದಲ್ಲಿ ತಪಸ್ಸಿನ ಅಗ್ನಿ ಜಾಗೃತವಾಗಿರುತ್ತದೆ ಆದ್ದರಿಂದ ಜ್ಞಾನ ಹಾಗೂ ಆಚಾರ ಇರುವವರಲ್ಲಿ ದಾನ ನೀಡಬೇಕು.

ಗೋ ಭೂ ತಿಲ ಹಿರಣ್ಯಾದಿ ಪಾತ್ರೇ ದಾತವ್ಯಮರ್ಥಿತಮ್।
ನಾಪಾತ್ರೇ ವಿದುಷಾ ಕಿಂಚಿತ್ ಆತ್ಮನಃ ಕ್ಷೇಮಮಿಚ್ಛತಾ॥

- ಯಾಜ್ಞವಲ್ಕ್ಯಸ್ಮೃತಿ 201

ಗೋ- ಭೂ- ಎಳ್ಳು -ಸುವರ್ಣ ಮೊದಲಾದ ಶ್ರೇಷ್ಠ ದಾನಗಳನ್ನಂತೂ ತನಗೆ ಕ್ಷೇಮವಾಗಬೇಕು ಎಂಬ ಬಯಕೆ ಇರುವವನು ಅಪಾತ್ರರಲ್ಲಿ ಅಯೋಗ್ಯರಲ್ಲಿ ನೀಡಬಾರದು.

ಕೃಷ್ಣನು ಬಾಲಲೀಲೆಯಲ್ಲಿ ಸ್ವೀಕರಿಸಿದ ಒಂದು ಹಿಡಿ ಮಣ್ಣು ಮಣ್ಣಾಗಿ ಉಳಿಯಲಿಲ್ಲ. ತಾಯಿ- ಮಣ್ಣು ತಿಂದಿರುವಿಯಾ? ನಿಜ ಹೇಳು ಎಂದು ಗದರಿ ಕೇಳಿದಾಗ ಕೃಷ್ಣ ಬಾಯಿ ತೆರೆದು ತಾಯಿಗೆ ತೋರಿಸಿದ. ಬಾಯಲ್ಲಿ ಮಣ್ಣಿಲ್ಲ- ಅದರ ಬದಲು ಹದಿನಾಲ್ಕು ಲೋಕಗಳು ಕಂಡವು. ಒಂದು ಹಿಡಿ ಬ್ರಹ್ಮಾಂಡವಾಗಿ ಬೆಳೆದದ್ದು ಕೃಷ್ಣನಂತಹ ಅತ್ಯುತ್ತಮ ಪಾತ್ರನಿಗೆ ಭೂಮಿ ಮಣ್ಣು ನೀಡಿದ್ದರಿಂದ ಎಂದಿದ್ದಾರೆ ವಾದಿರಾಜರು.

ತಥಾ ಹಿ ಪಾತ್ರೇ ರಸಯಾ ಪ್ರದತ್ತಾ। ಸಹಸ್ರಧಾಸೌ ಫಲಿತೇತಿ ಮನ್ಯೇ ॥

16) ದಾನವನ್ನು ಯಾರಿಗೆ ನೀಡಬೇಕು ?

ಅಕ್ರೋಧಃ ಸತ್ಯವಚನಂ ಅಹಿಂಸಾ ದಮ ಆರ್ಜವಮ್।
ಅದ್ರೋಹೋಽನಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ ॥
ಯಸ್ಮಿನ್ನೇತಾನಿ ದೃಶ್ಯಂತೇ ನ ಚಾಕಾರ್ಯಾಣಿ ಭಾರತ ।
ಸ್ವಭಾವತೋ ವಿಶಿಷ್ಟಾನಿ ತತ್ಪಾತ್ರಂ ಮಾನಮರ್ಹತಿ ॥ *- ಅನುಶಾಸನ ಪರ್ವ 77/8*

ಕ್ರೋಧ ವಿರಬಾರದು, ಸತ್ಯವಚನ ಇರಬೇಕು. ಅಹಿಂಸೆ, ಇಂದ್ರಿಯ ನಿಗ್ರಹ, ನೇರ ನಡೆ, ಇನ್ನೊಬ್ಬರಿಗೆ ದ್ರೋಹ ಬಗೆಯುವ ದುರ್ಬುದ್ಧಿ ಅಭಿಮಾನರಹಿತ, ನಾಚಿಕೆ, ಸಹನೆ ವಿಷಯಗಳಲ್ಲಿ ತೃಪ್ತಿ ವಿಷ್ಣುಭಕ್ತಿ ಇವುಗಳು ಎದ್ದು ಕಾಣಬೇಕು. ದುಷ್ಕಾರ್ಯಗಳು

ಇರಬಾರದು. ಸ್ವಭಾವದಿಂದಲೇ ಆತ ಸಜ್ಜನರಿಗೆ ಮೇಲ್ಪಂಕ್ತಿಯಾಗಿರಬೇಕು. ಅದೇ ಸತ್ಪಾತ್ರ ಎನಿಸುವುದು.

17) ದಾನವನ್ನು ಸ್ಪರ್ಧೆಯಿಂದ ನೀಡಬಾರದು .ಸಂತೋಷದಿಂದ ನೀಡಬೇಕು. ದಾನಶೂರ ಕರ್ಣ ಮಾಡಿರುವ ಯಾವ ದಾನವೂ ಸಹ ಕರ್ಣನನ್ನು ರಕ್ಷಿಸಲಿಲ್ಲ. ಏಕೆಂದರೆ ಅವನು ತಾನೆಲ್ಲ ಮಾಡುವ ದಾನಗಳು ನನಗೆ ಪುಣ್ಯ ನೀಡಿ ಅರ್ಜುನನನ್ನು ಕೊಲ್ಲಲು ಅನುಕೂಲ ಆಗಬೇಕು ಎಂದು ಸಂಕಲ್ಪಿಸಿದ್ದನು. ಅಲ್ಲಿ ದಾನಕ್ಕಿಂತ ಅಸೂಯೆ, ಅರ್ಜುನನೊಡನೆ ಸ್ಪರ್ಧೆ ಇದ್ದುದರಿಂದ ಅದು ರಕ್ಷಿಸಲಿಲ್ಲ. ದಾನಶಿಖಾಮಣಿ ಎನಿಸಿದ ಅಕ್ರೂರನ ದಾನ ಸರ್ವದಾ ಆದರ್ಶಮಯವಾಗಿದೆ . ಅವನು ವಿಷ್ಣುಭಕ್ತಿಯಿಂದಲೇ ತಪಸ್ವಿಗಳಿಗೆ ದಾನನೀಡಿರುವುದು ಪ್ರಸಿದ್ಧವಾಗಿದೆ.

18) ದಾನವನ್ನು ಕೈಯಲ್ಲಿದ್ದಾಗ ಕೂಡಲೇ ಕೊಟ್ಟು ಬಿಡಿ!

ಒಮ್ಮೆ ಒಬ್ಬ ಬ್ರಾಹ್ಮಣ ಧರ್ಮರಾಜನ ಬಳಿಗೆ ದಾನ ಕೇಳಲು ಬಂದ. ಅದು ರಾತ್ರಿಯ ಸಮಯ. ಆಗ ಧರ್ಮರಾಜನು ರಾತ್ರಿಯಾದ್ದರಿಂದ ಬೆಳಿಗ್ಗೆ ಬಾ ಎಂದು ಹೇಳಿ ಕಳುಹಿಸಿದನು. ಆ ಬ್ರಾಹ್ಮಣನು ಭೀಮಸೇನನ ಬಳಿಗೆ ಬಂದ. ಭೀಮಸೇನನಿಗೆ ಧರ್ಮರಾಜನು ನಾಳೆ ಬರಬೇಕಾಗಿ ತನಗೆ ತಿಳಿಸಿದ್ದುದನ್ನು ಅದು ತನಗೆ ಈಗಲೇ ಬೇಕೆಂದು ಬ್ರಾಹ್ಮಣ ಹಠ ಹಿಡಿದ. ಭೀಮನು ತನ್ನ ಕೈಯಲ್ಲಿದ್ದ ಕಡಗವನ್ನೇ ನೀಡಿ ಕಳುಹಿಸಿದ. ರಾತ್ರಿಯಲ್ಲಿ ಸಂತೋಷಸೂಚಕವಾದ ನಗಾರಿ ಹೊಡೆಯಲು ತಿಳಿಸಿದನು. ರಾತ್ರಿ ನಗಾರಿಯು ಸದ್ದು ಕೇಳಿ ನಗರದ ಜನರೆಲ್ಲ ಬಂದರು. ಸಂತೋಷದ ಸುದ್ದಿ ಏನೆಂದು ಎಲ್ಲರಿಗೂ ತವಕ. ಭೀಮನು ನುಡಿದನು. ನಮ್ಮ ಅಣ್ಣ ಧರ್ಮರಾಜ ನಾಳೆ ಬೆಳಿಗ್ಗೆ ದಾನ ನೀಡುವನಂತೆ ! ನಾಳೆ ಬೆಳಿಗ್ಗೆಯ ತನಕ ಆತ ಬದುಕಿರುವನೆಂದು ಅವನಿಗೆ ನಿಶ್ಚಯವಾಗಿರಬೇಕು. ಇದಕ್ಕಿಂತ ಸಂತೋಷಮತ್ತೇನಿದೆ? ಅದಕ್ಕೆ ನಗಾರಿ ಶಬ್ದಗೈದೆ ಎಂದ. ಧರ್ಮರಾಜನು ತಾನು ಧರ್ಮರಾಜ ಎನಿಸಿಕೊಂಡೂ ಧರ್ಮಕಾರ್ಯ ಮುಂದಕ್ಕೆ ಹಾಕಿದ್ದಕ್ಕೆ ನಾಚಿ ನೀರಾದ. ಭೀಮ ಮುಗುಳ್ನಗೆ ಬೀರಿದನು. ಆದ್ದರಿಂದ ಧರ್ಮ ಕಾರ್ಯವನ್ನು ಮುಂದಕ್ಕೆ ಹಾಕಬೇಡಿ.

ಸತ್ಯ ಹರಿಶ್ಚಂದ್ರನು ವರುಣನಿಗೆ ಮಗನನ್ನು ದಾನ ಕೊಡುತ್ತೇನೆಂದು, ಭಾವನೆಯ ಭರದಲ್ಲಿ ಮಾತುಕೊಟ್ಟಿದ್ದ . ಆ ಮೇಲೆ ಅನೇಕ ಭಾರೀ ಮುಂದೂಡಿದ. ಕಡೆಗೆ ದಾನ ನೀಡದ್ದರಿಂದ ಜಲರೋಗದಿಂದ ಬಳಲಿ ಬೆಂಡಾದ. ಮುಂದೆ ತನ್ನ ತಪ್ಪು ತಿದ್ದಿಕೊಂಡು ಸತ್ಯನಿಷ್ಠನಾಗಿ ಮೆರೆದನು. ಆದ್ದರಿಂದ ಸಂಕಲ್ಪ ಮಾಡಲು ಹಿಂದೆ ಮುಂದೆ ನೋಡಿದರೂ ಸರಿ. ನಿಶ್ಚಯಿಸಿ ಆದ ಮೇಲೆ ಮಾತು ಕೊಟ್ಟ ಮೇಲೆ ಮರೆಯಬಾರದು, ಮುರಿಯಬಾರದು.

19) ಅನ್ನ- ನೀರು- ಔಷಧಿ ಇವನ್ನು ಯಾರಿಗೆ ಬೇಕಾದರೂ ನೀಡಿರಿ. ಇದರಲ್ಲಿ ಪಾತ್ರಾಪಾತ್ರ ವಿಚಾರ ಸದ್ಯ ಅನರ್ಥಕಾರಿಯಲ್ಲ ಆದರೆ ಸುವರ್ಣ- ಗೋ- ಭೂದಾನ- ವಿದ್ಯಾದಾನಗಳು ಹಾಗೂ ಇತರ ದಾನಗಳಿಗೆ ಪಾತ್ರರನ್ನು ಹುಡುಕಿರಿ. ದೀನರಿಗೆ ದಾನ ನೀಡಲು ಅನ್ನ- ನೀರು- ಔಷಧಿಗಳಿಗೆ ವಿವೇಚನೆ ಬೇಡ. ಎಲ್ಲರಿಗೂ ನೀಡಬಹುದು. ಆದರೆ ಅದನ್ನು ವಿಷ್ಣುದ್ವೇಷಿಗಳೆಂದು ಗೊತ್ತಾದ ಮೇಲೂ ಸಹ ಮತ್ತೆ ನೀಡಬಾರದು.

''ಅವೈಷ್ಣವಾಯ ದಾತವ್ಯಂ ನೋದಬಿಂದುಂ ನ ತಂಡುಲಂ''

ವಿಷ್ಣು ಭಕ್ತಿರಹಿತರಿಗೆ ನಾಸ್ತಿಕರಿಗೆ ಒಂದು ಹನಿ ನೀರು ಒಂದು ಕಾಳು ಅಕ್ಕಿ ಸಹ ನೀಡಬಾರದು.

20) ದಾನ ನೀಡುವಾಗ ಭೂಮಿಯನ್ನೇ ದಾನಮಾಡಿ ದಾಖಲೆಗೈದ ಪರಶುರಾಮನನ್ನು ಸ್ಮರಿಸಿಕೊಳ್ಳಿರಿ. ದಾನ ಸ್ವೀಕರಿಸುವಾಗ ಸತ್ಪಾತ್ರನಾದ ವಾಮನನನ್ನು ಸ್ಮರಿಸಿಕೊಳ್ಳಿರಿ.

ದಾನ ತೆಗೆದುಕೊಳ್ಳುವವರಿಗೆ ಕಿವಿಮಾತು

1) ದಾನ ಸ್ವೀಕರಿಸುವ ಅವಕಾಶ ಇದ್ದರೂ ಸಹ ಜಪ ಮೊದಲಾದವು ನಡೆಯುವಂತಿದ್ದರೂ ದಾನದಿಂದ ದೂರ ಇರಬೇಕು. ಏಕೆಂದರೆ ಜಪದ ಪುಣ್ಯದಿಂದ ಹರಿಸ್ಮರಣೆಯೇ ಸಿದ್ಧಿಸುವಾಗ ಅದನ್ನು ಮಾರಿ ದಾನ ತೆಗೆದುಕೊಳ್ಳಬೇಕೆ?

ಪ್ರತಿಗ್ರಹ ಸಮರ್ಥೋಽಪಿ ಪ್ರಸಂಗಂ ತತ್ರ ವರ್ಜಯೇತ್।
ಪ್ರತಿಗ್ರಹೇಣ ಹ್ಯಸ್ಯಾಶು ಬ್ರಾಹ್ಮಂ ತೇಜಃ ಪ್ರಶಾಮ್ಯತಿ॥ - ಮನುಸ್ಮೃತಿ *4- 186*

2) ದಾನದಿಂದ ಜಪ- ಇಲ್ಲವೇ ಪಾಪ

ಭೂದಾನ ಸ್ವೀಕರಿಸಿದವನಿಗೆ - ಅವನ ಆಪ್ತರಿಗೆ ಕೇಡು

ಗೋದಾನ ಸ್ವೀಕರಿಸಿದವನಿಗೆ - ಭೋಗಗಳಿಗೆ ಕೇಡು

ಸುವರ್ಣ ದಾನ ಸ್ವೀಕರಿಸಿದವನಿಗೆ - ದೇಹಕ್ಕೆ ಕೇಡು (ಆಯುಷ್ಯ)

ಅಶ್ವದಾನ ಸ್ವೀಕಾರದಿಂದ - ಕಣ್ಣಿಗೆ ಕೇಡು

ತುಪ್ಪದ ಸ್ವೀಕಾರದಿಂದ - ತೇಜಸ್ಸಿಗೆ ಕೇಡು

ಎಳ್ಳನ್ನು ಸ್ವೀಕರಿಸಿದರೆ - ಸಂತಾನಕ್ಕೆ ಕೇಡು

ಮೃತನ ಶಯ್ಯೆಯನ್ನು ಸ್ವೀಕರಿಸಿದರೆ - ಪ್ರಾಯಶ್ಚಿತ್ತವೂ ಸಿಗದು

(ಸ್ಕಾಂದ/ ಕೌಮಾಂಕ/ಅಧ್ಯಾಯ 5)

3) ದಾನಕ್ಕೆ ಒಪ್ಪಿಟ್ಟು- ಜಪ ಮಾತ್ರ ದುಪ್ಪಟ್ಟು

(ಅ) 1008 ಗಾಯತ್ರೀಜಪ ಮಾಡಿದಾಗ ಪಾಪ ಪರಿಹಾರ

ಗಾಯತ್ರ್ಯಷ್ಟ ಸಹಸ್ರಂ ತು ಜಪಂ ಕೃತ್ವಾ ವಿಮುಚ್ಯತೇ

(ಆ) 3000 ಗಾಯತ್ರೀ ಜಪ ಮಾಡಿದರೆ ಪರಿಗ್ರಹ ದೋಷ ಪರಿಹಾರ

ಜಪಿತ್ವಾ ತ್ರೀಣಿ ಸಾವಿತ್ರ್ಯಾಃ ಸಹಸ್ರಾಣಿ ಸಮಾಹಿತಃ -ಮನುಸ್ಮೃತಿ *11- 194*

(ಇ) ದಾನ - ಹೋಮ- ಜಪ-ಪ್ರಾಣಾಯಮಗಳಿಂದ ಹಾಗೂ ಪಾಠ ಪ್ರವಚನಗಳಿಂದಲೇ ಪಾತಕವು ನಾಶವಾಗುವುದು. ಇದರಲ್ಲಿ ಸಂಶಯವಿಲ್ಲ. ಆದ್ದರಿಂದ ದಾನ ಸ್ವೀಕರಿಸುವವರು ತಪೋನಿಷ್ಠರು -ಜ್ಞಾನನಿಷ್ಠರೂ ಆಗಿರಬೇಕೆಂಬ ಎಚ್ಚರ ಇರಬೇಕು.

ದಾನೈರ್ಹೋಮೈರ್ಜಪೈರ್ನಿತ್ಯಂ ಪ್ರಾಣಾಯಾಮೈರ್ದ್ವಿಜೋತ್ತಮಃ
ಪಾತಕೇಭ್ಯಃ ಪ್ರಮುಚ್ಯೇತ ವೇದಾಭ್ಯಾಸಾನ್ನ ಸಂಶಯಃ

(ಈ) ಶುದ್ಧದಾನ ಸ್ವೀಕರಿಸಿದ ಬ್ರಾಹ್ಮಣರು $^1/_4$ ಭಾಗ ದಾನನೀಡಬೇಕು ದಿಢೀರನೇ ಬಂದ ಆದಾಯದಲ್ಲಿ $^1/_2$ ಭಾಗ ದಾನ ನೀಡಬೇಕು. ಅಯೋಗ್ಯರಿಂದ ದಾನ ಸ್ವೀಕರಿಸಿದರೆ ಅದು ತಟ್ಟದಿರಲಿ ಎಂದು ಸಮುದ್ರದಲ್ಲೆಸೆಯಬೇಕು.

ಶುದ್ಧ ಪ್ರತಿಗ್ರಹೇ ದೇಯಂ ಚತುರ್ಥಾಂಶಂ ದ್ವಿಜೋತ್ತಮೈಃ
ಅಕಸ್ಮಾದುತ್ಥಿತೇ ಅರ್ಥೇ ದೇಯಮರ್ಧಂ ದ್ವಿಜೋತ್ತಮೈಃ
ಅಸತ್ಪ್ರತಿಗ್ರಹೇ ಸರ್ವಂ ದುರ್ದಾನಂ ಸಾಗರೇ ಕ್ಷಿಪೇತ್॥

-ಶಿವ, ವಿಶ್ವೇಶ್ವರ ಅ. 13- 76

(ಉ) ವಿದ್ಯೆ - ತಪಸ್ಸುಗಳನ್ನು ಬೆಳೆಸಿಕೊಳ್ಳದವರು ದಾನ ಸ್ವೀಕರಿಸಬಾರದು. ತೆಗೆದುಕೊಂಡವನು ತನ್ನನ್ನೂ ದಾನ ಕೊಟ್ಟವರನ್ನು ನರಕಕ್ಕೆ ತಳ್ಳುತ್ತಾನೆ.

ವಿದ್ಯಾತಪೋಭ್ಯಾಂ ಹೀನೇನ ನ ತು ಗ್ರಾಹ್ಯಃ ಕಥಂಚನ

ಹೀಗಾಗಿ ವಿಷ್ಣುಭಕ್ತರಿಂದ ದಾನ ಸ್ವೀಕರಿಸಬೇಕು, ಸ್ವೀಕರಿಸಿದ ವಸ್ತು ಸದುಪಯೋಗವಾಗಬೇಕು, ಮತ್ತು ಅದಕ್ಕನುಗುಣವಾಗಿ ಜಪ ಮಾಡಬೇಕೆಂಬ ಎಚ್ಚರ ಇದ್ದಾಗ ಇಡೀ ಸಮಾಜಕ್ಕೆ ಮಂಗಳ. ಕೊಟ್ಟವನಿಗೂ ತೆಗೆದುಕೊಂಡವನಿಗೂ ಮಂಗಳವಾಗಲೆಂಬ ಎಚ್ಚರ-ಸದ್ಬುದ್ಧಿ ಇರಲಿ.

★★★

ಗರುಡ ಪುರಾಣ

(ಸ್ಥೂಲ ಪರಿಚಯ)

- ಡಾ॥ ಎನ್.ವೆಂಕಟೇಶಾಚಾರ್ಯ

1. ನೈಮಿಷೇ ऽನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ ।
ಸತ್ರಂ ಸ್ವರ್ಗಾಯ ಲೋಕಾಯ ಸಹಸ್ರಸಮಮಾಸತ॥

ಗರುಡಪುರಾಣ(ಪ್ರೇತಕಾಂಡ)

2. ತೇ ಏಕದಾ ತು ಮುನಯಃ ಪ್ರಾತರ್ಹುತ ಹುತಾಗ್ನಯಃ ।
ಸತ್ಕೃತಂ ಸೂತಮಾಸೀನಂ ಪಪ್ರಚ್ಛುರಿದಮಾದರಾತ್॥

3. ಕಥಿತೋ ಭವತಾ ಸಮ್ಯಕ್ ದೇವಮಾರ್ಗಃ ಸುಖಪ್ರದಃ ।
ಇದಾನೀಂ ಶ್ರೋತುಮಿಚ್ಛಾಮಃ ಯಮಮಾರ್ಗಂ ಭಯ ಪ್ರದಮ್॥

ಸೂತ ಉವಾಚ -

4. ಯಥಾ ಶ್ರೀ ವಿಷ್ಣುನಾ ಪ್ರೋಕ್ತಂ ವೈನತೇಯಾಯ ಪೃಚ್ಛತೇ ।
ತಥೈವ ಕಥಯಿಷ್ಯಾಮಿ ಸಂದೇಹ ಚ್ಛೇದನಾಯ ವಃ ॥ *ಗ.ಪು. 1.7*

ಗರುಡ ಉವಾಚ:-

5. ಅಧುನಾ ಶ್ರೋತುಮಿಚ್ಛಾಮಿ ಯಮಮಾರ್ಗಂ ಭಯಂಕರಮ್
ತ್ವದ್ಭಕ್ತಿ ವಿಮುಖಾನಾಂ ಚ ತತ್ರೈವ ಗಮನಂ ಶ್ರುತಮ್ ॥

6. ಸುಗಮಂ ಭಗವನ್ನಾಮ ಜಿಹ್ವಾ ಚ ವಶವರ್ತಿನೀ
ತಥಾಪಿ ನರಕಂ ಯಾಂತಿ ಧಿಗ್ ಧಿಗಸ್ತು ನರಾಧಮಾನ್ ॥ *ಗ.ಪು. 1.11*

ಭಗವಾನ್ ಉವಾಚ -

7. ವಕ್ಷ್ಯೇऽಹಂ ಶೃಣು ಪಕ್ಷೀಂದ್ರ ಯಮಮಾರ್ಗಂ ಚ ಯೇನ ವೈಯೇ
ನರಕೇ ಪಾತಿನೋ ಯಾಂತಿ ಶೃಣ್ವತಾಮತಿಭೀತಿದಂ ॥ *1/13*

8. ಯೇಹಿ ಪಾಪರತಾಃ ತಾರ್ಕ್ಷ್ಯ ದಯಾಧರ್ಮವಿವರ್ಜಿತಾಃ ।
ದುಷ್ಟಸಂಗಾಶ್ಚ ಸಚ್ಛಾಸ್ತ್ರಸತ್ಸಂತತಿ ಪರಾಜಮುಖಾಃ ॥ *11/14*

9. ಅನೇಕ ಚಿತ್ತ ವಿಭ್ರಾಂತಾ ಮೋಹ ಜಾಲಸಮಾವೃತಾಃ
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇ ऽ ಶುಚೌ ॥

ಗಡಿಬಿಡಿಯಲ್ಲಿಯೂ ಮಾಡು ಹರಿಸ್ಮರಣ

1. ಹರಿಯು ನೆಲೆಸಿದ ಆ ನೈಮಿಷ ಕ್ಷೇತ್ರದಲ್ಲಿ ಶೌನಕರೇ ಮೊದಲಾದ ಎಲ್ಲಾ ಋಷಿಗಳೂ ಒಟ್ಟು ಸೇರಿ ಮೋಕ್ಷ ಫಲಕ್ಕಾಗಿ ಸಾವಿರವರ್ಷದ ಒಂದು ದೊಡ್ಡ ಯಾಗ ಹಮ್ಮಿಕೊಂಡರು.

2. ಆ ಮುನಿಗಳೆಲ್ಲರೂ ಒಮ್ಮೆ ಬೆಳಿಗ್ಗೆಯೇ ಅಗ್ನಿಯನ್ನು ಆಹುತಿಗಳಿಂದ ಆರಾಧಿಸಿ ಮುಗಿಸಿದ್ದರು. ಅಲ್ಲಿಗೆ ಬಂದ ಸೂತರಿಗೆ ಸನ್ಮಾನಿಸಿ ಆದರದಿಂದ ಈ ಪ್ರಶ್ನೆ ಕೇಳಿದರು.

3. ಮಹನೀಯರೇ, ತಾವು ಹೆಜ್ಜೆ ಹೆಜ್ಜೆಗೆ ಸುಖ ತರುವ ದೇವಮಾರ್ಗವನ್ನೆಲ್ಲಾ ಚೆನ್ನಾಗಿ ಬಣ್ಣಿಸಿದ್ದೀರಿ. ಈಗ ಭಯತರುವ ಯಮಮಾರ್ಗವನ್ನೂ ಕೇಳುವ ಬಯಕೆ ನಮ್ಮದು. ನೀವು ತಿಳಿಸಿರಿ.

4. ಋಷಿಗಳೇ, ವಿಷ್ಣುವು ಹೇಗೆ ಇದೇ ಪ್ರಶ್ನೆ ಕೇಳಿದ ಗರುಡನಿಗೆ ಎಲ್ಲವನ್ನೂ ಬಿಡಿಸಿ ಹೇಳಿದನೋ ಅದನ್ನೇ ಹಾಗೆಯೇ ನಿಮ್ಮ ಸಂದೇಹ ಪರಿಹರಿಸಲು ನಾನೂ ಸಹ ಹೇಳುವೆನು.

ಗರುಡ ಪ್ರಶ್ನೆ ಕೇಳಿದ:

5. ಹರಿಯೇ ನಿನ್ನಲ್ಲಿ ಭಕ್ತಿಮಾಡದ ಭಂಡರಿಗೆ ನರಕಕ್ಕೆ ಪ್ರಯಾಣ ಎಂದು ನಾನು ಕೇಳಿರುವೆ. ಆ ಭಯ ತರುವ ಯಮಮಾರ್ಗವನ್ನು ನಿನ್ನಿಂದಲೇ ಕೇಳಲು ಇಚ್ಛಿಸಿರುವೆ.

6. ಭಗವಂತನ ನಾಮ ಹೇಳಲು ಸುಲಭ. ನುಡಿಯುವ ನಾಲಿಗೆಯಂತೂ ಸದ್ಯ ನಮ್ಮಗಳ ಹಿಡಿತದಲ್ಲಿಯೇ ಇದೆ. ಆದರೂ ನಾರಾಯಣನ ನಾಮ ನುಡಿಯದೆ ಕಾಮ ಕ್ರೋಧಗಳ ಆರ್ಭಟಮಾಡಿ ನರಕಕ್ಕೆ ಹೋಗುವ ಆ ಭಂಡ ಜನರಿಗೆ ಧಿಕ್ಕಾರ- ಧಿಕ್ಕಾರ ಎಂದು

7. ಭಗವಂತನ ನುಡಿ- ಎಲೈ ಪಕ್ಷಿರಾಜನಾದ ಗರುಡನೇ! ಪಾಪಿಗಳು ನರಕಕ್ಕೆ ಯಾವ ಯಮಮಾರ್ಗವನ್ನು ಉದ್ದೇಶಿಸಿ ಹೊರಡುವರೋ ಅದನ್ನು ವಿವರಿಸುವೆನು. ಕೇಳು. ಅದು ಕೇಳುವವರಿಗೂ ಭಯ ತಂದೊಡ್ಡುವುದು.

8. ಎಲೈಗರುಡನೇ, ಯಾರು ಪಾಪಕರ್ಮಗಳಲ್ಲಿಯೇ ಮುಳುಗಿರುತ್ತಾರೋ ದಯಾ- ಧರ್ಮಗಳ ಗಂಧವೂ ಇಲ್ಲದೆ ಮೆರೆಯುತ್ತಿರುತ್ತಾರೋ, ದುಷ್ಟರ ಸಂಗವನ್ನೇ ಸರ್ವಸ್ವ ಎಂದು ಭಾವಿಸಿರುತ್ತಾರೋ ಸತ್ಸಂಗ- ಸಚ್ಛಾಸ್ತ್ರಗಳೆಂದರೆ ತಿರುಗಿಯೂ ನೋಡುವುದಿಲ್ಲವೋ

9. ನಿಮಿಷಕ್ಕೊಂದು ಮನಸ್ಸಿನಿಂದ ಭ್ರಮೆಗೊಂಡಿರುತ್ತಾರೋ, ಮೋಹದ ಬಲೆಯಲ್ಲಿ ಬಂಧಿಗಳಾಗಿರುತ್ತಾರೋ, ಕಾಮ ಉಪಭೋಗಗಳಲ್ಲಿಯೇ ಮುಳುಗಿ ಹೋಗಿರುತ್ತಾರೋ ಅವರೆಲ್ಲಾ ವೇದನೆ ಜಿಗುಪ್ಸೆ ತರುವ ನರಕದಲ್ಲಿಯೇ ನರಳುತ್ತಾರೆ.

10. ಯೇ ನರಾ ಜ್ಞಾನಶೀಲಾಶ್ಚ ತೇ ಯಾಂತಿ ಪರಮಾಂಗನಮ್
ಪಾಪಶೀಲಾ ನರಾ ಯಾಂತಿ ದುಃಖೇನ ಯಮ ಯಾತನಾಂ ॥

ಹತ್ತು ದಿನದ ಪಿಂಡ - ಆಗುವುದಿಲ್ಲ ದಂಡ

1. ಭವಂತಿ ಪ್ರೇತರೂಪಾಸ್ತೇ ಪಿಂಡದಾನವಿವರ್ಜಿತಾಃ ।
ಆಕಲ್ಪಂ ನಿರ್ಜನಾರಣ್ಯೇ ಭ್ರಮಂತಿ ಬಹುದುಃಖಿತಾಃ ॥ *ಗ.ಪು 1/45*

2. ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ ।
ಅಭುಕ್ತ್ವಾ ಯಾತನಾಂ ಜಂತುರ್ಮಾನುಷ್ಯಂ ಲಭತೇ ನ ಹಿ ॥
ಗ.ಪು 1/45

3. ಅತೋ ದದ್ಯಾತ್ ಸುತಃ ಪಿಂಡಾನ್ ದಿನೇಷು ದಶಸು ದ್ವಿಜ ।
ಪ್ರತ್ಯಹಂ ತೇ ವಿಭಜ್ಯಂತೇ ಚತುರ್ಭಾಗೈಃ ಖಗೋತ್ತಮ ॥

4. ಭಾಗದ್ವಯಂ ತು ದೇಹಸ್ಯ ಪುಷ್ಟಿದಂ ಭೂತಪಂಚಕೇ ।
ತೃತೀಯಂ ಯಮದೂತಾನಾಂ ಚತುರ್ಥಂ ಸೋಪಜೀವತಿ ॥

5. ಅಹೋರಾತ್ರೈಶ್ಚ ನವಭಿಃ ಪ್ರೇತಃ ಪಿಂಡ ಮವಾಪ್ನುಯಾತ್ ।
ಜಂತುರ್ನಿಷ್ಪನ್ನದೇಹಶ್ಚ ದಶಮೇ ಬಲಮಾಪ್ನುಯಾತ್ ॥

6. ದಗ್ಧೇ ದೇಹೇ ಪುನರ್ದೇಹಃ ಪಿಂಡೈರುತ್ಪದ್ಯತೇ ಖಗ ।
ಹಸ್ತಮಾತ್ರಃ ಪುಮಾನ್ಯೇನ ಪಥಿ ಭುಂಕ್ತೇ ಶುಭಾಶುಭಮ್ ॥

7. ಪ್ರಥಮೇಽಹನಿ ಯತ್ಪಿಂಡಸ್ತೇನ ಮೂರ್ಧಾ ಪ್ರಜಾಯತೇ ।
ಗ್ರೀವಾಸ್ಕಂದೌ ದ್ವಿತೀಯೇನ ತೃತೀಯಾದ್ಹೃದಯಂ ಭವೇತ್ ॥

8. ಚತುರ್ಥೇನ ಭವೇತ್ಪೃಷ್ಠಂ ಪಂಚಮಾನ್ನಾಭಿರೇವ ಚ ।
ಷಷ್ಠೇನ ಚ ಕಟೀ ಗುಹ್ಯಂ ಸಪ್ತಮಾತ್ ಸಕ್ತಿನೀ ಭವೇತ್ ॥
ಜಾನುಪಾದೌ ತಥಾ ದ್ವಾಭ್ಯಾಂ ದಶಮೇಽಹ್ನಿಕ್ಷುಧಾ ತೃಷಾ ।

10. ಯಾವ ಮನುಷ್ಯರು ಜ್ಞಾನಸಂಪಾದನೆಯ ಮಾರ್ಗದಲ್ಲಿರುತ್ತಾರೋ- ಅವರೆಲ್ಲರೂ ಮಂಗಳಮಯವಾದ ಗತಿಯನ್ನು ಪಡೆಯುತ್ತಾರೆ. ಪಾಪಸ್ವಭಾವದ ಮಂದಿ ದುಃಖದಿಂದ ಯಮಯಾತನೆ ಹೊಂದಿ ನರಳುವುದು ನಿಶ್ಚಯ. ಆದ್ದರಿಂದ ಸಾವಿನ ಘೋರದುಃಖದಲ್ಲೂ ಹರಿಸ್ಮರಣ ತರುವ ಗರುಡ ಪುರಾಣ ಶ್ರವಣ ನಡೆಸಲೇ ಬೇಕು.

ಹತ್ತು ದಿನದ ಪಿಂಡ- ಆಗುವುದಿಲ್ಲ ದಂಡ

1. ಪಿಂಡದಾನ ಹಾಗೂ ಇತರೇ ದಾನಗಳನ್ನು ನೀಡದಿದ್ದಾಗ ಸತ್ತವರು ಪ್ರೇತ ರೂಪರಾಗಿ ಇಡೀ ಕಲ್ಪ ಕಳೆಯುವವರೆಗೂ ಜನರಿಲ್ಲದ ಕಾಡಿನಲ್ಲಿ ಕಡು ದುಃಖದಿಂದ ತಿರುಗುತ್ತಿರುತ್ತಾರೆ.

2. ಏನು ಮಾಡಿದರೇನು? ಕೋಟಿ ಕಲ್ಪಕಾಲಗಳು ಕಳೆದರೂ ನೂರಾರು ಕಲ್ಪ ನೂಕಿದರೂ ಮಾಡಿದ ಕರ್ಮ ಫಲ ಅನುಭವಿಸದೇ ಕರ್ಮ ಸವೆಯುವುದಿಲ್ಲ. ಯಮ ಯಾತನೆಯ ಅನುಭವಿಸದೆ ಸುಮ್ಮನೆ ಮನುಷ್ಯ ಜನ್ಮ ತನಗೆ ತಾನೇ ಸಿಗಲಾರದು.

3. ಎಲೈ ಗರುಡನೇ ಆದ್ದರಿಂದ ಮಗನು ಹತ್ತು ದಿನಗಳಲ್ಲಿಯೂ ಪಿಂಡವನ್ನು ನೀಡಲೇ ಬೇಕು, ಪಕ್ಷಿಶ್ರೇಷ್ಠನೇ, ಒಂದು ಮಾತು ತಿಳಿ. ಪ್ರತಿದಿನವೂ ನೀಡಿದ ಆ ಪಿಂಡ ನಾಲ್ಕು ಭಾಗ ಹೊಂದುತ್ತದೆ

4. ಪಿಂಡನೀಡಿದ್ದರಲ್ಲಿ ಅರ್ಧ ಭಾಗವು ಪಾಂಚಭೌತಿಕ ಶರೀರದ ಸೃಷ್ಟಿಗಾಗಿ ಉಪಯೋಗಿಸಲ್ಪಡುತ್ತದೆ. ಮೂರನೆಯ ಭಾಗವು ಯಮದೂತರಿಗೆ ಆಹಾರದಂತೆ ಸಲ್ಲಿಸಲ್ಪಡುತ್ತದೆ. ನಾಲ್ಕನೆ ಆ ಕೊನೆಯ ಭಾಗವು ಸತ್ತವನಿಗೆ ಆಹಾರಕ್ಕಾಗಿ ಪರಿಗಣಿಸಲ್ಪಡುತ್ತದೆ.

5. ಒಂಬತ್ತು ದಿನಗಳಲ್ಲೂ ಹಗಲೂ- ರಾತ್ರಿ ಗಳಲ್ಲಿಯೂ ಪಿಂಡದಿಂದ ಬೆಳೆಯುತ್ತಾ ಕೊನೆಗೆ ಪೂರ್ಣದೇಹದ ಬೆಳವಣಿಗೆ ಆಗುತ್ತದೆ. ಹತ್ತನೆಯ ದಿನ ಆ ದೇಹಕ್ಕೆ ಬಲ ಬರುತ್ತದೆ.

6. ದೇಹ ಸುಟ್ಟು ಬೂದಿಯಾಗಿದ್ದರೂ ನೀಡಿದ ಪಿಂಡಗಳಿಂದ ಬೇರೆ ದೇಹ ಸತ್ತವನಿಗೆ ಸಿಗುತ್ತದೆ. ಅದೂ ಸಹ ಅಂಗೈ ಅಗಲದಷ್ಟು. ಅದರಿಂದ ಆತನು ಯಮಲೋಕದ ದಾರಿಯಲ್ಲಿ ಸುಖ- ದುಃಖ ಗಳನ್ನು ಅನುಭವಿಸುತ್ತಾನೆ.

7. ಮೊದಲನೆಯ ದಿನದ ಪಿಂಡದಿಂದ ತಲೆಯ ಭಾಗ ಮಾತ್ರ ಹುಟ್ಟುತ್ತದೆ, ಎರಡನೆಯ ದಿನದ ಪಿಂಡದಿಂದ ಕುತ್ತಿಗೆ- ಭುಜಗಳು ಹುಟ್ಟುತ್ತವೆ, ಮೂರನೆಯ ದಿನದ ಪಿಂಡದಿಂದ ಹೃದಯದ ಭಾಗ ಹುಟ್ಟಿಕೊಳ್ಳುತ್ತದೆ.

8. ನಾಲ್ಕನೆಯ ದಿನದ ಪಿಂಡ ಬೆನ್ನಿಗೆ ಬೆಂಬಲ ನೀಡುತ್ತದೆ. ಐದನೆಯ ದಿನದ ಪಿಂಡ

9. ಪಿಂಡಜಂ ದೇಹಮಾಶ್ರಿತ್ಯ ಕ್ಷುಧಾವಿಷ್ಟಸ್ತೃಷಾರ್ದಿತಃ ॥
ಏಕಾದಶಂ ದ್ವಾದಶಂ ಚ ಪ್ರೇತೋ ಭುಂಕ್ತೇ ದಿನದ್ವಯಮ್ ।

10. ತ್ರಯೋದಶೇಽಹನಿ ಪ್ರೇತೋ ಯಂತ್ರಿತೋ ಯಮಕಿಂಕರೈಃ ॥
ತಸ್ಮಿನ್ಮಾರ್ಗೇ ವ್ರಜತ್ಯಕೇ ಕೋ ಗೃಹೀತ ಇವ ಮರ್ಕಟಃ ।

11. ಯಮಪಾಶೈರ್ಧೃತಃ ಪಾಪೀ ಹಾಹೇತಿ ಪ್ರರುಜನ್ ಪಥಿ ॥
ಸ್ವಗೃಹಂ ತು ಪರಿತ್ಯಜ್ಯ ಪುರಂಯಾಮ್ಯಮನುವ್ರಜೇತ್ ॥

ಮಾಡಿದ್ದು ಮಾಸಿಕ - ಹೋಗಿದ್ದು ದುಃಖ ಮಾನಸಿಕ ಹಾಗೂ ದೈಹಿಕ

1. ಜಾನಾಸಿ ಸಂಬಲಬಲಂ ಬಲಮಧ್ವಗಾನಾಂ ।
ಗೋ ಸಂಬಲಾಯ ಯತಸೇ ಪರಲೋಕ ಪಾಂಥ ॥

ಗ. ಪು. ಪ್ರೇತಕಾಂಡ 2/48

2. ಗಂತವ್ಯಮಸ್ತಿ ತವ ನಿಶ್ಚಿತಮೇವ ತೇನ ।
ಮಾರ್ಗೇಣ ಯತ್ರ ಭವತಿ ಕ್ರಯವಿಕ್ರಯೋ ಹಿ ॥

3. ಅತ್ರ ದತ್ತಂ ಸುತೈಃ ಪೌತ್ರೈಸ್ನೇಹಾದ್ವಾ ಕೃಪಯಾಽಥ ವಾ ।
ಮಾಸಿಕಂ ಪಿಂಡಮಶ್ನಾತಿ ತತಃ ಸೌರಿಪುರಂ ವ್ರಜೇತ್ ॥

4. ತತೋ ನಗೇಂದ್ರಭವನೇ ಪ್ರೇತೋ ಯಾತಿ ತ್ವರಾನ್ವಿತಃ ।
ವನಾನಿ ತತ್ರರೌದ್ರಾಣಿ ದೃಷ್ಟ್ವಾ ಕ್ರಂದತಿ ದುಃಖಿತಃ ॥

5. ನಿರ್ಘೃಣ್ಯೈಃ ಕೃಷ್ಯಮಾನಾಸ್ತು ರುದತೇ ಚ ಪುನಃ ಪುನಃ ।
ಮಾಸದ್ವಯಾವ ಸಾನೇತು ತತ್ಪುರಂ ವ್ಯಥಿತೋ ವ್ರಜೇತ್ ॥

6. ಭುಕ್ತ್ವಾ ಪಿಂಡಂಜಲಂ ವಸ್ತ್ರಂ ದತ್ತಂ ಯದ್ಬಾಂಧವೈರಿತಃ ।
ಕೃಷ್ಯಮಾಣಃ ಪುನಃ ಪಾಶೈರ್ನೀಯತೇಽಗ್ರೇ ಚ ಕಿಂಕರೈಃ ॥

ನಾಭಿಯನ್ನು ಹುಟ್ಟಿಸುತ್ತದೆ. ಆರನೆಯ ದಿನದ ಪಿಂಡ ಸೊಂಟ ಹಾಗೂ ಗುಪ್ತ ಭಾಗಗಳ ಜನನ ಆಗುತ್ತದೆ. ಏಳನೆಯ ದಿನ ತೊಡೆಯು ಹುಟ್ಟುತ್ತದೆ. ಎಂಟು ಹಾಗೂ ಒಂಬತ್ತನೆ ದಿನಗಳಿಂದ ಮೊಣಕಾಲು, ಕಾಲುಗಳು ಹುಟ್ಟುತ್ತವೆ ಹತ್ತನೆಯ ದಿನದಿಂದ ಹಸಿವು ಬಾಯಾರಿಕೆ ಹುಟ್ಟುತ್ತದೆ.

9. ಆ ಪಿಂಡದಿಂದ ಹುಟ್ಟಿದ ದೇಹವನ್ನು ಜೀವನು ಪ್ರವೇಶಿಸಿದ ಕೂಡಲೇ ಹಸಿವು ಪೀಡಿಸುತ್ತದೆ. ಬಾಯಾರಿಕೆ ಬಳಲಿಸುತ್ತದೆ. ಹನ್ನೊಂದು ಹಾಗೂ ಹನ್ನೆರಡನೆಯ ದಿನ ಪ್ರೇತವು ಆಹಾರವನ್ನು ತಿನ್ನುತ್ತದೆ.

10. ಹದಿಮೂರನೆಯ ದಿನ ಯಮಕಿಂಕರರಿಂದ ಎಳೆಯಲ್ಪಟ್ಟು ಕಟ್ಟಲ್ಪಟ್ಟ ಕಪಿಎಳೆದ ದಾರಿಯಲ್ಲಿ ಬರುತ್ತಿರುವಂತೆ ಅವನೊಬ್ಬನೇ ಅನಾಥನಾಗಿ ಹೋಗುತ್ತಾನೆ.

11. ಯಮಕಿಂಕರರಿಂದ ಎಳೆಯಲ್ಪಟ್ಟ ಅವನು ಹಾ ಹಾ ಅಯ್ಯೋ- ಎಂದೆಲ್ಲಾ ಅಳುತ್ತಾ ಮುಂದೆ ಹೋಗುವನು. ತನ್ನ ಮನೆಯ ಅಭಿಮಾನ ಕಿತ್ತುಕೊಂಡು ಯಮನ ಪಟ್ಟಣಕ್ಕೆ ತೆರಳುವನು.

ಸುಮ್ಮನೆ ಸುತ್ತುತ್ತಿ ! ತಂದಿಲ್ಲ ಪುಣ್ಯದ ಬುತ್ತಿ !

1. ತಿಳಿಗೇಡಿಯೇ ಊರಿಂದೂರು ತಿರುಗುವಾಗ ದಾರಿ ಖರ್ಚು ಇದ್ದರೇನೇ ಪ್ರಯಾಣಕ್ಕೆ ಬಲ ಎಂದು ನಿನಗೆ ಗೊತ್ತು! ಹೀಗಿದ್ದೂ ಪರಲೋಕದ ಊರಿಗೆ ಬರಲು ಪುಣ್ಯದ ಬುತ್ತಿ ತರಬೇಕಿತ್ತು ಎಂದು ಏಕೆ ಯೋಚನೆಮಾಡಲಿಲ್ಲ?

2. ಕೊಟ್ಟು ಕೊಳ್ಳುವ ಅಂಗಡಿಯಿರುವ ದಾರಿಯಲ್ಲಿಯೇ ಸಂಚಾರ ಮಾಡಬೇಕೆಂದು ಜ್ಞಾಣರು ಹೇಳುವರು. ನೀನು ಬರುವದಂತೂ ನಿಶ್ಚಯ. ದಾರಿಯೂ ಸಹ ನಿಶ್ಚಿತ. ಹೀಗಿರುವಾಗ ಪುಣ್ಯ ಏಕೆ ಜೊತೆಗೆ ತರಲಿಲ್ಲ?

ವರುಷದ ತನಕ ಹದಿನಾರು- ದಾಟಿದ ಕಷ್ಟ ನೂರು

3. ಇಲ್ಲಿ ಮಕ್ಕಳಿಂದಲೋ ಮೊಮ್ಮಕ್ಕಳಿಂದಲೋ ಸ್ನೇಹದಿಂದಲೋ ಕೃಪೆಯಿಂದಲೇ ಕೊಟ್ಟ ಮಾಸಿಕ ಪಿಂಡವನ್ನು ತಿನ್ನುತ್ತಾನೆ. ಅನಂತರ ''ಸೌರಿ'' ಎಂಬ ಯಮನ ಪಟ್ಟಣಕ್ಕೆ ಹೋಗುತ್ತಾನೆ.

4. ಅಲ್ಲಿಂದ ಮುಂದೆ ನಗೇಂದ್ರಭವನ ಎಂಬ ಪಟ್ಟಣಕ್ಕೆ ಬೇಗನೇ ಅಲ್ಲಿ ಭೀಕರ ಕಾಡುಗಳನ್ನು ದಾಟಿ ಮುನ್ನಡೆಯುತ್ತಾನೆ.

5. ಅಲ್ಲಿ ಯಮಕಿಂಕರರು ಎಳೆವಾಗ 2ನೆಯ ತಿಂಗಳು ಕಳೆದಂತೆ ಆ ಪಟ್ಟಣ ಬಿಡುತ್ತಾನೆ.

6. ಆ ಎರಡನೆಯ ತಿಂಗಳ ಅಂತ್ಯದಲ್ಲಿ ಪಿಂಡವನ್ನು ತಿಂದು ನೀರು, ವಸ್ತ್ರಗಳನ್ನು ಸಂಬಂಧಿಕರು ನೀಡಿದ್ದನ್ನು ಅನುಭವಿಸಿ ಮುನ್ನಡೆಯುತ್ತಾನೆ.

7. ಮಾಸೇ ತೃತೀಯೇ ಸಂಪ್ರಾಪ್ತೇ ಪ್ರಾಪ್ಯ ಗಂಧರ್ವಪತ್ತನಮ್ ।
ತೃತೀಯಂ ಮಾಸಿಕಂ ಪಿಂಡಂ ತತ್ರ ಭುಕ್ತ್ವಾ ಪ್ರಸರ್ಪತಿಃ ॥

8. ಶೈಲಾಗಮಂ ಚತುರ್ಥಂ ಚ ಮಾಸಿ ಪ್ರಾಪ್ನೋತಿ ವೈ ಪುರಮ್ ।
ಪಾಷಾಣಾಃ ತತ್ರ ವರ್ಷಂತಿ ಪ್ರೇತಸ್ಯೋಪರಿ ಭೂರಿಶಃ ॥
ಚತುರ್ಥಂ ಮಾಸಿಕಂ ಪಿಂಡಂ ಭುಕ್ತ್ವಾ ಕಿಂಚಿತ್ಸುಖೀ ಭವೇತ್॥

9. ಹಸ್ತ ದತ್ತಂ ತದಾ ಭುಕ್ತೇ ಪ್ರೇತಃ ಕ್ರೌಂಚಪುರೇ ಸ್ಥಿತಃ।
ಯತ್ಪಾಂಚಮಾಸಿಕಂ ಪಿಂಡಂ ಭುಕ್ತ್ವಾ ಕ್ರೂರಪುರಂ ವ್ರಜೇತ್ ಃ ॥

10. ಸಾಧಕೈಃ ಪಂಚಭಿರ್ಮಾಸೈಃ ನ್ಯೂನಷಾಣ್ಮಾಸಿಕಂ ವ್ರಜೇತ್।
ತತ್ರ ದತ್ತೇನ ಪಿಂಡೇನ ಘಟೇನಾಪ್ಯಾಯಿತಃ ಸ್ಥಿತಃ ॥

11. ಮುಹುರ್ತಾರ್ಧಂ ತು ವಿಶ್ರಮ್ಯ ಕಂಪಮಾನ ಃಸುದುಃ ಖಿತಃ।
ತತ್ಪರಂತು ಪರಿತ್ಯಜ್ಯ ತರ್ಜಿತೋ ಯಮಕಿಂಕರೈಃ ॥

12. ದಾನಂ ವಿತರಣಂ ಪ್ರೋಕ್ತಂ ಮುನಿರ್ಭಿಸ್ತತ್ವ ದರ್ಶಿಭಿಃ ।
ಯಂ ಸಾ ತೀರ್ಯತೇ ಯಸ್ಮಾತ್ ತಸ್ಮಾತ್ ವೈತರಣೀ ಸ್ಮೃತಾ॥

13. ಯದಿ ತ್ವಯಾ ಪ್ರದತ್ತಾ ಗೌಃ ತದಾ ನೌರುಪಸರ್ಪತಿ।
ನಾನ್ಯಥೇತಿ ವಚಸ್ತೇಷಾಂ ಶುತ್ವಾಹಾ ದೈವ ಭಾಷತೇ ॥

14. ಸಪ್ತಮೇ ಮಾಸಿ ಸಂಪ್ರಾಪ್ತೇ ಪುರಂ ಬಹ್ವಾಪದಂ ವ್ರಜೇತ್।
ತತ್ರ ಭುಂಕ್ತೇ ಪ್ರದತ್ತಂ ಯತ್ಸಪ್ತಮೇ ಮಾಸಿ ಪುತ್ರಕೈಃ ॥

15. ಮಾಸ್ಯಷ್ಟಮೇ ಪ್ರದತ್ತಂ ಯತ್ ಪಿಂಡ ಭುಕ್ತ್ವಾ ಪ್ರಸರ್ಪತಿ ।
ನವಮೇ ಮಾಸಿ ಸಂಪೂರ್ಣೇ ನಾನಾಕ್ರಂದಪುರಂ ವ್ರಜೇತ್ ॥

7. ಮೂರನೆಯ ತಿಂಗಳು ಗಂಧರ್ವನಗರ ಎಂಬ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿಯ ತೃತೀಯ ಮಾಸಿಕದ ಭೋಜನ ಮುಗಿಸಿ ಮುನ್ನಡೆಯುತ್ತಾನೆ.

8. ನಾಲ್ಕನೆಯ ತಿಂಗಳು ಕಲ್ಲು ಸುರಿಯುವ ಶೈಲಾಗಮ ಪಟ್ಟಣಕ್ಕೆ ಬರುತ್ತಾನೆ. ನಾಲ್ಕನೆಯ ತಿಂಗಳ ಪಿಂಡ ಪ್ರದಾನದಿಂದ ನೋವು ಕಳೆದುಕೊಂಡು ಸ್ವಲ್ಪ ಸಮಾಧಾನ ಹೊಂದುತ್ತಾನೆ.

9. ಕೈಯಾರೆ ನೀಡಿದ ಆ ಪಿಂಡವನ್ನು ಸ್ವೀಕರಿಸುತ್ತಾ ಐದನೆಯ ತಿಂಗಳು ಕ್ರೌಂಚ ಪುರಿಯಲ್ಲಿ ವಾಸ ಮಾಡುವನು . ಅನಂತರ ಆರನೆಯ ತಿಂಗಳು ಬರುವಾಗ ಕ್ರೂರ ಪುರ ಎಂಬ ಪಟ್ಟಣಕ್ಕೆ ಆ ಜೀವ ಹೊರಡುತ್ತಾನೆ.

10. ಐದು ಮಾಸಗಳು ಕಳೆದ ಮೇಲೆ ಆರನೆಯ ತಿಂಗಳಿಗಿಂತ ಕೊಂಚ ಮೊದಲು ಊನಷಾಣ್ಮಾಸಿಕ ಬರುತ್ತದೆ. ಅಲ್ಲಿ ನೀಡಿದ ಪಿಂಡವನ್ನು ತಿಂದು ದಾನ ನೀಡಿದ ನೀರಿನ ಕಲಶದಿಂದ ಆಪ್ಯಾಯತೆಯನ್ನು ಹೊಂದಿ ಅರ್ಧ ಮುಹೂರ್ತ ವಿಶ್ರಮಿಸಿಕೊಂಡು ಆಸೆಯಿದ್ದರೂ ಆ ಜಾಗ ಬಿಟ್ಟು ಮುನ್ನಡೆಯುತ್ತಾನೆ.

11. ಆಗಲೇ ಗೋದಾನದ ಪ್ರಶಸ್ತ ಸಮಯ. ದಾನಕ್ಕೆ ವಿತರಣ ಎನ್ನುತ್ತಾರೆ. ಈ ವಿತರಣದಿಂದ ನರಕವನ್ನು ನೆಮ್ಮದಿಯಾಗಿ ದಾಟಬಹುದಾದ್ದರಿಂದ ಅದಕ್ಕೆ ವೈತರಣೀ ಎನ್ನುತ್ತಾರೆ.

12. ಆ ನದಿಯ ದಡದ ಬಳಿಯಲ್ಲಿ ಯಮದೂತರು ಹೇಳುತ್ತಾರೆ. ಒಂದು ಪಕ್ಷ ನಿನ್ನಿಂದ ಗೋವು ನೀಡಲ್ಪಟ್ಟಿದ್ದರೆ, ಈಗ ನಿನ್ನನ್ನು ನದಿ ದಾಟಿಸಲು ದೋಣಿ ಬರುವುದು, ಇಲ್ಲವಾದರೆ ಇಲ್ಲ ಎನ್ನುತ್ತಾರೆ. ಆಗ ಬೇಸರ ಪಟ್ಟುಕೊಳ್ಳುತ್ತಾನೆ. ಹೀಗೆ ವಿಚಿತ್ರಭವನ ಎಂಬ ಪಟ್ಟಣವನ್ನು ದಾಟುತ್ತಾನೆ.

13. ಆಮೇಲೆ ಏಳನೆಯ ತಿಂಗಳು ಬರುವಾಗ ಬಹ್ವಾಪದ ಎಂಬ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿ ಕಷ್ಟಗಳನ್ನು ದಾಟಿ ಮಕ್ಕಳಿಂದ ನೀಡಲ್ಪಟ್ಟ ಸಪ್ತಮಾಸಿಕ ಪಿಂಡ ಸ್ವೀಕರಿಸಿ ನೆಮ್ಮದಿ ಪಡೆಯುತ್ತಾನೆ.

14. ಎಂಟನೆಯ ತಿಂಗಳಲ್ಲಿ ದುಃಖದ ಎಂಬ ಪಟ್ಟಣವನ್ನು ಸೇರುತ್ತಾನೆ. ಅದನ್ನು ಅನುಭವಿಸಿ ಒಂಬತ್ತನೆಯ ತಿಂಗಳಲ್ಲಿ ನಾನಾಕ್ರಂದಪುರ ಎಂಬ ಪಟ್ಟಣವನ್ನು ಸೇರುತ್ತಾನೆ. ಅಲ್ಲಿಯು ಕೂಡ ಆ ತಿಂಗಳ ಮಾಸಿಕ ಪಿಂಡಪ್ರದಾನದಿಂದ ಸ್ವಲ್ಪ ಸಮಾಧಾನ ಹೊಂದಿ ಮುಂದೆ ಸಂಚರಿಸುತ್ತಾನೆ.

15. ಹತ್ತನೆಯ ತಿಂಗಳಲ್ಲಿ ಭಾರೀ ದಗೆಯುಳ್ಳ ಸುತಪ್ತ ಭವನಕ್ಕೆ ಬರುತ್ತಾನೆ. ಆ ತಿಂಗಳ ಕಾರ್ಯಕ್ರಮದಿಂದ ಆಹಾರ ನೀರು ಸಿಕ್ಕರೂ ಸಹ ಸ್ವಲ್ಪವೇ ಸಮಾಧಾನ ಆಗುತ್ತದೆ.

16. ಸುತಪ್ತ ಭವನಂ ಗಚ್ಛೇತ್ ದಶಮೇ ಮಾಸಿ ಕೃಛ್ರತಃ।
ಪಿಂಡದಾನಂ ಜಲಂ ತತ್ರ ಭುಕ್ತ್ವಾತಿ ನ ಸುಖೀ ಭವೇತ್ ॥

17. ದಶೈಕಮಾಸಿಕಂ ತತ್ರ ಭುಂಕ್ತೇ ದತ್ತಂ ಸುತಾದಿಭಿಃ।
ಸಾರ್ಧೇ ಚೈಕಾದಶೇ ಮಾಸೇ ಪಯೋವರ್ಷಣಮೃಚ್ಛತಿ ॥

18. ನ್ಯೂನಾಬ್ದಿಕಂ ಚ ಯತ್ ಶ್ರಾದ್ಧಂ ತತ್ರ ಭುಂಕ್ತೇ ಸ ದುಃಖಿತಃ।
ಸಂಪೂರ್ಣೆ ತು ತತೋ ವರ್ಷೇ ಶೀತಾಢ್ಯಂ ನಗರಂ ವ್ರಜೇತ್ ॥

19. ಶೀತಾರ್ಥಃ ಕ್ಷುದಿತಃ ಸೋಽತಿ ವೀಕ್ಷತೇ ಹಿ ದಿಶೋ ದಶ।
ಕಿಂಕರಾಸ್ತೇ ವದಂತ್ಯತ್ರ ಕ್ವತೇ ಪುಣ್ಯಂ ಹಿ ತಾದೃಶಂ
ಭುಕ್ತ್ವಾಚ ವಾರ್ಷಿಕಂ ಪಿಂಡಂ ಧೈರ್ಯಮಾಲಿಂಬತೇ ಪುನಃ ॥

20. ತತಃ ಸಂವತ್ಸರಸ್ಯಾಂತೇ ಪ್ರತ್ಯಾಸನ್ನೇ ಯಮಾಲಯೇ।
ಬಹುಭೀತಿ ಪುರೇ ಗತ್ವಾ ಹಸ್ತಮಾತ್ರಂ ಸಮುತ್ಸೃಜೇತ್ ॥

21. ಜೌರ್ಧ್ವ ದೇಹಿಕ ದಾನಾನಿ ಯೈರ್ನದತ್ತಾನಿ ಕಾಶ್ಯಪ।
ಏವಂ ಕಷ್ಟೇನ ತೇ ಯಾಂತಿ ಗೃಹೀತಾ ಧೃಡಬಂಧನೈಃ॥

ನಿಯಮ ಹತ್ತು -ಪಾಪಪರಿಹಾರ ಮತ್ತೂ ಮತ್ತೂ (ಮರಣವ್ಯಕ್ತಿಗೆ)

1. ತುಳಸೀ ಮಂಜರೀಯುಕ್ತೋ ಯಸ್ತು ಪ್ರಾಣಾನ್ವಿಮುಂಚತಿ।
ಯಮಸ್ತಂ ನೇಕ್ಷಿತುಂ ಶಕ್ತೋ ಯುಕ್ತಂ ಪಾಪಶತೈರಪಿ ॥

2. ತಸ್ಯಾಃ ದಲಂ ಮುಖೇ ಕೃತ್ವಾ ತಿಲದರ್ಭಾಸನೇ ಮೃತಃ।
ನರೋ ವಿಷ್ಣುಪುರಂ ಯಾತಿ ಪುತ್ರಹೀನೋಽಪ್ಯಸಂಶಯಃ ॥

3. ಶಾಲಿಗ್ರಾಮ ಶಿಲಾತೋಯಂ ಯಃ ಪಿಬೇದ್ಬಿಂದುಮಾತ್ರಕಮ್।
ಸ ಸರ್ವ ಪಾಪನಿರ್ಮುಕ್ತೋ ವೈಕುಂಠ ಭವನಂ ವ್ರಜೇತ್ ॥

4. ಪುನಾತ್ಯ ಪುಣ್ಯಾನ್ ಪುರುಷಾನ್ ಶತ ಶೋಽಥ ಸಹಸ್ರಶಃ।
ಗಂಗಾ ತಸ್ಮಾತ್ಪಿಬೇತ್ತಸ್ಯಾ ಜಲಂ ಸಂಸಾರತಾರಕಮ್ ॥

16. ಮುಂದೆ ಹನ್ನೊಂದನೆಯ ತಿಂಗಳಲ್ಲಿ ರೌದ್ರ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿ ಆಗ ನೀಡಿದ ಪಿಂಡಪ್ರದಾನ ತರ್ಪಣಗಳಿಂದ ಹೇಗೋ ಕಾಲ ತಳ್ಳುತ್ತಾನೆ. ಹನ್ನೊಂದುವರೆ ತಿಂಗಳಲ್ಲಿ ಪಯೋವರ್ಷಣ ಎಂಬ ನಗರದಲ್ಲಿರುತ್ತಾನೆ. ನ್ಯೂನಾಬ್ದಿಕ ದಲ್ಲಿ ನೀಡಿದ ಆಹಾರ ನೀರಿನಿಂದ ನೆಮ್ಮದಿಯು ಸಿಕ್ಕಂತೆ ಆಗುವುದು.

17. ಮುಂದೆ 12ನೆಯ ತಿಂಗಳಿಗೆ ಶೀತಾಢ್ಯನಗರಕ್ಕೆ ಪ್ರಯಾಣ. ಆಗ ಚಳಿ- ಹಸಿವೆ ಎರಡೂ ಆಗುತ್ತದೆ.

18. ಯಮಕಿಂಕರರು ಜೀವನಿಗೆ ನೀನೇನಾದರೂ ಪುಣ್ಯ ಮಾಡಿದ್ದರೆ ನಿನಗೆ ಒಳ್ಳೆಯದಾಗುತ್ತಿತ್ತು! ಆ ಪುಣ್ಯ ಇದೆಯಾ ಎಂದು ಕೇಳುತ್ತಾರೆ.

19. ಆಗ ವರ್ಷಾಬ್ದಿಕದಲ್ಲಿ ನೀಡಿದ ಪಿಂಡ ತರ್ಪಣಗಳಿಂದ ಸ್ವಲ್ಪ ಧೈರ್ಯ ತಾಳುತ್ತಾನೆ. ಬಹುಭೀತಿಪುರ ಮುಟ್ಟಿ ಮುಂದೆ ಹೋಗುತ್ತಾನೆ.

20. ಆ ಸಂವತ್ಸರದ ಕೊನೆಯಲ್ಲಿ ಯಮನ ಪಟ್ಟಣವು ಬರುತ್ತಿರುವಾಗ (ಧರ್ಮ ಭವನ) ಆ ಜೀವ ಹಸ್ತಮಾತ್ರದ ದೇಹ ಬಿಟ್ಟು ಮುನ್ನಡೆಯುವನು.

21. ಎಲೈ ಗರುಡನೇ, ಯಾರಿಂದ ಮೇಲಿನ ಲೋಕಕ್ಕೆ ತೆರಳಿದವರಿಗಾಗಿ ಮೇಲೆ ಹೇಳಲ್ಪಡುವ ಮಾಸಿಕ ಶ್ರಾದ್ಧ ದಾನಗಳು ನೀಡಲ್ಪಡಲಿಲ್ಲವೋ ಅಂತಹವರಿಗೆ ಮಾತ್ರ ಕಷ್ಟಗಳಿಂದ ದುಃಖ ಬರುತ್ತದೆ.

ನಿಯಮ ಹತ್ತು- ಪಾಪಪರಿಹಾರ ಮತ್ತೂ ಮತ್ತೂ

1. ಇನ್ನೇನು ಸಾಯತ್ತೇನೆ ಎಂಬ ಆತಂಕಕ್ಕೊಳಗಾದವನು ತುಳಸಿಯ ಮಂಜರಿಯನ್ನೂ (ದಳ ಹಾಗೂ ಬೀಜತುಂಬಿದ ತುಳಸೀಸಸಿಯ ಕೊಂಬೆಯ ತುದಿ) ಕಿವಿಯಲ್ಲಿಟ್ಟುಕೊಂಡು ಪ್ರಾಣವನ್ನು ಬಿಟ್ಟರೆ ಪಾಪ ನೂರಾರಿದ್ದರೂ ಅವನನ್ನು ಯಮ ದುರುಗುಟ್ಟಿ ನೋಡಿ ಗದರುವುದಿಲ್ಲ.

2. ಬಾಯಿಯಲ್ಲಿ ತುಳಸೀದಳ ಇಟ್ಟುಕೊಂಡು ನೆಲದಲ್ಲಿ ಮಲಗುವಾಗ ಅದರ ಕೆಳಗೆ ಎಳ್ಳು ದರ್ಭೆ ಹಾಸಿ ಪ್ರಾಣ ಬಿಟ್ಟರೆ ಆ ಪುಣ್ಯ ಅತೀ ಎನ್ನಬಹುದು. ಮಕ್ಕಳಿಲ್ಲದಿದ್ದರೂ ಅವನಿಗೆ ವೈಕುಂಠ ನಿಶ್ಚಿತ. (ದೇವರ ಪೆಟ್ಟಿಗೆ- ಸಾಲಿಗ್ರಾಮ ಇವುಗಳ ಸಾಮೀಪ್ಯ ಪುಣ್ಯಲೋಕಕ್ಕೆ ಕಾರಣವಾಗಿದೆ. ಸತ್ತ ಮೈಲಿಗೆ ಅದಕ್ಕೆ ಅಂಟಿತೆಂಬ ಭಯ ಬೇಡ. ಅದಿರುವುದೇ ಪಾಪ ಕಳೆಯಲು)

3. ಪ್ರಾಣೋತ್ಕ್ರಮಣದ ಸಂಕಟದಲ್ಲೂ ಒಂದು ಹನಿ ವಿಷ್ಣುಪಾದೋದಕವನ್ನು ಸ್ವೀಕರಿಸಿದರೂ ಸರಿ. ಎಲ್ಲಾ ಪಾಪಗಳನ್ನು ತೊಳೆದುಕೊಂಡು ಹರಿಭಕ್ತಿಯಿಂದ ವೈಕುಂಠಕ್ಕೆ ತೆರಳುವನು.

4. ಪ್ರಾಣವನ್ನು ಬಿಡುವ ದುಗುಡದಲ್ಲಿಯೂ ಸಹ ಹೆಂಗಾದರೂ ಸರಿ ಗಂಗಾಪಾನ

5. ವೇದೋಪನಿಷದಾಂ ಪಾಠಾತ್ ಶಿವ ವಿಷ್ಣುಸ್ತವಾದಪಿ ।
ಬ್ರಾಹ್ಮಣ ಕ್ಷತ್ರಿಯ ವಿಶಾಂ ಮರಣಂ ಮುಕ್ತಿದಾಯಕಮ್ ॥

6. ಪ್ರಾಣಪ್ರಯಾಣ ಸಮಯೇ ಕುರ್ಯಾದನಶನಂ ಖಗ ।
ದದ್ಯಾದಾತುರ ಸಂನ್ಯಾಸಂ ವಿರಕ್ತಸ್ಯ ದ್ವಿಜನ್ಮನಃ ॥

7. ಅಂತೇ ಜನೋ ಯದ್ದದಾತಿ ಸ್ವಲ್ಪಂ ವಾ ಯದಿ ವಾ ಬಹು ।
ತದಕ್ಷಯಂ ಭವೇತ್ ತಾರ್ಕ್ಷ್ಯ ಯತ್ಪುತ್ರಶ್ಚಾನುಮೋದತೇ ॥

8. ರಾಕ್ಷಸಾಶ್ಚ ಪಿಶಾಚಾಶ್ಚ ಭೂತಾಃ ಪ್ರೇತಾಃ ಯಮಾನುಗಾಃ
ಅಲಿಪ್ತದೇಶೇ ಖಟ್ವಾಯಾಮ್ ಅಂತರಿಕ್ಷೇ ವಿಶಂತಿ ಚ ॥

9. ಅತಃ ಸ್ಮರೇನ್ಮಹಾ ವಿಷ್ಣೋರ್ನಾಮ ಪಾಪಾಪನಾಶನಮ್ ।
ಗೀತಾ ಸಹಸ್ರನಾಮಾನಿ ಪಠೇದ್ವಾಶ್ರುಣುಯಾದಪಿ ॥

10. ಮತ್ಸ್ಯಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ತಥೈವ ಚ॥

ಏತಾನಿ ದಶನಾಮಾನಿ ಸ್ಮರ್ತವ್ಯಾನಿ ಸದಾ ಬುಧೈಃ ।
ಸಮೀಪೇ ರೋಗಿಣೋ ಬ್ರೂಯುಃ ಬಾಂಧವಾಸ್ತೇ ಪ್ರಕೀರ್ತಿತಾಃ॥

ದಾನ ಎಂಟು – ಕಳೆಯಿತು ಪಾಪದ ಗಂಟು

1. ಅಂತಕಾಲೇ ತು ಸತ್ಪುತ್ರಃ ಸರ್ವದಾನಾದಿ ದಾಪಯೇತ್।
ಯತ್ತದರ್ಥಂ ಸುತೋ ಲೋಕೇ ಪ್ರಾರ್ಥ್ಯತೇ ಧರ್ಮಕೋವಿದೈಃ॥

2. ಆತುರೇ ಚೋಪರಾಗೇ ಚ ದ್ವಯಂ ದಾನಂ ವಿಶಿಷ್ಯತೇ ।
ಅತೋಽವಶ್ಯಂ ಪ್ರದಾತವ್ಯಂ ಅಷ್ಟದಾನಂ ತಿಲಾದಿಕಂ ॥

ಮಾಡಿದರೆ ನೂರಾರು ಸಾವಿರಾರು ಪಾಪಗಳನ್ನೂ ಸಹ ಅವಳು ಸಹಸಾ ಪವಿತ್ರ ರನ್ನಾಗಿಸುತ್ತಾಳೆ. ಆದ್ದರಿಂದ ಸಂಸಾರತಾರಕವಾದ ಗಂಗಾಜಲಪಾನ ಅತ್ಯವಶ್ಯಕವಾದುದು.

5. ವೇದ- ಉಪನಿಷತ್ತುಗಳ ಪಾಠದಿಂದಲೂ ಶಿವ- ವಿಷ್ಣು ಇತರ ಸ್ತೋತ್ರಗಳಿಂದಲೂ ಬ್ರಾಹ್ಮಣ- ಕ್ಷತ್ರಿಯ ವೈಶ್ಯರಿಗೆ ಮುಕ್ತಿಯಾಗುವುದು ನಿಶ್ಚಿತ.

6. ಎಲೈ ಗರುಡನೇ, ಪ್ರಾಣಪ್ರಯಾಣ ಸಮಯದಲ್ಲಿ ಉಪವಾಸ ಮಾಡಬೇಕು ಆಗ ತುಂಬಾ ಪುಣ್ಯ ಲಭಿಸುವುದು. ವಿರಕ್ತನಾದ ಬ್ರಾಹ್ಮಣನಿಗೆ, ಕ್ಷತ್ರಿಯನಿಗೆ, ವೈಶ್ಯರಿಗೆ ಆತುರ ಸನ್ಯಾಸವನ್ನು ನೀಡಬೇಕು.

7. ಅಂತ್ಯಕಾಲದಲ್ಲಿ ಸಾಯುವ ವ್ಯಕ್ತಿ ಏನು ದಾನಕೊಟ್ಟರೂ ಸರಿ, ಸ್ವಲ್ಪವಾಗಲೀ ಬಹುವಾಗಲೀ ಅದು ಅಕ್ಷಯ ಫಲ ನೀಡುತ್ತದೆ. ಕರಗಿದ ಮನಸ್ಸಿನಿಂದ ನೀಡಿದ ದಾನದ ಫಲ ಕರಗುವುದೇ ಇಲ್ಲ. ಆಗ ಮಕ್ಕಳು ಅದನ್ನು ಅನುಮೋದನೆ ಮಾಡಬೇಕು.

8. ಎತ್ತರದ ಪ್ರದೇಶದಲ್ಲಿ ಯಮನ ಅನುಸಾರಿಗಳಾದ ರಾಕ್ಷಸರು, ಪಿಶಾಚಿಗಳು, ಪ್ರೇತಗಳು, ಭೂತಗಳು, ವಾಸಿಸುತ್ತವೆ. ಮಂಡಲ ಮಾಡಿರದ ದೇಶದಲ್ಲಿ ಮೇಲಿನ ಮಂಚದಲ್ಲಿ ಅವುಗಳು ಪ್ರವೇಶಿಸುತ್ತವೆ. ಹೀಗೆ ನೆಲದಲ್ಲಿ ಮಂಡಲಮಾಡಿದ ಕಡೆ ಮಲಗುವುದು ಸೂಕ್ತ.

9. ನಾವು ತಿಳಿದು ಮಾಡಿದ ಪಾಪವೇ ಲೆಕ್ಕಕ್ಕಿಲ್ಲ. ತಿಳಿಯದ್ದಂತೂ ಹೇಳಿ ತೀರುವುದೂ ಅಲ್ಲ. ಆದ್ದರಿಂದ ಎಲ್ಲಾ ಪಾಪಗಳ ರಾಶಿಯನ್ನೇ ಸುಟ್ಟುಬಿಡುವ ಮಹಾವಿಷ್ಣುವಿನ ನಾಮಗಳನ್ನು ಸಹಸ್ರನಾಮವನ್ನು ಸಾಯುವವನೇ ಪಠಿಸಬೇಕು. ಆಗದಿದ್ದರೆ ಸಂಬಂಧಿಕರು, ಬ್ರಾಹ್ಮಣರನ್ನು ಕರೆಸಿ ಕಿವಿಗೆ ಕೇಳುವಂತೆ ಜೋರಾಗಿ ಪಾರಾಯಣ ಮಾಡಿಸಬೇಕು.

10. ಬಂಧುಗಳೆಂದರೆ ಸಾಯುವವನ ಸಂಕಟ ಕಳೆಯುವವರು. ಆದ್ದರಿಂದ ಅವರು ರೋಗಿಯ ಬಳಿ ಬಂದು ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ ರಾಮ, ಕೃಷ್ಣ ಬುದ್ಧ, ಕಲ್ಕಿ- ಈ ಹತ್ತು ನಾಮಗಳನ್ನು ತಿಳಿದವರು ಸದಾಕಾಲವೂ ಸ್ಮರಿಸುತ್ತಾರೆ. ಇಂತಹವರೇ ಬಂಧುಗಳು. ಅಂತಹವರನ್ನೇ ಸರ್ವದಾ ಆದರಿಸಬೇಕು.

ದಾನ ಎಂಟು-ಕಳೆಯಿತು ಪಾಪದ ಗಂಟು

1. ಅಂತ್ಯಕಾಲದಲ್ಲಿ ಸತ್ಪುತ್ರನು ಎಲ್ಲಾ ದಾನಗಳನ್ನೂ ತಂದೆಯ ಕೈಯಿಂದಲೇ ಕೊಡಿಸಬೇಕು. ಅಂತಹ ದಾನಮಾಡಿಸಿ ನನಗೆ ಸುಖ ತರುತ್ತಾನೆಂದೇ ಎಲ್ಲರೂ ಮಗನನ್ನು ಸುತ ಎನ್ನುತ್ತಾರೆ. ಧಾರ್ಮಿಕರು ಇದಕ್ಕಾಗಿಯೇ ಮಗನನ್ನು ಹಂಬಲಿಸುವರು.

2. ಮರಣದ ಸಂಕಟದಲ್ಲಿರುವಾಗ, ಗ್ರಹಣದ ಸಂದರ್ಭ ಸಿಕ್ಕಿರುವಾಗ ದಾನವು

3. ತಿಲಂಲೋಹಂ ಹಿರಣ್ಯಂ ಚ ಕಾರ್ಪಾಸಂ ಲವಣಂ ತಥಾ ।
ಸಪ್ತಧಾನ್ಯಂ ಕ್ಷಿತಿರ್ಗಾವಃ ಏಕೈಕಂ ಪಾವನಂ ಸ್ಮೃತಮ್ ॥

(8-33)

4. ಮಮಸ್ವೇದ ಸಮುದ್ಭೂತಾಃ ಪವಿತ್ರಾ ತ್ರಿವಿಧಾಸ್ತಿಲಾಃ ।
ಅಸುರಾ ದಾನವಾ ದೈತ್ಯಾಃ ತೃಪ್ಯಂತಿ ತಿಲದಾನತಃ ।
ಸಂಹರಂತಿ ತ್ರಿಧಾ ಪಾಪಂ ವಾಙ್ಮನಃ ಕಾಯಃ ಸಂಚಿತಮ್॥

(8-36)

5. ಲೋಹದಾನಂ ಚ ದಾತವ್ಯಂ ಭೂಮಿಯುಕ್ತೇನ ಪಾಣಿನಾ ।
ಯಮಸೀಮಾಂ ನ ಚಾಪ್ನೋತಿ ನ ಗಚ್ಛೇತ್ ತಸ್ಯವರ್ತ್ಮನಿ ॥

ಕುಠಾರೋ ಮುಸಲೋ ದಂಡಃ ಖಡ್ಗಶ್ಚ ಚುರಿಕಾ ತಥಾ ।
ಶಸ್ತ್ರಾಣಿ ಯಮಹಸ್ತೇ ಚ ನಿಗ್ರಹೇ ಪಾಪಕರ್ಮಣಾಮ್।
ಯಮಾಯುಧಾನಾಂ ಸಂತುಷ್ಟ್ಯೈ ದಾನಮೇತದುದಾಹೃತಮ್ ॥

(8-36)

6. ಬ್ರಹ್ಮಾದ್ಯಾಃ ಋಷಯೋ ದೇವಾ ಧರ್ಮರಾಜಸಭಾಸದಃ ।
ಸ್ವರ್ಣದಾನೇಷು ಸಂತುಷ್ಟಾ ಭವಂತಿ ವರದಾಯಕಾಃ ॥

ತಸ್ಮಾದ್ದೇಯಂ ಸ್ವರ್ಣದಾನಂ ಪ್ರೇತೋದ್ಧರಣಹೇತವೇ ।
ರೂಪವಾನ್ ಧಾರ್ಮಿಕೋ ವಾಗ್ಮೀ ಶ್ರೀಮಾನತುಲವಿಕ್ರಮಃ ॥

7. ಕಾರ್ಪಾಸಸ್ಯಚ ದಾನೇನ ದೂತೇಭ್ಯೋ ನ ಭಯಂ ಭವೇತ್॥

8. ಲವಣಂ ದೀಯತೇ ಯಚ್ಚ ತೇನ ನೈವ ಭಯಂ ಯಮಾತ್॥

ತುಂಬಾ ವಿಶೇಷವಾದುದು. ಆದ್ದರಿಂದ ಅವಶ್ಯವಾಗಿ ಎಳ್ಳು ಮೊದಲಾದ ಎಂಟು ದಾನಗಳನ್ನು ನೀಡಲೇಬೇಕು.

3. ಎಳ್ಳು- ಆಯುಧ- ಹತ್ತಿ- ಉಪ್ಪು (ಬತ್ತ- ಗೋಧಿ- ಜವೆಗೋಧಿ- ಹೆಸರು- ಉದ್ದು- ನವಣೆ, ಕಡಲೆ) ಎಂಬ ಏಳುಧಾನ್ಯಗಳು - ಭೂಮಿ- ಗೋವು ಇವು ಒಂದೊಂದು ಪಾವನವಾದವುಗಳು.

4. ಎಲೈ ಗರುಡನೇ, ಎಳ್ಳಿನ ಮಹಿಮೆಗೆಎಲ್ಲೆ ಎಲ್ಲಿದೆ? ಅದು ವರಾಹ ರೂಪಿಯಾದ ನನ್ನ ಬೆವರಿನಿಂದ ಹುಟ್ಟಿದ್ದಾಗಿದ್ದು ಪವಿತ್ರವಾಗಿದೆ. ಅದು ಬಿಳಿ, ಕಪ್ಪು, ಹಾಗೂ ಕಂದುಬಣ್ಣದ್ದೆಂದು ಮೂರು ತೆರನಾಗಿದೆ. ಇದರ ದಾನದಿಂದ ಅಸುರರು, ದಾನವರೂ, ದೈತ್ಯರೂ ಸಹ ತೃಪ್ತರಾಗುತ್ತಾರೆ. ಇವು ವಾಕ್- ಮನಸ್ಸು- ದೇಹದಿಂದ ಉಂಟಾದ ಎಲ್ಲಾ ಪಾಪಗಳನ್ನೂ ಸಹ ಪರಿಹರಿಸುತ್ತವೆ.

5. ಲೋಹದಾನ- ಆಯುಧದಾನ ನೀಡುವಾಗ ಆಯುಧವನ್ನು ಭೂಮಿಗೆ ಮುಟ್ಟಿಸಿ ಹಾಗೆಯೇ ದಾನ ನೀಡಬೇಕು. ಭೂಮಿಯಂತೆ ಅದು ಸಹನೆ- ಸ್ಥಿರತೆಗೆ ಕಾರಣವಾಗಬೇಕೇ ಹೊರತು ಅಸಹನೆಯಿಂದ ಇನ್ನೊಬ್ಬರ ಮರಣಕ್ಕೆ ಕಾರಣವಾಗಬಾರದು. ಅಂತಹಾ ಕೊಡಲಿ, ಮಚ್ಚುಗಳು, ಕಟ್ಟಿಗೆ ಕತ್ತರಿಸಲು, ಕಟ್ಟಡ ಕಟ್ಟಲು, ಆಹಾರಧಾನ್ಯ ಕತ್ತರಿಸಲು ಉಪಯೋಗವಾಗಿ ಮಂಗಳವೇ ಆಗುವುದು. ಇದರಿಂದ, ಪಿತೃವು ಯಮಲೋಕದ ಗಡಿಯೊಳಗೆ ನೂಕಲ್ಪಡುವುದಿಲ್ಲ. ಆ ದಾರಿಯಲ್ಲಿ ನಡೆಯುವ ಸಂಕಟ ಬರುವುದಿಲ್ಲ. ಕೊಡಲಿ, ಒನಕೆ, ಹಾರೆ, ಖಡ್ಗ, ಚೂರಿ ಇವುಗಳು ಯಮದೂತರ ಆಯುಧಗಳು. ಅವು ಪಾಪನಿಗ್ರಹಕ್ಕೆ ಮೀಸಲಾಗಿರುವುದರಿಂದ ದುರ್ಜನರ ಶಿಕ್ಷೆಗೆ ಅನುವುಮಾಡಿದ ಪುಣ್ಯದಿಂದ ಆಯುಧಗಳು ಸಂತುಷ್ಟವಾಗುವವು. ಇವನಿಗೆ ಪೀಡೆ ಬರಲಾರದು.

6. ಧರ್ಮರಾಜನ ಸಭೆಯಲ್ಲಿ ಕುಳಿತಿರುವ ಬ್ರಹ್ಮನೇ ಮೊದಲಾದ ದೇವತೆಗಳು ಋಷಿಗಳೂ ಎಲ್ಲರೂ ಸಹ ಉದ್ದೇಶಪೂರ್ವಕವಾಗಿ ನಡೆದ ಸ್ವರ್ಣದಾನದಿಂದ ಸಂತುಷ್ಟರಾಗುತ್ತಾರೆ. ವರವನ್ನೂ ನೀಡುತ್ತಾರೆ. ಆದ್ದರಿಂದ ಪ್ರೇತಜನ್ಮ ಕಳೆಯಲೆಂದು ಸ್ವರ್ಣದಾನ ನೀಡಲೇಬೇಕು. ಅದರಿಂದ ಮುಂದೆಯೂ ಸುರೂಪಿಯಾಗಿ ಹುಟ್ಟುತ್ತಾನೆ. ಧರ್ಮಬುದ್ಧಿ ಬರುತ್ತದೆ. ವಾಗ್ಮಿಯಾಗುತ್ತಾರೆ. ಸಂಪತ್ತು, ಪರಾಕ್ರಮ ಎರಡೂ ಅವನಲ್ಲಿ ನೆಲೆಗೊಳ್ಳುತ್ತವೆ.

7. ಹತ್ತಿಯ ದಾನದಿಂದಂತೂ ಯಮದೂತರ ಭಯ ಬರುವುದಿಲ್ಲ. ಅರಳಿದ ಆ ಹತ್ತಿಯು ಧಾರ್ಮಿಕರಾದ ಯಮದೂತರ ಮನಸ್ಸನ್ನು ಅರಳಿಸುತ್ತದೆ. ಬೆಳಗಿದ ಹತ್ತಿಯ ಬತ್ತಿಯಂತೂ ಹರಿ ಪ್ರತಿಮಾದರ್ಶನ ನೀಡಿ ಪಾಪ ಪರಿಹಾರಮಾಡುವುದು, ದುರುಪಯೋಗವಾಗದ ವಸ್ತು ಎಂದರೆ ಹತ್ತಿ ಮಾತ್ರ ಅಲ್ಲವೇ?

8. ಯಾವ ಉಪ್ಪು ನೀಡಲ್ಪಡುತ್ತದೋ ಅದರಿಂದ ಅಡಿಗೆ ರುಚಿ ಹೆಚ್ಚಿ ಎಲ್ಲಾ ಭೂತಗಳಿಗೂ ತೃಪ್ತಿತರುವುದು. ಯಮನಿಂದಲೂ ಸಹ ಆತನಿಗೆ ಭಯ ಬಾರದು.

9. ಸಪ್ತಧಾನ್ಯ ಪ್ರದಾನೇನ ಪ್ರೀತೋ ಧರ್ಮಧ್ವಜೋ ಭವೇತ್।
ತುಷ್ಟಾಭವಂತಿ ಯೇಽನ್ಯೇತಿ ತ್ರಿಷು ದ್ವಾರೇಷ್ವಧಿಷ್ಠಿತಾಃ ॥

10. ವ್ರೀಹಯೋ ಯವ ಗೋಧೂಮಾಂ ಮುದ್ಗಾ ಮಾಷಾಃ ಪ್ರಿಯಂಗವಃ।
ಚಣಕಾಃ ಸಪ್ತಮಾ ಜ್ಞೇಯಾಃ ಸಪ್ತಧಾನ್ಯಮುದಾಹೃತಮ್ ॥

11. ಗೋಚರ್ಮಮಾತ್ರಂ ವಸುಧಾ ದತ್ತಾ ಪಾತ್ರೇ ವಿಧಾನತಃ।
ಪುನಾತಿ ಬ್ರಹ್ಮಹತ್ಯಾ ಯಾ ದೃಷ್ಟಮೇತನ್ಮುನೀಶ್ವರೈಃ ॥ *(8-49)*

ದುಃಖದ ಸರಣಿ ವೈತರಣಿ- ಗೋದಾನ ಮಾಡಿದ್ದರೆ ಕೂರಬೇಕಿಲ್ಲ ಧರಣಿ

1. ಮಾರ್ಗಮಧ್ಯೇ ವಹತ್ಯುಗ್ರಾ ಘೋರಾ ವೈತರಣೀ ನದೀ ।
ಸಾ ದೃಷ್ಟ್ವಾ ದುಃಖದಾ ಕಿಂ ವಾ ಯಸ್ಯಾ ವಾರ್ತಾ ಭಯಾವಹಾ ॥

2. ಶತಯೋಜನ ವಿಸ್ತೀರ್ಣಾ ಪೂಯಶೋಣಿತವಾಹಿನೀ।
ಅಸ್ಥಿವೃಂದತಟಾ ದುರ್ಗಾ ಮಾಂಸ ಶೋಣಿತ ಕರ್ದಮಾ ॥

3. ಅಗಾಧಾ ದುಸ್ತರಾ ಪಾಪೈಃ ಕೇಶ ಶೈವಾಲ ದುರ್ಗಮಾ।
ಮಾಂಸಗ್ರಾಹ ಸಮಾಕೀರ್ಣಾ ಘೋರಪಕ್ಷಿ ಶತೈರ್ವೃತಾ ॥

4. ಮಯಾ ನ ದತ್ತಂ ನ ಹುತಂ ಹುತಾಶನೇ
ತ ಪೋ ನ ತಪ್ತಂ ತ್ರಿದಶಾ ನ ಪೂಜಿತಾಃ।
ನ ತೀರ್ಥ ಸೇವಾ ವಿಹಿತಾ ವಿಧಾನತೋ
ದೇಹಿನ್ ಕ್ವಚಿನ್ನಿಸ್ತರ ಯತ್ತ್ವಯಾ ಕೃತಮ್ ॥

5. ನ ನಿತ್ಯದಾನಂ ನ ಗವಾಹ್ನಿಕಂ ಕೃತಮ್
ನ ವೇದ ಶಾಸ್ತ್ರಾರ್ಥ ವಚಃ ಪ್ರಮಾಣಿತಮ್।
ಶ್ರುತಂ ಪುರಾಣಮ್ ನ ಚ ಪೂಜಿತೋ ಜ್ಞಃ
ದೇಹಿನ್ ಕ್ವಚಿನ್ ನಿಸ್ತರ ಯತ್ತ್ವಯಾ ಕೃತಮ್ ॥

9. ಸಪ್ತಧಾನ್ಯಗಳ ದಾನದಿಂದ ಧರ್ಮದೊಡೆಯನಾದ ದಕ್ಷಿಣದಿಕ್ಪತಿ ಯಮ ಪ್ರೀತನಾಗುವನು. ಅಂತೆಯೇ ಇತರ ಮೂರು ದಿಕ್ಕುಗಳಲ್ಲಿರುವ ದ್ವಾರಪಾಲಕರೂ ಸಹ ಸುಪ್ರೀತರಾಗುವರು.

10. ವ್ರೀಹಿ, ಯವ, ಜವೆ, ಹೆಸರು, ಉದ್ದು-ನವಣೆ, ಕಡಲೆ ಇವೇ ಆ ಏಳು ಧಾನ್ಯಗಳು.

11. ಗೋಚರ್ಮವನ್ನೆಲ್ಲಾ ಹಾಸಿದರೆ ಹಿಡಿಸುವ ಜಾಗದಷ್ಟು ಭೂಮಿಯನ್ನು ಸತ್ಪಾತ್ರರಿಗೆ ನೀಡಿದರೆ ಬ್ರಹ್ಮಹತ್ಯೆಯಿಂದಲೂ ಪಾರಾಗುವನು. ಇದರ ಫಲವು ಮುನಿಗಳಿಗೆ ಸಾಕ್ಷಾತ್ತಾಗಿ ಕಂಡಿದೆ.

ದುಃಖದ ಸರಣಿ ವೈತರಣಿ - ಗೋದಾನಮಾಡಿದ್ದರೆ ಕೂರಬೇಕಿಲ್ಲ ಧರಣಿ

1. ಯಮ ಮಾರ್ಗದ ಮಧ್ಯದಲ್ಲಿ ಅತಿಭಯಂಕರವಾದ ಅತ್ಯಂತ ಅಸಹ್ಯವಾದ ವೈತರಣೀ ನದೀ ಸಿಕ್ಕುತ್ತಧೆ. ಅದನ್ನು ಕೇಳಿದರೇ ಮೈ ಕೈಯೆಲ್ಲಾ ನಡುಗುತ್ತದೆ. ಇನ್ನು ಕಂಡರೆ ದುಃಖವಾಗುವದೆಂದು ಬಿಡಿಸಿ ಹೇಳಬೇಕೇ.

2. ನೂರು ಯೋಜನದಷ್ಟು ವಿಸ್ತಾರವಾಗಿದೆ(1000) ಕೀವು- ರಕ್ತಗಳನ್ನು ತುಂಬಿಸಿಕೊಂಡು ಹರಿವ ನದಿ. ಅದರ ದಡ ಎಂದರೆ ಮೂಳೆಗಳ ರಾಶಿ. ಕೆಸರು ಎಂದರೆ ರಕ್ತಮಾಂಸಗಳ ಮುದ್ದೆ.

3. ಆ ನದಿಯ ಪಾಚಿಯೇ ಕೂದಲುಗಳ ರಾಶಿ. ಮೊಸಳೆಗಳಿಂದ ತುಂಬಿದ ಆ ನದಿ ಬಲಿಯ ಭೂಮಿಯೇ ಸರಿ. ನೂರಾರು ಭಯಂಕರ ಪಕ್ಷಿಗಳು ಏರಿದವನನ್ನು , ಹಾರಿದವನನ್ನು ಕಡಿದು ತಿನ್ನಲು ಹೊಂಚುಹಾಕುವವು. ಪಾಪಿಗಳಿಗೆ ದಾಟಲು ಸಾಧ್ಯವಿಲ್ಲದಷ್ಟು ಅಗಾಧವಾಗಿದೆ.

4. ಕೈಯ್ಯಾರೆ ಕೊಡಲಿಲ್ಲ . ಹಸನ್ಮುಖಿಯಾಗಿ ಅಗ್ನಿಯಲ್ಲಿ ಹವಿಸ್ಸು ನೀಡಲಿಲ್ಲ. ಹಿರಿಯರ ಸೇವೆ ಮಾಡಲಿಲ್ಲ. ದೇಹ ದಂಡಿಸಲಿಲ್ಲ. ದೇವತೆಗಳನ್ನು ಪೂಜಿಸಲಿಲ್ಲ. ವಿಧಿಬದ್ಧ ತೀರ್ಥಯಾತ್ರೆ ಇಲ್ಲವೇ ಇಲ್ಲ. ಎಲೈ ಜೀವಿಯೇ, ನೀನೇನು ಮಾಡಿದಿಯೋ ಅದನ್ನು ಅನುಭವಿಸು. ಪುಣ್ಯವಿಲ್ಲದೆ ದಾಟಲು ಸಾಧ್ಯವೇ ಎನ್ನುವವರು ಯಮದೂತರು.

5. ನಿತ್ಯವೂ ದಾನ ನೀನು ಮಾಡಲಿಲ್ಲ. ಬೆಳಿಗ್ಗೆ ಗೋಪೂಜೆಯ ಗೊಡವಿಗೆ ಹೋಗಲಿಲ್ಲ. ವೇದಶಾಸ್ತ್ರಗಳನ್ನು ಪ್ರಮಾಣವೆಂದು ತಿಳಿಯಲಿಲ್ಲ, ಆಚರಿಸಲಿಲ್ಲ. ಪುರಾಣ ಕೇಳಲಿಲ್ಲ. ಜ್ಞಾನಿಗಳ ಅರ್ಚನೆಯಂತೂ ಆಗಲೇ ಇಲ್ಲ. ಎಲೈ ಜೀವಿಯೇ , ಮಾಡಿದ್ದು ನಿಷಿದ್ಧ. ಅನುಭವಿಸು ಈಗ ಎನ್ನುವರು ಯಮದೂತರು.

6. ಯದಿ ತ್ವಯಾ ಪ್ರದತ್ತಾ ಗೌಸ್ತದಾ ನೌರುಪಸರ್ಪತಿ ।
ನಾನ್ಯಥೇತಿ ವಚಸ್ತೇಷಾಂ ಶ್ರುತ್ವಾ ಹಾ ದೈವ ಭಾಷತೇ ॥

7. ತಂ ದೃಷ್ಟ್ವಾ ಕ್ವಥತೇ ಸಾ ತು ತಾಂ ದೃಷ್ಟ್ವಾ ಸೋಽತಿಕ್ರಂದತೇ ।
ಅದತ್ತದಾನ ಪಾಪಾತ್ಮಾ ತಸ್ಯಾಮೇವ ನಿಮಜ್ಜತಿ ॥

8. ಪುಚ್ಛಂ ಸಂಗೃಹ್ಯ ಧೇನೋಸ್ತು ಗಾವಮಾಶ್ರಿತ್ಯ ಪಾದತಃ ।
ಪುರಸ್ಕೃತ್ಯ ತತೋ ವಿಪ್ರಂ ಇಮಂ ಮಂತ್ರಮುದೀರಯೇತ್॥

9. ಭವಸಾಗರ ಮಗ್ನಾನಾಂ ಶೋಕತಾಪೋರ್ಮಿದುಃ ಖಿನಾಮ್ ।
ತ್ರಾತಾ ತ್ವಂ ಹಿ ಜಗನ್ನಾಥಃ ಶರಣಾಗತವತ್ಸಲಃ ॥

10. ವಿಷ್ಣುರೂಪ ದ್ವಿಜಶ್ರೇಷ್ಠ ಮಾಮುದ್ಧರ ಮಹೀಸುರ ।
ಸದಕ್ಷಿಣಾ ಮಯಾ ದತ್ತಾ ತುಭ್ಯಂ ವೈತರಣೀಂ ನಮಃ ॥

11. ಯಮಮಾರ್ಗೇ ಮಹಾಘೋರೇ ತಾಂ ನದೀಂ ಶತಯೋಜನಾಮ್ ।
ತರ್ತುಕಾಮೋ ದದಾಮ್ಯೇತಾಂ ತುಭ್ಯಂ ವೈತರಣೀಂನಮಃ ॥

12. ಧೇನುಕೇ ಮಾಮ್ ಪ್ರತೀಕ್ಷಸ್ವ ಯಮದ್ವಾರ ಮಹಾಪಥೇ ।
ಉತ್ತಾರಣಾರ್ಥಂ ದೇವೇಶಿ ವೈತರಣ್ಯೈ ನಮೋಽಸ್ತು ತೇ ॥

13. ಗಾವೋ ಮೇ ಅಗ್ರತಃ ಸಂತು ಗಾವೋ ಮೇ ಸಂತು ಪೃಷ್ಠತಃ ।
ಗಾವೋ ಮೇ ಹೃದಯೇ ಸಂತು ಗವಾಂ ಮಧ್ಯೇ ವಸಾಮ್ಯಹಂ ॥

ಯಾ ಲಕ್ಷ್ಮೀ ಸರ್ವ ಭೂತಾನಾಂ ಯಾ ಚ ದೇವೇ ಪ್ರತಿಷ್ಠಿತಾ ।
ಧೇನುರೂಪೇಣ ಸಾ ಜೇವೀ ಮಮ ಪಾಪಂ ವ್ಯಪೋಹತು ॥

ಇತಿ ಮಂತ್ರೇಣ ಸಂಪ್ರಾರ್ಥ್ಯ ಸಾಂಜಲಿರ್ಧೇನುಕಾಂ ಯಮಂ ।
ಸರ್ವಂ ಪ್ರದಕ್ಷಿಣೀಕೃತ್ಯ ಬ್ರಾಹ್ಮಣಾಯ ನಿವೇದಯೇತ್ ॥

6. ನೀನೇನಾದರೂ ಬದುಕಿರುವಾಗ ಗೋವು ನೀಡಿದ್ದರೆ ದೋಣಿಯು ನದಿ ದಾಟಿಸಲು ಬರುತ್ತಿತ್ತು. ಇಲ್ಲವಾದರೆ ಇಲ್ಲ ಎಂದಾಗ ಅಯ್ಯೋ, ದೈವವೇ ಎಂದು ಹಲುಬುತ್ತಾನೆ.

7. ಪಾಪಿಯು ಕಂಡ ನದಿ ಕೊಥ ಕೊಥನೆ ಕುದಿಯುತ್ತದೆ. ಕಂಡು ಮತ್ತಷ್ಟು ಕೂಗುತ್ತಾನೆ. ಏನೂ ದಾನ ಮಾಡದ ಪಾಪಿಯು ನದಿಯಲ್ಲಿ ಮುಳುಗುತ್ತಾನೆ.

ಗೋದಾನ ಕ್ರಮ;-

8. ಕಾಲಿನಿಂತ ದೋಣಿಯಲ್ಲಿ ನಿಂತು ಹಸುವಿನ ಬಾಲ ಕೈಯಲ್ಲಿ ಹಿಡಿದು ಬ್ರಾಹ್ಮಣನಿಗೆ ಒಪ್ಪಿಸುತ್ತಾ ಈ ಮಂತ್ರ ಹೇಳಬೇಕು.

9. ದುಃಖ-ಸಂತಾಪ ಎಂಬ ಅಲೆಗಳಿಂದ ದುಃಖಿತರಾದವರಿಗೆ , ಸಂಸಾರದಲ್ಲಿ ಮುಳುಗಿದವರಿಗೆ ಶರಣಾಗತವತ್ಸಲನಾದ ಜಗನ್ನಾಥನಾದ ನೀನೇ ರಕ್ಷಕನಾಗಿರುವವನು.

10. ಒಳಗಡೆ ವಿಷ್ಣುವನ್ನು ತುಂಬಿಕೊಂಡವನೇ ಭೂಮಿಯ ದೇವತೆಯೆಂಬ ಗರಿಮೆ ಪಡೆದವನೇ, ಬ್ರಾಹ್ಮಣ ಶ್ರೇಷ್ಠನೇ, ವೈತರಣೀ ದಾಟಲೆಂದು ನಿನಗೆ ಈ ಗೋದಾನ ನೀಡಿರುವೆ, ದಕ್ಷಿಣಾ ಸಹಿತವಾದ ಇದನ್ನು ನೀಡಿರುವೆ. ನಿನಗೆ ನಮಸ್ಕಾರ, ನನ್ನನ್ನು ಉದ್ಧರಿಸು.

11. ಅತಿಭಯಂಕರವಾದ ಯಮಮಾರ್ಗದಲ್ಲಿ ನೂರು ಯೋಜನದ ಆ ನದಿಯನ್ನು ದಾಟಬೇಕೆಂಬ ಬಯಕೆ ನನಗಿದೆ. ಅದಕ್ಕಾಗಿ ಈ ಗೋವನ್ನು ದಾನ ನೀಡಿರುವೆ. ನಿನಗೆ ನಮಸ್ಕಾರ.

12. ಎಲ್ಲೈ ಹಸುವೇ, ಯಮಮಾರ್ಗದ ಹೆದ್ದಾರಿಯಲ್ಲಿ ನೀನು ನನಗಾಗಿ ನಿರೀಕ್ಷಿಸು. (ಸ್ವಲ್ಪ ಕಾಯುತ್ತಿರು) ಎಲ್ಲೈ ದೇವರೊಡೆಯಳಾದ ಧೇನುವೇ ನನ್ನನ್ನು ದಾಟಿಸಲೆಂದೇ ನೀನು ಕಾಯಿ. ನಿನಗೆ ನಮಸ್ಕಾರ.

13. ನನ್ನ ಮುಂದೆ ಗೋವುಗಳಿರಲಿ, ನನ್ನ ಹಿಂಬದಿಯೂ ಗೋವುಗಳಿರಲಿ. ನನ್ನ ಮನದಲ್ಲಿ ಗೋವು ನೆಲೆಸಿರಲಿ. ಅವುಗಳ ನಡುವೆ ನೆಲೆಸುವ ಭಾಗ್ಯ ನನಗೆ ಇರಲಿ. ಎಲ್ಲಾ ಜೀವರಾಶಿಗಳ ಸಂಪತ್ತು ಗೋವೆನಿಸಿದೆ. ದೇವತಾಕಾರ್ಯದ ಸಂಪತ್ತು ಸಹ ಇದೇ ಆಗಿದೆ. ಅಂತಹಾ ದೇವಿಯು ಧೇನುರೂಪದಿಂದ ನನ್ನನ್ನು ರಕ್ಷಿಸಲಿ.

ಹೀಗೆ ಮಂತ್ರದಿಂದ ಪ್ರಾರ್ಥಿಸಿ ಕೈಮುಗಿದು ಹಸುವನ್ನು, ನರಕಪ್ರಭು ಯಮನನ್ನು ಧ್ಯಾನಿಸಿ ಪೂರ್ತಿ ಪ್ರದಕ್ಷಿಣೆ ಬಂದು ಬ್ರಾಹ್ಮಣನಿಗೆ ಸಮರ್ಪಣೆ ಮಾಡಬೇಕು.

(ಒಳ್ಳೆಯ ಗೋವನ್ನು ಸತ್ಪಾತ್ರರಿಗೆ ನೀಡಿ)

ಗೋದಾನಕ್ಕೆ ಪ್ರಶಸ್ತ ದೇಶ -ಕಾಲಗಳು

ಗಂಗಾದಿ ಸರ್ವತೀರ್ಥೇಸು ಬ್ರಾಹ್ಮಣಾ ವಸಥೇಷು ಚ ।
ಚಂದ್ರಸೂರ್ಯೋಪರಾಗೇಷು ಸಂಕ್ರಾಂತೌ ದರ್ಶ ವಾಸರೇ ॥

ಅಯನೇ ವಿಷುವೇ ಚೈವ ವ್ಯತೀಪಾತೇ ಯುಗಾದಿಷು ।
ಅನ್ಯೇಷು ಪುಣ್ಯಕಾಲೇಷು ದದ್ಯಾದ್ಗೋದಾನಮುತ್ತಮಮ್ ॥

ಸಂಬಂಧಿ ಪರ್ವ-ಸಂಬಂಧಿಗಳು ಮಾಡುವ ಹರಿಸ್ಮರಣೆ-ಸಾಯುವಗೆ ಸನ್ಮಾನದ ಹಸೆಮಣೆ

1. ರೋಗಿಣೋಽಂತಿಕಮಾಸಾದ್ಯ ಶೋಚನೀಯಂ ನ ಬಾಂಧವೈಃ ।
ಸ್ಮರಣೀಯಂ ಪವಿತ್ರಂ ಮೇ ನಾಮ ಧ್ಯೇಯಂ ಮುಹುಃ ಮಹುಃ ॥

ಗ. ಪು. 8-9

2. ಮತ್ಸ್ಯಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ತಥೈವ ಚ ॥

3. ಏತಾನಿ ದಶನಾಮಾನಿ ಸ್ಮರ್ತವ್ಯಾನಿ ಮುಹುರ್ಮುಹುಃ ।
ಸಮೀಪೇ ರೋಗಿಣೋ ಬ್ರೂಯುರ್ಬಾಂಧವಾ ಸ್ತೇ ಪ್ರಕೀರ್ತಿತಾಃ ॥

ಗ. ಪು. 9- 10- 11

ದಹನದ ನಂತರ ಮನೆಗೆ ಬರುವಾಗ

4. ದಾಹಾದನಂತರಂ ಕಾರ್ಯಂ ಸ್ತ್ರೀಭಿಃ ಸ್ನಾನಂ ತತಃ ಸುತೈಃ ।
ತಿಲೋದಕಂ ತತೋ ದದ್ಯಾನ್ನಾಮಗೋತ್ರೋಪ ಕಲ್ಪಿತಮ್ ॥

ಗ. ಪು 10-60

5. ಪ್ರಾಶಯೇತ್ ನಿಂಬಪತ್ರಾಣಿ ಮೃತಕಸ್ಯ ಗುಣಾನ್ ವದೇತ್ ।
ಸ್ತ್ರೀಜನೋಽಗ್ರೇ ಗೃಹಂ ಗಚ್ಛೇತ್ ಪೃಷ್ಠತೋ ನರಸಂಚಯಃ ॥

ಗ. ಪು 10-61

6. ಗೃಹೇ ಸ್ನಾನಂ ಪುನಃ ಕೃತ್ವಾ ಗೋಗ್ರಾಸಂ ಚ ಪ್ರದಾಪಯೇತ್ ।
ಪತ್ರಾವಲ್ಯಾಂ ಚ ಭುಂಜೀಯಾತ್ ಗೃಹಾನ್ನಂ ನೈವ ಭಕ್ಷಯೇತ್॥

ಗ. ಪು. 10-62

ಗೋದಾನಕ್ಕೆ ಪ್ರಶಸ್ತಕಾಲಗಳು

ಗಂಗಾದಿ ಪುಣ್ಯನದಿಗಳು, ಬ್ರಾಹ್ಮಣರು ವಾಸಿಸಿರುವ ಸ್ಥಳ. ಚಂದ್ರ-ಸೂರ್ಯ ಗ್ರಹಣಸಂದರ್ಭ, ತಿಂಗಳ ಸಂಕ್ರಮಣದ ದಿನ (14/ 15 ನೇ ತಾರೀಖು) ಅಮಾವಾಸ್ಯೆ, ಉತ್ತರಾಯಣ, ದಕ್ಷಿಣಾಯನ ವ್ಯತೀಪಾತ- ಯುಗಾದಿ ದಿನ ಇಂತಹ ಹಾಗೂ ಇತರ ಪುಣ್ಯಕಾಲಗಳಲ್ಲಿಯೂ ಗೋದಾನ ತುಂಬಾ ಪುಣ್ಯಕರ.

ಸಂಬಂಧಿ ಪರ್ವ

1. ಬಂಧುಗಳಾದವರು ರೋಗಿಯ ಬಳಿ ಬಂದು ಅಳಬಾರದು. ಅತ್ತಮಾತ್ರಕ್ಕೆ ಸಾವು ತಪ್ಪೀತೆ ? ಅಳುವವರಿಗೂ ಸಾವು ಸುತರಾಂ ಸಿದ್ಧ. ಆದ್ದರಿಂದ ಧ್ಯಾನಮಾಡಲು ಯೋಗ್ಯವಾದ ನನ್ನ ಪವಿತ್ರವಾದ ನಾಮವನ್ನು ಮತ್ತೆ ಮತ್ತೆ ಸ್ಮರಿಸಬೇಕು.

2. ಮತ್ಸ್ಯ, ಕೂರ್ಮ, ವರಾಹ ನಾರಸಿಂಹ, ವಾಮನ ಪರಶುರಾಮ, ರಾಮ, ಕೃಷ್ಣ ಬುದ್ಧ, ಕಲ್ಕಿ ಇವು ಆ ನಾಮಗಳು .

3. ಈ ಹತ್ತು ನಾಮಗಳನ್ನು ಮತ್ತೆ ಮತ್ತೆ ಜೋರಾಗಿ ಹೇಳಬೇಕು. ರೋಗಿಯ ಬಳಿ ಬಂದು ಯಾರು ಇದನ್ನು ಮಾಡುವರೋ ಅವರೇ ಬಂಧುಗಳು . (ಇಲ್ಲವಾದರೆ ಸ್ವಾರ್ಥ : ಸಾಧಕರಾದ ನರಿಗಳು ಎಂದಿದ್ದಾರೆ ಮುಂದಿನ ಭಾಗದಲ್ಲಿ)

4. ದಹನದ ಅನಂತರ ಸ್ತ್ರೀಯರಿಂದ ಮೊದಲು ಮನೆಯಲ್ಲಿ ಸ್ನಾನ ಮಾಡಲ್ಪಡಬೇಕು, ಆ ಮೇಲೆ ಕೊನೆಗೆ (ಸಾಧ್ಯವಾದರೆ ಮನೆಯ ಹೊರಗೆ) ಮಕ್ಕಳು ಸ್ನಾನ ಮಾಡಬೇಕು.

5. ಬೇವಿನ ಎಲೆಯನ್ನು ತಿನ್ನುತ್ತಾ, ಅವರನ್ನು ಕಳೆದುಕೊಂಡ ಮುಂದಿನ ದಿನ ಕಹಿ ಎನ್ನುವ ಅನುಸಂಧಾನವೂ ಇರಬೇಕು. ಸತ್ತವನ ಗುಣಗಳನ್ನು ಗಾನ ಮಾಡಬೇಕು. ಸ್ತ್ರೀಜನರನ್ನು ಮುಂದಿಟ್ಟುಕೊಂಡೇ ಗಂಡಸರ ಗುಂಪು ಮನೆಯನ್ನು ಪ್ರವೇಶಿಸಬೇಕು. ವಂಶಾಭಿವೃದ್ಧಿ ಮಕ್ಕಳನ್ನು ಕೊಟ್ಟಿರುವುದು ಸ್ತ್ರೀಯರೇ ಅಲ್ಲವೇ? ಇನ್ನು ಮುಂದೆಯೂ ವಂಶೋದ್ಧಾರ ಆಗಲಿ ಎಂಬ ಅನುಸಂಧಾನ.

6. ಆ ಮೇಲೆ ಮನೆಯೊಳಗೆ ಶೋಕನಿವಾರಕ ಸ್ನಾನ ಮಾಡಬೇಕು. ಗೋಗ್ರಾಸವನ್ನು ಬೇರೆಯವರ ಮೂಲಕ ಕೊಡಿಸಬೇಕು. ಆಮೇಲೆ ತಟ್ಟೆಯಲ್ಲಿ ಊಟ ಬೇಡ. ಅಲುಗಾಡದ ಸುಸ್ಥಿತಿಯ ಭೋಜನ ಸುಖದ ಸಂಕೇತ! ಪತ್ರಾವಳಿಯಲ್ಲಿ (ಬಾಳೆ ಎಲೆ ಅಲ್ಲ) (ಹಚ್ಚಿದ ಮುತ್ತುಗದ ಎಲೆಯಲ್ಲಿ) ಭೋಜನ. ನನ್ನ ಬದುಕು ಹಿರಿಯರಿಲ್ಲದೆ ತೇಪೆ ಹಾಕಿದಂತೆಯೇ ಆಗಿದೆ ಎಂಬ ಭಾವ ಇರಲಿ. ಮನೆಯಲ್ಲಿ ಅಡಿಗೆ ತಯಾರಾಗಿರಬಾರದು. ಸೂತಕದ ಮೈಲಿಗೆಯ ಆ ಆಹಾರ ಅಮಂಗಳ. ಸತ್ತ ಮನೆಗಿಂತ ಬೇರೆ ಮನೆಯ ಸ್ವಾತಿಕ ಆಹಾರ ಸ್ವೀಕರಿಸಬೇಕು.

ಮುತ್ತೈದೆಯರು ಮುಂದೆ - ಮಗ ಕೂಡ ಹಿಂದೆ

7. ನವಮೇ ದಿವಸೇ ಚೈವ ಸಪಿಂಡೈರ್ಸಕಲೈರ್ಜನೈಃ ।
ತೈಲಾಭ್ಯಂಗಃ ಪ್ರಕರ್ತವ್ಯಃ ಮೃತಕಸ್ವರ್ಗಕಾಮ್ಯಯಾ ॥

ಗ. ಪು 11-34

8. ಬಹಿಃ ಸ್ನಾತ್ವಾ ಗೃಹೀತ್ವಾ ಚ ದೂರ್ವಾಲಾಜಸಮನ್ವಿತಾಃ ।
ಅಗ್ರತಃ ಪ್ರಮದಾಂ ಕೃತ್ವಾ ಸಮಾಗಚ್ಛೇನ್ಮೃತಾಲಯಮ್ ॥

ವಿಧವೆಯೂ ಪತಿವ್ರತೆ

9. ತಸ್ಮಾತ್ಪುತ್ರೇಣ ಕರ್ತವ್ಯಂ ವಿಧಿನಾ ಷೋಡಶತ್ರಯಮ್ ।
ಭರ್ತುರ್ವಾ ಕುರುತೇ ಪುತ್ರೀ ಯಸ್ಯ ಶ್ರೇಯೋ ಹ್ಯನಂತಕಮ್ ॥

ಗ. ಪು. 13/70

10. ಉಪಕಾರಾಯ ಸಾ ಭರ್ತುರ್ಜೀವತ್ಯೇಷಾ ಪತಿವ್ರತಾ ।
ಜೀವಿತಂ ಸಫಲಂ ತಸ್ಯಾ ಯಾ ಮೃತಂ ಸ್ವಾಮಿನಂ ಭಜೇತ್ ॥

ಗ. ಪು 13-72

ಮಾಡಿದ್ದು ಮಗ- ಮನೆಮಂದಿಯೆಲ್ಲಾ ಪಾವನ

11. ವಿಧಿನಾ ಕುರುತೇ ಯಸ್ತು ಶ್ರಾದ್ಧಂ ದಾನಂ ಮಯೋದಿತಮ್ ।
ಶೃಣುಯಾತ್ ಗಾರುಡಂ ಚಾಪಿ ಶೃಣು ತಸ್ಯಾಪಿ ಯತ್ಫಲಂ ॥

12. ಪಿತಾ ದದಾತಿ ಸತ್ಪುತ್ರಾನ್ ಗೋಧನಾನಿ ಪಿತಾಮಹಃ ।
ಧನದಾತಾ ಭವೇತ್ಸೋऽಪಿ ಯಸ್ತಸ್ಯ ಪ್ರಪಿತಾಮಹಃ ॥

13. ದದ್ಯಾತ್ ವಿಪುಲಮನ್ನಾದ್ಯಂ ವೃದ್ಧಸ್ತು ಪ್ರಪಿತಾಮಹಃ ।
ತೃಪ್ತಾಃ ಶ್ರಾದ್ಧೇನ ತೇ ಸರ್ವೇ ದತ್ವಾ ಪುತ್ರಸ್ಯ ವಾಂಛಿತಮ್ ॥

14. ಗಚ್ಛಂತಿ ಧರ್ಮಮಾರ್ಗೈಶ್ಚ ಧರ್ಮರಾಜಸ್ಯ ಮಂದಿರಮ್ ।
ತತ್ರ ಧರ್ಮಸಭಾಯಾಂ ತೇ ತಿಷ್ಠಂತಿ ಪರಮಾದರಾತ್ ॥

ಗ. ಪು 16. 122- 126.

7. ಒಂಬತ್ತನೆಯ ದಿನದಂದು ಹತ್ತು ದಿನದ ಸಂಬಂಧಿಗಳಾದ ಎಲ್ಲರಿಂದಲೂ ಸತ್ತವನಿಗೆ ಸ್ವರ್ಗವಾಗಲೀ ಎಂದು ಸಂಕಲ್ಪಿಸಿ ಅಭ್ಯಂಜನ ಮಾಡಿಕೊಳ್ಳಬೇಕು.

8. (ಸತ್ತಮನೆಯಿಂದ) ಹೊರಗಡೆಯೇ (ಸಂಬಂಧಿಗಳ ಮನೆಯಲ್ಲಿಯೇ) ಸ್ನಾನಮಾಡಿ ಒಳಗಡೆ ಬರುವಾಗ ಅರಳು ಮತ್ತು ಗರಿಕೆಯನ್ನು ಹಿಡಿದುಕೊಂಡು (ಸ್ತ್ರೀಯರ ಕೈಯಲ್ಲಿ) ಸ್ತ್ರೀಯರನ್ನು ಮುಂದೆ ಮಾಡಿಕೊಂಡು ಸತ್ತವನ ಮನೆಗೆ ಬರಬೇಕು. ಗರಿಕೆಯು ಮಣ್ಣಲ್ಲೂ ಹುಲುಸಾಗಿ ಬೆಳೆಯುವಂತೆ ವಂಶವೂ ಬೆಳೆದು ಉದ್ಧಾರವಾಗಲೀ, ಅರಳು ಅರಳಿಕೊಂಡು ಹಿಗ್ಗುವಂತೆ ವಂಶವೂ ಅರಳುತಾ ಹಿರಿ ಹಿರಿ ಹಿಗ್ಗಲೀ ಎಂಬ ಭಾವ ಇರಲಿ.

9. ಮಗನೆನಿಸಿದವನು ಮೊದಲ ಹತ್ತುದಿನದಲ್ಲಿ ಪಿಂಡಗಳು (ಮರಣ ಸ್ಥಳ - ಬಾಗಿಲು, ಮಾರ್ಗ ಮಧ್ಯೆ. ಚಿತೆಯಲ್ಲಿ, ಶವದ ಕೈಯಲ್ಲಿ, ಅಸ್ಥಿಸಂಚಯನದಲ್ಲಿ= 6) (10+ 6= 16) ಹದಿನಾರು ದೇವತೆಗಳಿಗೆ ವಿಷ್ಣು, ಶಿವ, ಸಪರಿವಾರಯಮ, ಸೋಮರಾಜ, ಹವ್ಯವಾಹ, ಕವ್ಯವಾಹ, ಕಾಲ, ರುದ್ರ, ಪುರುಷ, ಪ್ರೇತ, ವಿಷ್ಣು, ಬ್ರಹ್ಮ, ವಿಷ್ಣು ಶಿವ, ಯಮ, ತತ್ಪುರುಷ ಹೀಗೆ ಮಧ್ಯಮ ಷೋಡಶ, ಹಾಗೂ ವರ್ಷ ಹನ್ನೆರಡು ತಿಂಗಳ ಮಾಸಿಕ, ಊನಮಾಸಿಕ, ಊನತ್ರೈಮಾಸಿಕ, ಊನಷಾಣ್ಮಾಸಿಕ, ಊನಾಬ್ದಿಕ= 16 ಉತ್ತಮ ಷೋಡಶ. ಇವನ್ನು ತಂದೆಗೆ ಮಗನಾಗಲೀ ಗಂಡನಿಗೆ ಹೆಂಡತಿಯಾಗಲೀ ಮಾಡಿದರೆ ಅನಂತ ಪುಣ್ಯ ಬರುವುದು.

10. ಪತ್ನಿಯು ಪತಿಗೆ (ಮಕ್ಕಳ, ಸಂಬಂಧಿಗಳ ಮೂಲಕ) ಇವನ್ನು ವಾರ್ಷಿಕ ಮಹಾಲಯವನ್ನು ಮಾಡಿಸಿದರೆ ಆಕೆ ಪತಿವ್ರತೆಯೇ ಸರಿ! ಗಂಡನಿಗೆ ಸದ್ಗತಿ ಆಗಲೆಂದೇ ಆಕೆ ಬದುಕಿರುವುದಲ್ಲವೆ?

11. ಎಲೈ ಗರುಡನೇ, ವಿಧಿ ಪ್ರಕಾರವಾಗಿ ಶ್ರಾದ್ಧವನ್ನು ಹಾಗೂ ದಾನಗಳನ್ನು ನಾನು ಹೇಳಿದಂತೆ ಮಾಡಿದರೆ ಹಾಗೂ ಗರುಡಪುರಾಣವನ್ನು ಕೇಳಿದರೆ ಆಗುವ ಫಲವನ್ನು ಹೇಳುವೆನು; ಕೇಳು!

12. ತಂದೆಯು ಆ ಕರ್ತೃವಿಗೆ ಒಳ್ಳೆ ಮಕ್ಕಳನ್ನು ನೀಡುತ್ತಾನೆ. ತಾತನು ಮನೆಯಲ್ಲಿ ಪಶು (ವಾಹನ) ಭಾಗ್ಯ ಮತ್ತು ಸಂಪತ್ತುಗಳನ್ನು ಕರುಣಿಸುತ್ತಾನೆ. ಮುತ್ತಾತನೂ ಸಹ ಮರಿಮಗನಿಗೆ ಸಂಪತ್ತನ್ನು ಕೊಡುತ್ತಾನೆ. ಅನ್ನದ ಭಾಗ್ಯವನ್ನು ನೀಡುತ್ತಾನೆ.

13. ಅಷ್ಟೇ ಏಕೆ? ಮಗನ ಶ್ರಾದ್ಧ ತೃಪ್ತಿತಂದುಕೊಟ್ಟಾಗ ಬಯಸಿದ್ದೆಲ್ಲಾ ಮಗನಿಗೆ ನೀಡುತ್ತಾರೆ.

14. ಅಷ್ಟೇ ಅಲ್ಲಾ ಮಾಡಲ್ಪಟ್ಟವರೂ ಸಹ ಧರ್ಮಮಾರ್ಗದಿಂದಲೇ ಸುಖದ ದಾರಿಯಿಂದಲೇ ಧರ್ಮರಾಜನ ಅರಮನೆಗೆ ತೆರಳುವರು. ಅಲ್ಲಿ ಅವನ ಆ ಸಭೆಯಲ್ಲಿ ಗೌರವದ ಸ್ಥಾನವನ್ನೇ ಪಡೆಯುವರು.

ಹತ್ತುದಿರಲಿ ಹತ್ತುರ ಪಾಪ

1. ಆಶೀರ್ವಾದಂ ದೇವಪೂಜಾಂ ಪ್ರತ್ಯುತ್ಥಾನಾಭಿವಂದನಮ್ ।
ಪರ್ಯಂಕೇ ಶಯನಂ ಸ್ಪರ್ಶಂ ನ ಕುರ್ಯಾತ್ ಮೃತಸೂತಕೇ ॥

ಗ.ಪು. 13-20

2. ಸಂಧ್ಯಾ ದಾನಂ ಜಪಂ ಹೋಮಂ ಸ್ವಾಧ್ಯಾಯಂ ಪಿತೃ ತರ್ಪಣಂ ।
ಬ್ರಹ್ಮ ಭೋಜ್ಯಂ ವ್ರತಂ ನೈವ ಕರ್ತವ್ಯಂ ಮೃತಸೂತಕೇ ॥

ಗ.ಪು. 13-21

ಗರುಡ ಪುರಾಣಶ್ರವಣ - ಸರ್ವಪಾಪಹರಣ

3. ಪುರಾಣಂ ಗಾರುಡಂ ಪುಣ್ಯ ಪವಿತ್ರಂ ಪಾಪನಾಶಕಮ್ ।
ಶೃಣ್ವತಾಂ ಕಾಮನಾಪೂರಂ ಶ್ರೋತವ್ಯಂ ಸರ್ವದೈವ ಹಿ ॥

ಗ.ಪು. 16-10

4. ವಾಚಕಸ್ಯಾರ್ಚನೇನೈವ ಪೂಜಿತೋಽಹಂ ನ ಸಂಶಯಃ ।
ಸಂತುಷ್ಟೇ ತುಷ್ಟತಾಂ ಯಾಮಿ ವಾಚಕೇ ನಾತ್ರ ಸಂಶಯಃ ॥

ಗ.ಪು 16-16

ಮಾಡಿಲ್ಲ ಸತ್ಕರ್ಮ- ನಮಗೇಕೆ ಪಾಪಕರ್ಮ ?

ಇದಂ ಕರ್ಮ ನ ಕುರ್ವಂತಿ ಯೇ ನಾಸ್ತಿಕ ನರಾಧಮಾಃ ।
ತೇಷಾಂ ಜಲಮಪೇಯಂ ಸ್ಯಾತ್ ಸುರಾತುಲ್ಯಂ ನ ಸಂಶಯಃ ॥

ಗ.ಪು 16-3

ಪ್ರಾರ್ಥನೆಯು ಒಂದೇ - ಮತ್ತೇನಿಲ್ಲ ಮುಂದೆ.

ಸ್ಮರಣಾತ್ ದುರ್ಗತಿ ಹರ್ತಾ ಪೂಜನ ಯಜ್ಞೇನ ಸದ್ಗತೇರ್ದಾತಾ ।
ಯಃ ಪರಯಾ ನಿಜಭಕ್ತ್ಯಾ ದದಾತಿ ಮುಕ್ತಿಂ ಸ ಹರಿರ್ಪಾತು ॥

ಗ.ಪುರಾಣ 16-112

(ಸೂತವಚನಂ ಶೌನಕಂ ಪ್ರತಿ)

ಹತ್ತರ ಪಾಪ ಹತ್ತದಿರಲಿ

ಕೆಳಗಿನ ಹತ್ತು ಪುಣ್ಯ ಸಂಗತಿಗಳು ಸೂತಕದ ಸಮಯದಲ್ಲಿ ಪಾಪಕರಗಳಾಗವವು

ಆಶೀರ್ವಾದ ಮಾಡುವುದು, ದೇವರ ಪೂಜೆ, ಗೋತ್ರೋಚ್ಚಾರಣ ಪೂರ್ವಕ ಉತ್ಥಾನಾಭಿವಾದನ, ಮಂಚದ ಮೇಲೆ ಶಯನ, ಇತರರನ್ನು ಮುಟ್ಟುವುದು, ಸಂಧ್ಯಾವಂದನೆ ಪೂರ್ತಿ ಮಾಡುವುದು, ದಾನ (ಮೈಲಿಗೆಯಲ್ಲಿ) ನೀಡುವುದು, ವಿಶೇಷ ಜಪ ಹೋಮಾಚರಣೆ, ಪಾತಃ ಪಿತೃತರ್ಪಣ, ಬ್ರಾಹ್ಮಣ ಭೋಜನಸಮ್ಮತಿ ಹಾಗೂ ವ್ರತ ಸ್ವೀಕಾರ ಸಂಕಲ್ಪ ಇವು ಅಪರಾಧಗಳು.

1) ಪರಮಪವಿತ್ರವಾದ ಗರುಡಪುರಾಣ ಶ್ರವಣ ಸರ್ವಪಾಪನಾಶನ. ಕೇಳಿದವರ ಬಯಕೆಗಳೆಲ್ಲಾ ಕೈಗೂಡುವುದು. ಆದ್ದರಿಂದ ಕೇಳಲೇ ಬೇಕು.

2) ಕೇಳಿದ ನಂತರ ಆಚಾರ್ಯರ, ಪುರಾಣ ಹೇಳಿದವರ ಪೂಜೆಯಿಂದಲೇ ನಾನು ಪ್ರೀತನಾಗುವೆ. ಅವರು ಪ್ರೀತರಾದರೆ ಅವರೊಳಗಿರುವ ನಾನು ಪ್ರೀತನಾದಂತಯೇ ಸರಿ.

(3) ಯಾರು ಇಲ್ಲಿ ಹೇಳಿದ ಹತ್ತು ದಿನದ ಕರ್ಮ ಮಾಡುವುದಿಲ್ಲವೋ, ವೈಕುಂಠ ಸಮಾರಾಧನೆಗೆ ವೈಮನಸ್ಯ ಮಾಡುವರೋ, ಗರುಡ ಪುರಾಣ ಶ್ರವಣಕ್ಕೇ ಗಮನವನ್ನು ನೀಡುವುದಿಲ್ಲವೋ ಅವರ ಮನೆಯ ನೀರನ್ನು ಕುಡಿಯಬಾರದು.

(ಪ್ರೇತಸ್ಪರ್ಶವಾಗಿರುವ, ಪಾಪಸೋಂಕಿರುವ ಆ ಮನೆಯ ನೀರು ಸಂಬಂಧಿಗಳಿಗೇಕೆ ಬೇಕು?) ಅದು ಮದ್ಯಪಾನಕ್ಕೆ ಸಮ. ಬುದ್ಧಿ ಭ್ರಮಣೆ ಬರುವುದು.

(4) ಹರಿಯ ಸ್ಮರಣೆಯಿಂದ ಸತ್ತವನ ದುರ್ಗತಿ ಪರಿಹಾರವಾಗುವುದು ನಿಶ್ಚಿತ. ಹರಿಯು ಪೂಜನಯಜ್ಞದಿಂದ ಸದ್ಗತಿಯನ್ನು ನೀಡುತ್ತಾನೆ. ನಿಷ್ಕಲ್ಮಷ ನಿಜ ಭಕ್ತಿಯಿಂದ ಮುಕ್ತಿಯನ್ನು ಕೊಡುವ ಹರಿ ನಮ್ಮನ್ನು ಕಾಪಾಡಲಿ ಎಂದು ಶ್ಲೋಕ ಹೇಳಿ ಕೊಳ್ಳಿ.

ಮಂಗಳಂ ಭಗವಾನ್ವಿಷ್ಣುಃ ಮಂಗಳಂ ಮಧುಸೂದನಃ
ಮಂಗಳಂ ದೇವಕೀಪುತ್ರೋ ಮಂಗಳಂ ಗರುಡಧ್ವಜಃ ॥

ಎಲ್ಲೆಡೆ ಇರುವ ವಿಷ್ಣು ನಮಗೆ ಈಗ ಮಂಗಳ ಮಾಡಲಿ. ಮಧುವಿನಂತೆ ಮೃದುವಾಗಿರುವ ಕಾಮವನ್ನು ಆಲಸ್ಯವನ್ನು ಕೊಂದು ಸಾರ್ಥಕವಾಗುವಂತೆ ಮಂಗಳಿಸಲಿ. ದೇವಕೀಪುತ್ರನು ತಾಯಿಯ ಬದುಕನ್ನೇ ಸಾರ್ಥಕಗೊಳಿಸಿದಂತೆ ನಮ್ಮ ಹಿರಿಯರಿಗೂ ಮಂಗಳಿಸಲಿ. ಗರುಡಧ್ವಜನಾದ ವಿಷ್ಣು ಪರಲೋಕದಲ್ಲಿಯೂ ನಮಗೆ ಮಂಗಳಿಸಲಿ.

ಹತ್ತು ನಿಯಮಗಳು - ಕರ್ತೃ ಸಂಹಿತಾ
(ಕರ್ತೃವು ಪಾಲಿಸಬೇಕಾದ ಪ್ರಮುಖ ಹತ್ತು ನಿಯಮಗಳು)

1. ಕ್ಷೌರ ಆಗದಿದ್ದರೆ , ಪಾಪ ಮಹಾ ಘೋರ

ತದಾ ಶೋಕಂ ಪರಿತ್ಯಜ್ಯ ಕಾರಯೇನ್ಮುಂಡನಂ ಸುತಃ ।
ಸಮಸ್ತ ಬಾಂಧವೈರ್ಯುಕ್ತೋ ಸರ್ವಪಾಪಾಪನುತ್ತಯೇ ॥

ಅತೋ ಮುಂಡನಮಾವಶ್ಯಂ ನಖಕಕ್ಷವಿವರ್ಜಿತಮ್ ।
ತತಃ ಸಬಾಂಧವ ಸ್ನಾತ್ವಾ ಧೌತವಸ್ತ್ರಾಣಿ ಧಾರಯೇತ್ ॥

2. ಹೊತ್ತಿದ್ದು ಹೆಣ - ಪುಣ್ಯ ಮಾತ್ರ ಮಣ.

ಧೃತ್ವಾ ಸ್ಕಂದೇ ಸ್ವಪಿತರಂ ಯಃ ಸ್ಮಶಾನಾಯ ಗಚ್ಛತಿ
ಸೋಽಶ್ವಮೇಧ ಫಲಂ ಪುತ್ರೋ ಲಭತೇ ಚ ಪದೇ ಪದೇ ।
ನೀತ್ವಾ ಸ್ಕಂದೇ ಸ್ವಪೃಷ್ಠಾಂಕೇ ಸದಾ ತಾತೇನ ಲಾಲಿತಃ
ತದೈವ ತದೃಣಾ ನ್ಮುಚ್ಯೇತ್ ಮೃತಂ ಸ್ವಪಿತರಂ ವಹೇತ್॥

3. ಇಟ್ಟದ್ದು ಅಗ್ನಿ ಧೂಮ- ಆಗಿದ್ದು ಅಗ್ನಿಷ್ಟೋಮ.

ಕಿಂ ದತ್ತೈರ್ಬಹುಭಿರ್ದಾನೈಃ ಪಿತ್ರೋರಂತ್ಯೇಷ್ಟಿಮಾಚರೇತ್
ತೇನಾಗ್ನಿಷ್ಟೋಮ ಸದೃಶಮ್ ಪುತ್ರಃ ಫಲಮವಾಪ್ನುಮಾತ್

4. ಗೃಹಪ್ರವೇಶ- ಗುಣಗಾನಕ್ಕೆ ಅವಕಾಶ

ದಾಹಾದನಂತರಂ ಕಾರ್ಯಂ ಸ್ತ್ರೀಭಿಃ ಸ್ನಾನಂ ತತಃ ಸುತೈಃ ।
ತಿಲೋದಕಂ ತತೋ ದದ್ಯಾತ್ ನಾಮಗೋತ್ರೋಪ ಕಲ್ಪಿತಮ್ ॥

ಪ್ರಾಶಯೇನ್ನಿಂಬ ಪತ್ರಾಣಿ ಮೃತಕಸ್ಯ ಗುಣಾನ್ವದೇತ್ ।
ಸ್ತ್ರೀಜನೋಽಗ್ರೇ ಗೃಹಂ ಗಚ್ಛೇತ್ ಪೃಷ್ಠತೋ ನರಸಂಚಯಃ ॥

5. ಮನೆಯಲ್ಲಿ ದೀಪ - ಮನದೊಳಗೆ ತಾಪ

ಮೃತಕಸ್ಥಾನಮಾಲಿಪ್ಯ ದಕ್ಷಿಣಾಭಿಮುಖಂ ತತಃ ।
ದ್ವಾದಶಾಹಕಪರ್ಯಂತಂ ದೀಪಂ ಕುರ್ಯಾದಹರ್ನಿಶಮ್ ॥

ಹತ್ತು ನಿಯಮಗಳು- ಕರ್ತೃಸಂಹಿತಾ

1. ತಂದೆಯ ಕಳೆದುಕೊಂಡಿರುವ ತೀವ್ರ ಶೋಕವನ್ನು ತ್ಯಜಿಸಿ ಮಗನು ತಲೆಯನ್ನು ಬೋಳಿಸಿಕೊಳ್ಳಬೇಕು. ಸಮಸ್ತ ಬಂಧುಗಳು ಜೊತೆಯಾಗಿರುವಾಗ ಶೋಕ ಏಕೆ? ಇದರಿಂದ ಕರ್ತೃವಿನ ಎಲ್ಲಾ ಪಾಪಗಳು ಪರಿಹಾರವಾಗುತ್ತದೆ.

ಆದ್ದರಿಂದ ಸೊಂಟ ಮತ್ತು ಕಂಕಳು ಇವೆರಡು ಸ್ಥಳ ಬಿಟ್ಟು ಶಿರಸ್ಸಿನ ಮುಂಡನ ಅವಶ್ಯವಾಗಿದೆ. ಅನಂತರ ಬಂಧುಜನರೊಡನೆ ಸ್ನಾನ ಮಾಡಿ ಬಿಳಿ ಬಟ್ಟೆಯನ್ನು ಧರಿಸಬೇಕು.

2. ಯಾರು ತಂದೆಯ ಶವವನ್ನು ಹೆಗಲಲ್ಲಿ ಹೊತ್ತು ಸ್ಮಶಾನದ ಕಡೆಗೆ ಹೋಗುತ್ತಾರೋ ಅವನು ನಡೆವ ಹೆಜ್ಜೆ ಹೆಜ್ಜೆಗೂ ಅಶ್ವಮೇಧಫಲ ಕಟ್ಟಿಟ್ಟ ಬುತ್ತಿ.

ತಂದೆಯು ಹೆಗಲಲ್ಲಿ ಹೊತ್ತು ತನ್ನ ಬೆನ್ನ ತೊಡೆಗಳ ಮೇಲೆ ಮಗನನ್ನು ಮಗುವಾಗಿದ್ದಾಗ ಎಷ್ಟು ಮುದ್ದು ಮಾಡಿಲ್ಲ? ಪ್ರೀತಿ ಮಾಡಿದ್ದಕ್ಕೆ ಪರಿಮಿತಿಯುಂಟೇ? ಆ ಋಣದಿಂದ ಮುಕ್ತಿಯಾಗುವುದು ಮಗನು ತಂದೆಯನ್ನು ಹೊತ್ತಾಗ ಮಾತ್ರವೇ.

3. ಎಷ್ಟು ದಾನಮಾಡಿದರೂ ಸಹ ಅಲ್ಪ ಫಲವೇ? ಮಗನಾದವನು ನಿಜವಾಗಿ ತಂದೆಯ ಅಂತ್ಯಕರ್ಮ ಮಾಡಬೇಕು. ಆ ರೀತಿ ಮಾಡಿದ್ದರಿಂದ ಮಗನಿಗೆ ಅಗ್ನಿಷ್ಟೋಮ ಯಾಗದ ಫಲ ಪ್ರಾಪ್ತಿಯಾಗುವುದು ನಿಶ್ಚಯ. (ಹೆಣವನ್ನು ಸ್ನಾನ ವಸ್ತ್ರ ಊರ್ಧ್ವ ತಿಲಕಗಳಿಂದ ಅಲಂಕರಿಸಿ ಬೆಂಕಿ ಇಡುವುದು ಪರಮಪವಿತ್ರ ಕಾರ್ಯ)

4. ಶವದಹನದ ನಂತರವೇ ಸ್ತ್ರೀಯರಿಂದ ಸ್ನಾನ ಮಾಡಲ್ಪಡಬೇಕು. ಅನಂತರ ಕೊನೆಗೆ ಮಕ್ಕಳು ಮಾಡಬೇಕು. ಅನಂತರ ಎಳ್ಳಿನ ತರ್ಪಣ ನೀಡಬೇಕು. ನೀಡುವಾಗ ಸತ್ತವನ ಹೆಸರು ಗೋತ್ರ ಹೇಳಿಕೊಳ್ಳಬೇಕು. ಸತ್ತವನ ನೆನಪಿನಿಂದ ಬಂದ ದುಃಖ ತಾಳಲಾರದ ಸಂಕೇತವಾಗಿ ಬೇವಿನ ಎಲೆ ತಿನ್ನಬೇಕು. ಸತ್ತವನ ಗುಣವನ್ನು ಬಾಯ್ತುಂಬಾ ಹೊಗಳಬೇಕು. ಮನೆಗೆ ಬರುತ್ತಲೇ ಸ್ತ್ರೀಯರು ಮೊದಲು ಮನೆ ಪ್ರವೇಶಿಸಬೇಕು. ಅನಂತರ ಪುರುಷರು (ಮನೆಯ ಹೊರಗೆ ಸ್ನಾನ ಮಾಡಿ) ಮನೆಯೊಳಗೆ ಪ್ರವೇಶಿಸಬೇಕು.

5. ಸತ್ತ ವ್ಯಕ್ತಿಯು ಮಲಗಿದ್ದ ಸ್ಥಾನವನ್ನು ಗೋಮಯದಿಂದ (ಸಗಣಿ) ಸಾರಿಸಬೇಕು. ಯಮನ ದಿಕ್ಕು ದಕ್ಷಿಣವಲ್ಲವೇ? ಹೀಗಾಗಿ ದಕ್ಷಿಣಕ್ಕೆ ಮುಖ ಬರುವಂತೆ ದೀಪವನ್ನು ಹನ್ನೆರಡು ದಿವಸ ಹಗಲೂ ರಾತ್ರಿ ಉರಿಯುವಂತೆ ನೋಡಿಕೊಳ್ಳಬೇಕು. (ಗಾಳಿ ಶರೀರ ಹೊಂದಿದ ಪ್ರೇತರೂಪದ ವ್ಯಕ್ತಿಗೆ ಅಗ್ನಿಯಿಂದ ಸಿಗುವಷ್ಟು ಮೈತ್ರಿ- ನೆನಪುಗಳು ಬೇರಾರಿಂದಲೂ ಸಿಗಲಾರದು) ಅಭಿಮಾನಿಯಾದ ಪ್ರೇತ ದೀಪದರ್ಶನದಿಂದಲೇ ಸಮಾಧಾನ ಹೊಂದುವುದು)

6. ಹಾಲು ನೀರು ಇಡು - ಪ್ರಾರ್ಥನೆ ಮಾಡು

ಅಪಕ್ವಮೃಣ್ಮಯಂ ಪಾತ್ರಂ ಕ್ಷೀರನೀರಪ್ರಪೂರಿತಮ್ ।
ಕಾಷ್ಠ ತ್ರಯಂ ಗುಣೈರ್ಬದ್ಧಂಧೃತ್ವಾ ಮಂತ್ರಮಿಮಂ ಪಠೇತ್ ॥

ಸ್ಮಶಾನಾನಲದಗ್ಧೋಽಸಿ ಪರಿತ್ಯಕ್ತೋಽಸಿ ಬಾಂಧವೈಃ ।
ಇದಂ ನೀರಂ ಇದಂ ಕ್ಷೀರಂ ಅತ್ರಸ್ನಾಹಿ ಮಿತಂ ಪಿಬ ॥

7. ಗರುಡ ಪುರಾಣ ಶ್ರವಣ

ಮಾತಾಪಿತ್ರೋಶ್ಚ ಮರಣೇ ಸೌಪರ್ಣಂ ಶೃಣುತೇ ತು ಯಃ ।
ಪಿತರೌ ಮುಕ್ತಿಮಾಪನ್ನೌಸುತಃ ಸಂತತಿಮಾನ್ ಭವೇತ್ ॥

8. ಅಸ್ಥಿವಿಸರ್ಜನ - ಗಂಗೆಯಂತಹ ಪುಣ್ಯನದಿಯಲ್ಲಿಯೇ ಯುಕ್ತ

ಅಂತರ್ದಶಾಹಂ ಯಸ್ಯಾಸ್ಥಿ ಗಂಗಾ ತೋಯೇ ನಿಮಜ್ಜತಿ ।
ನ ತಸ್ಯ ಪುನರಾವೃತ್ತಿಃ ಬ್ರಹ್ಮಲೋಕಾತ್ಕದಾಚನ ॥

9. ಪಿಂಡಪ್ರದಾನ - ಬ್ರಾಹ್ಮಣ ಭೋಜನ - ಪ್ರೇತಮೋಕ್ಷ ಪ್ರಾರ್ಥನೆ - ಸ್ನಾನ- ಗೃಹಪ್ರವೇಶ - ಗೋಗ್ರಾಸ - ಭೋಜನ.

ಅ. ಮಿಷ್ಟಾನ್ನೈರ್ಭೋಜಯೇದೇಕಂ ದಿನೇಷು ದಶಸು ದ್ವಿಜಮ್ ।
ಪ್ರಾರ್ಥಯೇತ್ ಪ್ರೇತಮುಕ್ತಿಂಚ ಹರಿಂ ಧ್ಯಾತ್ವಾ ಕೃತಾಂಜಲಿಃ ॥

ಆ. ಅತಸೀ ಪುಷ್ಪಸಂಕಾಶಂ ಪೀತವಾಸಸಮಚ್ಯುತಮ್ ।
ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್ ॥

ಇ. ಅನಾದಿನಿಧನೋ ದೇವಃ ಶಂಖಚಕ್ರಗದಾಧರಃ ।
ಅಕ್ಷಯ್ಯಃ ಪುಂಡರೀಕಾಕ್ಷಃ ಪ್ರೇತಮೋಕ್ಷ ಪ್ರದೋ ಭವ ॥

ಈ. ಇತಿ ಸಂಪ್ರಾರ್ಥನಾ ಮಂತ್ರಂ ಶ್ರಾದ್ಧಾಂತೇ ಪ್ರತ್ಯಹಂ ಪಠೇತ್ ।
ಸ್ನಾನಂ ಗತ್ವಾ ಗೃಹೇ ದತ್ವಾ ಗೋಗ್ರಾಸಂ ಭೋಜನೇ ಚರೇತ್ ॥

6. ಹಸಿಯಾದ ಮಣ್ಣಿನ ಪುಟ್ಟ ಪಾತ್ರೆಗಳೆರಡು. ಅವೆರಡರಲ್ಲಿ ಹಾಲು ನೀರನ್ನು ಪ್ರತ್ಯೇಕವಾಗಿ ತುಂಬಿಸಿಡಬೇಕು. ಅದಕ್ಕೆ ಮೂರು ಕಟ್ಟಿಗೆಯನ್ನು ಹಗ್ಗಗಳಿಂದ ಕಟ್ಟಿ ಹಿಡಿದುಕೊಂಡು ಈ ಮಂತ್ರ ಪಠಿಸಬೇಕು.

ಎಲೈ ಪ್ರೇತವೇ, ಸ್ಮಶಾನದ ಬೆಂಕಿಯಿಂದ ಬೆಂದು ಹೋಗಿದ್ದೀ. ಬಾಂಧವರಿಂದಲೇ ಬಿಡಲ್ಪಟ್ಟಿದ್ದೀ, ಈ ನೀರಿನಲ್ಲಿ ಮುಳುಗಿ ತಂಪು ಮಾಡಿಕೋ. ಮಿತವಾದ ಹಾಲನ್ನು ಕುಡಿದು ಸಮಾಧಾನ ಪಟ್ಟುಕೋ.

7. ತಂದೆ- ತಾಯಿಗಳ ಮರಣದಲ್ಲಿ ಯಾವನು ಗರುಡ ಪುರಾಣವನ್ನು ಕೇಳುತ್ತಾನೋ ಅವನ ತಂದೆ ತಾಯಿಯರು ಮುಕ್ತರಾಗುವರು. ಮಗನಿಗೆ ವಂಶವು ಉದ್ಧಾರವಾಗುವುದು ನಿಶ್ಚಯ. (ಇಡೀ ಹತ್ತು ದಿನವೂ ಕಡೆಯ ಪಕ್ಷ ಮೂರು ದಿನವಾದರೂ ಕೇಳಲೇ ಬೇಕು.)

8. ಹತ್ತು ದಿನದ ಒಳಗೆ ಯಾರ ಮೃತನ ಶರೀರವು ಗಂಗಾನದಿಯಲ್ಲಿ ಮುಳುಗುತ್ತದೋ ಅವನಿಗೆ ಬ್ರಹ್ಮಲೋಕ ಸಿಗುವುದು ನಿಶ್ಚಯ. ಅದರಿಂದ ಮತ್ತೆ ತಿರುಗಿ ಬರುವುದು ಇಲ್ಲವೇ ಇಲ್ಲ. (ಸಪ್ತಮಹಾನದಿಯಲ್ಲಿ ಸೇರಿದ ಕಾವೇರಿ ನದಿಯಲ್ಲಾದರೂ ವಿಸರ್ಜಿಸಿರಿ)

9. ಹತ್ತು ದಿನಗಳಲ್ಲಿಯೂ ಪಿಂಡಪ್ರದಾನ- ಆಗಾಗ್ಗೆ ಕಣ್ಣೀರು ಸುರಿಸುವುದು, ಒಪ್ಪತ್ತು ಊಟಮಾಡುವುದು, ನೆಲದಲ್ಲಿಯೇ ಮಲಗುವುದು, ಹರಿಸ್ಮರಣೆ, ಸಿಹಿ ತಿನ್ನದಿರುವುದು, ನಗದಿರುವುದು ಇವೆಲ್ಲಾ ಅವಶ್ಯ ಆಚರಣೀಯಗಳು.

ಅ) ಹತ್ತು ದಿನಗಳಲ್ಲಿಯೂ ಕನಿಷ್ಠ ಒಬ್ಬ ಬ್ರಾಹ್ಮಣನನ್ನಾದರೂ ಸಂತೃಪ್ತಿಯಾಗುವಂತೆ ವಿವಿಧರೀತಿಯಲ್ಲಿ ಮೃಷ್ಟಾನ್ನ ಭೋಜನ ಮಾಡಿಸಬೇಕು. ವಿಪ್ರಾಶೀರ್ವಾದದಿಂದ ಪ್ರೇತಕ್ಕೆ ಸದ್ಗತಿ ನಿಶ್ಚಯ. ಬ್ರಾಹ್ಮಣ ಭೋಜನದ ನಂತರ ಕೈಮುಗಿದು ಹರಿಯನ್ನು ಧ್ಯಾನಿಸಿ ಪ್ರೇತರೂಪ ಬಿಡುಗಡೆಯಾಗಲೆಂದು ಪ್ರಾರ್ಥಿಸ ಬೇಕು.

ಆ) ಅಗಸೆ ಹೂವಿನಂತೆ ಕೋಮಲ ಬಣ್ಣವುಳ್ಳ ಹಳದಿಬಣ್ಣದ ಬಟ್ಟೆ ಧರಿಸಿದ ಅಚ್ಯುತನೆನಿಸಿದ ಆ ಪರಮಾತ್ಮನನ್ನು ಗೋವಿಂದನನ್ನು ಯಾರು ಧ್ಯಾನಿಸುತ್ತಾರೋ ಅವರಿಗೆ ಭಯವು ಇಲ್ಲ.

ಇ) ಈ ಭಗವಂತನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಶಂಖ-ಚಕ್ರ-ಗದಾ ಪದ್ಮಗಳನ್ನು ಧರಿಸಿದವನು. ಅವನಿಗೆ ನಾಶವೂ ಇಲ್ಲ. ಇಂತಹ ಪುಂಡರೀಕಾಕ್ಷನೇ ನೀನು ಪ್ರೇತಕ್ಕೆ ನಿವೃತ್ತಿಯನ್ನು ನೀಡು.

ಈ) ಈ ಅರ್ಥ ಹಾಗೂ ಶ್ರದ್ಧಾಪೂರ್ವಕವಾದ ಮಂತ್ರವನ್ನು ಪ್ರತಿದಿನವೂ ಶ್ರಾದ್ಧದ ಕೊನೆಯಲ್ಲಿ ಪಠಿಸಬೇಕು. ಅನಂತರ ಸ್ನಾನಮಾಡಿ ಗೋಗ್ರಾಸ ಕೊಡಿಸಿ ತಾನು ಊಟಮಾಡಬೇಕು.

10. ಏಕಭೋಜೀ ಭೂಮಿಶಾಯೀ ಭೂತ್ವಾ ಬ್ರಹ್ಮಪರಃ ಶುಚಿಃ ।
ಸಪ್ತವಾರಂ ಪರಿಕ್ರಮ್ಯ ಧರಣೀಂ ಯತ್ಫಲಂ ಲಭೇತ್ ॥

11. ವೈಕುಂಠ ಸಮಾರಾಧನೆ - ನಿಲ್ಲಲಿಲ್ಲ ಸಾಧನೆ

1. ತತಃ ಸಂವತ್ಸರಾತ್ ಊರ್ಧ್ವಂ ಕರ್ತವ್ಯಂ ಪಿತೃಭಕ್ತಿತಃ ।
ಗಯಾ ಶ್ರಾದ್ಧಾತ್ ಪ್ರಮುಚ್ಯಂತೇ ಪಿತರೋ ಭವಸಾಗರಾತ್ ॥

2. ಗದಾಧರಾನುಗ್ರಹೇಣ ತೇ ಯಾಂತಿ ಪರಮಾಂ ಗತಿಮ್ ।
ತುಲಸೀ ಮಂಜರೀಭಿಶ್ಚ ಪೂಜಯೇತ್ ವಿಷ್ಣುಪಾದುಕಾಮ್ ॥

3. ತಸ್ಯಾಲವಾಲ ತೀರ್ಥೇಷು ಪಿಂಡಾನ್ ದದ್ಯಾತ್ ಯಥಾಕ್ರಮಮ್ ।
ಗಯಾಮುಪೇತ್ಯ ಯಃಶ್ರಾದ್ಧಂ ಕರೋತಿ ಕುಲನಂದನಃ ।
ಸಫಲಂ ತಸ್ಯ ತಜ್ಜನ್ಮ ಜಾಯತೇ ಪಿತೃತುಷ್ಟಿದಮ್ ॥

12. ಧರ್ಮಾಚರಣೆ ಸತತ-ಸತ್ತ್ವನಿಗೆ ಸದ್ಗತಿ ನಿಶ್ಚಿತ

1. ತದಾಂ ವಿಮಾನಮಾದಾಯ ಕಿಂಕಿಣೀ ಜಾಲಮಾಲಿ ಯತ್ ।
ಆಯಾಂತಿ ದೇವದೂತಾಶ್ಚ ಲಸಚ್ಚಾಮರ ಶೋಭಿತಾಃ ॥

2. ಧರ್ಮ ತತ್ತ್ವವಿದಃ ಪ್ರಾಜ್ಞಃ ಸದಾ ಧಾರ್ಮಿಕವಲ್ಲಭಾಃ ।
ತದೈನಂ ಕೃತಕೃತ್ಯಂ ಸ್ವರ್ವಿಮಾನೇನ ನಯಂತಿ ತೇ ॥

ಧರ್ಮೋದಕವನ್ನು ನೀಡಲು ಬಂಧುಗಳಿಗೆ ತಿಳಿಸಿ ವ್ಯವಸ್ಥೆಮಾಡಿ, ಬಂಧುಗಳಾದ ಅವರ ಮೇಲೆಯೇ ನನ್ನ ಪಿತೃ- ಮಾತೃಗಳ ಋಣ ಅಷ್ಟಿರುವಾಗ ನನ್ನ ಮೇಲೆ ಎಷ್ಟಿರಬೇಡ ಎಂದು ಹೆಜ್ಜೆ ಹೆಜ್ಜೆಗೆ ಯೋಚಿಸಬೇಕು- ಮಧ್ಯಾಹ್ನ ಭೋಜನ - ರಾತ್ರಿ ಭೂಮಿಶಯನ ಮಾಡಿ ಪರಿಶುದ್ಧನಾಗಿ ದೇವಮನಸ್ಕನಾಗಿ ಪಿತೃಕ್ರಿಯೆ ಮಾಡಿದರೆ ಏಳು ಭಾರೀ ಭೂ ಪ್ರದಕ್ಷಿಣೆಯ ಫಲಸಿಗುವುದು.

ಧರ್ಮೋದಕ- ವ್ರತಗಳೊಂದಿಗೆ ವೈಕುಂಠ ಸಮಾರಾಧನೆಯ ದಿನದಂದು ದಾನಗಳನ್ನೆಲ್ಲಾ ನೀಡಬೇಕು. ಪಿತೃಭಕ್ತನಾದ ಮಗನು ಹರಿಭಕ್ತಿಗಾಗಿ ಏನನ್ನಾದರೂ ವ್ರತಮಾಡಬೇಕು. ಆ ವರ್ಷ ಹಬ್ಬ ಆಚರಿಸದಿರುವುದು . ಹೊಸ ಬಟ್ಟೆ ಧರಿಸದಿರುವುದು ಇದರೊಂದಿಗೆ ತೀರ್ಥಯಾತ್ರೆ ಮಾಡುವುದು ಗುರುಹಿರಿಯರ ಸೇವೆ ಶಾಸ್ತ್ರಾಧ್ಯಯನ ಹೀಗೆ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವ ವ್ರತ ಹಿಡಿಯಬೇಕು. ಹರಿಕಥಾ ಶ್ರವಣಕ್ಕೆ ಹೆಚ್ಚು ಒತ್ತು ಕೊಡಬೇಕು.

11- 1. ಸಂವತ್ಸರ ಕಳೆದ ಮೇಲೆ ಪಿತೃಭಕ್ತಿಯಿಂದ ಮಗನು ಗಯಾಕ್ಷೇತ್ರಕ್ಕೆ ತೆರಳಿ ಗಯಾಶ್ರಾದ್ಧ ಮಾಡಿದಲ್ಲಿ ಪಿತೃಗಳು ಸಂಸಾರಸಾಗರದಿಂದ ಮುಕ್ತರಾಗುತ್ತಾರೆ

2. ಗಯಾಗದಾಧರನ ಅನುಗ್ರಹದಿಂದ ಅವರು ಪರಮ ಸದ್ಗತಿಯನ್ನು ಹೊಂದುತ್ತಾರೆ. ಅಲ್ಲಿ ವಿಷ್ಣುಪಾದುಕೆಯನ್ನು ತುಲಸೀಮಂಜರಿಗಳಿಂದ ಪೂಜಿಸಬೇಕು.

3. ಅದರ ಬಳಿ ಇರುವ ತೀರ್ಥಗಳಲ್ಲಿ ಯಥಾಕ್ರಮವಾಗಿ ಪಿಂಡ ನೀಡಬೇಕು. ಯಾರ ಕುಲೋದ್ಧಾರಕ ಪುತ್ರನು ಗಯೆಗೆ ತೆರಳಿ ಶ್ರಾದ್ಧವನ್ನು ಮಾಡುತ್ತಾನೋ ಅವನ ಜನ್ಮ ಸಾರ್ಥಕ. ಅದು ಪಿತೃಗಳಿಗೆ ತೃಪ್ತಿ ತರುತ್ತದೆ.

12- 1. ಆಗ ಗಂಟೆಯ ಸಾಲುಗಳಿಂದ ಸದ್ದು ಮಾಡುವ ಸುಂದರ ವಿಮಾನವನ್ನು ತಂದು ಹೊಳೆಯುವ ಚಾಮರಗಳಿಂದ ಸುಂದರರಾದ ದೇವದೂತರು ಬರುತ್ತಾರೆ.

2. ಧರ್ಮಸೂಕ್ಷ್ಮ ತಿಳಿದ ಧಾರ್ಮಿಕರ ಮೇಲೆ ಪ್ರೀತಿ ತೋರುವ ಬುದ್ಧಿವಂತರಾದ ಅವರು ಕೃತಾರ್ಥನಾದ ಆ ಮೃತವ್ಯಕ್ತಿಯನ್ನು ಸ್ವರ್ಗಲೋಕಕ್ಕೆ ವಿಮಾನದಿಂದ ಒಯ್ಯುತ್ತಾರೆ.

★★★

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ ॥ಪ॥

ದಿವರಾತ್ರಿಯೆನ್ನದೆ ವಿಷಯಲಂಪಟನಾಗಿ
ಸವಿಯೂಟಗಳನುಂಡು ಭ್ರಮಿಸಬೇಡ
ಅವನ ಕೊಂದಿವನ ಕೊಂದರ್ಥವನು ಗಳಿಸುವೊಡೆ
ಜವನ ದೂತರು ಬರುವ ಹೊತ್ತು ನೀನರಿಯೆ ॥

ಅಟ್ಟಡಿಗೆಯನುಣಲಿಲ್ಲ ಇಷ್ಟ ದರುಶನವಿಲ್ಲ
ಕೊಟ್ಟ ಸಾಲ ಕೇಳ್ವ ಹೊತ್ತನರಿಯೆ
ಕಟ್ಟಲೆ ತುಂಬಿದ ಮೇಲೆ ಕ್ಷಣ ಮಾತ್ರ ಇರಲಿಲ್ಲ
ಅಷ್ಟರೊಳು ಪುರಂದರವಿಠಲನ ನೆನೆ ಮನೆ ॥

-ಶ್ರೀ ಪುರಂದರದಾಸರು

ಗ್ರಂಥ ಋಣ

1.	ಅಷ್ಟಾದಶ ಪುರಾಣಗಳು	ಶ್ರೀವೇದವ್ಯಾಸರು
2.	ಶ್ರೀಕೃಷ್ಣಾಚಾರ್ಯ ಸ್ಮೃತಿ ಮುಕ್ತಾವಲೀ	ಶ್ರೀಮಂತ್ರಾಲಯ ಮಠದಿಂದ ಪ್ರಕಾಶಿತ
3.	ಶ್ರೀಮನ್ ಮಹಾಭಾರತ	ಶ್ರೀವೇದವ್ಯಾಸರು
4.	ಶ್ರಾದ್ಧಕಲ್ಪಲತಾ	ಶ್ರೀನಂದ ಪಂಡಿತ
5.	ಶ್ರೀ ಈಶಾವಾಸ್ಯ ಪತ್ರಿಕೆ	ಪಂ. ರಂಗನಾಥಾಚಾರ್ಯ ಸಾಲಗುಂದಾ
6.	ಧರ್ಮಸಂದೇಶ ಪತ್ರಿಕೆ	ಪಂ. ಪ್ರಹ್ಲಾದಾಚಾರ್ಯ ನಾಗರಹಳ್ಳಿ
7.	ಆಶ್ವಲಾಯನ ಶ್ರಾದ್ಧಪ್ರಯೋಗ	ಪಂ. ರಾಘವೇಂದ್ರಾಚಾರ್ಯ ಬುರ್ಲಿ
8.	ಶ್ರಾದ್ಧಮೀಮಾಂಸಾ	ಪಂ. ಚಿತ್ರಾಪುರ ಗೋಪಾಲಕೃಷ್ಣಾಚಾರ್ಯ
9.	ಧರ್ಮಸಿಂಧು (ಕನ್ನಡಾನುವಾದ)	ಶ್ರೀಶಂಭುಶರ್ಮಾ ನಾಜಗಾರ
10.	ಶ್ರೀಗುರುಸಾರ್ವಭೌಮ ಪತ್ರಿಕೆ	ಶ್ರೀಮಂತ್ರಾಲಯ ಮಠದಿಂದ ಪ್ರಕಾಶಿತ
11.	ಶ್ರಾದ್ಧ ಪ್ರಯೋಗ ಪ್ರಕಾಶಿಕಾ	ಶ್ರೀಸಿ. ಲಕ್ಷ್ಮೀನಾರಾಯಣನ್
12.	ಧರ್ಮಶಾಸ್ತ್ರ ಕರದೀಪಿಕಾ	ಶ್ರೀ ಕೆ.ಕೃಷ್ಣ ಜೋಯಿಸ್
13.	ಋಗ್ವೇದೀಯ ಶ್ರಾದ್ಧ ಪ್ರಯೋಗ	ಶ್ರೀಶ್ರೀನಿವಾಸಾಚಾರ್ಯ ಹೊಂಬಾಳಿ
14.	ಶ್ರೀಹರಿವಂಶ ಪುರಾಣ	ಶ್ರೀ ಯು.ಶ್ರೀನಿವಾಸಾಚಾರ್ಯ ಉಡುಪಿ
15.	ಔರ್ಧ್ವದೇಹಿಕ ನಿಯಮ	ವೈದಿಕ ಧರ್ಮಪ್ರಭೋಧಿನೀ ಸಭಾ
16.	ಶ್ರೀಸುಧಾ ಮಾಸ ಪತ್ರಿಕೆ	ಶ್ರೀಮದುತ್ತರಾದಿ ಮಠ ಬೆಂಗಳೂರು ಪ್ರಕಾಶಿತ
17.	ಶ್ರಾದ್ಧ ವಿವೇಕ	ಶ್ರೀರುದ್ರಧರ ಕೃತಿ
18.	ಶ್ರೀಪದ್ಮ ಮಹಾಪುರಾಣ (ಕನ್ನಡಾನುವಾದ)	ಪಂ. ಪಂಢರೀನಾಥಾಚಾರ್ಯ ಗಲಗಲಿ
19.	ತತ್ವವಾದ ಮಾಸ ಪತ್ರಿಕೆ-	ಅ.ಭಾ.ಮಾ.ಮ.ಮಂಡಲ, ಬೆಂಗಳೂರು, ಪ್ರಕಾಶಿತ
20.	ತೀರ್ಥ ಪ್ರಬಂಧ	ಶ್ರೀವಾದಿರಾಜ ಪೂಜ್ಯಚರಣರು.

ಆಶೌಚಾಚರಣೆ

- ಡಾ॥ ಹೆಚ್. ಸತ್ಯನಾರಾಯಣಾಚಾರ್ಯ

ಸೂಚನೆ: ಸಪಿಂಡರು = ಜ್ಞಾತಿಗಳು = ದಾಯಾದಿಗಳು

(ಜನನ ದಿನದಿಂದ ಆರಂಭಿಸಿ)

ಆಶೌಚದಾಯಿಗಳು	ಜನನ/ಮರಣ	ಆಶೌಚಗ್ರಾಹಿಗಳು	ದಿನಗಳು
ಸಪಿಂಡರು	ಜನನ ಮತ್ತು ಮರಣ	ಸಪಿಂಡರಿಗೆ	10
”	”	ಸೋದಕರಿಗೆ	3
”	”	ಏಕಾಹಿಕರಿಗೆ	1
ಗರ್ಭಧಾರಣೆಯಾದ 3ನೇ ತಿಂಗಳಲ್ಲಿ ಗರ್ಭದ	ಸ್ರಾವೇ	ತಾಯಿಗೆ	3
		ತಂದೆ ಹಾಗೂ ಇತರರಿಗೆ	-
4ನೇ ತಿಂಗಳಲ್ಲಿ ಗರ್ಭದ	ಸ್ರಾವೇ	ತಾಯಿಗೆ	4
”	”	ತಂದೆಗೆ ಮತ್ತು ಜ್ಞಾತಿಗಳಿಗೆ	ಸ್ನಾನ
5ನೇ ತಿಂಗಳಲ್ಲಿ ಗರ್ಭದ	ಪಾತೇ	ತಾಯಿಗೆ	5
”	”	ತಂದೆಗೆ ಮತ್ತು ಜ್ಞಾತಿಗಳಿಗೆ	ಸ್ನಾನ
6ನೇ ತಿಂಗಳಲ್ಲಿ ಗರ್ಭದ	ಪಾತೇ	ತಾಯಿಗೆ	6
”	”	ತಂದೆಗೆ ಮತ್ತು ಜ್ಞಾತಿಗಳಿಗೆ	ಸ್ನಾನ
5, 6ನೇ ತಿಂಗಳಲ್ಲಿ ಮಾಂಸ ಪಿಂಡ ರೂಪದಿಂದ	ಗರ್ಭಪಾತೇ	ತಂದೆಗೆ ಹಾಗೂ ಜ್ಞಾತಿಗಳಿಗೆ	3
7ನೇ ತಿಂಗಳಿಂದ ಮಾಂಸ ಪಿಂಡ ರೂಪದಿಂದ	ಪಾತೇ ಜನನೇ ವಾ	ತಂದೆ, ತಾಯಿ ಹಾಗೂ ಜ್ಞಾತಿಗಳಿಗೆ	10
”	”	ಸೋದಕರಿಗೆ	3
”	”	ಏಕಾಹಿಕರಿಗೆ	1

(ಮರಣ ದಿನದಿಂದ ಆರಂಭಿಸಿ)

ಜಾತಾಶೌಚವಿರುವ ಹತ್ತು ದಿನಗಳ ಮಧ್ಯದಲ್ಲಿ	ಶಿಶುಮರಣೇ ”	ತಾಯಿಗೆ ತಂದೆ ಮತ್ತು ಜ್ಞಾತಿಗಳಿಗೆ	10 ಉಳಿದಷ್ಟು ದಿನ ಮಾತ್ರ
10ನೇ ದಿನದಂದು	ಶಿಶುಮರಣೇ	ತಾಯಿಗೆ	10
”	”	ತಂದೆ ಹಾಗೂ ಭ್ರಾತೃಗಳಿಗೆ	2

(ಮಗು ಜನಿಸಿದ 13ನೇ ದಿನದಂದು ಶುದ್ಧಿ)

10ನೇ ದಿನ ಶಿಶುವಿನ	ಮರಣೇ	ಜ್ಞಾತಿಗಳಿಗೆ	ಸ್ನಾನ
10ನೇ ದಿನ ಅಂತ್ಯಯಾಮದಲ್ಲಿ	ಶಿಶುಮರಣೇ	ತಂದೆ ಹಾಗೂ ಭ್ರಾತೃಗಳಿಗೆ	3 ದಿನ (14ನೇ ದಿನ ದಂದು ಶುದ್ಧಿ)

ಆಶೌಚದಾಯಿಗಳು	ಜನನ/ಮರಣ	ಆಶೌಚಗ್ರಾಹಿಂಗಳು	ದಿನಗಳು
10ನೇ ದಿನ ಕಳೆದ ಮೇಲೆ	ಶಿಶುಮರಣೇ	ತಂದೆ, ತಾಯಿ, ಭ್ರಾತೃಗಳು ಹಾಗೂ ಸವತಿ ತಾಯಿ ಮಕ್ಕಳಿಗೆ	10
10ನೇ ದಿನ ಕಳೆದ ಮೇಲೆ ಖನನ ಪಕ್ಷೇ ದಹನ ಪಕ್ಷೇ	- -	ಜ್ಞಾತಿಗಳಿಗೆ (ದಾಯಾದಿ) "	ಸ್ನಾನ 1
6 ತಿಂಗಳ ನಂತರ 3 ವರ್ಷದೊಳಗಿನ ಬಾಲಕನ (ದಂತಜನಿ-ಚೌಲ)	ಮರಣೇ	"	1
ಇದೇ ವಯಸ್ಸಿನ ಬಾಲಕಿಯ	"	"	ಸ್ನಾನ
3 ವರ್ಷನಂತರ (7 ವರ್ಷದೊಳಗಿನ) ಬಾಲಕನ (ಚೌಲ-ಉಪನಯನ)	"	"	10
ಇದೇ ವಯಸ್ಸಿನ ಬಾಲಕಿಯ	"	"	1
7 ರಿಂದ ಹನ್ನೆರಡು ವರ್ಷದೊಳಗಿನ ಕನ್ಯೆಯ	ಮರಣೇ	"	3
ಪ್ರಾಪ್ತವಯಸ್ಸಿನ (ಮೈನೆರೆತ) ಕನ್ಯೆ ಯ ಪಿತೃಗೃಹದಲ್ಲಿಯೇ (ವಿವಾಹಾತ್ಪೂರ್ವ)	ಮರಣೇ	"	10
ಈ ಮೇಲೆ ಹೇಳಿದ ಎಲ್ಲಾ ವಿಷಯದಲ್ಲಿಯೂ (ಸ್ತ್ರೀ-ಪುರುಷ)	"	ತಂದೆ, ತಾಯಿ ಭ್ರಾತೃಗಳು ಭಿನ್ನಭ್ರಾತೃಗಳಿಗೂ ಕೂಡ	10

ದತ್ತಕ ವಿಚಾರ

ಉಪನಯನಕ್ಕೂ ಮೊದಲು ದತ್ತಕ	ಮರಣೇ	ದತ್ತಕ ತೆಗೆದುಕೊಂಡವನಿಗೆ	10
"	"	ಅವನ ಜ್ಞಾತಿಗಳಿಗೆ	1
ಉಪನಯನಾನಂತರ	"	ತೆಗೆದುಕೊಂಡವನಿಗೆ	10
"	"	ಅವನ ಜ್ಞಾತಿಗಳಿಗೆ	3
ಉಪನಯನಕ್ಕೆ ಮೊದಲು ಮತ್ತು ನಂತರ	ದತ್ತಕ ಮರಣೇ	ದತ್ತಕ ಕೊಟ್ಟವನಿಗೆ	3
"	"	ಅವನ ಜ್ಞಾತಿಗಳಿಗೆ	ಸ್ನಾನ
ಲಗ್ನವಾದ ಮಗಳು ತಂದೆಯ ಮನೆಯಲ್ಲಿ	ಹಡೆದರೆ	ತಂದೆ - ತಾಯಿಗೆ	3
ಲಗ್ನವಾದ ಮಗಳು ತಂದೆಯ ಪರೋಕ್ಷದಲ್ಲಿ	ಹಡೆದರೆ	ತಂದೆ - ತಾಯಿಗೆ	1 1/2 (ಪಕ್ಷಿಣೀ)
ಚಿಕ್ಕಪ್ಪ - ಮೊದಲಾದ ಸಂಬಂಧಿಗಳ ಮನೆಯಲ್ಲಿ	ಹಡೆದರೆ	ಆ ಸಂಬಂಧಿಗಳಿಗೆ	1

ಪುರುಷರಿಗೆ (ಮರಣದಲ್ಲಿ) ಮೂರು ದಿನಾಶೌಚ ಕೊಡುವ ಬಂಧುಗಳು

ತಾಯಿಯ ತಂದೆ, ತಾಯಿಯ ತಾಯಿ, ಸೋದರ ಮಾವ, ಸೋದರ ಮಾವನ ಹೆಂಡತಿ, ತಂದೆಯ ಅಕ್ಕ-ತಂಗಿಯರು, ತಾಯಿಯ ಅಕ್ಕ-ತಂಗಿಯರು, ತನ್ನ ಅಕ್ಕ-ತಂಗಿಯರು,

ಮಗಳು (ಪ್ರತ್ಯಕ್ಷ ಮರಣೇ), ಮಗಳ ಮಗ, ಅಕ್ಕ-ತಂಗಿಯರ ಮಗ, ಹೆಣ್ಣುಕೊಟ್ಟ ಮಾವ, ಹೆಣ್ಣುಕೊಟ್ಟ ಅತ್ತೆ, ಆಚಾರ್ಯ, ಆಚಾರ್ಯ ಪತ್ನೀ, ಆಚಾರ್ಯಪುತ್ರ, ಋತ್ವಿಕ್, ಯಾಜ್ಯ, ಅಂತೇ ವಾಸಿ.

ಪುರುಷರಿಗೆ ಒಂದು ದಿನ ಆಶೌಚದಾಯಿಗಳಾದ ಬಂಧುಗಳು

ತಂದೆಯ ಸವತಿ ತಾಯಿಯ ಮಲತಾಯಿಯ ಮಗನ ಮಗಳು, ತನ್ನ ಮಲತಾಯಿಯ ತಂದೆ, ತಾಯಿ, ಸೋದರರು, ಸೋದರಿಯರು ಮತ್ತು ಅವರ (ಗಂಡು-ಹೆಣ್ಣು) ಮಕ್ಕಳು. ತನ್ನ ಮಲತಾಯಿಯ ಮಗಳು ಮತ್ತು ಮಗಳ ಮಕ್ಕಳು, ತನ್ನ ಹೆಂಡತಿಯ ಅಣ್ಣ-ತಮ್ಮಂದಿರು, ತಾಯಿಯ ಮಲತಾಯಿಯ ಅಣ್ಣ-ತಮ್ಮಂದಿರು, ತಂದೆಯ ಮಲತಾಯಿಯ ಮಗಳು ಮತ್ತು ಅವಳ ಮಕ್ಕಳು. ಸಹೋಪನೀತ, ಉಪಾಧ್ಯಾಯ.

ಪುರುಷರಿಗೆ ಪಕ್ಷಿಣೀ (1 1/2 ದಿನ) ಆಶೌಚವಾಯಿಗಳಾದ ಬಂಧುಗಳು

ತಂದೆಯ ಸೋದರಿಯ ಮಗ-ಮಗಳು, ತಾಯಿಯ ಸೋದರಿಯ ಮಗ-ಮಗಳು, ಸೋದರ ಮಾವನ ಮಗ-ಮಗಳು, ಸಹೋದರರ ಹೆಣ್ಣುಮಕ್ಕಳು, ಅಕ್ಕತಂಗಿಯರ ಹೆಣ್ಣುಮಕ್ಕಳು, ಮಗನ ಮಗಳು, ತಂದೆಯ ಸಹೋದರರ ಹೆಣ್ಣುಮಕ್ಕಳು, (ತಂದೆಯ ಪರೋಕ್ಷದಲ್ಲಿ ಮಗಳ ಮರಣವಾದರೆ) ಮಗಳು.

ಕೂಡಲೇ ಸ್ನಾನದಿಂದ ಶುದ್ಧಿಯಾಗುವ ಆಶೌಚ -

ತಂದೆಯ ಸೋದರಿಯರ ಗಂಡ, ತಾಯಿಯ ಸೋದರಿಯರ ಗಂಡ, ಮಗಳ ಗಂಡ, ತನ್ನ ಸೋದರಿಯರ ಗಂಡ (ಬಾವ), ತಂದೆಯ ಸೋದರಿಯರ ಮಗನ ಹೆಂಡತಿ, ಸೋದರಮಾವನ ಮಗನ ಹೆಂಡತಿ.

ಸ್ತ್ರೀಯರಿಗೆ ಮೂರು ದಿನ ಆಶೌಚವಾಯೀ ಬಂಧುಗಳು (ಮರಣದಲ್ಲಿ)

ತಂದೆ, ತಾಯಿ, ಮಲತಾಯಿ, ಅಣ್ಣ-ತಮ್ಮಂದಿರು, ಅಣ್ಣ-ತಮ್ಮಂದಿರ ಮಗ, ತಾಯಿಯ ಅಕ್ಕ-ತಂಗಿಯರು. (ತಂದೆ-ತಾಯಿಯರ ಮರಣದಲ್ಲಿ 10 ದಿನ ಆಶೌಚಾಚರಣೆಯ ಸಂಪ್ರದಾಯವೂ ಇದೆ).

ಸ್ತ್ರೀಯರಿಗೆ ಪಕ್ಷಿಣೀ (1 1/2 ದಿನ) ಆಶೌಚವಾಯೀ ಬಂಧುಗಳು

ತಂದೆಯ ತಂದೆ-ತಾಯಿ, ತಂದೆಯ ಸಹೋದರರು ಮತ್ತು ಇವರ (ಗಂಡು-ಹೆಣ್ಣು) ಮಕ್ಕಳು, ತಂದೆಯ ಅಕ್ಕ-ತಂಗಿಯರು ಮತ್ತು ಇವರ ಮಕ್ಕಳು, ಸೋದರಮಾವ-ಅತ್ತೆ ಮತ್ತು

ಇವರ ಮಕ್ಕಳು, ತಾಯಿಯ ತಂದೆ-ತಾಯಿ, ತಾಯಿಯ ಸಹೋದರಿಯರ ಮಕ್ಕಳು, ಅಣ್ಣತಮ್ಮಂದಿರ ಹೆಣ್ಣುಮಕ್ಕಳು.

ವಿ.ಸೂ.:	1)	1 ರಿಂದ 7 ತಲೆಯವರೆಗೆ	-	ಸಪಿಂಡರು
	2)	8 ರಿಂದ 14 ತಲೆಯವರೆಗೆ	-	ಸೋದಕರು
	3)	15 ರಿಂದ 21 ತಲೆಯವರೆಗೆ	-	ಏಕಾಹಿಕರು


****

ನಾರಾಯಣ ಬಲಿ

– ವಿದ್ವಾನ್ ಸಿ.ಹೆಚ್. ಬದರೀನಾಥಾಚಾರ್ಯ

"ಜಿಜೀವಿಷೇತ್ ಶತಂ ಸಮಾಃ" ಎಂದು ಉಪನಿಷತ್ತಿನ ನುಡಿ. ನಿರಂತರ ಕರ್ಮವನ್ನು ಆಚರಿಸುತ್ತಾ ತನ್ನ ಸಮಗ್ರ ಆಯುಸ್ಸನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಜೀವನದ ಮೌಲ್ಯವನ್ನು ಕಡೆಗಣಿಸಿ ಆತ್ಮಹತ್ಯೆಗೆ ಪ್ರವೃತ್ತಿ ಮಾಡುವವನು ಅನೇಕ ಜನ್ಮಗಳಲ್ಲಿ ಹೀನ ಯೋನಿಗಳಲ್ಲಿ ಹುಟ್ಟಿ ಸಾಧನೆಯಿಂದ ವಂಚಿತನಾಗುವನು.

ದುರ್ಮರಣವು ಎರಡು ವಿಧ. ಬುದ್ಧಿಪೂರ್ವಕ, ಅಬುದ್ಧಿಪೂರ್ವಕ. ಈ ಎರಡು ಸಂದರ್ಭದಲ್ಲಿಯೂ ನಾರಾಯಣ ಬಲಿಯನ್ನು ಶಾಸ್ತ್ರಗಳು ವಿಧಾನ ಮಾಡಿವೆ. ಇದನ್ನು ಮಾಡದಿದ್ದಲ್ಲಿ ಮೃತನಿಗೆ ಪ್ರೇತತ್ವದಿಂದ ನಿವೃತ್ತಿಯಾಗುವುದಿಲ್ಲ. ಬುದ್ಧಿಪೂರ್ವಕ ದುರ್ಮರಣ ಹೊಂದಿದವರಿಗೆ ನಾರಾಯಣ ಬಲಿಯನ್ನು ಮಾಡಿ ಅನಂತರ ಕ್ರಿಯಾಚರಣೆ ಮಾಡಬೇಕು. ಸಪಿಂಡೀಕರಣವಾದನಂತರ ಪುನಃ ನಾರಾಯಣ ಬಲಿಯುನ್ನು ಮಾಡಬೇಕೆಂದು ಶೌನಕೀಯ ನಿರ್ಣಯದಲ್ಲಿದೆ. ಅಬುದ್ಧಿಪೂರ್ವಕ ದುರ್ಮರಣ ಹೊಂದಿದವರಿಗೂ, ಬ್ರಹ್ಮಚಾರಿ ಮತ್ತು ಗರ್ಭಿಣಿಯರಿಗೂ ನಾರಾಯಣ ಬಲಿ ಇಲ್ಲದೆ ಸದ್ಗತಿಯಾಗುವುದಿಲ್ಲ.



ಸಂಚಿಂತಯೇದ್ಭಗವತಶ್ಚರಣಾರವಿಂದಂ ವಜ್ರಾಂಕುಶಧ್ವಜಸರೋರುಹಲಾಂಛನಾಢ್ಯಮ್ ।
ಉತ್ತುಂಗರಕ್ತವಿಲಸನ್ನಖಚಕ್ರವಾಳಜ್ಯೋತ್ಸ್ನಾಭಿರಾಹತಮಹದ್ಧೃದಯಾಂಧಕಾರಮ್ ॥
ಯಚ್ಛೌಚನಿಃಸೃತಸರಿತ್ಪ್ರವರೋದಕೇನ ತೀರ್ಥೇನ ಮೂರ್ಧ್ನ್ಯಧಿಧೃತೇನ ಶಿವಃ ಶಿವೋಽಭೂತ್ ।
ಧ್ಯಾತುರ್ಮನಃಶಮಲಶೈಲನಿಸೃಷ್ಟವಜ್ರಂ ಧ್ಯಾಯೇಚ್ಚಿರಂ ಭಗವತಶ್ಚರಣಾರವಿಂದಮ್ ॥



ಶ್ರೀನಿವಾಸು ಸು. ಮಠದ

ನಿರಂತರ ಪಾಠ-ಪ್ರವಚನ, ಆಚಾರದೀಕ್ಷೆಗಳಿಂದ ಋಷಿತುಲ್ಯರಾಗಿ ಬಾಳುತ್ತಿರುವ ಪಂಡಿತ ಉಮರ್ಜಿ ತ್ರಿವಿಕ್ರಮಾಚಾರ್ಯರಲ್ಲಿ ಶಾಸ್ತ್ರಾಧ್ಯಯನ ನಡೆಸುತ್ತಿರುವ ಶ್ರೀನಿವಾಸಾಚಾರ್ಯ ಸು. ಮಠದ ಇವರು ಮಧ್ಯವಯಸ್ಸಿನ ಮಾಧ್ವರಿಗೆ ಆದರ್ಶವಾಗಿ ನಿಂದಿದ್ದಾರೆ. ಪ್ರಾಯಃ ನಿವೃತ್ತ ಜೀವನವನ್ನು ಭೋಗ-ರೋಗಗಳ ನಡುವೆ ಗುರಿಯಿಲ್ಲದೇ ನಿಟ್ಟುಸಿರಿನಿಂದ, ನೈರಾಶ್ಯದಿಂದ ಕಳೆವವರೇ ಬಹಳ. ಆದರೆ ಶ್ರೀನಿವಾಸಾಚಾರ್ಯರು ವಿಜ್ಞಾನದ ವಿದ್ಯಾರ್ಥಿಯಾಗಿ ಬ್ಯಾಂಕಿನ ಉದ್ಯೋಗಿಯಾಗಿ ಜೊತೆಜೊತೆಗೆ ಶಾಸ್ತ್ರಾಭ್ಯಾಸ ಮತ್ತು ಲೇಖನಗಳನ್ನು ಮೈಗೂಡಿಸಿಕೊಂಡರು. ಈ ತನಕ ಇವರು ಮೂವತ್ತಕ್ಕೂ ಹೆಚ್ಚು ಉಪಯುಕ್ತ ಹೊತ್ತಿಗೆಗಳನ್ನು ಹೊರತಂದಿರುವುದು ಅವರ ಅಧ್ಯಯನಶೀಲತೆ ಮತ್ತು ಕ್ರಿಯಾಶೀಲತೆಯನ್ನು ಪ್ರತಿಬಿಂಬಿಸುತ್ತಿವೆ. 'ಶ್ರೀಸತ್ಯಸಂಧತೀರ್ಥರ ವ್ಯಾಖ್ಯಾನುಗುಣವಾದ ವಿಷ್ಣುಸಹಸ್ರನಾಮ, ಗಜೇಂದ್ರಮೋಕ್ಷ, ಗೀತೆಯ ಅಂತರಂಗ, ಸಮುದ್ರಮಥನ, ವಿವಾಹಿತರಿಗೆ ಉಪದೇಶ' ಮೊದಲಾದ ಇವರ ಗ್ರಂಥಗಳು ಸಜ್ಜನವರ್ಗಕ್ಕೆ ಅತ್ಯಂತ ಉಪಕಾರಿಯಾಗಿವೆ. ಅವರ ಪ್ರತಿಯೊಂದು ಕೃತಿಯೂ ಸುಂದರ ಸಂಗ್ರಹದ ಮೆರಗು ಪಡೆದಿದೆ. ಸಂಗ್ರಹದ ಜೊತೆಗೆ ನಾವೀನ್ಯವಿದೆ. ಅಲ್ಲಲ್ಲಿ ವಿಮರ್ಶೆ ಇದೆ. ನಿರೂಪಣೆಯಲ್ಲಿ ಸೌಷ್ಠವವಿದೆ. ಈ ಹಿನ್ನೆಲೆಯಲ್ಲಿ ಇವರ ಕೃತಿಗಳು ಸುಜನರಿಂದ ಸಂಗ್ರಾಹ್ಯವಾಗಿವೆ. ಪ್ರಕೃತ ಮುದ್ರಣಗೊಂಡ 'ಶ್ರಾದ್ಧಕರ್ಮ' ಗ್ರಂಥವು ಜನಸಾಮಾನ್ಯರಿಂದ ವಿದ್ವಾಂಸರವರೆಗೂ ಅತ್ಯಂತ ಉಪಯುಕ್ತ ಕೃತಿಯಾಗಿದೆ. ಈ ಹೊತ್ತಿಗೆಯಲ್ಲಿ ಅನೇಕ ಶ್ರೇಷ್ಠ ವಿದ್ವಾಂಸರ ಲೇಖನಗಳನ್ನು ಪ್ರಕಟಿಸಿರುವುದು ಇದರ ಮಹತ್ತ್ವವನ್ನು ಹೆಚ್ಚಿಸಿದೆ.

ಕೆಂಗೇರಿ ಉಪನಗರದ ಶ್ರೀ ರಾಘವೇಂದ್ರ ದರ್ಶನ ಕೇಂದ್ರದ ಎಂಬತ್ತರ ಹರೆಯದ ಎಲ್ಲ ಪದಾಧಿಕಾರಿಗಳು ನಡೆಸುತ್ತಿರುವ ನಾನಾ ರೀತಿಯ ಸೇವಾಕಾರ್ಯಗಳು ಮತ್ತು ಪ್ರಬುದ್ಧ ಯೋಜನೆಗಳು ಶ್ರೀಗುರುರಾಜರ ವಿಶೇಷಾನುಗ್ರಹಕ್ಕೆ ಅವರನ್ನು 'ಪಾತ್ರ'ವಾಗಿಸಿವೆ. ಶ್ರೀ ಶ್ರೀನಿವಾಸ ಸು. ಮಠದ ಅವರ ಲೇಖನಿ ಹೊಸ ಹೊಸ ವಿಷಯಗಳ ಬಗ್ಗೆ ಕ್ರಿಯಾಶೀಲವಾಗಲಿ. ಶ್ರೀ ರಾಘವೇಂದ್ರ ದರ್ಶನ ಕೇಂದ್ರ ಇತರ 'ವೃಥಾಗತಿ' ಸಂಸ್ಥೆಗಳಿಗೆ ಕಾರ್ಯ'ಕ್ರಮ'ದ ದರ್ಶನ ಮಾಡಿಸಿದೆ. ಇದರಂತೆ ಹತ್ತು ಹಲವು ಸಂಸ್ಥೆಗಳು ವೇಗದಿಂದ ಸೇವೆ ನಡೆಸಿದಲ್ಲಿ 'ಜ್ಞಾನ'ದ 'ಬರ' ಬಾರದು. ಮುಪ್ಪು ಕೇವಲ ದೇಹಕ್ಕೆ ಆತ್ಮನಿಗಲ್ಲ ಎಂಬ ಸತ್ಯ ಲೇಖಕ-ಪ್ರಕಾಶಕರಿಂದ ನಿಚ್ಚಳವಾಗಿದೆ. ಮಧ್ವವಲ್ಲಭ ಶ್ರೀಕೃಷ್ಣನು ಈ ವ್ಯವಸ್ಥೆಯನ್ನು ಕರುಣೆಯಿಂದ ಕಾಪಿಡಲಿ.

ಡಾ। ಎ.ವಿ. ನಾಗಸಂಪಿಗೆ

ನಿರ್ದೇಶಕರು, ಪೂರ್ಣಪ್ರಜ್ಞ ಸಂಶೋಧನ ಮಂದಿರ, ಬೆಂಗಳೂರು